ಸೋಮವಾರ, ಜನವರಿ 10, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಯಕ್ಷಗಾನ ವೇಷ

ಕನಕಪುರ ತಾಲ್ಲೂಕಿನ ಸಂಗಮದಲ್ಲಿ ಕಾಂಗ್ರೆಸ್ ಭಾನುವಾರ ಹಮ್ಮಿಕೊಂಡಿದ್ದ ಮೇಕೆದಾಟು ಪಾದಯಾತ್ರೆಯ ಚಾಲನಾ ಕಾರ್ಯಕ್ರಮದಲ್ಲಿ ಕಲಾವಿದರೊಬ್ಬರು ಯಕ್ಷಗಾನದ ವೇಷ ತೊಟ್ಟು ಪಾಲ್ಗೊಂಡಿದ್ದರು

ಪಾದಯಾತ್ರೆಗೆ ಅಡ್ಡಿಯಾಗದ ಕೋವಿಡ್ ನಿಯಮ • ಸುಮ್ಮನಾದ ಸರ್ಕಾರ

ಮೊದಲ ದಿನ ಕಾಂಗ್ರೆಸ್ ಉತ್ಸಾಹದ ಹೆಜ್ಜೆ

• ಆರ್. ಜಿತೇಂದ್ರ

ಸಂಗಮ (ರಾಮನಗರ): ಹಲವು ಅಡ್ಡಿ ಆತಂಕಗಳನ್ನೂ ಮೀರಿ ಭಾನುವಾರ ಮೇಕೆದಾಟು ಪಾದಯಾತ್ರೆಯು ಮೊದಲ ದಿನ ಸುಸೂತ್ರವಾಗಿ ನಡೆದಿದ್ದು, ಕಾಂಗ್ರೆಸ್ ಪಾಳೆಯದ ಉತ್ಸಾಹ ಇಮ್ಮಡಿಗೊಂಡಿದೆ.

ಬೆಳಿಗ್ಗೆ 11.30ಕ್ಕೆ ವೇದಿಕೆ ಕಾರ್ಯಕ್ರಮ ಮುಕ್ತಾಯದ ಬಳಿಕ ಪಾದಯಾತ್ರೆ ಆರಂಭಗೊಂಡಿದ್ದು, ಕಾಂಗ್ರೆಸ್ ನಾಯಕರು ಉತ್ಸಾಹದಿಂದಲೇ ಹೆಜ್ಜೆ ಹಾಕಿದರು. ಆದರೆ ನಂತರದಲ್ಲಿ ಏರುಮುಖವಾದ ಹಾದಿ, ನೆತ್ತಿ ಸುಡುವ ಬಿಸಿಲಿನ ಕಾರಣಕ್ಕೆ ಪಾದಯಾತ್ರಿಕರು ಬಳಲಿದ್ದು ಕಂಡುಬಂದಿತು. ಅಲ್ಲಲ್ಲಿ ಪಾನೀಯ, ನೀರು ಕುಡಿಯುತ್ತಲೇ 'ನೀರಿಗಾಗಿ ನಡಿಗೆ' ಮುಂದುವರಿಯಿತು. ಡಿ.ಕೆ. ಶಿವಕುಮಾರ್ ಜೊತೆಗೆ ಆರ್.ವಿ. ದೇಶಪಾಂಡೆ, ಎಚ್.ಕೆ. ಪಾಟೀಲ, ಎಂ.ಬಿ. ಪಾಟೀಲ, ಜಿ. ಪರಮೇಶ್ವರ, ಡಿ.ಕೆ. ಸುರೇಶ್, ಪ್ರಿಯಾಂಕ್ ಖರ್ಗೆ ಸೇರಿದಂತೆ ಹಲವು ನಾಯಕರು ಒಂದಿಷ್ಟು ದೂರ ನಡೆದರು.

ಮಧ್ಯಾಹ್ನ 2.50ರ ಸುಮಾರಿಗೆ ಏಳು ಕಿ.ಮೀ. ಕ್ರಮಿಸಿ ಹೆಗ್ಗನೂರಿಗೆ ತಲುಪಿದ ಪಾದಯಾತ್ರಿಗಳು ಅಲ್ಲಿ ಕೆಲ ಕಾಲ ವಿಶ್ರಾಂತಿ ಪಡೆದರು. ಶಿವಕುಮಾರ್ ಸ್ವಲ್ಪ ಬಳಲಿದಂತೆ ಕಂಡುಬಂದಿದ್ದು, ಕಣ್ಣುಗಳು ಅದಾಗಲೇ ಕೆಂಪಾಗಿದ್ದವು. ಹೀಗಾಗಿ ಊಟದ ಬಳಿಕ ಕೆಲ ಹೊತ್ತು ನಿದ್ರೆಯ ಮೊರೆ ಹೋದರು. ಸಂಜೆ 5ರ ನಂತರ ಮತ್ತೆ ಪಾದಯಾತ್ರೆ ಆರಂಭಗೊಂಡಿದ್ದು, ರಾತ್ರಿ ಹೊತ್ತಿಗೆ ಶಿವಕುಮಾರ್ ಅವರ ತವರೂರು ದೊಡ್ಡಾಲಹಳ್ಳಿ ತಲುಪಿತು. ಅಲ್ಲಿ ಗ್ರಾಮಸ್ಥರು ಅವರಿಗೆ ಭವ್ಯ ಸ್ವಾಗತ ಕೋರಿದರು. ಮೊದಲ ದಿನ 14 ಕಿ.ಮೀ. ವರೆಗೆ ಪಾದಯಾತ್ರಿಗಳು ಹೆಜ್ಜೆ ಹಾಕಿದರು. ಅಲ್ಲಲ್ಲಿ ಗ್ರಾಮಸ್ಥರು ಪುಷ್ಪಾರ್ಚನೆ ಮೂಲಕ ಪಾದಯಾತ್ರಿಗಳನ್ನು ಬರಮಾಡಿಕೊಂಡಿದ್ದು, ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿದರು.

ಪಾದಯಾತ್ರೆ ನಿಲ್ಲಿಸುವಂತೆ ರಾಮನಗರ ಜಿಲ್ಲಾಧಿಕಾರಿ ಕೆಪಿಸಿಸಿ ಅಧ್ಯಕ್ಷರಿಗೆ ನೋಟಿಸ್ ಜಾರಿ ಮಾಡಿದ್ದರು. ನಿಯಮ ಉಲ್ಲಂಘಿಸಿ ಪಾದಯಾತ್ರೆ ಮಾಡಿದರೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನೂ ನೀಡಿದ್ದರು. ಹೀಗಾಗಿ ಭಾನುವಾರದ ಕಾರ್ಯಕ್ರಮದ ಕುರಿತು ಅನಿಶ್ಚಿತತೆ ಇತ್ತು. ಆದರೆ ಅಂತಹ ಯಾವುದೇ ಅನಿರೀಕ್ಷಿತ ಘಟನೆಗಳು ನಡೆಯಲಿಲ್ಲ.

10 ಸಾವಿರ ಮಂದಿ ಭಾಗಿ: ಮೊದಲ ದಿನವೇ ಕಾರ್ಯಕ್ರಮಕ್ಕೆ ಸುಮಾರು 10 ಸಾವಿರದಷ್ಟು ಜನರು ಬಂದಿದ್ದರು. ಹೊರ ಜಿಲ್ಲೆಗಳಿಂದಲೂ ಸಾಕಷ್ಟು ಮಂದಿ ಭಾಗಿಯಾಗಿದ್ದರು. ಆದರೆ ರಸ್ತೆಯಲ್ಲಿ ಹೆಜ್ಜೆ ಹಾಕುವವರಿಗಿಂತ ಕುತೂಹಲಕ್ಕೆ ಬಂದು ಹೋದವರ ಸಂಖ್ಯೆಯೇ ದುಪ್ಪಟ್ಟು ಇತ್ತು. ಆಯೋಜಕರು ಮಾಸ್ಕ್ ಹಾಗೂ ಸ್ಯಾನಿಟೈಸರ್ ವಿತರಿಸಿದರು. ತಪ್ಪದೇ ಮಾಸ್ಕ್ ಧರಿಸಿ ಓಡಾಡಿ ಎಂದು ಸಿದ್ದರಾಮಯ್ಯ ಮನವಿ ಮಾಡಿದರು. ಆದರೆ ಸ್ವತಃ ಡಿ.ಕೆ. ಶಿವಕುಮಾರ್ ಸೇರಿದಂತೆ ಸಾಕಷ್ಟು ಮಂದಿ ಮಾಸ್ಕ್ ಧರಿಸದೇ ಓಡಾಡಿದರು. ಪೊಲೀಸರು ಈ ಬಗ್ಗೆ ಮೌನವಾಗಿದ್ದರು. ವಾಹನಗಳ ಸಂಚಾರ ನಿಯಂತ್ರಣವಷ್ಟೇ ಅವರ ಕೆಲಸವಾಗಿತ್ತು.

ರಾಗಿಮುದ್ದೆ, ಮೈಸೂರು ಪಾಕ್ ಆತಿಥ್ಯ: ಪಾದಯಾತ್ರೆಗೆ ಬಂದ ಅಷ್ಟೂ ಜನರಿಗೆ ಕಾಂಗ್ರೆಸ್ ಊಟೋಪಚಾರದ ವ್ಯವಸ್ಥೆ ಮಾಡಿತ್ತು. ಬೆಳಿಗ್ಗೆ ಕಾರ್ಯಕ್ರಮದ ವೇದಿಕೆ ಬಳಿ ಉಪ್ಪಿಟ್ಟು, ಕೇಸರಿಬಾತ್, ರೈಸ್ ಬಾತ್ ಉಪಾಹಾರ ದೊರೆಯಿತು. ಮಧ್ಯಾಹ್ನ ಹೆಗ್ಗನೂರಿನಲ್ಲಿ ರಾಗಿಮುದ್ದೆ, ಕಾಳು ಸಾಂಬಾರ್, ಪೂರಿ, ರೈಸ್ ಪಲಾವ್ ಜೊತೆಗೆ ವಡೆ ಹಾಗೂ ಮೈಸೂರು ಪಾಕ್ ಉಣಬಡಿಸಲಾಯಿತು. ಇದಲ್ಲದೆ ದಾರಿಯುದ್ದಕ್ಕೂ ಜನರಿಗೆ ಬೆಲ್ಲದ ಪಾನಕ, ನಿಂಬೆ ಷರಬತ್ತು, ಕಬ್ಬಿನ ಜ್ಯೂಸ್, ಕಿತ್ತಳೆ ಹಣ್ಣು ನೀಡಲಾಯಿತು.

ಕನಕಪುರ ತಾಲ್ಲೂಕಿನ ಸಂಗಮದಲ್ಲಿ ಕಾಂಗ್ರೆಸ್ ಹಮ್ಮಿಕೊಂಡ ಮೇಕೆದಾಟು ಪಾದಯಾತ್ರೆಯಲ್ಲಿ ಕಾರ್ಯಕರ್ತರ ಜತೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೆಜ್ಜೆ ಹಾಕಿದರು–ಪ್ರಜಾವಾಣಿ ಚಿತ್ರ

ಪರಿಸರ ಸೂಕ್ಷ್ಮ ವಲಯದಲ್ಲಿ ಧ್ವನಿವರ್ಧಕದ ಸದ್ದು

ಪಾದಯಾತ್ರೆ ಆರಂಭಗೊಂಡ ಸಂಗಮ ಪ್ರದೇಶವು ಕಾವೇರಿ ವನ್ಯಜೀವಿ ಧಾಮಕ್ಕೆ ಸೇರಿದ್ದು, ಪರಿಸರ ಸೂಕ್ಷ್ಮ ವಲಯದಲ್ಲಿ ಧ್ವನಿವರ್ಧಕ ಹಾಗೂ ವಾದ್ಯವೃಂದದ ಬಳಕೆಗೆ ಆಕ್ಷೇಪ ವ್ಯಕ್ತವಾಗಿದೆ. ಕಾರ್ಯಕ್ರಮದಲ್ಲಿ ಬೆಳಿಗ್ಗೆಯಿಂದಲೇ ದೊಡ್ಡ ಮಟ್ಟದಲ್ಲಿ ಧ್ವನಿವರ್ಧಕಗಳನ್ನು ಬಳಕೆ ಮಾಡಲಾಗಿತ್ತು. ಕಾವೇರಿ ವನ್ಯಜೀವಿ ಧಾಮವು ಕೆಲವು ಅಪರೂಪದ ವನ್ಯಸಂಕುಲಗಳ ಆವಾಸಸ್ಥಾನವಾಗಿದೆ.

'ಕಾರ್ಯಕ್ರಮದ ವೇದಿಕೆ ಸ್ಥಳ ಪರಿಶೀಲನೆ ನಡೆಸಿದ್ದೇವೆ. ಸದ್ಯಕ್ಕೆ ಯಾವ ರೀತಿಯ ನಿಯಮ ಉಲ್ಲಂಘನೆ ಕಂಡುಬಂದಿಲ್ಲ. ಅರಣ್ಯ ಪ್ರದೇಶದಲ್ಲಿ ನಿರ್ಬಂಧಿತ ಚಟುವಟಿಕೆಗಳು ನಡೆದಿದ್ದಲ್ಲಿ ಕ್ರಮ ಕೈಗೊಳ್ಳುತ್ತೇವೆ' ಎಂದು ಕಾವೇರಿ ವನ್ಯಜೀವಿ ಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಗಿರೀಶ್ ತಿಳಿಸಿದರು.

ಪಾದಯಾತ್ರೆಗೆ ಬಂದವರಿಗೆ ಉಚಿತ ಪೆಟ್ರೋಲ್

ಮೇಕೆದಾಟು ಪಾದಯಾತ್ರೆಗೆ ಬರುವವರಿಗೆ ಕನಕಪುರ ತಾಲ್ಲೂಕಿನಾದ್ಯಂತ ಉಚಿತ ಪೆಟ್ರೋಲ್ ವ್ಯವಸ್ಥೆ ಮಾಡಲಾಗಿತ್ತು. ಪೆಟ್ರೋಲ್ ತುಂಬಿಸಿಕೊಳ್ಳಲು ಜನರು ಬಂಕ್‌ಗಳಿಗೆ ಮುಗಿಬಿದ್ದರು. ಗ್ರಾಮ ಪಂಚಾಯಿತಿಗಳಲ್ಲಿ ಈ ಮೊದಲೇ ಕೂಪನ್ ಗಳನ್ನು ವಿತರಿಸಲಾಗಿತ್ತು. ಆ ಕೂಪನ್ ತಂದವರಿಗೆ ಬಂಕ್ ಗಳಲ್ಲಿ ₹300 ಮೊತ್ತದ ಪೆಟ್ರೋಲ್ ನೀಡಲಾಯಿತು. ಕನಕಪುರ-ಸಂಗಮ ರಸ್ತೆಯಲ್ಲಿನ ಬಹುತೇಕ ಪೆಟ್ರೋಲ್ ಬಂಕ್ ಗಳು ಗ್ರಾಹಕರಿಂದ ತುಂಬಿದ್ದವು.

ಅರ್ಧದಲ್ಲೇ ನಿರ್ಗಮಿಸಿದ ಸಿದ್ದರಾಮಯ್ಯ

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅನಾರೋಗ್ಯದ ಕಾರಣಕ್ಕೆ ಅರ್ಧದಲ್ಲೇ ಪಾದಯಾತ್ರೆ ಮೊಟಕುಗೊಳಿಸಿ ಹಿಂತಿರುಗಿದರು. ಸಂಗಮದಿಂದ ನಡಿಗೆ ಆರಂಭಿಸಿದ ಸಿದ್ದರಾಮಯ್ಯ ನಂತರ ಎತ್ತರದಿಂದ ಕೂಡಿದ್ದ ರಸ್ತೆ ಏರಲು ಬೆವರು ಹರಿಸಿದರು. ಹೆಗ್ಗನೂರಿನವರೆಗೂ ಸುಮಾರು 7 ಕಿ.ಮೀ. ದೂರವನ್ನು ಪ್ರಯಾಸದಿಂದಲೇ ಕ್ರಮಿಸಿದರು. ಸುಸ್ತು, ಜ್ವರದಿಂದ ಬಳಲಿದಂತೆ ಕಂಡುಬಂದ ಅವರು ಕೊಂಚ ವಿಶ್ರಾಂತಿ ಪಡೆದು ಅಲ್ಲಿಂದ ಬೆಂಗಳೂರಿನತ್ತ ನಿರ್ಗಮಿಸಿದರು. 'ಕೋವಿಡ್ ಬೂಸ್ಟರ್ ಲಸಿಕೆ ಪಡೆದಿದ್ದು, ಸುಸ್ತಾಗಿರುವ ಅವರು ನಿರ್ಗಮಿಸಿದ್ದಾರೆ' ಎಂದು ಕಾಂಗ್ರೆಸ್ ಮುಖಂಡರು ಮಾಹಿತಿ ನೀಡಿದರು.

'ಸಿದ್ದರಾಮಯ್ಯ ಅವರಿಗೆ 75 ವರ್ಷ ಆಗಿದ್ದು, ಸ್ಟೆಂಟ್ ಸಹ ಅಳವಡಿಸಲಾಗಿದೆ. ಅವರು ಗುಡ್ಡ ಹತ್ತುವುದು ಬೇಡ ಎಂದು ನಾವೇ ವಿಶ್ರಾಂತಿಗೆ ಕಳುಹಿಸಿದ್ದೇವೆ' ಎಂದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಪಾದಯಾತ್ರೆ ಮಾರ್ಗ

2ನೇ ದಿನ (ಸೋಮವಾರ)	ದೊಡ್ಡಾಲಹಳ್ಳಿಯಿಂದ ಆರಂಭ - ಕನಕಪುರದಲ್ಲಿ ರಾತ್ರಿ ವಾಸ್ತವ್ಯ
3ನೇ ದಿನ	ಕನಕಪುರದಿಂದ ಆರಂಭ - ರಾಮನಗರ ತಾಲ್ಲೂಕಿನ ಚಿಕ್ಕೇನಹಳ್ಳಿಯಲ್ಲಿ ವಾಸ್ತವ್ಯ
4ನೇ ದಿನ	ಚಿಕ್ಕೇನಹಳ್ಳಿಯಿಂದ ಆರಂಭ - ರಾಮನಗರದಲ್ಲಿ ವಾಸ್ತವ್ಯ
5ನೇ ದಿನ	ರಾಮನಗರದಿಂದ ಆರಂಭ- ಬಿಡದಿಯಲ್ಲಿ ವಾಸ್ತವ್ಯ
6ನೇ ದಿನ	ಬಿಡದಿಯಿಂದ ಆರಂಭ - ಕೆಂಗೇರಿ ಪೊಲೀಸ್ ಠಾಣೆ ಬಳಿ ವಾಸ್ತವ್ಯ
7ನೇ ದಿನ	ಕೆಂಗೇರಿಯಿಂದ ಆರಂಭ- ಸಾರಕ್ಕಿ ಬಳಿ ವಾಸ್ತವ್ಯ
8ನೇ ದಿನ	ಸಾರಕ್ಕಿಯಿಂದ ಆರಂಭ. ಮಾರತ್ತಳ್ಳಿ ಜಂಕ್ಷನ್ ಬಳಿ ವಾಸ್ತವ್ಯ
9ನೇ ದಿನ	ಮಾರತ್ತಳ್ಳಿಯಿಂದ - ಲಿಂಗರಾಜಪುರ ಜಂಕ್ಷನ್‌ನಲ್ಲಿ ವಾಸ್ತವ್ಯ
10ನೇ ದಿನ	ಹೆಣ್ಣೂರು ಕ್ರಾಸ್‌ನಿಂದ - ಕಾಂಗ್ರೆಸ್ ಭವನದಲ್ಲಿ ವಾಸ್ತವ್ಯ
11ನೇ ದಿನ	ಕಾಂಗ್ರೆಸ್ ಭವನದಿಂದ ಪಾದಯಾತ್ರೆ. ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬೃಹತ್ ಸಮಾವೇಶ

ಪಾದಯಾತ್ರೆಗೆ 6 ಸಾವಿರ ಜನರು ನೋಂದಾಯಿಸಿಕೊಂಡಿದ್ದರು. ಮೊದಲ ದಿನ 2,000 ಮಂದಿ ಬರಬಹುದು ಎಂದುಕೊಂಡಿದ್ದೆವು. ಎಷ್ಟು ಮಂದಿ ಬಂದು ಹೋದರೋ ಗೊತ್ತಿಲ್ಲ

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಸುದ್ದಿ 2 ನಿಮಿಷ

ಪಾದಯಾತ್ರೆಯಿಂದ ಮೇಕೆದಾಟು ವಿವಾದ ಇನ್ನಷ್ಟು ಕ್ಲಿಷ್ಟ: ಶೆಟ್ಟರ್

ಹುಬ್ಬಳ್ಳಿ: 'ಅಂತರರಾಜ್ಯಕ್ಕೆ ಸಂಬಂಧಪಟ್ಟ ನೀರಾವರಿ ಮತ್ತು ನದಿ ವಿವಾದವನ್ನು ಸೂಕ್ಷ್ಮವಾಗಿ ಬಗೆಹರಿಸಿಕೊಳ್ಳಬೇಕು. ಬೀದಿಗಿಳಿದು, ಪಾದಯಾತ್ರೆ ನಡೆಸಿ ವಿವಾದವನ್ನು ಮತ್ತಷ್ಟು ಕ್ಲಿಷ್ಟ ಮಾಡುವುದು ಸರಿಯಲ್ಲ' ಎಂದು ಶಾಸಕ ಜಗದೀಶ ಶೆಟ್ಟರ್ ಕಾಂಗ್ರೆಸ್ ಮುಖಂಡರ ವಿರುದ್ಧ ಹರಿಹಾಯ್ದರು.

ನಗರದಲ್ಲಿ ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದ ಅವಧಿಯಲ್ಲಿ ಮೇಕೆದಾಟು ಯೋಜನೆಯ ಸಮಸ್ಯೆಗೆ ಯಾಕೆ ಪರಿಹಾರ ಕಂಡುಕೊಂಡಿಲ್ಲ? ಇದೇ ಸಿದ್ದರಾಮಯ್ಯ ಆಗ ಮುಖ್ಯಮಂತ್ರಿಯಾಗಿದ್ದರು. ಯೋಜನೆಗೆ ತಾರ್ಕಿಕ ಅಂತ್ಯ ನೀಡಬಹುದಾಗಿತ್ತಲ್ಲ? ಪಾದಯಾತ್ರೆ, ಪ್ರತಿಭಟನೆ ಇವೆಲ್ಲ ಮುಂಬರುವ ವಿಧಾನಸಭಾ ಚುನಾವಣೆಯ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ' ಎಂದು ಆರೋಪಿಸಿದರು.

ಪೊಂಗಲ್: ವಿಶೇಷ ರೈಲು 13ಕ್ಕೆ

ಹುಬ್ಬಳ್ಳಿ: ಪೊಂಗಲ್ ಹಬ್ಬದ ಅಂಗವಾಗಿ ಜ. 13ರಂದು ಬೆಳಗಾವಿ–ಯಶವಂತಪುರ ನಡುವೆ ಎರಡೂ ಮಾರ್ಗದಿಂದ ವಿಶೇಷ ರೈಲು ಸಂಚರಿಸಲಿದೆ.

ಅಂದು ಯಶವಂತಪುರದಿಂದ ರಾತ್ರಿ 9.30ಕ್ಕೆ ಹೊರಟು ಮರುದಿನ ಬೆಳಿಗ್ಗೆ 8.25ಕ್ಕೆ ಬೆಳಗಾವಿ ತಲುಪಲಿದೆ. ಅದೇ ದಿನ ಬೆಳಗಾವಿಯಿಂದ 9.20ಕ್ಕೆ ಹೊರಟು ಮರುದಿನ ಬೆಳಿಗ್ಗೆ 8.30ಕ್ಕೆ ಯಶವಂತಪುರ ತಲುಪಲಿದೆ.

ತುಮಕೂರು, ತಿಪಟೂರು, ಅರಸೀಕೆರೆ, ಕಡೂರು, ಚಿಕ್ಕಜಾಜೂರು, ದಾವಣಗೆರೆ, ಹರಿಹರ, ರಾಣೆಬೆನ್ನೂರು, ಹಾವೇರಿ, ಹುಬ್ಬಳ್ಳಿ, ಧಾರವಾಡ, ಅಳ್ನಾವರ, ಲೋಂಡಾ ಮತ್ತು ಖಾನಾಪುರ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಹೆಡಿಗ್ಗೊಂಡ ಗ್ರಾಮದ ಕೆನರಾ ಬ್ಯಾಂಕ್ ಶಾಖೆಗೆ ಬೆಂಕಿ ಬಿದ್ದ ಪರಿಣಾಮ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದರು

ಸಾಲ ನಿರಾಕರಣೆ: ಬ್ಯಾಂಕಿಗೆ ಬೆಂಕಿ ಹಚ್ಚಿದ ಗ್ರಾಹಕ!

ಹಾವೇರಿ: ಸಾಲ ಕೊಡಲಿಲ್ಲ ಎಂದು ಆಕ್ರೋಶಗೊಂಡ ಗ್ರಾಹಕನೊಬ್ಬ ಬ್ಯಾಡಗಿ ತಾಲ್ಲೂಕಿನ ಹೆಡಿಗ್ಗೊಂಡ ಗ್ರಾಮದ ಕೆನರಾ ಬ್ಯಾಂಕ್ ಶಾಖೆಗೆ ಶನಿವಾರ ತಡರಾತ್ರಿ ನುಗ್ಗಿ ಬೆಂಕಿ ಹಚ್ಚಿದ್ದು, ಪೀಠೋಪಕರಣಗಳಿಗೆ ಹಾನಿಯಾಗಿದೆ. ಭದ್ರತಾ ಕೊಠಡಿಯಲ್ಲಿದ್ದ ನೋಟುಗಳಿಗೆ ಯಾವುದೇ ಹಾನಿಯಾಗಿಲ್ಲ.

ರಟ್ಟೀಹಳ್ಳಿ ಪಟ್ಟಣದ ವಸೀಂ ಅಕ್ರಂ ಮುಲ್ಲಾ (33) ಬೆಂಕಿ ಹಚ್ಚಿದ ಆರೋಪಿ.

ಕೆನರಾ ಬ್ಯಾಂಕ್ ವ್ಯವಸ್ಥಾಪಕ ಸಾಲ ಕೊಡಲು ನಿರಾಕರಿಸಿದರು ಎಂದು ಕುಪಿತಗೊಂಡ ವಸೀಂ, ಶನಿವಾರ ಬೆಳಗಿನ ಜಾವ 2ಗಂಟೆ ಹೊತ್ತಿಗೆ ಬೈಕ್‌ನಲ್ಲಿ ಪೆಟ್ರೋಲ್ ಸಮೇತ ಬ್ಯಾಂಕ್ ಬಳಿ ಬಂದಿದ್ದರು. ಗ್ರಾಮ ಪಂಚಾಯಿತಿ ಕಟ್ಟಡದ ಮೇಲಂತಸ್ತಿನಲ್ಲಿದ್ದ ಬ್ಯಾಂಕ್ ಕಟ್ಟಡದ ಹಿಂಬದಿಯ ಕಿಟಕಿ ಗಾಜು ಒಡೆದು ಒಳಗಡೆ ಹೋಗಿ, ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದರು. ನಂತರ ಕಟ್ಟಡದಿಂದ ಜಿಗಿದು ಹೋಗುವಾಗ, ಸದ್ದು ಕೇಳಿದ ಗ್ರಾಮಸ್ಥರು ಆರೋಪಿಯನ್ನು ಹಿಡಿದು ಥಳಿಸಿ, ನಂತರ ಪೊಲೀಸರಿಗೆ ಒಪ್ಪಿಸಿದ್ದಾರೆ.

'ಅಪರಾಧ ಮನೋಭಾವದಿಂದ ಪಾದಯಾತ್ರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್ ಪಕ್ಷ ಮೇಕೆದಾಟು ಯೋಜನೆಗಾಗಿ ಏನೂ ಮಾಡಿರಲಿಲ್ಲ. ಈಗ ಅಪಧರಾ ಮನೋಭಾವದಿಂದ ಪಾದಯಾತ್ರೆ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.


ಬೊಮ್ಮಾಯಿ

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೇ ಜಲಸಂಪನ್ಮೂಲ ಸಚಿವರಾಗಿದ್ದರು. ಅವರ ಅವಧಿಯಲ್ಲಿ ಈ ಯೋಜನೆ ಕುರಿತು ಕಾರ್ಯಸಾಧ್ಯತಾ ವರದಿ ಮಾತ್ರ ಸಿದ್ಧಪಡಿಸಲಾಗಿತ್ತು. ವಿಸ್ತೃತ ಯೋಜನಾ ವರದಿ ಸಲ್ಲಿಸಿದ್ದು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ. ಮೇಕೆದಾಟು ಯೋಜನೆ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆಗಿದ್ದು ಬೆಟ್ಟ ಅಗೆದು ಇಲಿ ಹಿಡಿಯುವ ಕೆಲಸ ಮಾತ್ರ' ಎಂದರು.

'ಕಾಂಗ್ರೆಸ್ ಪಾದಯಾತ್ರೆ ಕುರಿತು ಸಾರ್ವಜನಿಕರ ಮನಸ್ಸಿನಲ್ಲಿ ಪ್ರಶ್ನೆ ಎದ್ದಿದೆ. ಕಾಂಗ್ರೆಸ್ ಮುಖಂಡರಿಗೆ ಈ ವಿಚಾರದಲ್ಲಿ ಬದ್ಧತೆ ಇಲ್ಲ. ಅಧಿಕಾರದಲ್ಲಿ ಇದ್ದಾಗ ಕೆಲಸ ಮಾಡದೇ ಇರುವುದಕ್ಕೆ ಅಪರಾಧಿ ಮನೋಭಾವ ಕಾಡುತ್ತಿದೆ. ಜನರನ್ನು ದಿಕ್ಕು ತಪ್ಪಿಸಲು ಈಗ ಪಾದಯಾತ್ರೆ ಮಾಡುತ್ತಿದ್ದಾರೆ' ಎಂದು ದೂರಿದರು.

ಈ ಯೋಜನೆ ವಿಚಾರದಲ್ಲಿ ಕೈಗೊಳ್ಳಬೇಕಿರುವ ಎಲ್ಲ ಕ್ರಮಗಳನ್ನೂ ಸರ್ಕಾರ ಮಾಡುತ್ತಿದೆ. ಹಿಂದೆ ಯೋಜನಾ ಪ್ರದೇಶಕ್ಕೆ ರೈತ ಸಂಘಟನೆಯವರು ಭೇಟಿ ನೀಡಿದ ಕಾರಣಕ್ಕಾಗಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಯೋಜನೆಗೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳಿಗೂ ತಡೆ ನೀಡಿತ್ತು. ಈಗ ಇಷ್ಟು ದೊಡ್ಡ ರಾಜಕೀಯ ಕಾರ್ಯಕ್ರಮ ಮಾಡುವುದರ ಪರಿಣಾಮ ಏನು ಎಂಬುದು ಕಾಂಗ್ರೆಸ್‌ನವರಿಗೆ ಗೊತ್ತಿದೆ. ಆದರೂ, ಅವರು ಮಾಡುತ್ತಿದ್ದಾರೆ. ಅವರಿಗೆ ಜನರಿಗಿಂತ ರಾಜಕೀಯ ಮುಖ್ಯವಾಗಿದೆ ಎಂದು ಟೀಕಿಸಿದರು.

ಕಾಂಗ್ರೆಸ್‌ನವರು 2013ರ ವಿಧಾನಸಭಾ ಚುನಾವಣೆಗೂ ಮೊದಲು 'ಕೃಷ್ಣೆಯ ಕಡೆಗೆ ಕಾಂಗ್ರೆಸ್ ನಡಿಗೆ' ಎಂಬ ಪಾದಯಾತ್ರೆ ಮಾಡಿದ್ದರು. ಆ ಬಳಿಕ ಕೃಷ್ಣಾ ಮೇಲ್ದಂಡೆ ಯೋಜನೆಗೆ ಅಗತ್ಯ ಅನುದಾನವನ್ನೇ ನೀಡಲಿಲ್ಲ. ಈಗ ಮತ್ತೆ ಮೇಕೆದಾಟು ವಿಷಯದಲ್ಲಿ ಜನರನ್ನು ಮರುಳು ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

ಪಾದಯಾತ್ರೆ ಸಂದರ್ಭದಲ್ಲಿ ಕೋವಿಡ್ ಮಾರ್ಗಸೂಚಿ ಉಲ್ಲಂಘನೆ ಕುರಿತು ಪ್ರತಿಕ್ರಿಯಿಸಿದ ಅವರು, 'ಅಧಿಕಾರಿಗಳು ಕಾಂಗ್ರೆಸ್ ನಾಯಕರಿಗೆ ಈ ಸಂಬಂಧ ನೋಟಿಸ್ ಜಾರಿ ಮಾಡಿದ್ದರು. ಖುದ್ದಾಗಿ ಭೇಟಿಮಾಡಿ ಸೂಚನೆಗಳನ್ನು ನೀಡಿದ್ದರು. ಆದರೆ, ಅವರು ಅದನ್ನು ಪಾಲಿಸದೇ ಉಡಾಫೆ ಮಾಡುತ್ತಿದ್ದಾರೆ. ಕಾನೂನು ಪ್ರಕಾರ ಮುಂದಿನ ಕ್ರಮ ಜರುಗಿಸಲಾಗುವುದು' ಎಂದರು.

ಕಪಟ ಬೀದಿ ನಾಟಕ: ಡಾ.ಕೆ. ಸುಧಾಕರ್

ಬೆಂಗಳೂರು: 2013 ರಿಂದ 2019ರವರೆಗೂ ರಾಜ್ಯದಲ್ಲಿ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷದ ನಾಯಕರೇ ಈಗ ಮೇಕೆದಾಟು ಯೋಜನೆಗಾಗಿ ಪಾದಯಾತ್ರೆ ನಡೆಸುತ್ತಿದ್ದಾರೆ. ಈ ಕಪಟ ಬೀದಿ ನಾಟಕವನ್ನು ರಾಜ್ಯದ ಜನರು ನೋಡುತ್ತಿದ್ದಾರೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಬಿಎಂಪಿ ಚುನಾವಣೆ ಕಾರಣಕ್ಕಾಗಿ ಈ ಬೀದಿ ನಾಟಕ ನಡೆಯುತ್ತಿದೆ. ಹತಾಶರಾಗಿ, ಪಕ್ಷದ ಅಸ್ತಿತ್ವ ಉಳಿಸಿಕೊಳ್ಳಲು ಪಾದಯಾತ್ರೆ ಮಾಡುತ್ತಿದ್ದಾರೆ. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಮೇಕೆದಾಟು ಯೋಜನೆ ಅನುಷ್ಠಾನ ಮಾಡುತ್ತದೆ ಎಂಬುದನ್ನು ತಿಳಿದು ಈ ರಾಜಕಾರಣ ಮಾಡುತ್ತಿದ್ದಾರೆ' ಎಂದು ಹೇಳಿದರು.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಸೃಷ್ಟಿಸಲಾಗುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷರು ಆರೋಪಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಇವರದ್ದೇ ಪಕ್ಷದ ಸರ್ಕಾರವಿದೆ. ಆ ರಾಜ್ಯದಲ್ಲಿ ದೇಶದಲ್ಲೇ ಹೆಚ್ಚು ಪ್ರಕರಣಗಳಿವೆ. ಅಲ್ಲಿಯೂ ಲೆಕ್ಕ ಸೃಷ್ಟಿಸಲಾಗಿದೆಯಾ ಎಂದು ಪ್ರಶ್ನಿಸಿದರು.

ಕೋವಿಡ್ ಉಲ್ಬಣಿಸುವ ಅಪಾಯ: ಕಾರಜೋಳ

ಬೆಂಗಳೂರು: ಕಾಂಗ್ರೆಸ್ ನಾಯಕರು ಆರಂಭಿಸಿರುವ ಪಾದಯಾತ್ರೆಯಲ್ಲಿ ಕೋವಿಡ್ ನಿಯಂತ್ರಣ ಮಾರ್ಗಸೂಚಿ ಪಾಲಿಸುತ್ತಿಲ್ಲ. ಇದರಿಂದ ಕೋವಿಡ್ ಉಲ್ಬಣಿಸುವ ಅಪಾಯವಿದೆ ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಾದಯಾತ್ರೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದಾರೆ. ಅಂತರ ಕಾಯ್ದುಕೊಳ್ಳುತ್ತಿಲ್ಲ. ರಾಜಕೀಯ ಹೋರಾಟ ಮುಖ್ಯ ಅಲ್ಲ. ಜನರ ಜೀವ ರಕ್ಷಣೆಯೇ ಮುಖ್ಯ' ಎಂದು ಹೇಳಿದರು.

ಕೋವಿಡ್ ಮಾರ್ಗಸೂಚಿ ಪಾಲಿಸಿಕೊಂಡು ಪಾದಯಾತ್ರೆ ನಡೆಸುವುದಕ್ಕೆ ಸರ್ಕಾರದ ವಿರೋಧವಿಲ್ಲ. ಪಾದಯಾತ್ರೆಯಲ್ಲಿ ಮಾರ್ಗಸೂಚಿ ಪಾಲನೆಗೆ ಆದ್ಯತೆ ನೀಡಬೇಕು ಎಂದರು.

ಕ್ಷಮೆ ಯಾಚಿಸಬೇಕಿತ್ತು: ಆರಗ ಜ್ಞಾನೇಂದ್ರ

ಬೆಂಗಳೂರು: 'ಕಾವೇರಿ ನದಿ ನೀರಿನ ಮೇಲಿನ ನಮ್ಮ ಹಕ್ಕನ್ನು ಪಡೆಯಲು ಅಧಿಕಾರದಲ್ಲಿದ್ದಾಗ ವಿಫಲರಾದ ಕಾಂಗ್ರೆಸ್ ನಾಯಕರು ಸಂಗಮದ ದಂಡೆಯಲ್ಲಿ ಮಂಡಿಯೂರಿ ರಾಜ್ಯದ ಜನರ ಕ್ಷಮೆ ಯಾಚಿಸಬೇಕಿತ್ತು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಧಿಕಾರದಲ್ಲಿದ್ದಾಗ ಮೇಕೆದಾಟು ಯೋಜನೆಗಾಗಿ ಕಾಂಗ್ರೆಸ್ ನಾಯಕರು ಏನನ್ನೂ ಮಾಡಲಿಲ್ಲ. ಈಗ ಮುಂದಿನ ಚುನಾವಣೆಯನ್ನು ಗಮನದಲ್ಲಿ ಇರಿಸಿಕೊಂಡು ಪಾದಯಾತ್ರೆ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

'ಪ್ರಕರಣ ದಾಖಲಿಸಲು ಸಿ.ಎಂ ಪ್ರಯತ್ನ'

ರಾಮನಗರ: 'ಬಿಜೆಪಿ ಹಾಗೂ ಜೆಡಿಎಸ್ ಎರಡೂ ಪಕ್ಷಗಳು ನಾಡದ್ರೋಹಿಗಳು. ಮೇಕೆದಾಟು ಹೋರಾಟ ಹತ್ತಿಕ್ಕುವ ಪ್ರಯತ್ನ ಮಾಡುತ್ತಿವೆ. ಪಾದಯಾತ್ರೆ ಹಿಂಪಡೆಯುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಒತ್ತಡ ಹೇರುತ್ತಿವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಕನಕಪುರ ತಾಲ್ಲೂಕಿನ ದೊಡ್ಡಾಲಹಳ್ಳಿಯಲ್ಲಿ ಭಾನುವಾರ ರಾತ್ರಿ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಖುದ್ದು ಮುಖ್ಯಮಂತ್ರಿ ಬಸವರಾಜ ಬಸವರಾಜ ಬೊಮ್ಮಾಯಿ ಅವರೇ ಹೋರಾಟಗಾರರ ವಿರುದ್ಧ ಪ್ರಕರಣ ದಾಖಲಿಸುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು.

'ನಾನು ತಿಹಾರ್ ಜೈಲಿಗೆ ಹೋದಾಗ ಗಡ್ಡ ಬಿಟ್ಟಿದ್ದೆ. ಈಗ ಜೈಲಿಗೆ ಹಾಕಿದರೂ ನಾನು ಇದೇ ಗಡ್ಡದೊಂದಿಗೆ ಹೋಗುತ್ತೇನೆ' ಎಂದು ಸವಾಲು ಹಾಕಿದರು.

ಬಸವಲಿಂಗಯ್ಯ ಹಿರೇಮಠ ನಿಧನ

ಧಾರವಾಡ: ಜಾನಪದ ಕಲಾವಿದ ಬಸವಲಿಂಗಯ್ಯ ಹಿರೇಮಠ (65) ಭಾನುವಾರ ಬೆಳಿಗ್ಗೆ ಬೆಂಗಳೂರಿನಲ್ಲಿ ನಿಧನರಾದರು. ಅವರಿಗೆ ಪತ್ನಿ, ಕಲಾವಿದೆ ವಿಶ್ವೇಶ್ವರಿ ಹಿರೇಮಠ ಹಾಗೂ ಪುತ್ರ ಇದ್ದಾರೆ.

ಯಕೃತ್ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ಬೆಂಗಳೂರಿನ ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೂಲತಃ ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕಿನ ಬೈಲೂರಿನವರಾದ ಬಸವಲಿಂಗಯ್ಯ ನೀನಾಸಂನಲ್ಲಿ ಶಿಕ್ಷಣ ಪಡೆದವರು. ಸುಗಮ ಸಂಗೀತ ಹಾಗೂ ಜಾನಪದ ಗಾಯಕರಾಗಿ, ದೊಡ್ಡಾಟ, ಸಣ್ಣಾಟ, ಪಾರಿಜಾತ ನಾಟಕಗಳನ್ನು ಆಧುನಿಕ ರಂಗಭೂಮಿಗೆ ಪರಿಚಯಿಸಿ ಅವುಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವುದರ ಜತೆಗೆ, ಅವುಗಳನ್ನು ಹೊಸ ಪೀಳಿಗೆಗೆ ಪರಿಚಯಿಸಿದರು.

ಕುಲಗೋಡು ತಮ್ಮಣ್ಣ ವಿರಚಿತ 12 ಗಂಟೆಗಳ ಅವಧಿಯ 'ಶ್ರೀ ಕೃಷ್ಣ ಪಾರಿಜಾತ' ನಾಟಕವನ್ನು ಮೂರು ಗಂಟೆಯಲ್ಲಿ ಪ್ರೇಕ್ಷಕರ ಮನ ಮುಟ್ಟುವಂತೆ ಸಿದ್ಧಪಡಿಸಿ, ಸಾವಿರಕ್ಕೂ ಅಧಿಕ ಯಶಸ್ವಿ ಪ್ರಯೋಗಗಳನ್ನು ನಡೆಸಿದ್ದರು. ಅಮೆರಿಕ, ಇಂಗ್ಲೆಂಡ್, ದುಬೈ ಸೇರಿದಂತೆ ವಿಶ್ವದ ಹಲವೆಡೆ 'ಶ್ರೀ ಕೃಷ್ಣ ಪಾರಿಜಾತ' ಪ್ರದರ್ಶನ ನೀಡಿದ್ದರು.

ಜಾನಪದ ಸಂಶೋಧನಾ ಸಂಸ್ಥೆಯನ್ನು ಆರಂಭಿಸಿ, ಯುವ ಕಲಾವಿದರು, ಯುವ ಸಮೂಹವನ್ನು ಸಜ್ಜುಗೊಳಿಸಿದ್ದರು. ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

ಅಂತ್ಯಕ್ರಿಯೆ ಸೋಮವಾರ ಬೆಳಿಗ್ಗೆ 11ಕ್ಕೆ ಅವರ ಸ್ವಗ್ರಾಮ ಬೈಲೂರಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಚಿವ ಸೋಮಶೇಖರ್ ಮಗನಿಗೆ ಬ್ಲ್ಯಾಕ್‌ಮೇಲ್: ರಾಹುಲ್ ಭಟ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಎಸ್.ಟಿ.ಸೋಮಶೇಖರ್ ಅವರ ಪುತ್ರ ನಿಶಾಂತ್ ಅವರನ್ನು ಬೆದರಿಸಿ ₹1 ಕೋಟಿ ಮೊತ್ತಕ್ಕೆ ಬೇಡಿಕೆ ಇಡಲಾಗಿದೆ. ಪ್ರಕರಣದ ಪ್ರಮುಖ ಆರೋಪಿ ಎನ್ನಲಾದ ರಾಹುಲ್ ಭಟ್ ಎಂಬುವರನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ರಾಹುಲ್, ನಗರದ ಪ್ರಮುಖ ಜ್ಯೋತಿಷಿಯೊಬ್ಬರ ಮಗ ಎಂಬುದು ವಿಚಾರಣೆಯಿಂದ ಗೊತ್ತಾಗಿದೆ. ಇಂಡಿ ವಿಧಾನಸಭಾ ಕ್ಷೇತ್ರದ ಶಾಸಕ ಯಶವಂತ ರಾಯಗೌಡ ಪಾಟೀಲ ಅವರ ಮಗಳು ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೋಗಿದ್ದಾರೆ. ಅವರ ಹೆಸರಿನಲ್ಲಿರುವ ಸಿಮ್ ಕಾರ್ಡ್‌ನಿಂದಲೇ ಆರೋಪಿಯು ನಿಶಾಂತ್‌ಗೆ ಕರೆ ಮಾಡಿದ್ದರು' ಎಂದು ಅಧಿಕಾರಿಗಳು ಹೇಳಿದ್ದಾರೆ.

'ನಿಮ್ಮ ಮಗನ ಅಶ್ಲೀಲ ವಿಡಿಯೊವೊಂದು ನಮ್ಮ ಬಳಿ ಇದೆ. ₹1 ಕೋಟಿ ಹಣ ನೀಡದಿದ್ದರೆ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡುತ್ತೇವೆ' ಎಂಬ ಸಂದೇಶವೊಂದನ್ನು ಆರೋಪಿಯು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರಿಗೆ ಕಳುಹಿಸಿದ್ದರು. ಸಚಿವರ ಆಪ್ತ ಸಹಾಯಕರ ಮೊಬೈಲ್ ಸಂಖ್ಯೆಗೂ ಈ ಸಂದೇಶ ರವಾನಿಸಲಾಗಿತ್ತು. ಇದು ನಕಲಿ ವಿಡಿಯೊ ಎಂಬುದು ಗೊತ್ತಾದ ಕೂಡಲೇ ನಿಶಾಂತ್ ಅವರು ಕಚೇರಿಗೆ ಬಂದು ದೂರು ದಾಖಲಿಸಿದ್ದರು. ಅದರ ಆಧಾರದಲ್ಲಿ ತನಿಖೆ ನಡೆಸಿ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿದ್ದಾರೆ.

ಪ್ರಕರಣದ ಸಂಬಂಧ ಅಧಿಕಾರಿಗಳು ಇಂಡಿ ಶಾಸಕ ಹಾಗೂ ಅವರ ಪುತ್ರಿಯನ್ನು ವಿಚಾರಣೆಗೆ ಒಳಪಡಿಸಿ, ಹೇಳಿಕೆ ಪಡೆದಿದ್ದಾರೆ.

'ನನ್ನ ಮಗಳು, ಉನ್ನತ ವ್ಯಾಸಂಗಕ್ಕಾಗಿ 10 ತಿಂಗಳಿನಿಂದ ವಿದೇಶದಲ್ಲಿ ಇದ್ದಾಳೆ. ಆಕೆಗೆ ರಾಕೇಶ್ ಎಂಬ ಯುವಕನ ಪರಿಚಯವಿತ್ತು. ತನ್ನ ಬಾಲ್ಯ ಸ್ನೇಹಿತನಾಗಿದ್ದ ಆತನನ್ನು ನಂಬಿ ಸಿಮ್ ಕಾರ್ಡ್ ಕೊಟ್ಟಿದ್ದಳು. ಅದನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ಮಗಳಿಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ. ಕೃತ್ಯದ ಹಿಂದಿರುವವರನ್ನು ಪತ್ತೆ ಮಾಡಿ' ಎಂದು ಯಶವಂತರಾಯಗೌಡ, ಸಿಸಿಬಿ ಪೊಲೀಸರಿಗೆ ಹೇಳಿದ್ದಾರೆ.

'ನನ್ನ ಪುತ್ರನ ಚಿತ್ರಗಳನ್ನು ಪಡೆದು ನಕಲಿ ವಿಡಿಯೊವೊಂದನ್ನು ಸೃಷ್ಟಿಸಲಾಗಿದೆ. ಹೀಗಾಗಿ ವಿಡಿಯೊ ಸಮೇತ ದೂರು ನೀಡಿದ್ದೇವೆ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬಂದ ನಂತರ ಸತ್ಯ ಗೊತ್ತಾಗಲಿದೆ' ಎಂದು ಸೋಮಶೇಖರ್ ಪ್ರತಿಕ್ರಿಯಿಸಿದ್ದಾರೆ.

'ನಾನು ರಾಜಕೀಯವಾಗಿ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದೇನೆ. ತಂದೆ ಹಾಗೂ ನನ್ನ ಹೆಸರಿಗೆ ಮಸಿ ಬಳಿಯುವ ಉದ್ದೇಶದಿಂದ ನಕಲಿ ವಿಡಿಯೊ ಮಾಡಲಾಗಿದೆ. ಮಹಿಳೆಯೊಬ್ಬರ ಜೊತೆ ಇರುವ ವಿಡಿಯೊ ಅದಾಗಿದೆ' ಎಂದು ನಿಶಾಂತ್ ಹೇಳಿದ್ದಾರೆ.

ವಿದ್ಯಾರ್ಥಿಗಳಿಗೆ ಆಹಾರ ಧಾನ್ಯ ವಿತರಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣಕ್ಕೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ತರಗತಿಗಳು ನಡೆಯದ ಕಾರಣ ಈ ಅವಧಿಯಲ್ಲಿನ ಆಹಾರ ಧಾನ್ಯಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

1 ರಿಂದ 10ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಆಹಾರ ಧಾನ್ಯಗಳನ್ನು ವಿತರಿಸುವಂತೆ ಸೂಚಿಸಲಾಗಿದೆ.

ಬಿಸಿಯೂಟದ ಬದಲಿಗೆ ಆಹಾರ ಭದ್ರತಾ ಕಾಯ್ದೆ- 2013 ಮತ್ತು ಮಧ್ಯಾಹ್ನ ಉಪಾಹಾರ ಯೋಜನೆ ನಿಯಮಗಳು- 2015ರ ಅನ್ವಯ ಈ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

ಸೆಪ್ಟೆಂಬರ್ ತಿಂಗಳಲ್ಲಿ 25 ದಿನಗಳು ಮತ್ತು ಅಕ್ಟೋಬರ್ ತಿಂಗಳಲ್ಲಿ 16 ದಿನಗಳ ಆಹಾರ ಧಾನ್ಯಗಳ ವಿತರಿಸಬೇಕು ಎಂದು ತಿಳಿಸಲಾಗಿದೆ.

ಒಳನೋಟ

'ಅಭದ್ರತೆಯಲ್ಲಿ 'ಅತಿಥಿ'ಗಳು'

ಬೆಂಗಳೂರು: 'ಅಭದ್ರತೆಯಲ್ಲಿ 'ಅತಿಥಿ'ಗಳು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಜ.9) ಪ್ರಕಟವಾದ 'ಒಳನೋಟ' ವರದಿಗೆ ಅತಿಥಿ ಉಪನ್ಯಾಸಕರು ಸೇರಿದಂತೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

'ಉದ್ಯೋಗ ನೀತಿ ರೂಪಿಸಿ'



'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿರುವ ಅತಿಥಿ ಉಪನ್ಯಾಸಕರ ಸಮಸ್ಯೆ ಕುರಿತ ವರದಿ ಸಮಗ್ರವಾಗಿದೆ. ಅತಿಥಿ ಉಪನ್ಯಾಸಕರ ಸಮಸ್ಯೆ ಇಂದಿನದಲ್ಲ, ಅದಕ್ಕೊಂದು ಇತಿಹಾಸವೇ ಇದೆ.

ನ್ಯಾಯಾಲಯಗಳು ಹಿಂದೆ ಕೊಟ್ಟ ಸಕಾರಾತ್ಮಕ ತೀರ್ಪುಗಳಿಂದ ತಪ್ಪಿಸಿಕೊಳ್ಳಲೆಂದೇ ಅರೆಕಾಲಿಕ, ತಾತ್ಕಾಲಿಕ ಮುಂತಾದ ಹೆಸರುಗಳನ್ನು ಬದಲಾಯಿಸಿ, ಹಿಂದಿನ ಸರ್ಕಾರಗಳು 'ಅತಿಥಿ' ಎಂಬ ಹೆಸರು ಕೊಡುತ್ತಾ ಬಂದಿವೆ. ಇಂದಿನ ಸರ್ಕಾರವೂ ಅದನ್ನು ಮುಂದುವರಿಸಿದೆ. ಹಾಗಾಗಿ, ಅತಿಥಿ ಉಪನ್ಯಾಸಕರ ಸಮಸ್ಯೆಗೆ ಎಲ್ಲ ಪಕ್ಷಗಳ ಸರ್ಕಾರಗಳೂ ಸಮಾನ ಪಾಲುದಾರರು. ಸಮಸ್ಯೆ ಮುಂದೂಡುವಲ್ಲಿ 'ಸಮಾನತೆ' ಸಾಧಿಸಿದ್ದಾರೆ. ಈಗಲಾದರೂ ಈ ಸಮಸ್ಯೆಗೆ ಸೂಕ್ತ ಪರಿಹಾರ ಹುಡುಕಬೇಕು. ಅತಿಥಿ ಉಪನ್ಯಾಸಕರ ಬದುಕಿನ ಭದ್ರತೆಗಾಗಿ ಸೇವಾಭದ್ರತೆ ಒದಗಿಸಬೇಕು. ಸೂಕ್ತ ನಿಯಮಾವಳಿ ರಚಿಸಬೇಕು. ಕಾಲಕಾಲಕ್ಕೆ ಅಗತ್ಯ ಹುದ್ದೆಗಳ ಕಾಯಂ ಭರ್ತಿಯನ್ನೂ ಒಳಗೊಂಡ ಉದ್ಯೋಗ ನೀತಿಯನ್ನು ರೂಪಿಸಬೇಕು.

ಬರಗೂರು ರಾಮಚಂದ್ರಪ್ಪ, ಸಾಹಿತಿ

'3ಂಗಳ ವೇತನ ನಿಗದಿಪಿ'

ಉಪನ್ಯಾಸಕರಿಗೆ ಸದ್ಯ ವರ್ಷಕ್ಕೆ ಎರಡು ಅಥವಾ ಮೂರು ಬಾರಿ ಮಾತ್ರ ವೇತನ ಸಿಗುತ್ತಿದ್ದು, ಈ ಶೋಷಣೆ ನಿಲ್ಲಬೇಕು. ಅತಿಥಿ ಉಪನ್ಯಾಸಕರಿಗೆ ಯುಜಿಸಿ ನಿಯಮಾನುಸಾರ ತಿಂಗಳ ವೇತನ ನೀಡಬೇಕು. ಈಗ ನಡೆಯುವ ನೇಮಕಾತಿಯಲ್ಲೂ ಅರ್ಹ ಮತ್ತು ಪ್ರತಿಭಾವಂತರಿಗೆ ಆದ್ಯತೆ ನೀಡಬೇಕು.

ಪ್ರಶಾಂತ, ಬೀದರ್

'ಹೆಸರಿಗೆ ಉತ್ತಮ ಕೆಲಸ'

ಅತಿಥಿ ಉಪನ್ಯಾಸಕರದ್ದು ಹೇಳಿಕೊಳ್ಳುವುದಕ್ಕೆ ಅತ್ಯುತ್ತಮ ಉದ್ಯೋಗ. ಆದರೆ, ಬಿಡಿಗಾಸಿನ ಸಂಬಳದಿಂದ ವಿವಾಹಕ್ಕೂ ತೊಡಕಾಗಿದೆ. ಉತ್ತಮ ಸಂಬಳ ಕೊಟ್ಟರೆ ನಾವೇಕೆ ಖಾಸಗಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತೇವೆ? ಇಂತಹ ಜ್ವಲಂತ ಸಮಸ್ಯೆಯನ್ನು ಸರ್ಕಾರ ನಿವಾರಣೆ ಮಾಡಬೇಕು. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ನಮ್ಮಂತಹ ಅತಿಥಿ ಉಪನ್ಯಾಸಕರ ಬದುಕನ್ನು ಉತ್ತಮಗೊಳಿಸಬೇಕು.

ಸಂತೋಷ ಕುಮಾರ್, ಬಳ್ಳಾರಿ

'ಹಂತ ಹಂತವಾಗಿ ಕಾಯಂಗೊಳಿಸಿ'



ಅತಿಥಿ ಉಪನ್ಯಾಸಕರನ್ನು ಹಂತ ಹಂತವಾಗಿ ಕಾಯಂಗೊಳಿಸುವುದೇ ಈಗಿನ ಸಮಸ್ಯೆಗೆ ಪರಿಹಾರ ಮತ್ತು ನ್ಯಾಯಸಮ್ಮತ ಕ್ರಮ. ಯಾವ ಸರ್ಕಾರವೂ ಒಂದೇ ಹಂತದಲ್ಲಿ ಅತಿಥಿ ಉಪನ್ಯಾಸಕರನ್ನು ಕಾಯಂಗೊಳಿಸಿಲ್ಲ. ಸೇವಾ ಅವಧಿಯ ಹಿರಿತನ ಪರಿಗಣಿಸಿ, ಆದ್ಯತೆಯ ಮೇರೆಗೆ ಕಾಯಂಗೊಳಿಸಲು ಸರ್ಕಾರ ಮುಂದಾಗಲಿ.

ನವ್ಯಾ ಶಿವದೇವ, ಯಲ್ಲಾಪುರ

'ದೇಶದ ಅಭಿವೃದ್ಧಿಗೆ ಮಾರಕ'

ಶಿಕ್ಷಕನಾಗಬೇಕು ಎಂಬುದು ಎಷ್ಟೋ ಜನರ ಆಸೆ. ಆದರೆ, ಅತಿಥಿ ಉಪನ್ಯಾಸಕರ ಸ್ಥಿತಿ ಕಂಡು ಆ ಆಸೆಯನ್ನು ಅರ್ಧಕ್ಕೆ ಕೈಬಿಟ್ಟು, ಪದವಿ ಮುಗಿಸಿ, ಹೊಟ್ಟೆಪಾಡಿಗಾಗಿ ಕೆಲವರು ಕೃಷಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಶಿಕ್ಷಣ ಕೊಡುವ ಉಪನ್ಯಾಸಕರಿಗೆ ಸರಿಯಾದ ವೇತನ, ಗೌರವಧನ ಸಿಗದಿರುವ ಕಾರಣ ಧರಣಿ ಕೂತಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಈ ಸ್ಥಿತಿಯಲ್ಲಿ ದೇಶದ ಅಭಿವೃದ್ಧಿ ಹೇಗೆ ಸಾಧ್ಯ?

ಸ್ಮಿತಾ, ವಿಜಯನಗರ

'ಬೇಡಿಕೆಗಳಿಗೆ ಸ್ಪಂದಿಸಲಿ'

ಅತಿಥಿ ಉಪನ್ಯಾಸಕರ ಬದುಕು ನಿಜಕ್ಕೂ ಶೋಚನೀಯ. ಕ್ಲಿಷ್ಟಕರವಾದ ಎನ್‌ಇಟಿ, ಪಿಎಚ್.ಡಿ ಪೂರೈಸಿದರೂ ಸೇವಾ ಅಭದ್ರತೆ, ಕನಿಷ್ಠ ವೇತನವಿಲ್ಲದೆ, ಗೌರವಯುತ ಜೀವನ ನಡೆಸಲು ಆಗುತ್ತಿಲ್ಲ. ಈ ಸಂಕಷ್ಟಕ್ಕೆ ಸಿಲುಕಿ ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅತಿಥಿ ಉಪನ್ಯಾಸಕರ ಸಮಸ್ಯೆಗಳಿಗೆ ಸರ್ಕಾರ ಕೂಡಲೇ ಸ್ಪಂದಿಸಿ, ಬೇಡಿಕೆಗಳನ್ನು ಈಡೇರಿಸಬೇಕು. ಆತ್ಮಹತ್ಯೆಗಳು ಹೆಚ್ಚಾಗದಂತೆ ಕ್ರಮ ಸರ್ಕಾರ ಕೈಗೊಳ್ಳಬೇಕು.

ಆರ್.ಪೂಜಿತಾ, ಬೆಂಗಳೂರು

'ಶೈಕ್ಷಣಿಕ ಹಿತ ಕಾಯಲಿ'

ಅತಿಥಿ ಉಪನ್ಯಾಸಕರ ಹೋರಾಟ ಪರಿಗಣಿಸಿ, ಅವರಿಗೆ ಉದ್ಯೋಗ ಭದ್ರತೆಯನ್ನು ಸರ್ಕಾರ ಒದಗಿಸಬೇಕು. ಬೇರೆ ರಾಜ್ಯಗಳಲ್ಲಿ ಅನುಸರಿಸಿರುವ ನೀತಿಗಳಂತೆ ರಾಜ್ಯದಲ್ಲೂ ಅತಿಥಿ ಉಪನ್ಯಾಸಕರಿಗೆ ಹೊಸ ನೀತಿ ರೂಪಿಸಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಸಹಾಯ ಮಾಡುವ ಮೂಲಕ ದೇಶಕ್ಕೆ ಉತ್ತಮ ಪ್ರಜೆಗಳನ್ನು ನೀಡುವಲ್ಲಿ ದಿಟ್ಟ ನಿರ್ಧಾರ ತೆಗೆದುಕೊಳ್ಳಿ.

ವೆಂಕಟೇಶ್ ಬಾಬು, ದಾವಣಗೆರೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಾದರಿ ಸಂಗ್ರಹ
ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಭಾನುವಾರ ಆರೋಗ್ಯ ಕಾರ್ಯಕರ್ತೆ ಪ್ರಯಾಣಿಕರೊಬ್ಬರಿಂದ ಕೋವಿಡ್ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಿದರು

ಜಾಹೀರಾತು

ಮೇಕೆದಾಟು ಸಮತೋಲನ ಜಲಾಶಯ ಮತ್ತು ಕುಡಿಯುವ ನೀರಿನ ಯೋಜನೆ ಕುರಿತ ವಾಸ್ತವಾಂಶಗಳು

ಶ್ರೀ ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿಗಳು ಮತ್ತು
ಕರ್ನಾಟಕ ವಿಧಾನಸಭೆ ವಿರೋಧ ಪಕ್ಷದ ನಾಯಕರು

ಶ್ರೀ ಡಿ.ಕೆ. ಶಿವಕುಮಾರ್
ಅಧ್ಯಕ್ಷರು,
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ

ಶ್ರೀ ಎಂ.ಬಿ. ಪಾಟೀಲ
ಮಾಜಿ ಜಲಸಂಪನ್ಮೂಲ ಸಚಿವರು
ಮತ್ತು ಮಾಜಿ ಗೃಹ ಸಚಿವರು

ಜನವರಿ 8, 2022ರಂದು ಸುದ್ದಿಪತ್ರಿಕೆಗಳಲ್ಲಿ ಪ್ರಾಯೋಜಿತ ಅನಾಮಧೇಯ ಪ್ರಕಟಣೆಯಲ್ಲಿದ್ದ ಅಂಶಗಳು ಎಷ್ಟು ಸತ್ಯ, ಎಷ್ಟು ಮಿಥ್ಯ?

ಕಾವೇರಿಗೆ ನದಿಗೆ ಅಡ್ಡಲಾಗಿ ಕರ್ನಾಟಕ ಸರ್ಕಾರ ನಿರ್ಮಿಸಲು ಪ್ರಸ್ತಾಪಿಸಿರುವ ಅತ್ಯಂತ ಮಹತ್ವಾಕಾಂಕ್ಷಿ ಮೇಕೆದಾಟು ಯೋಜನೆ ಕುರಿತು ಕೆಲವು ಅನಾಮಧೇಯ ವ್ಯಕ್ತಿಗಳು ಈ ಯೋಜನೆಯ ವಿಳಂಬಕ್ಕೆ ಕಾಂಗ್ರೆಸ್ ಸರ್ಕಾರವೇ ಕಾರಣ ಎಂದು ಬಿಂಬಿಸುತ್ತಿದ್ದಾರೆ. ವಾಸ್ತವಾಂಶಗಳನ್ನು ತಮಗೆ ಬೇಕಾದ ರೀತಿಯಲ್ಲಿ ತಿರುಚಿಕೊಂಡು ಜನರ ದಾರಿ ತಪ್ಪಿಸಿ ದಿನಪತ್ರಿಕೆಗಳಲ್ಲಿ ದೊಡ್ಡ ಸುದ್ದಿಗಳು ಪ್ರಕಟವಾಗುವಂತೆ ನೋಡಿಕೊಳ್ಳುತ್ತಿದ್ದಾರೆ.

ವಾಸ್ತವಾಂಶಗಳನ್ನು ಮರೆಮಾಚಿ, ತಪ್ಪು ಮಾಹಿತಿ ಹರಡುತ್ತಾ ಕಾಂಗ್ರೆಸ್ ಸರ್ಕಾರದಿಂದಲೇ ಮೇಕೆದಾಟು ಯೋಜನೆ ಅನುಷ್ಠಾನ ವಿಳಂಬವಾಗಿದೆ ಎಂದು ಜನರ ದಾರಿತಪ್ಪಿಸುವ ಕುಹಕ ಪ್ರಯತ್ನಗಳು ನಡೆಯುತ್ತಿವೆ.

ರಾಜ್ಯದ ಹಿತದೃಷ್ಟಿಯಿಂದ, ನೆಲ–ಜಲ ಭಾಷೆಯ ಕಾಳಜಿಯಿಂದ, ಅಂತರ ರಾಜ್ಯ ಜಲವಿವಾದಂತಹ ಸೂಕ್ಷ್ಮ ವಿಚಾರಗಳ ಬಗ್ಗೆ ತಪ್ಪು ಮಾಹಿತಿ ನೀಡುತ್ತಿರುವುದಕ್ಕೆ ಪ್ರತ್ಯುತ್ತರವಾಗಿ ಜನರಿಗೆ ಸತ್ಯಾಂಶಗಳನ್ನು ತಿಳಿಸಲು ಮಾಜಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಶ್ರೀ ಡಿ. ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್ ಪಕ್ಷದ ಪರವಾಗಿ ಮಾಜಿ ಜಲಸಂಪನ್ಮೂಲ ಸಚಿವ ಶ್ರೀ ಎಂ. ಬಿ. ಪಾಟೀಲರೇ ಇದನ್ನು ಪ್ರಕಟಿಸಿದ್ದಾರೆ. .

ರಾಜ್ಯ ಮತ್ತು ಕೇಂದ್ರ ಎರಡೂ ಕಡೆ ಬಿಜೆಪಿ ಸರ್ಕಾರವೇ ಇದ್ದರೂ ಹಾಲಿ ಜಲ ಸಂಪನ್ಮೂಲ ಸಚಿವರು ತಾವು ಮಾಡಿದ ಸಾಧನೆಯನ್ನು ರಾಜ್ಯದ ಜನತೆಯ ಮಂದೆ ಏಕೆ ಹೇಳುತ್ತಿಲ್ಲ?

ಮೇಕೆದಾಟು ಯೋಜನೆಯ ಡಿಪಿಆರ್ ಹಾಗೂ ಪ್ರಿಫೀಜಿಬಿಲಿಟಿ ರಿಪೋರ್ಟ್ ಎರಡನ್ನೂ ತಯಾರಿಸಿದ್ದು ಕಾಂಗ್ರೆಸ್ ಸರ್ಕಾರ

ಕಾಂಗ್ರೆಸ್ ಸರ್ಕಾರದ ಮುಖ್ಯಾಂಶಗಳು (ಮೇ 2013 – ಮೇ 18)

- ರಾಜ್ಯದ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಜಲಸಂಪನ್ಮೂಲ ಸಚಿವರಾದ ಶ್ರೀ ಎಂ.ಬಿ. ಪಾಟೀಲ ಅವರ ಅವಧಿಯಲ್ಲಿ 2013–18ರ ನಡುವೆ ಮೇಕೆದಾಟು ಯೋಜನೆಗೆ ಪ್ರಥಮವಾಗಿ ದಿಟ್ಟ ನಿರ್ಧಾರ ತೆಗೆದುಕೊಂಡು ಕಾನೂನಾತ್ಮಕವಾಗಿ ಚಾಲನೆ ನೀಡಲಾಯಿತು.
- ಎಂ.ಬಿ. ಪಾಟೀಲ ಅವರು ಸೆಪ್ಟೆಂಬರ್ 2013ರಲ್ಲಿ, ರಾಜ್ಯದ ಕಾನೂನು ತಂಡದ ಮುಖ್ಯಸ್ಥರಾದ ಶ್ರೀ ಫಾಲಿ ನಾರಿಮನ್ ಅವರ ತಂಡದೊಂದಿಗೆ ವಿವರವಾದ ಚರ್ಚೆಗಳಲ್ಲಿ ಪಾಲ್ಗೊಂಡ ನಂತರ ಬಲಿಷ್ಠ ಕಾನೂನು ಬೆಂಬಲದೊಂದಿಗೆ ಯೋಜನೆಗೆ ಡಿ.ಪಿ.ಆರ್. ತಯಾರಿಕೆಗೆ ಕ್ರಮ ತೆಗೆದುಕೊಂಡರು.
- **ಮೇಕೆದಾಟನೊಂದಿಗೆ ನಾಲ್ಕು ಇತರೆ ಸಂಭಾವ್ಯ ಲೊಕೇಷನ್‌ಗಳು ಹಾಗೂ ವಿವರವಾದ ಯೋಜನಾ ವರದಿ (ಡಿಪಿಆರ್) ಹಾಗೂ ಕಾರ್ಯಸಾಧ್ಯತಾ ವರದಿಗಳನ್ನು (ಪ್ರಿಫೀಜಿಬಿಲಿಟಿ ರಿಪೋರ್ಟ್) ಸಹ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಿದ್ಧಪಡಿಸಲಾಯಿತು. (ಉಲ್ಲೇಖ: ಅನುಬಂಧ–1ರಲ್ಲಿರುವ ಕಾರ್ಯವ್ಯಾಪ್ತಿಯ ಸಾರ)**
- ಕರ್ನಾಟಕ ಸರ್ಕಾರ ರೂ.5912 ಕೋಟಿಗಳ ಮೊತ್ತದ ಡಿಪಿಆರ್ ಅನ್ನು ಅನುಮೋದಿಸಿ, 07.06.2017ರಂದು ಬೆಂಗಳೂರಿನ ಸಿಡಬ್ಲ್ಯೂಸಿ ಪ್ರಾದೇಶಿಕ ಕೇಂದ್ರಕ್ಕೆ ಸಲ್ಲಿಸಿತು. ನೂತನ ಮಾರ್ಗಸೂಚಿಗಳ ಪ್ರಕಾರ ಮೊದಲು ಕಾರ್ಯಸಾಧ್ಯತಾ ವರದಿಯನ್ನು ಸಲ್ಲಿಸುವಂತೆ ಸರ್ಕಾರಕ್ಕೆ ಸೂಚಿಸಲಾಯಿತು. (ಉಲ್ಲೇಖ: ಅನುಬಂಧ–2 ರಲ್ಲಿರುವ ಸಿಡಬ್ಲ್ಯೂಸಿ ಬೆಂಗಳೂರು ಪತ್ರದ ಸಾರ)
- 16.02.2018ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದಾಗಿ ಕರ್ನಾಟಕಕ್ಕೆ ಕಾವೇರಿ ಜಲಾನಯನ ಪ್ರದೇಶದಿಂದ 14.75 ಟಿಎಂಸಿ ಹೆಚ್ಚುವರಿ ನೀರು ಲಭಿಸಲು ಅಂದಿನ ಜಲಸಂಪನ್ಮೂಲ ಸಚಿವರಾದ ಶ್ರೀ ಎಂ.ಬಿ. ಪಾಟೀಲರ ಭಗೀರಥ ಪ್ರಯತ್ನವೇ ಕಾರಣ. ಅಲ್ಲದೇ ಬೆಂಗಳೂರು ನಗರಕ್ಕೆ 4.75 ಟಿ.ಎಂ.ಸಿ. ಕುಡಿಯುವ ನೀರನ್ನು ಒದಗಿಸುವಲ್ಲಿ ಯಶಸ್ವಿಯಾಗಿರುವುದು ಈಗ ಇತಿಹಾಸ. ಈ ಹಿನ್ನೆಲೆಯಲ್ಲಿ ಡಿಪಿಆರ್ ಅನ್ನು ಪರಿಷ್ಕರಣೆ ಮಾಡಲಾಯಿತು.

ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ (23ನೇ ಮೇ 2018–26ನೇ ಜುಲೈ 2019)

- ಸಿಡಬ್ಲ್ಯೂಸಿ, ನವದೆಹಲಿಯ ಸೂಚನೆ – "ರೂ.5912 ಕೋಟಿ ಮೊತ್ತದ ಮೇಕೆದಾಟು ಯೋಜನೆಯ ಡಿಪಿಆರ್ ವಿದ್ಯುಚ್ಛಕ್ತಿ ಅಂಶವನ್ನು ಒಳಗೊಂಡಿದ್ದು, ನೀರಾವರಿ ಅಂಶಗಳನ್ನು ಒಳಗೊಂಡಿರುವುದಿಲ್ಲ," ಹಾಗಾಗಿ, "2017ರ ಸಿಡಬ್ಲ್ಯೂಸಿ ನೂತನ ಮಾರ್ಗಸೂಚಿಗಳು ಹಾಗೂ ಮೊದಲು ಪೂರ್ವ–ಕಾರ್ಯಸಾಧ್ಯತಾ ವರದಿಯನ್ನು ಸಲ್ಲಿಸಿ ಎಂಬ ಉಪವಾಕ್ಯ (clause) ಅನ್ವಯವಾಗುವುದಿಲ್ಲ.
- ಮುಂದುವರೆದು, "ಕಾವೇರಿ ಜಲ ನಿರ್ವಹಣಾ ಯೋಜನೆಯ ಕಾರ್ಯಗಳು, ನೂತನ ಸಿಡಬ್ಲ್ಯೂಸಿ ಮಾರ್ಗಸೂಚಿಗಳ ಅನ್ವಯಿಸದಿರುವಿಕೆಯ ಅಂಶಗಳನ್ನು ಗಮನದಲ್ಲಿರಿಸಿಕೊಂಡು,....... ಇದನ್ನು, "ಕೇವಲ ಕಟ್ಟಡ ರಚನೆಯ ವಿನ್ಯಾಸ ಅಂಶಗಳ ಕುರಿತು ಸಿಡಬ್ಲ್ಯೂಸಿ," ಯೊಂದಿಗೆ ಸಮಾಲೋಚಿಸಿ, ಕೇಂದ್ರ ವಿದ್ಯುತ್ ಪ್ರಾಧಿಕಾರ (ಸಿಇಎ) ಹಾಗೂ ಕಾವೇರಿ ಜಲ ನಿರ್ವಹಣಾ ಯೋಜನೆಯಿಂದ ಅನುಮೋದಿತವಾಗಬೇಕು. (ಉಲ್ಲೇಖ: ಅನುಬಂಧ–3ರಲ್ಲಿರುವ ಸಿಡಬ್ಲ್ಯೂಸಿ, ನವದೆಹಲಿಯ ಪತ್ರ)
- ಕೇಂದ್ರ ಸರ್ಕಾರದ ಸಿಡಬ್ಲ್ಯೂಸಿ, ನವದೆಹಲಿಯು 22.11.2018ರ ಪತ್ರದಲ್ಲಿ, ಸಿಡಬ್ಲ್ಯೂಸಿ/ ಸಿಇಎ ತಜ್ಞ ನಿರ್ದೇಶನಾಲಯಗಳಿಂದ ಸಲಹೆಗಳು/ ಅಭಿಪ್ರಾಯಗಳನ್ನು ಪಡೆದುಕೊಂಡು, ಕೆಲವು ಷರತ್ತುಗಳನ್ನು ಆಧರಿಸಿ, ಡಿಪಿಆರ್ ಅನ್ನು ಸಿದ್ಧಪಡಿಸಬಹುದು ಎಂದು ತಿಳಿಸಿತು.
- ಮೆ। ಇಐ ಟೆಕ್ನಾಲಜಿ–ಡಿಜಿಸಿ (ಜೆವಿ)ಗೆ 4(ಜಿ) ವಿನಾಯಿತಿಯನ್ನು 01.01.2019ರಂದು (ಉಲ್ಲೇಖ: ಅನುಬಂಧ 4) ನೀಡಲಾಯಿತು ಎಂಬ ಅಂಶವನ್ನು ಇಲ್ಲಿ ಗಮನಿಸಬೇಕು ಮತ್ತು ರೂ.9,000 ಕೋಟಿಗಳ ಮತ್ತೊಂದು ಡಿಪಿಆರ್ (ಉಲ್ಲೇಖ: ಅನುಬಂಧ 5) ಅನ್ನು 18.01.2019ರಂದು ಸಲ್ಲಿಸಲಾಯಿತು. ರೂ.9,000 ಕೋಟಿಗಳಷ್ಟು ಬೃಹತ್ ಮೊತ್ತದ ಡಿಪಿಆರ್ ಅನ್ನು ಕೇವಲ 18 ದಿನಗಳೊಳಗೆ ಹೇಗೆ ಸಿದ್ಧಪಡಿಸಲು ಸಾಧ್ಯ?
- **ಇದರಿಂದ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶ್ರೀ ಎಂ.ಬಿ. ಪಾಟೀಲ ಅವರು ಜಲಸಂಪನ್ಮೂಲ ಸಚಿವರಾಗಿದ್ದಾಗ ಮೂರು ಇತರೆ ಸ್ಥಳಗಳ ಕಾರ್ಯಸಾಧ್ಯತಾ ವರದಿಗಳೊಂದಿಗೆ ಇಡೀ ಡಿಪಿಆರ್ ಅನ್ನು ಸಿದ್ಧಪಡಿಸಲಾಯಿತು ಎಂದು ಸ್ಪಷ್ಟವಾಗುತ್ತದೆ.**
- ನಂತರ ಇದನ್ನು ಶೀಘ್ರವಾಗಿ (ಕೇವಲ 18 ದಿನಗಳೊಳಗೆ) ಪ್ರಸ್ತುತ ದರಪಟ್ಟಿ ಮತ್ತು ಪರಿಷ್ಕೃತ ಭೂಸ್ವಾಧೀನ ಬೆಲೆಗಳನ್ನೊಳಗೊಂಡು ರೂ.9,000 ಕೋಟಿಗಳಿಗೆ ರಿಕ್ಯಾಸ್ಟ್ ಮಾಡಿ ದಿನಾಂಕ 18–01–2019 ರಂದು ಸಿಡಬ್ಲ್ಯೂಸಿ, ನವದೆಹಲಿಗೆ ಸಲ್ಲಿಸಲಾಯಿತು.



ಘಟನಾವಳಿಗಳು

ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿ 13ನೇ ಮೇ 2013ರಿಂದ 17ನೇ ಮೇ 2018ರವರೆಗೆ

ಕ್ರ.ಸಂ.	ದಿನಾಂಕ ಮತ್ತು ಘಟನಾವಳಿಗಳು
1.	**10.09.2013:** ಅಂದಿನ ಜಲಸಂಪನ್ಮೂಲ ಸಚಿವರಾದ ಶ್ರೀ ಎಂ.ಬಿ. ಪಾಟೀಲರು ಡಿಪಿಆರ್ ಸಿದ್ಧಪಡಿಸುವ ಕೆಲಸವನ್ನು, ಅಗತ್ಯವಿದ್ದರೆ 4(ಜಿ) ವಿನಾಯಿತಿಗೆ ಮನವಿಯೊಂದಿಗೆ, ಆದ್ಯತೆಯ ಮೇರೆಗೆ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.
2.	**15.11.2013:** ಸಿಎನ್‌ಎನ್‌ಎಲ್ ಡಿಪಿಆರ್ ಮತ್ತು ಕಾರ್ಯಸಾಧ್ಯತಾ ವರದಿಗಳನ್ನು ಸಿದ್ಧಪಡಿಸುವ ಕೆಲಸದ ಪ್ರಾಥಮಿಕ ಅಂದಾಜನ್ನು ರೂ.2.81 ಕೋಟಿ ಎಂದು ನಿರ್ಧರಿಸಿತು
3.	**25.10.2014:** ಮೇಕೆದಾಟು ಯೋಜನೆಯ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲು Global expression of Interests ಅನ್ನು ಆಹ್ವಾನಿಸಲಾಯಿತು
4.	**03.03.2015:** ಇದಕ್ಕೆ ಪ್ರತಿಯಾಗಿ ಐದು ಬಿಡ್‌ಗಳು ಬಂದವು, ಈ ಪೈಕಿ ಮೂರು ಬಿಡ್‌ಗಳು ತಾಂತ್ರಿಕವಾಗಿ ಪೂರ್ವ ಅರ್ಹತೆಯನ್ನು ಹೊಂದಿದ್ದರೆ, ಕೇವಲ ಒಂದು ಪೂರ್ವ ಅರ್ಹತಾ ಬಿಡ್ಡರ್ ಮೆ। ವ್ಯಾಪ್ಕೋಸ್, ರೂ.22.07 ಕೋಟಿ ಮೊತ್ತದ ಅಧಿಕ ಬಿಡ್ ಅನ್ನು ಸಲ್ಲಿಸಿತು.
5.	**25.11.2015:** ಸಿಎನ್‌ಎನ್‌ಎಲ್ ಮಂಡಳಿಯು 53ನೇ ಸಭೆಯಲ್ಲಿ, ಮೆ। ವ್ಯಾಪ್ಕೋಸ್‌ನ ರೂ.22.07 ಕೋಟಿ ಅಂದಾಜು ದರಪಟ್ಟಿ ತುಂಬಾ ಹೆಚ್ಚು ಎಂದು ಪರಿಗಣಿಸಿ, ಅದನ್ನು ತಿರಸ್ಕರಿಸಿತು ಮತ್ತು ಹೊಸದಾಗಿ ಕೋಟಾ ಪಡೆದು, 4(ಜಿ) ವಿನಾಯಿತಿ ಕೋರಿ ಸರ್ಕಾರಕ್ಕೆ ಹೊಸ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಲಹೆ ನೀಡಿತು
6.	**25.02.2016:** ಅತೀ ಕಡಿಮೆ ದರವನ್ನು ನಮೂದಿಸಿದ ಬೆಂಗಳೂರಿನ ಇಐ ಟೆಕ್ನಾಲಜೀಸ್‌ಗೆ, ಹಣಕಾಸು ಇಲಾಖೆಯ ಪತ್ರ ಎಫ್‌ಡಿ 48 ವೆಚ್ಚ–12/16 ದಿನಾಂಕ: 25.02.2016ರಲ್ಲಿ 4(ಜಿ) ವಿನಾಯಿತಿಯಡಿ ಮೇಕೆದಾಟು ಯೋಜನೆಯಡಿ ಪಿಆರ್ ಸಿದ್ಧಪಡಿಸುವ ಜವಾಬ್ದಾರಿ ವಹಿಸಲಾಯಿತು.
7.	**26.02.2016:** ಸಿಎನ್‌ಎನ್‌ಎಲ್ ಮತ್ತು ಮೆ। ಇಐ ಟೆಕ್ನಾಲಜೀಸ್ ನಡುವಿನ ಒಪ್ಪಂದದ ಪ್ರಕಾರ ಒಳಗೊಂಡಿದ್ದ ಕೆಲಸಗಳು: • ಮೇಕದಾಟು ಹಾಗೂ ಇತರೆ ಮೂರು ಸಂಭಾವ್ಯ ಸ್ಥಳಗಳ ಕಾರ್ಯಸಾಧ್ಯತಾ ವರದಿಗಳನ್ನು ಸಿದ್ಧಪಡಿಸುವುದು • ಸಿಡಬ್ಲ್ಯೂಸಿ ಹಾಗೂ ಸಿಬಿಐಪಿ ಮಾರ್ಗಸೂಚಿಗಳ ಪ್ರಕಾರ ಸೈಟ್ 'ಸಿ'ಗೆ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸುವುದು

ಕ್ರ.ಸಂ.	ದಿನಾಂಕ ಮತ್ತು ಘಟನಾವಳಿಗಳು
	• ಡಿಪಿಆರ್‌ಗೆ ಪೂರಕವಾಗಿರುವ, ಅಗತ್ಯವಿರುವ ಇಐಎ ಹಾಗೂ ಇಎಂಪಿ ಅಧ್ಯಯನಗಳನ್ನು ಮಾಡಿ, ಸಿಡಬ್ಲ್ಯೂಸಿಯ ಅನುಮೋದನೆ ಪಡೆಯುವುದು • ಡಿಪಿಆರ್‌ನ ಅಗತ್ಯ ಅನುಮೋದನೆ ದೊರೆಯುವವರೆಗೂ ಸಿಡಬ್ಲ್ಯೂಸಿ ಹಾಗೂ ಸಿಬಿಐಪಿಗೆ ಕಾಲಕಾಲಕ್ಕೆ ಸ್ಪಷ್ಟನೆಗಳನ್ನು ಒದಗಿಸುವುದು
8.	**13.03.2017:** 2016–17ರ ದರಗಳ ಪ್ರಕಾರ ರೂ.5912 ಕೋಟಿಗಳ ಮೊತ್ತದ ಡಿಪಿಆರ್‌ಗೆ ಅಂದಿನ ರಾಜ್ಯ ಸರ್ಕಾರ ಅನುಮೋದನೆ ನೀಡಿತು. **ಇದರಿಂದಾಗಿ ನಾಲ್ಕು ಸಂಭವನೀಯ ಸ್ಥಳಗಳ ಕಾರ್ಯಸಾಧ್ಯತಾ ವರದಿ ಮತ್ತು ಮೇಕೆದಾಟಿನ ವಿವರವಾದ ಯೋಜನಾ ವರದಿಗಳನ್ನು ಶ್ರೀ ಸಿದ್ಧರಾಮಯ್ಯನವರ ನೇತೃತ್ವದಡಿ ಇದ್ದಂತಹ ಕಾಂಗ್ರೆಸ್ ಸರ್ಕಾರದಲ್ಲಿ, ಜಲಸಂಪನ್ಮೂಲ ಸಚಿವರಾದ ಶ್ರೀ ಎಂ.ಬಿ. ಪಾಟೀಲ ಅವರಅವಧಿಯಲ್ಲಿಯೇ ಸಿದ್ಧವಾಯಿತೆಂಬುದು ಸ್ಪಷ್ಟವಾಗುತ್ತದೆ.**
9.	**07.06.2017:** ಸಿಡಬ್ಲ್ಯೂಸಿ ಬೆಂಗಳೂರಿಗೆ ಡಿಪಿಆರ್ ಸಲ್ಲಿಕೆ
10.	**07.07.2017:** ಸಿಡಬ್ಲ್ಯೂಸಿ, ಬೆಂಗಳೂರು, ಸಿಡಬ್ಲ್ಯೂಸಿ ಮಾರ್ಗಸೂಚಿಗಳು ಬದಲಾಗಿವೆ ಎಂದು ತಿಳಿಸಿ, ಕೇವಲ Pre-feasibility report ವರದಿಯನ್ನು ಮಾತ್ರ ಸಲ್ಲಿಸುವಂತೆ ತಿಳಿಸಿತು.
11.	**09.10.2017:** ಸಿಎನ್‌ಎನ್‌ಎಲ್ ಆಗಲೇ 'ಸಿ' ಸೈಟನ್ನೊಳಗೊಂಡಂತೆ ಇತರೆ ಮೂರು ಲೊಕೇಷನ್‌ಗಳಿಗೆ ಪೂರ್ವ–ಕಾರ್ಯಸಾಧ್ಯತಾ ವರದಿ (Pre-feasibility report) ಮತ್ತು 'ಸಿ' ಸೈಟ್‌ಗೆ ಡಿಪಿಆರ್‌ಗಳನ್ನು ಸಿದ್ಧಪಡಿಸಿದ್ದ ಕಾರಣದಿಂದಾಗಿ, ಪೂರ್ವ–ಕಾರ್ಯಸಾಧ್ಯತಾ ವರದಿಯನ್ನು ತಕ್ಷಣವೇ ಸಲ್ಲಿಸಲಾಯಿತು
12.	**16.02.2018:** ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು
13.	ಸಿಡಬ್ಲ್ಯೂಡಿಟಿಯ ಆದೇಶವನ್ನು ತಿದ್ದುಪಡಿ ಮಾಡಿ ಕರ್ನಾಟಕಕ್ಕೆ ಕಾವೇರಿ ಜಲಾನಯನ ಪ್ರದೇಶದಿಂದ 14.25 ಟಿಎಂಸಿ ಹೆಚ್ಚುವರಿ ನೀರನ್ನು ಮತ್ತು 4.75 ಟಿ.ಎಂ.ಸಿ. ನೀರನ್ನು ಬೆಂಗಳೂರಿಗೆ ಕುಡಿಯುವ ನೀರನ್ನು ಒದಗಿಸಲು ಮಾನ್ಯ ಶ್ರೀ. ಎಂ.ಬಿ.ಪಾಟೀಲರು ಮಾಡಿದ ಪ್ರಯತ್ನ ಅವಿಸ್ಮರಣೀಯ. **ಶ್ರೀ ಎಂ.ಬಿ. ಪಾಟೀಲ ಅವರು ಜಲಸಂಪನ್ಮೂಲ ಸಚಿವರಾಗಿದ್ದ ಅವಧಿಯಲ್ಲಿ ಡಿಪಿಆರ್‌ಅನ್ನು ಮತ್ತೊಮ್ಮೆ ಪರಿಷ್ಕರಿಸಲಾಯಿತು.**

ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರ್ಕಾರ: ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ (23.05.2018 ರಿಂದ 26.07.2019ರವರೆಗೆ)

ಕ್ರ.ಸಂ.	ದಿನಾಂಕ ಮತ್ತು ಘಟನಾವಳಿಗಳು
14.	**02.08.2018:** ಪರಿಷ್ಕೃತ ಡಿಪಿಆರ್ – ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ಐಎಸ್‌ಡಬ್ಲ್ಯೂಡಿ ಅವಲೋಕನಗಳನ್ನು ಅಳವಡಿಸಿ ಸಿದ್ಧಪಡಿಸಲಾದ ಪರಿಷ್ಕೃತ ಡಿಪಿಆರ್–ಪೂರ್ವಕಾರ್ಯಸಾಧ್ಯತಾ ವರದಿಗಳನ್ನು ಸಿಡಬ್ಲ್ಯೂಸಿ, ನವದೆಹಲಿಗೆ, ಕರ್ನಾಟಕ ಸರ್ಕಾರದ ಮೂಲಕ ಮರುಸಲ್ಲಿಕೆ ಮಾಡಲಾಯಿತು.
15.	**04.08.2018:** ರಾಜ್ಯ ಸರ್ಕಾರದಿಂದ ಸಿಡಬ್ಲ್ಯೂಸಿ, ನವದೆಹಲಿಗೆ ಡಿಪಿಆರ್‌ನ ಪೂರ್ವ–ಕಾರ್ಯಸಾಧ್ಯತಾ ವರದಿ ಸಲ್ಲಿಕೆ
16.	**04.10.2018:** ಸಿಡಬ್ಲ್ಯೂಸಿ, ನವದೆಹಲಿಯಿಂದ, ರೂ.5912 ಕೋಟಿಗಳ ಮೊತ್ತದ ಮೇಕೆದಾಟು ಡಿಪಿಆರ್ ಕೇವಲ ವಿದ್ಯುತ್ ಅಂಶವನ್ನು ಮಾತ್ರ ಒಳಗೊಂಡಿದ್ದು, ನೀರಾವರಿ ಅಂಶಗಳನ್ನು ಒಳಗೊಂಡಿಲ್ಲ, "2017ರ ಸಿಡಬ್ಲ್ಯೂಸಿಯ ಹೊಸ ಮಾರ್ಗಸೂಚಿಗಳು ಹಾಗೂ ಮೊದಲು ಪೂರ್ವ–ಕಾರ್ಯಸಾಧ್ಯತಾ ವರದಿ ಸಲ್ಲಿಕೆ," clause ಅನ್ವಯಿಸುವುದಿಲ್ಲವೆಂದು ತಿಳಿಯಪಡಿಸಿತು. ಮುಂದುವರೆದು, "ಕಾವೇರಿ ಜಲ ನಿರ್ವಹಣಾ ಯೋಜನೆಯ ಕಾರ್ಯಗಳು, ನೂತನ ಸಿಡಬ್ಲ್ಯೂಸಿ ಮಾರ್ಗಸೂಚಿಗಳ ಅನ್ವಯಿಸದಿರುವಿಕೆಯ ಅಂಶಗಳನ್ನು ಗಮನದಲ್ಲಿರಿಸಿ ಕೊಂಡು,..... ಇದನ್ನು, "ಕೇವಲ ಕಟ್ಟಡ ರಚನೆಯ ವಿನ್ಯಾಸ ಅಂಶಗಳ ಕುರಿತು ಸಿಡಬ್ಲ್ಯೂಸಿ," ಯೊಂದಿಗೆ ಸಮಾಲೋಚಿಸಿ, ಕೇಂದ್ರ ವಿದ್ಯುತ್ ಪ್ರಾಧಿಕಾರ (ಸಿಇಎ) ಹಾಗೂ ಕಾವೇರಿ ಜಲ ನಿರ್ವಹಣಾ ಯೋಜನೆಯಿಂದ ಅನುಮೋದಿತವಾಗಬೇಕು ಎಂದು ಸ್ಪಷ್ಟನೆ ನೀಡಿತು. **ಮೇಕೆದಾಟು ಯೋಜನೆಯಲ್ಲಿ ನೀರಾವರಿ ಅಂಶ ಇಲ್ಲದಿರುವ ಕಾರಣದಿಂದಾಗಿ 'ಸಿಡಬ್ಲ್ಯೂಸಿಯ ಹೊಸ ಮಾರ್ಗಸೂಚಿಗಳು ಹಾಗೂ ಮೊದಲು ಪೂರ್ವ–ಕಾರ್ಯಸಾಧ್ಯತಾ ವರದಿ, ಇತ್ಯಾದಿಗಳ ಸಲ್ಲಿಕೆ," ನಿಯಮ ಈಗ ಅನ್ವಯಿಸುವುದಿಲ್ಲ ಎಂದು ಸಿಡಬ್ಲ್ಯೂಸಿ ಸ್ಪಷ್ಟನೆ ನೀಡಿತು.**
17.	**19.12.2018:** ಸಿಡಬ್ಲ್ಯೂಸಿಯ ಇತ್ತೀಚಿನ ಮಾರ್ಗಸೂಚಿಗಳ ಪ್ರಕಾರ ಮತ್ತು ತಿದ್ದುಪಡಿ ಮಾಡಿದ ಕಾಮಗಾರಿ ವ್ಯಾಪ್ತಿಯ ಪ್ರಕಾರ ಡಿಪಿಆರ್ ಅನ್ನು ಸಿದ್ಧಪಡಿಸಲು, ಮೆ। ಇಐ ಟೆಕ್ನಾಲಜೀಸ್ – ಡಿಜಿಸಿ (ಜೆವಿ)ಗೆ 4(ಜಿ) ವಿನಾಯಿತಿ ನೀಡುವಂತೆ ಮನವಿ ಮಾಡಿ, ಸಿಎನ್‌ಎನ್‌ಎಲ್ ಪತ್ರ
18.	**04.01.2019:** ಹಣಕಾಸು ಇಲಾಖೆಯಿಂದ ಮೆ। ಇಐಟಿ–ಡಿಜಿಸಿ (ಜೆವಿ)ಗೆ ಡಿಪಿಆರ್ ಸಿದ್ಧಪಡಿಸಲು 4(ಜಿ) ವಿನಾಯಿತಿ ಅನುಮೋದನೆ
19.	**18.01.2019:** ಅಂದಿನ ಜಲಸಂಪನ್ಮೂಲ ಸಚಿವರಾದ ಶ್ರೀ. ಡಿ.ಕೆ. ಶಿವಕುಮಾರ್ ಡಿಪಿಆರ್‌ಅನ್ನು ರೂ.9000 ಕೋಟಿಗೆ ಮರುರೂಪಿಸಿ, ಕರ್ನಾಟಕ ಸರ್ಕಾರದ ಮೂಲಕ, ಸಿಡಬ್ಲ್ಯೂಸಿ, ನವದೆಹಲಿಗೆ ಸಲ್ಲಿಕೆ (ಅರಣ್ಯ ಇಲಾಖೆಗೆ ಒಳಪಡುವ ಭೂಮಿಗೆ ನೀಡಬೇಕಾದ ಪರಿಹಾರದ ಮೊತ್ತ ಪ್ರತಿಎಕರೆಗೆ ರೂ.8 ಲಕ್ಷಗಳಿಂದ ರೂ.32 ಲಕ್ಷಗಳಿಗೆ ಪರಿಷ್ಕರಣೆಯಾದ ಹಿನ್ನೆಲೆಯಲ್ಲಿ/ ಹಾಗೂ ಅಧಿಸೂಚಿತ ದರಗಳಲ್ಲಿ ಪರಿಷ್ಕರಣೆ ಆಗಿರುವ ಹಿನ್ನೆಲೆಯಲ್ಲಿ ವೆಚ್ಚಗಳು ಹೆಚ್ಚಳವಾಗಿವೆ).
20.	**17.06.2019:** ಕರ್ನಾಟಕ ಸರ್ಕಾರದ ಅಂದಿನ ಜಲಸಂಪನ್ಮೂಲ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ಅವರಿಂದ, ಕೇಂದ್ರ ಹಣಕಾಸು ಸಚಿವರ ಭೇಟಿ
21.	**20.06.2019:** ಇಐಎ ಹಾಗೂ ಇಎಂಪಿ ಅಧ್ಯಯನಗಳ ಟಿಒಆರ್ ಅನ್ನು ಎಂಒಇಎಫ್ ಹಾಗೂ ಸಿಸಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಯಿತು.

ರಾಜ್ಯ ಹಾಗೂ ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದ್ದರೂ ಸಹ ಕಳೆದ ಎರಡೂವರೆ ವರ್ಷಗಳಲ್ಲಿ ಬಿಜೆಪಿ ಸರ್ಕಾರದ ಸಾಧನೆ ಶೂನ್ಯ

ಕ್ರ.ಸಂ.	ದಿನಾಂಕ ಮತ್ತು ಘಟನಾವಳಿಗಳು
22.	**11.11.2019:** ಭಾರತ ಸರ್ಕಾರದ ಜಲಸಂಪನ್ಮೂಲ ಸಚಿವರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಪತ್ರ
23.	**03.07.2021:** ಮೇಕೆದಾಟು ಯೋಜನೆಗೆ ತೀರುವಳಿಗಳನ್ನು ನೀಡುವಂತೆ ಕೋರಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರಿಂದ ಮಾನ್ಯ ಪ್ರಧಾನ ಮಂತ್ರಿ ಹಾಗೂ ಇತರರಿಗೆ ಪತ್ರ
24.	**25.08.2021:** ಮುಖ್ಯಮಂತ್ರಿ ಶ್ರೀ ಬಸವರಾಜ್ ಬೊಮ್ಮಾಯಿ ಅವರಿಂದ ಮಾನ್ಯ ಪ್ರಧಾನ ಮಂತ್ರಿ ಹಾಗೂ ಇತರರಿಗೆ ಪತ್ರ
25.	**25.02.2020, 10.06.2020, 30.07.2021:** ಸಿಡಬ್ಲ್ಯೂಎಂಎನ 5, 6 ಮತ್ತು 7ನೇ ಸಭೆಯಲ್ಲಿ ಮಂಡಿಸಿ, ಪ್ರತಿ ಬಾರಿಯೂ ಮುಂದೂಡಿಕೆ

ಕಳೆದ 30 ತಿಂಗಳುಗಳಲ್ಲಿ ಬಿಜೆಪಿಯ ಕೊಡುಗೆ ಏನು (ಎರಡೂವರೆ ವರ್ಷಗಳು ಎಂಬುದನ್ನು ತಿಳಿಯುವ ಹಕ್ಕು ಈ ರಾಜ್ಯದ ಜನತೆಗೆ ಇಲ್ಲವೇ?

ಈ ರಾಜ್ಯದ ನೆಲ–ಜಲದ ಹಿತದೃಷ್ಟಿಯಿಂದ ಅಂತರ ರಾಜ್ಯ ವಿವಾದಗಳಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತಂತೆ ಅನಾಮಧೇಯ ಪ್ರಕಟಣೆಗಳು ರಾಜ್ಯದ ಹಿತಕ್ಕೆ ಬಾಧಕವೆಂದು ಪರಿಗಣಿಸಿ ಕೇವಲ ವಸ್ತುನಿಷ್ಠ ವಿಷಯಗಳನ್ನು ಮಾತ್ರ ಪ್ರಕಟಣೆಯಲ್ಲಿ ಜನಸಾಮಾನ್ಯರ ಅವಗಾಹನೆಗೆ ತರಲಾಗಿದೆ.

ಪ್ರಕಟಣೆ: ಎಂ.ಬಿ. ಪಾಟೀಲ, ಮಾಜಿ ಜಲ ಸಂಪನ್ಮೂಲ ಸಚಿವರು, ಶಾಸಕರು, ಬಬಲೇಶ್ವರ ವಿಧಾನಸಭಾ ಕ್ಷೇತ್ರ

ಹೆಚ್ಚು ಸ್ಥಾನ ಗಳಿಸುವ ನಿರೀಕ್ಷೆಯಲ್ಲಿ ಎಎಪಿ: ಅಧಿಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ಸಾಹಸ

ಪಂಜಾಬ್: ಯಾರ ಪರವೂ ಇಲ್ಲ ಅಲೆ

ಚಂಡೀಗಡ (ಪಿಟಿಐ): ನಿರುದ್ಯೋಗ, ಧರ್ಮಕ್ಕೆ ಅಪಮಾನ ಮಾಡಿದ ಪ್ರಕರಣಗಳಲ್ಲಿ ನ್ಯಾಯದಾನ ವಿಳಂಬ, ಮರಳು ಅಕ್ರಮ ಗಣಿಗಾರಿಕೆ ಮತ್ತು ಮಾದಕ ವಸ್ತು ಮಾಫಿಯಾ... ಇವು ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯ ವಿಷಯಗಳಾಗುವ ಸಾಧ್ಯತೆ ಹೆಚ್ಚು.

ಆಮ್ ಆದ್ಮಿ ಪಕ್ಷವು (ಎಎಪಿ) ಜನಮನ್ನಣೆಯಲ್ಲಿ ಇತರ ಪಕ್ಷಗಳಿಗಿಂತ ಮುಂದೆ ಇರುವಂತೆ ಈಗ ಕಾಣಿಸುತ್ತಿದೆ. ರೈತರ ಹಲವು ಸಂಘಟನೆಗಳು ಕೂಡ ಚುನಾವಣಾ ಕಣದಲ್ಲಿ ಅದೃಷ್ಟ ಪರೀಕ್ಷೆಗೆ ಮುಂದಾಗಿವೆ. ಹಲವು ಸಮಸ್ಯೆ ಎದುರಿಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಒಗ್ಗಟ್ಟು ತೋರಿಸಲು ಈವರೆಗೆ ಸಾಧ್ಯವಾಗಿಲ್ಲ.

ಕೃಷಿ ಕಾಯ್ದೆಗಳ ವಿಚಾರದಲ್ಲಿ ಬಿಜೆಪಿ ಜತೆ ಮುನಿಸಿಕೊಂಡು ಎನ್‌ಡಿಎಯಿಂದ ಹೊರ ಬಂದ ಶಿರೋಮಣಿ ಅಕಾಲಿ ದಳವು (ಎಸ್‌ಎಡಿ) ಈಗ ಬಿಎಸ್‌ಪಿ ಜತೆಗೆ ಮೈತ್ರಿ ಮಾಡಿಕೊಂಡಿದೆ. ಸುಖದೇವ್ ಸಿಂಗ್ ಧಿಂಡ್ಸಾ ಅವರ ಎಸ್‌ಎಡಿ (ಸಂಯುಕ್ತ) ಮತ್ತು ಅಮರಿಂದರ್ ಸಿಂಗ್ ನೇತೃತ್ವದ ಪಂಜಾಬ್ ಲೋಕ ಕಾಂಗ್ರೆಸ್ ಜತೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಮುಖ್ಯಮಂತ್ರಿ ಹುದ್ದೆಯಿಂದ ಕೆಳಕ್ಕಿಳಿಸಿದ ಕಾರಣಕ್ಕೆ ಅಮರಿಂದರ್ ಅವರು ಕಾಂಗ್ರೆಸ್ ಪಕ್ಷವನ್ನು ತೊರೆದು ಇತ್ತೀಚೆಗೆ ಹೊಸ ಪಕ್ಷ ಕಟ್ಟಿದ್ದಾರೆ.

ರಾಜ್ಯದಲ್ಲಿ ಫೆಬ್ರುವರಿ 14ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಮಾರ್ಚ್ 10ರಂದು ಮತ ಎಣಿಕೆ.

ಕಳೆದ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ನೀಡಿದ್ದ ಭರವಸೆ ಏನಾಗಿದೆ ಎಂದು ಇತರ ಪಕ್ಷಗಳು ಪ್ರಶ್ನಿಸುತ್ತಿವೆ. ನಿರುದ್ಯೋಗದ ಬಗ್ಗೆಯೂ ವಿರೋಧ ಪಕ್ಷಗಳು ಸರ್ಕಾರವನ್ನು ಗುರಿ ಮಾಡಿವೆ. ವಿವಿಧ ಇಲಾಖೆಗಳಲ್ಲಿ ಇರುವ ಗುತ್ತಿಗೆ ಮತ್ತು ತಾತ್ಕಾಲಿಕ ನೌಕರರನ್ನು ಕಾಂಗ್ರೆಸ್ ಸರ್ಕಾರವು ಕಾಯಂ ಮಾಡಿಲ್ಲ ಎಂಬ ಟೀಕೆಯೂ ಇದೆ.

36 ಸಾವಿರ ಗುತ್ತಿಗೆ ನೌಕರರನ್ನು ಕಾಯಂಗೊಳಿಸುವ ಮಸೂದೆಗೆ ಅಂಗೀಕಾರ ನೀಡದೇ ಇದ್ದರೆ ರಾಜ್ಯಪಾಲ ಭನ್ವರಿಲಾಲ್ ಪುರೋಹಿತ್ ವಿರುದ್ಧ ಧರಣಿ ನಡೆಸುವುದಾಗಿ ಮುಖ್ಯಮಂತ್ರಿ

ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಮತ್ತು ಪಂಜಾಬ್‌ನ ಸಂಗ್ರೂರ್‌ನ ಎಎಪಿ ಸಂಸದ ಭಗವಂತ ಮಾನ್ ಅವರು ಇತ್ತೀಚೆಗೆ ನಡೆಸಲಾದ 'ಶಾಂತಿ ಯಾತ್ರೆ'ಯಲ್ಲಿ ಭಾಗವಹಿಸಿದ್ದರು ಪಿಟಿಐ ಚಿತ್ರ

ಚರಣ್‌ಜಿತ್ ಸಿಂಗ್ ಚನ್ನಿ ಹೇಳಿದ್ದಾರೆ.

ಗುರು ಗ್ರಂಥ ಸಾಹಿಬ್‌ನ ಅವಹೇಳನ ಪ್ರಕರಣದಲ್ಲಿ ನ್ಯಾಯ ಸಿಕ್ಕಿಲ್ಲ ಮತ್ತು ಅದರ ವಿರುದ್ಧ ಪ್ರತಿಭಟನೆ ನಡೆಸಿದ್ದವರ ಮೇಲೆ ಗೋಲಿಬಾರ್ ಮಾಡಿದ್ದು ಚುನಾವಣಾ ಪ್ರಚಾರದಲ್ಲಿ ಪದೇ ಪದೇ ಕೇಳಿಸಬಹುದು. ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ಮುಖ್ಯಮಂತ್ರಿಯಾಗಿದ್ದ ಅಮರಿಂದರ್ ಸಿಂಗ್ ಅವರ ವಿರುದ್ಧ ಈ ವಿಚಾರದಲ್ಲಿ ನಿರಂತರವಾಗಿ ವಾಗ್ದಾಳಿ ನಡೆಸಿದ್ದರು.

ಮಾದಕ ಪದಾರ್ಥ ಮಾಫಿಯಾ, ಮರಳು ಅಕ್ರಮ ಗಣಿಗಾರಿಕೆ, ರಾಜ್ಯದ ಸಾಲ ಏರಿಕೆ ಇತ್ಯಾದಿ ಕೂಡ ಪ್ರಚಾರದಲ್ಲಿ ಪ್ರಸ್ತಾವ ಆಗಬಹುದು. ಎಸ್‌ಎಡಿ ಮುಖಂಡ ಬಿಕ್ರಮ್ ಸಿಂಗ್ ಮಜೀತಿಯ ಅವರ ವಿರುದ್ಧ ಡ್ರಗ್ಸ್ ಪ್ರಕರಣವೊಂದು ಇತ್ತೀಚೆಗೆ ದಾಖಲಾಗಿದೆ. ಅವರನ್ನು ಇನ್ನೂ ಬಂಧಿಸಿಲ್ಲ ಎಂದು ಸರ್ಕಾರದ ವಿರುದ್ಧ ಎಎಪಿ ಹರಿಹಾಯ್ದಿದೆ.

ಈ ಬಾರಿ ಹಲವು ಪಕ್ಷಗಳು ಪಂಜಾಬ್ ಚುನಾವಣಾ ಕಣದಲ್ಲಿವೆ. ಹಾಗಾಗಿ, ಅತ್ಯಂತ ಸಣ್ಣ ಅಂತರ ಕೂಡ ಅಭ್ಯರ್ಥಿಗಳ ಅದೃಷ್ಟ ಬದಲಾಯಿಸಬಹುದು. ಯಾವುದೇ ಪಕ್ಷದ ಪರವಾಗಿ ಸ್ಪಷ್ಟವಾದ ಅಲೆ ಎಲ್ಲಿಯೂ ಕಾಣಿಸುತ್ತಿಲ್ಲ. ಹಾಗಾಗಿ, ಎಲ್ಲ ಪಕ್ಷಗಳೂ ಮುಂದಿನ ಸರ್ಕಾರ ರಚಿಸುವುದಾಗಿ ಹೇಳಿಕೊಳ್ಳುತ್ತಿವೆ. ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ಸದ್ಯವೇ ಘೋಷಿಸುವುದಾಗಿ ಎಎಪಿ ಹೇಳಿದೆ. ಕಾಂಗ್ರೆಸ್ ಪಕ್ಷವು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸುವ ಸಾಧ್ಯತೆ ಕಡಿಮೆ.

ಕೇಜ್ರಿವಾಲ್ ಅವರ ದೆಹಲಿ ಮಾದರಿ ಆಡಳಿತವನ್ನು ಎಎಪಿ ನೆಚ್ಚಿಕೊಂಡಿದೆ. 2017ರ ವಿಧಾನಸಭಾ ಚುನಾವಣೆಯಲ್ಲಿ ಎಎಪಿಗೆ ಇದು ಸರ್ಕಾರ ರಚಿಸುವಷ್ಟು ಮತಗಳನ್ನು ತಂದು ಕೊಟ್ಟಿರಲಿಲ್ಲ.

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ ಶೇ 32ರಷ್ಟಿದೆ. ಈ ಮತಗಳ ಮೇಲೆ ಕಣ್ಣಿಟ್ಟೇ ಎಸ್‌ಎಡಿ, ಬಿಎಸ್‌ಪಿ ಜತೆಗೆ ಮೈತ್ರಿ ಮಾಡಿಕೊಂಡಿದೆ. ಬಿಜೆಪಿ ಈವರೆಗೆ 23 ಕ್ಷೇತ್ರಗಳಲ್ಲಷ್ಟೇ ಸ್ಪರ್ಧಿಸುತ್ತಿತ್ತು. ಈ ಬಾರಿ ಎಲ್ಲೆಡೆ ತನ್ನ ಅಸ್ತಿತ್ವ ತೋರುವ ಉಮೇದಿನಲ್ಲಿದೆ.

ವರ್ಚುವಲ್ ಸಭೆ, ಮನೆ ಮನೆ ಪ್ರಚಾರ: ಎಎಪಿ ತಂತ್ರ

ನವದೆಹಲಿ: ಮನೆ ಬಾಗಿಲಿಗೆ ತೆರಳಿ ಪ್ರಚಾರ ಮಾಡುವುದು, ವರ್ಚುವಲ್ ರ‍್ಯಾಲಿಗಳು ಮತ್ತು ಸಾಮಾಜಿಕ ಜಾಲತಾಣಗಳ ಅತ್ಯಧಿಕ ಬಳಕೆ ಮೂಲಕ ಪಂಜಾಬ್‌ನಲ್ಲಿ ಚುನಾನಣಾ ಪ್ರಚಾರ ನಡೆಸಲು ಎಎಪಿ ಯೋಜನೆ ರೂಪಿಸುತ್ತಿದೆ.

ಪಕ್ಷದ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ಪಕ್ಷದ ಕಾರ್ಯಕರ್ತರ ಜೊತೆ ಚುನಾವಣಾ ತಂತ್ರಗಾರಿಕೆ ಕುರಿತು ಭಾನುವಾರ ಸಭೆ ನಡೆಸಿದರು. ಪ್ರಚಾರದ ವೇಳೆ ವಿರೋಧಿಗಳ ಕುರಿತು ಅವಹೇಳನಕಾರಿಯಾಗಿ ಮಾತನಾಡದಂತೆ ಕಾರ್ಯಕರ್ತರಿಗೆ ಎಚ್ಚರಿಸಿದರು.

'ಮುಂದಿನ ಒಂದು ತಿಂಗಳು ಮನೆ ಮನೆಗೆ ತೆರಳಿ ಚುನಾವಣಾ ಪ್ರಚಾರ ಕೈಗೊಳ್ಳಬೇಕು. ದೆಹಲಿಯಲ್ಲಿ ನೀರು, ಆರೋಗ್ಯ, ಶಿಕ್ಷಣ, ವಿದ್ಯುತ್ ಕ್ಷೇತ್ರಗಳಲ್ಲಿ ಎಎಪಿ ಸರ್ಕಾರ ಮಾಡಿರುವ ಸಾಧನೆಗಳ ಕುರಿತು ಜನರಿಗೆ ವಿವರಿಸಿ ಹೇಳಬೇಕು. ಪ್ರಚಾರದ ವೇಳೆ ಯಾರ ಮನೆಯನ್ನೂ ಬಿಡಬಾರದು. ಬೇರೆ ಪಕ್ಷದ ಬೆಂಬಲಿಗರ ಮನೆಗಳಿಗೂ ನಾವು ತೆರಳಬೇಕು. ನಮ್ಮ ನೀತಿಗಳು ಮತ್ತು ಬದಲಾವಣೆಗಾಗಿ ನಾವು ಕೆಲಸ ಮಾಡುವ ರೀತಿಯನ್ನು ವಿವರಿಸಬೇಕು' ಎಂದು ಹೇಳಿದರು.

'ಎಎಪಿ ಸರ್ಕಾರ ಎಲ್ಲವನ್ನೂ ಉಚಿತ ವಾಗಿ ನೀಡುವ ಆಮಿಷ ಒಡ್ಡುತ್ತಿದೆ ಎಂದು ಹಲವರು ಟೀಕಿಸುತ್ತಾರೆ. ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ಪಡೆಯುವುದು ಜನರ ಹಕ್ಕಲ್ಲವೇ ಎಂದು ನೀವು ಮರುಪ್ರಶ್ನೆ ಕೇಳಿ. ಇಂದಿನ ದಿನ ಸರ್ಕಾರ ಎಂದರೆ ಶಾಸಕರು, ಸಚಿವರಿಗೆ ಎಲ್ಲವೂ ಉಚಿತ, ನಾಗರಿಕರು ಎಲ್ಲದಕ್ಕೂ ಪರದಾಡಬೇಕು ಎಂದು ಅರ್ಥ. ನಾವು ಇದನ್ನು ಬದಲಿಸುತ್ತೇವೆ' ಎಂದರು.

ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯ ಮಾತನಾಡಿ, 'ಕಾಂಗ್ರೆಸ್‌ಗೆ ಮತ ನೀಡಬೇಡಿ ಎಂದು ನಾನು ಎಲ್ಲಾ ರಾಜ್ಯಗಳ ಮತದಾರರಿಗೆ ಮನವಿ ಮಾಡುತ್ತೇನೆ. ನೀವು ಕಾಂಗ್ರೆಸ್‌ಗೆ ಮತ ನೀಡಿದರೆ ಬಿಜೆಪಿ ಸರ್ಕಾರ ರಚಿಸಿದಂತೆ. ಕೇಜ್ರಿವಾಲ್ ಅವರ ಪ್ರಾಮಾಣಿಕ ರಾಜಕೀಯಕ್ಕೆ ಒಂದು ಅವಕಾಶ ನೀಡಿ ಎಂದು ನಾನು ಮನವಿ ಮಾಡುತ್ತೇನೆ' ಎಂದರು.

ಗೋವಾ, ಪಂಜಾಬ್, ಉತ್ತರಾಖಂಡ ಮತ್ತು ಉತ್ತರ ಪ್ರದೇಶದಲ್ಲಿ ಎಎಪಿ ಸ್ಪರ್ಧೆ ನಡೆಸಲಿದೆ.

ಚುನಾವಣಾ ರ‍್ಯಾಲಿ ರದ್ದತಿಗೆ ಶೇ 41 ಜನರ ಬೆಂಬಲ

ನವದೆಹಲಿ (ಪಿಟಿಐ): ಚುನಾವಣಾ ರ‍್ಯಾಲಿಗಳನ್ನು ರದ್ದು ಮಾಡಿರುವುದನ್ನು ಶೇ 41ರಷ್ಟು ಜನರು ಬೆಂಬಲಿಸಿದ್ದಾರೆ ಎಂದು ಸಮೀಕ್ಷೆಯೊಂದು ಹೇಳಿದೆ. ಐದು ರಾಜ್ಯಗಳ ವಿಧಾನಸಭೆ ಚುನಾವಣೆಗಳ ದಿನಾಂಕ ಘೋಷಣೆ ಆದ ಮರುದಿನವೇ ಈ ಸಮೀಕ್ಷೆ ಹೊರಬಿದ್ದಿದೆ.

'ಲೋಕಲ್ ಸರ್ಕಲ್' ಎಂಬ ಡಿಜಿಟಲ್ ವೇದಿಕೆಯಲ್ಲಿ ಈ ಸಮೀಕ್ಷೆ ನಡೆಸಲಾಗಿತ್ತು. ಶೇ 24ರಷ್ಟು ಜನರು ಚುನಾವಣಾ ರ‍್ಯಾಲಿಗಳನ್ನು ನಡೆಸಬೇಕು ಎಂದು ಹೇಳಿದ್ದಾರೆ. ರ‍್ಯಾಲಿಗಳ ಸಂದರ್ಭದಲ್ಲಿ, ಕೋವಿಡ್ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ, ರ‍್ಯಾಲಿಗಳನ್ನು ನಡೆಸಲು ಅನುವು ಮಾಡಬೇಕು ಎಂದು ಅವರು ಹೇಳಿದ್ದಾರೆ. ಉತ್ತರ ಪ್ರದೇಶ, ಉತ್ತರಾಖಂಡ, ಗೋವಾ, ಪಂಜಾಬ್ ಮತ್ತು ಮಣಿಪುರ ವಿಧಾನಸಭೆ ಚುನಾವಣೆಗಳನ್ನು ಮುಂದೂಡುವುದನ್ನು ಶೇ 31ರಷ್ಟು ಜನರು ಬಯಸಿದ್ದಾರೆ.

ಚುನಾವಣೆ ಕಾರಣದಿಂದ ಕೋವಿಡ್ ಹರಡುವ ಸಾಧ್ಯತೆಗಳು ಕಡಿಮೆ ಇರುವುದರಿಂದ ಚುನಾವಣಾ ರ‍್ಯಾಲಿಗಳ ಮೇಲೆ ಯಾವುದೇ ಕ್ರಮದ ಅಗತ್ಯವೂ ಇಲ್ಲ ಎಂದು ಶೇ 4ರಷ್ಟು ಜನರು ಪ್ರತಿಕ್ರಿಯಿಸಿದ್ದಾರೆ.

ಈ ಸಮೀಕ್ಷೆಗೆ ದೇಶದ 309 ಜಿಲ್ಲೆಗಳ 11,000 ಜನರು ಪ್ರತಿಕ್ರಿಯಿಸಿದ್ದರು. ಅವರಲ್ಲಿ 4,172 ಜನರು ಚುನಾವಣೆ ನಿಗದಿ ಆಗಿರುವ ಐದು ರಾಜ್ಯಗಳಿಗೆ ಸೇರಿರುವವರು.

ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಚುನಾವಣಾ ಆಯೋಗವು ಚುನಾವಣಾ ರ‍್ಯಾಲಿ, ಸಭೆಗಳನ್ನು ಜ.15ರ ವರೆಗೆ ರದ್ದುಪಡಿಸಿದೆ.

ಪಕ್ಷಗಳ ಪ್ರಚಾರ ಫಲಕಗಳ ತೆರವು

ಲಖನೌ (ಪಿಟಿಐ): ಚುನಾವಣಾ ಆಯೋಗವು ಚುನಾವಣಾ ದಿನಾಂಕ ಘೋಷಿಸಿದ ಬೆನ್ನಲ್ಲೇ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಿದೆ. ಹಾಗಾಗಿ, ರಾಜಕೀಯ ಪಕ್ಷಗಳ ಫಲಕಗಳು ಮತ್ತು ಭಿತ್ತಿ ಪತ್ರಗಳನ್ನು ತೆರವುಗೊಳಿಸುವ ಕೆಲಸವನ್ನು ಉತ್ತರ ಪ್ರದೇಶದಲ್ಲಿ ಸಂಬಂಧಪಟ್ಟ ಸಂಸ್ಥೆಗಳು ಆರಂಭಿಸಿವೆ.

'ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿ ಮಾಡಲಾಗಿದೆ. ನೀತಿ ಸಂಹಿತೆ ಜಾರಿ ಮಾಡುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಅವರು ನಮಗೆ ವರದಿಗಳನ್ನು ನೀಡಲಿದ್ದಾರೆ' ಎಂದು ಮುಖ್ಯ ಚುನಾವಣಾ ಅಧಿಕಾರಿ ಅಜಯ್ ಕುಮಾರ್ ಶುಕ್ಲಾ ತಿಳಿಸಿದ್ದಾರೆ.

'ಚುನಾವಣಾ ಆಯೋಗ ನೀಡಿರುವ ನಿರ್ದೇಶನದಂತೆ ನೀತಿ ಸಂಹಿತೆ ಜಾರಿಮಾಡಲಾಗಿದೆ. ಅದಕ್ಕೆ ನಾವು ಬದ್ಧರಾಗಿರುತ್ತೇವೆ. ನೀತಿ ಸಂಹಿತೆಯ ನಿರ್ದೇಶನಗಳನ್ನು ಲಖನೌನ ನಗರಸಭೆ ಆಯುಕ್ತರಿಗೆ ಕಳಿಸಲಾಗಿದೆ. ಅದರಂತೆ ಚುನಾವಣೆಗೆ ಸಂಬಂಧಿಸಿದ ಫಲಕಗಳನ್ನು ನಗರಸಭೆ ಸಿಬ್ಬಂದಿ ಶನಿವಾರದಿಂದಲೇ ತೆರವು ಮಾಡುತ್ತಿದ್ದಾರೆ' ಎಂದು ಲಖನೌ ಜಿಲ್ಲಾಧಿಕಾರಿ ಅಭಿಷೇಕ್ ಪ್ರಕಾಶ್ ಹೇಳಿದ್ದಾರೆ.

ಬಸ್ತಿ, ಎಟವಾ, ಫರೂಕಾಬಾದ್‌ಗಳಲ್ಲೂ ಫಲಕಗಳನ್ನು ತೆರವುಗೊಳಿಸಲಾಗುತ್ತಿದೆ ಎಂಬ ವರದಿಗಳು ಬಂದಿವೆ.

ಮತವಾಗಿ ಪರಿವರ್ತನೆ ಆದೀತೇ ಪ್ರಿಯಾಂಕಾ ಪ್ರಚಾರ

ಪ್ರಜಾವಾಣಿ ವಾರ್ತೆ

ಲಖನೌ: ಮಹಿಳಾ ಕೇಂದ್ರಿತ ಕಾರ್ಯಕ್ರಮಗಳ ಮೂಲಕ ಉತ್ತರ ಪ್ರದೇಶ ಚುನಾವಣೆಯಲ್ಲಿ ಗಮನ ಸೆಳೆಯುತ್ತಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರ ಹಲವು ಯತ್ನಗಳು ರಾಜ್ಯದಲ್ಲಿ ಕಾಂಗ್ರೆಸ್‌ಗೆ ಮತಗಳನ್ನು ತಂದುಕೊಡಲಿವೆಯೇ ಎಂಬ ಕೌತುಕ ಇದೆ.

ಮಹಿಳೆಯರನ್ನು ಸೆಳೆಯುವ ಪ್ರಿಯಾಂಕಾ ಅವರ ಯತ್ನಗಳು ಚುನಾವಣೆಯಲ್ಲಿ ಲಾಭ ತರಲಿವೆ ಎಂದು ಪಕ್ಷದ ರಾಜ್ಯ ಘಟಕದ ಮುಖಂಡರು ವಿಶ್ವಾಸ ವ್ಯಕ್ತಪಡಿಸುತ್ತಾರೆ. ಆದರೆ, ಈ ಯತ್ನಗಳು ಕಾಂಗ್ರೆಸ್ ಮತಬುಟ್ಟಿಯನ್ನು ತುಂಬುವುದಿಲ್ಲ ಎಂಬುದು ಬಿಜೆಪಿ, ಸಮಾಜವಾದಿ ಪಕ್ಷಗಳ ಅಭಿಪ್ರಾಯ.

ಕಾಂಗ್ರೆಸ್ ಮತ ಗಳಿಕೆ ಪ್ರಮಾಣವು ಹೆಚ್ಚುವ ಸಾಧ್ಯತೆ ಇದೆಯಾದರೂ, ಹೆಚ್ಚು ಸ್ಥಾನಗಳನ್ನು ಗೆಲ್ಲುವುದು ಖಚಿತ ಇಲ್ಲ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು. 2017ರ ಚುನಾವಣೆಯಲ್ಲಿ ಶೇ 6ರಷ್ಟು ಮತಗಳನ್ನು ಪಡೆದಿದ್ದ ಕಾಂಗ್ರೆಸ್, ಕೇವಲ 7 ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿತ್ತು. ಇದು ಕಾಂಗ್ರೆಸ್‌ನ ಅತ್ಯಂತ ಹೀನಾಯ ಪ್ರದರ್ಶನವಾಗಿತ್ತು. 2012ರ ಚುನಾವಣೆಗೆ ಹೋಲಿಸಿದರೆ ಮತ ಗಳಿಕೆಯು ಶೇ 5ರಷ್ಟು ಕುಸಿತ

ಮೀರಠ್‌ನಲ್ಲಿ ಕಾಂಗ್ರೆಸ್ ಇತ್ತೀಚೆಗೆ ಆಯೋಜಿಸಿದ್ದ 'ನಾನು ಹುಡುಗಿ, ಹೋರಾಡಬಲ್ಲೆ' ಅಭಿಯಾನದಲ್ಲಿ ಭಾಗವಹಿಸಿದ್ದ ಜನ–ಪಿಟಿಐ ಸಂಗ್ರಹ ಚಿತ್ರ

ಕಂಡಿತ್ತು ಹಾಗೂ ಸ್ಥಾನಗಳು 28ರಿಂದ 7ಕ್ಕೆ ಇಳಿಕೆಯಾಗಿದ್ದವು.

ಮಹಿಳಾ ಸಮಾವೇಶಗಳ ಜೊತೆಗೆ ಬಿಜೆಪಿ ಭದ್ರಕೋಟೆಯಾದ ವಾರಾಣಸಿ, ಗೋರಖಪುರ ಮೊದಲಾದ ಕಡೆಗಳಲ್ಲಿ ಪ್ರಿಯಾಂಕಾ ಅವರು ಸರಣಿ ರ‍್ಯಾಲಿಗಳನ್ನು ನಡೆಸಿದ್ದಾರೆ. ಲಖಿಂಪುರ–ಖೇರಿ ಪ್ರಕರಣದಲ್ಲಿ ಎಸ್‌ಯುವಿ ಹರಿದು ಮೃತಪಟ್ಟ ರೈತರ ಕುಟುಂಬಗಳನ್ನು ಪ್ರಿಯಾಂಕಾ ಭೇಟಿ ಮಾಡಿದ್ದಾರೆ. ಒಂದು ರಾತ್ರಿಯನ್ನು ಪೊಲೀಸ್ ಕಸ್ಟಡಿಯಲ್ಲಿ ಕಳೆದಿದ್ದಾರೆ. ಈ ಘಟನಾವಳಿಗಳು ದೇಶದ ಗಮನ ಸೆಳೆದಿದ್ದವು.

ರಾಜ್ಯದ ವಿವಿಧ ಭಾಗಗಳಲ್ಲಿ ಮಹಿಳೆಯರು ಹಾಗೂ ಬಾಲಕಿಯರಿಗಾಗಿ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಹೆಚ್ಚಿನ ಸಂಖ್ಯೆಯ ಸ್ಪರ್ಧಿಗಳು ಭಾಗಿಯಾಗಿ ಅಚ್ಚರಿ ಮೂಡಿಸಿದ್ದರು. ರಾಯ್‌ಬರೇಲಿಯಲ್ಲಂತೂ ಕಾಲ್ತುಳಿತ ಆಗುವಷ್ಟು ಸ್ಪರ್ಧಿಗಳು ಜಮಾಯಿಸಿದ್ದರು.

ಕಾಂಗ್ರೆಸ್‌ನ ಸ್ಥಾನಗಳಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಒಂದಂಕಿಯಲ್ಲೇ ಇರಲಿದೆ. ಪಕ್ಷಕ್ಕೆ ತಳಮಟ್ಟದಲ್ಲಿ ಸಂಘಟನೆ ಇಲ್ಲ
ರಾಜ್ಯದ ಎಸ್‌ಪಿ ಮುಖಂಡ

403 ಕ್ಷೇತ್ರಗಳಿಗೆ ಬೇಕಾಗುವಷ್ಟು ಅಭ್ಯರ್ಥಿಗಳೇ ಕಾಂಗ್ರೆಸ್‌ನಲ್ಲಿ ಇಲ್ಲ. ಪ್ರಿಯಾಂಕಾ ರಾಜ್ಯದ ಪ್ರವಾಸಿ ಅಷ್ಟೇ. ಕಾಂಗ್ರೆಸ್ ಅನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ
ರಾಜ್ಯದ ಹಿರಿಯ ಬಿಜೆಪಿ ಮುಖಂಡ

ಮಹಿಳಾ ಮ್ಯಾರಥಾನ್‌ನಲ್ಲಿ ಸೇರಿದ ಜನಸಂದಣಿ ನೋಡಿದರೆ ಪ್ರಿಯಾಂಕಾ ಯತ್ನವು ಫಲ ನೀಡುತ್ತದೆ ಎಂಬ ಸ್ಪಷ್ಟ ಸೂಚನೆ ನೀಡುತ್ತದೆ. ಚುನಾವಣೆಯಲ್ಲಿ ಪ್ರಬಲ ಪ್ರದರ್ಶನ ನೀಡುತ್ತೇವೆ
ಸುಪ್ರಿಯಾ ಅರೋನ್, ಕಾಂಗ್ರೆಸ್ ನಾಯಕಿ

ಜನ ಸಾಮಾನ್ಯರಲ್ಲಿ ನಿರೀಕ್ಷೆ

ಪ್ರಿಯಾಂಕಾ ಅವರ ರಾಜಕೀಯ ಚಟುವಟಿಕೆಗಳಿಂದ ಪಕ್ಷಕ್ಕೆ ಲಾಭವಾಗುವುದಿಲ್ಲ ಎಂದು ವಿರೋಧಿ ಪಾಳಯ ಭಾವಿಸಿದ್ದರೆ, ಜನಸಾಮಾನ್ಯರು ಆಶಾವಾದಿಗಳಾಗಿದ್ದಾರೆ.

'ಪ್ರಿಯಾಂಕಾ ಗಾಂಧಿ ಅವರು ನಮಗೆ ಹಲವು ಭರವಸೆಗಳನ್ನು ನೀಡಿದ್ದಾರೆ. ಕೊಟ್ಟ ಭರವಸೆಗಳನ್ನು ಈಡೇರಿಸಿದರೆ, ಮಹಿಳೆಯರಿಗೆ ಸಾಕಷ್ಟು ನೆರವಾಗುತ್ತದೆ. ಈ ಬಾರಿ ಮಹಿಳಾ ಮತದಾರರಿಂದ ಅವರಿಗೆ ಹೆಚ್ಚಿನ ಬೆಂಬಲ ಸಿಗಲಿದೆ' ಎನ್ನುತ್ತಾರೆ ಲಖನೌದ ತ್ರಿವೇಣಿ ನಗರ ನಿವಾಸಿ ಮಮತಾ ತಿವಾರಿ. ಜಾನಕಿಪುರಂ ಪ್ರದೇಶ ನಿವಾಸಿ ಶಿಕ್ಷಕಿ ರಂಜನಾ ದೇವಿ ಅವರದ್ದೂ ಇದೇ ಅಭಿಪ್ರಾಯ.

ಪಕ್ಷ ಅಧಿಕಾರಕ್ಕೆ ಬಂದರೆ, ಮಹಿಳೆಯರಿಗೆ ಸರ್ಕಾರಿ ಉದ್ಯೋಗದಲ್ಲಿ ಶೇ 40ರಷ್ಟು ಮೀಸಲಾತಿ, ಪ್ರತಿಯೊಂದು ಠಾಣೆಗಳಲ್ಲಿ ಮಹಿಳಾ ಪೊಲೀಸರ ನಿಯೋಜನೆ ಸೇರಿದಂತೆ ಹಲವು ಮಹಿಳಾಪರ ಭರವಸೆಗಳನ್ನು ಪ್ರಿಯಾಂಕಾ ನೀಡಿದ್ದಾರೆ. ನರೇಗಾದಲ್ಲಿ ಮಹಿಳಾ ಉದ್ಯೋಗಕ್ಕೆ ಆದ್ಯತೆ ನೀಡುವ ವಾಗ್ದಾನವನ್ನೂ ಅವರು ನೀಡಿದ್ದರು. ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ವೇತನವನ್ನು ₹10,000ಕ್ಕೆ ಹೆಚ್ಚಿಸುವುದು, ವರ್ಷಕ್ಕೆ 3 ಉಚಿತ ಅಡುಗೆ ಅನಿಲ ಸಿಲಿಂಡರ್ ಪೂರೈಕೆ ಭರವಸೆ ನೀಡಿದ್ದಾರೆ.

ಮೂವರು ಮುಖ್ಯಮಂತ್ರಿಗಳ ಬದಲಾವಣೆ ದುಬಾರಿಯಾಗಬಹುದೇ?

ಉತ್ತರಾಖಂಡ: ಎರಡನೇ ಅವಧಿ ಮೇಲೆ ಬಿಜೆಪಿ ಕಣ್ಣು

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಅಧಿಕಾರವು ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಹೊಯ್ದಾಡಿದ್ದು ಈವರೆಗಿನ ಪ್ರವೃತ್ತಿ. ರಾಜ್ಯದಲ್ಲಿ ಸತತ ಎರಡನೇ ಬಾರಿಗೆ ಅಧಿಕಾರ ಹಿಡಿಯುವ ಕಡೆಗೆ ಆಡಳಿತಾರೂಢ ಬಿಜೆಪಿ ಗುರಿಯಿಟ್ಟಿದೆ. ಆದರೆ ಒಂದು ಅಧಿಕಾರಾವಧಿಯಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಬದಲಿಸಿದ್ದು ಬಿಜೆಪಿಗೆ ದುಬಾರಿ ಆಗುವ ಸಾಧ್ಯತೆಗಳಿವೆ.

2017ರಲ್ಲಿ 70 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 57 ಸ್ಥಾನಗಳನ್ನು ಗೆಲ್ಲುವ ಮೂಲಕ ಭಾರಿ ಬಹುಮತದೊಂದಿಗೆ ಬಿಜೆಪಿ ಉತ್ತರಾಖಂಡದಲ್ಲಿ ಅಧಿಕಾರಕ್ಕೇರಿತು. ಆದರೆ ಐದು ವರ್ಷಗಳಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಬದಲಿಸಿತು. ಈ ಬೆಳವಣಿಗೆಗಳು ರಾಜ್ಯದಲ್ಲಿ ರಾಜಕೀಯ ಅಸ್ಥಿರತೆಗೆ ಕಾರಣವಾಯಿತು.

ಕೇದಾರನಾಥ ಚಾರ್‌ಧಾಮ ರಸ್ತೆಯ ಪುನರ್‌ನಿರ್ಮಾಣದಂಥ ಅಭಿವೃದ್ಧಿ ಕೆಲಸಗಳನ್ನು ಮುಂದಿರಿಸಿಕೊಂಡು ಬಿಜೆಪಿ ಮತ್ತೊಂದು ಅವಕಾಶವನ್ನು ಕೋರುತ್ತಿದೆ. ಉತ್ತರಾಖಂಡದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕೆಲಸಗಳು ಈ ದಶಕವನ್ನು 'ಉತ್ತರಾಖಂಡದ ದಶಕ'ವನ್ನಾಗಿ ಮಾಡುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರ‍್ಯಾಲಿಗಳಲ್ಲಿ ಹೇಳಿದ್ದಾರೆ.

ಆದರೆ, ಈ ಬಾರಿಯ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ ಕೂಡ ಸ್ಪರ್ಧಿಸುತ್ತಿರುವುದರಿಂದ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಪ್ರಾದೇಶಿಕ ಪಕ್ಷವಾದ ಉತ್ತರಾಖಂಡ ಕ್ರಾಂತಿ ದಳ ಕೂಡಾ ಈ ಬಾರಿ ತನ್ನ ನೆಲೆಯನ್ನು ಮರುಸ್ಥಾಪಿಸಲು ಪ್ರಯತ್ನಿಸುತ್ತಿದೆ.

ಬಿಜೆಪಿ ಅವಧಿಯಲ್ಲಿ ಮೂವರು ಮುಖ್ಯಮಂತ್ರಿಗಳನ್ನು ಬದಲಿಸಿದ್ದನ್ನೇ ಚುನವಣಾ ಪ್ರಚಾರದ ಪ್ರಮುಖ ಅಂಶವನ್ನಾಗಿ ಕಾಂಗ್ರೆಸ್ ಮಾಡಿಕೊಂಡಿದೆ. ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ವಿಫಲವಾಗಿದೆ ಎಂದು ಕಾಂಗ್ರೆಸ್ ಚುನಾವಣಾ ಉಸ್ತುವಾರಿ ಹೊತ್ತಿರುವ ಹಿರಿಯ ನಾಯಕ ಹರೀಶ್ ರಾವತ್ ಅವರು ಜನರೆದುರು ಹೇಳುತ್ತಲೇ ಇದ್ದಾರೆ. ಜೊತೆಗೆ ಸಾಮಾಜಿಕ ಜಾಲತಾಣಗಳನ್ನು ಚುನಾವಣಾ ಪ್ರಚಾರಕ್ಕೆ ಸಮರ್ಪಕವಾಗಿ ಬಳಸುತ್ತಿದ್ದಾರೆ.

ಕಳೆದ 20 ವರ್ಷಗಳಿಂದ ಕಾಂಗ್ರೆಸ್ ಮತ್ತು ಬಿಜೆಪಿಗೆ ಅಧಿಕಾರ ನೀಡಿರುವ ಅನುಭವ ಇರುವ ಕಾರಣ ಈ ಬಾರಿ ಎಎಪಿಗೆ ಅವಕಾಶ ನೀಡಿ ಎಂದು ಎಎಪಿ ಕೇಳುತ್ತಿದೆ. ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು, 300 ಯೂನಿಟ್ ವಿದ್ಯುತ್ ಸೇರಿ ಹಲವಾರು ಉಚಿತ ಸೇವೆ ನೀಡುವ ವಾಗ್ದಾನವನ್ನು ನೀಡಿದ್ದಾರೆ. ಹೀಗಾಗಿ, ಬಿಜೆಪಿ ಮತ್ತೆ ಅಧಿಕಾರ ಹಿಡಿಯುವುದು ಅಷ್ಟು ಸುಲಭವಿಲ್ಲ ಎನ್ನಲಾಗಿದೆ.

ನುಡಿ–ಕಿಡಿ

ಸಮಾಜವಾದಿ ಪಕ್ಷವು ತನ್ನ ನೆಲೆ, ಬಿಎಸ್‌ಪಿ ತನ್ನ ಗೌರವ ಉಳಿಸಿಕೊಳ್ಳಲು ಹೆಣಗಾಡುತ್ತಿವೆ. ತನ್ನ ಅಸ್ತಿತ್ವ ತೋರುವುದಷ್ಟೇ ಕಾಂಗ್ರೆಸ್ ಪಕ್ಷವು ಸ್ಪರ್ಧಿಸುತ್ತಿರುವುದರ ಉದ್ದೇಶ. (ಅಸಾದುದ್ದೀನ್) ಒವೈಸಿ ಅಂಥವರು ಬೆಂಕಿ ಹಚ್ಚುವುದಕ್ಕಾಗಿಯೇ ಕಣದಲ್ಲಿದ್ದಾರೆ

ಸುಧಾಂಶು ತ್ರಿವೇದಿ, ಬಿಜೆಪಿ ರಾಷ್ಟ್ರೀಯ ವಕ್ತಾರ

ಇತ್ತೀಚಿನ ಕೆಲ ವರ್ಷಗಳಲ್ಲಿ ಎದ್ದು ಕಾಣಿಸುತ್ತಿರುವ ಸ್ವಾರ್ಥ ಕೇಂದ್ರಿತ ಸಂಕುಚಿತ ರಾಜಕಾರಣಕ್ಕೆ ಕಡಿವಾಣ ಹಾಕಲು ಆಯೋಗವು ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕು

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ

ಗೋವಾದಲ್ಲಿ ಟಿಎಂಸಿಯ ಸ್ಪರ್ಧೆಯು ಬಿಜೆಪಿಗೆ ನೆರವಾಗಲಿದೆ. ಮಮತಾ ಬ್ಯಾನರ್ಜಿ ಅವರು ವಿಶ್ವಾಸಾರ್ಹವಲ್ಲದ ನಾಯಕರನ್ನು ಇತರ ಪಕ್ಷಗಳಿಂದ ಟಿಎಂಸಿಗೆ ಸೇರಿಸಿಕೊಂಡಿದ್ದಾರೆ. ಬಿಜೆಪಿಯ ಹಾಗೆಯೇ ಮಮತಾ ಅವರು ಕೂಡ ಕಾಂಗ್ರೆಸ್ ನಾಶದ ಗುರಿ ಹೊಂದಿದ್ದರೆ ಅದು ಅವರ ವ್ಯಕ್ತಿತ್ವಕ್ಕೆ ಹೊಂದುವುದಿಲ್ಲ

ಸಂಜಯ ರಾವುತ್, ಶಿವಸೇನಾ ಸಂಸದ

ಚುನಾವಣಾ ದಿನಾಂಕ ಪ್ರಕಟವಾಗಿದೆ. ನಿಜವಾದ ವಿಚಾರಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಕೋಮುವಾದಿ ಶಕ್ತಿಗಳು ಪ್ರಯತ್ನ ಆರಂಭಿಸಿವೆ. ಆಹಾರ, ವಸತಿ, ಉದ್ಯೋಗ ಮುಖ್ಯ ವಿಚಾರಗಳು. ಈ ವಿಚಾರಗಳ ಬಗ್ಗೆ ಉತ್ತರ ಇಲ್ಲದವರು ಕೋಮು ವಿಭಜನೆಯ ರಾಜಕಾರಣದಲ್ಲಿ ತೊಡಗಿದ್ದಾರೆ

ಬಿನೋಯ್ ವಿಶ್ವಂ, ಸಿಪಿಐ ಸಂಸದ

- ಗೋವಾದ ಪಕ್ಷೇತರ ಶಾಸಕ ಪ್ರಸಾದ್ ಗಾಂವ್ಕರ್ ಅವರು ಶಾಸಕ ಸ್ಥಾನಕ್ಕೆ ಭಾನುವಾರ ರಾಜೀನಾಮೆ ನೀಡಿದ್ದಾರೆ. ಇದರೊಂದಿಗೆ, 40 ಸದಸ್ಯಬಲದ ಗೋವಾ ವಿಧಾನಸಭೆಯ ಸದಸ್ಯರ ಸಂಖ್ಯೆ 33ಕ್ಕೆ ಕುಸಿದಿದೆ. ಕಾಂಗ್ರೆಸ್ ಪಕ್ಷಕ್ಕೆ ಸೇರುವುದಾಗಿ ಗಾಂವ್ಕರ್ ಹೇಳಿದ್ದಾರೆ. ಕಳೆದ ಚುನಾವಣೆಯಲ್ಲಿ ಗೆದ್ದಿದ್ದ ಕಾಂಗ್ರೆಸ್ ಶಾಸಕರಲ್ಲಿ ಹೆಚ್ಚಿನವರು ಬಿಜೆಪಿ ಸೇರಿದ್ದಾರೆ. ಈಗ ಕಾಂಗ್ರೆಸ್ ಶಾಸಕರ ಸಂಖ್ಯೆ ಎರಡು ಮಾತ್ರ.
- ವಿಧಾನಸಭೆಗೆ ಚುನಾವಣೆ ನಡೆಯಲಿರುವ ಐದು ರಾಜ್ಯಗಳಲ್ಲಿ ನೀಡಲಾಗುವ ಕೋವಿಡ್ ಲಸಿಕೆ ಪ್ರಮಾಣಪತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಫೋಟೊ ಇರುವುದಿಲ್ಲ. ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಕಾರಣ ಈ ಬದಲಾವಣೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಸತ್ತಿನ 400 ಸಿಬ್ಬಂದಿಗೆ ಕೋವಿಡ್

ನವದೆಹಲಿ (ಪಿಟಿಐ): ಸಂಸತ್ತಿನ ಸುಮಾರು 400 ಸಿಬ್ಬಂದಿಗೆ ಕೋವಿಡ್ ಸೋಂಕು ತಗುಲಿರುವುದು ಭಾನುವಾರ ದೃಢಪಟ್ಟಿದೆ. ಇದರ ಹಿಂದೆಯೇ ಸಿಬ್ಬಂದಿ ಹಾಜರಾತಿಗೆ ಸಂಬಂಧಿಸಿದ ಸರ್ಕಾರ ವಿವಿಧ ನಿರ್ಬಂಧ ಹೇರಿದೆ.

ಮೂಲಗಳ ಪ್ರಕಾರ, ರಾಜ್ಯಸಭೆಯ 65, ಲೋಕಸಭೆಯ 200 ಮಂದಿ ಸಿಬ್ಬಂದಿಗೆ ಸೋಂಕು ದೃಡಪಟ್ಟಿದೆ. ಅಲ್ಲದೆ, ಇತರೆ 133 ಸಿಬ್ಬಂದಿಗೂ ಸೋಂಕು ಇರುವುದು ಪತ್ತೆಯಾಗಿದೆ.

ಬಜೆಟ್ ಅಧಿವೇಶನ ಆರಂಭಕ್ಕೂ ಮುನ್ನ ಈ ಬೆಳವಣಿಗೆ ನಡೆದಿದೆ. ಬಜೆಟ್ ಅಧಿವೇಶನ ಸಾಮಾನ್ಯವಾಗಿ ಜನವರಿ ಅಂತ್ಯದಲ್ಲಿ ಆರಂಭವಾಗಲಿದೆ.

ಇದರ ಹಿಂದೆಯೇ ರಾಜ್ಯಸಭೆ ಸಚಿವಾಲಯವು, ಕಾರ್ಯದರ್ಶಿ ಮತ್ತು ಅದರ ಕೆಳಹಂತದ ಸಿಬ್ಬಂದಿಯು ಮಾಸಾಂತ್ಯದವರೆಗೆ ಮನೆಯಿಂದಲೇ ಕಾರ್ಯನಿರ್ವಹಿಸಲು ಆದೇಶಿಸಿದೆ. ರಾಜ್ಯಸಭೆ ಅಧ್ಯಕ್ಷ ವೆಂಕಯ್ಯನಾಯ್ಡು ನಿಯಂತ್ರಣ ಕ್ರಮಗಳಿಗೆ ಸೂಚಿಸಿದ್ದರು.

ಲೋಕಸಭೆ ಸಚಿವಾಲಯವು, ಅಧೀನ ಕಾರ್ಯದರ್ಶಿ ಹಾಗೂ ಕೆಳಗಿನ ಹಂತದ ಶೇ 50ರಷ್ಟು ಸಿಬ್ಬಂದಿ ಪಾಳಿ ಆಧಾರದಲ್ಲಿ ಕಾರ್ಯನಿರ್ವಹಿಸಬೇಕು. ಈ ಬಗ್ಗೆ ಆಯಾ ಇಲಾಖೆಗಳ ಮುಖ್ಯಸ್ಥರು ನಿರ್ಧರಿಸಬೇಕು ಎಂದು ಸೂಚಿಸಿದೆ.

ದೆಹಲಿಯಲ್ಲಿ ಲಾಕ್‌ಡೌನ್ ಇಲ್ಲ–ಸಿ.ಎಂ: ವಲಸೆ ಕಾರ್ಮಿಕರು, ವ್ಯಾಪಾರಿಗಳಲ್ಲಿನ ಆತಂಕವನ್ನು ನಿವಾರಿಸುವ ನಿಟ್ಟಿನಲ್ಲಿ ದೆಹಲಿ ಸರ್ಕಾರವು ಭಾನುವಾರ, 'ರಾಜಧಾನಿಯಲ್ಲಿ ಲಾಕ್‌ಡೌನ್ ಹೇರುವುದಿಲ್ಲ ಕನಿಷ್ಠ ನಿರ್ಬಂಧ ಹೇರಲಾಗುವುದು' ಎಂದು ತಿಳಿಸಿದೆ. ರಾಜಧಾನಿಯಲ್ಲಿ ಕೋವಿಡ್

ತೀವ್ರಗತಿಯಲ್ಲಿ ಏರುತ್ತಿದೆ. ವಲಸೆ ಕಾರ್ಮಿಕರಿಗೆ ಲಾಕ್‌ಡೌನ್ ಭೀತಿ ಕಾಡುತ್ತಿದೆ.

ವರ್ಚುಯಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, 'ಎಲ್ಲರೂ ಮಾಸ್ಕ್ ಧರಿಸಿದರೆ ಲಾಕ್‌ಡೌನ್ ಅಗತ್ಯವಿಲ್ಲ. ಸದ್ಯ, ಆಸ್ಪತ್ರೆಗೆ ಸೇರುವವರ ಸಂಖ್ಯೆಯೂ ಕಡಿಮೆ ಇದೆ' ಎಂದು ಹೇಳಿದರು.

ತಮಿಳುನಾಡಿನಲ್ಲಿ ಒಂದು ದಿನ ಲಾಕ್‌ಡೌನ್: ಕೋವಿಡ್ ತಡೆ ಕ್ರಮವಾಗಿ ತಮಿಳುನಾಡಿನಲ್ಲಿ ಭಾನುವಾರ ಒಂದು ದಿನ ಲಾಕ್‌ಡೌನ್ ಘೋಷಿಸಲಾಗಿತ್ತು. ಅಗತ್ಯ ಸೇವೆ ಹೊರತುಪಡಿಸಿ ಉಳಿದೆಲ್ಲ ಚಟುವಟಿಕೆಗಳು ಬಂದ್ ಆಗಿದ್ದವು. ಮಾರುಕಟ್ಟೆ ಸೇರಿದಂತೆ ಬಹು ತೇಕ ಪ್ರದೇಶ ನಿರ್ಜನವಾಗಿದ್ದವು. ನಗರಸಾರಿಗೆ ಸೇವೆ ರದ್ದುಪಡಿಸಲಾಗಿತ್ತು.

ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಸೋಮವಾರದಿಂದ ಜಾರಿಗೆ ಬರುವಂತೆ 1 ರಿಂದ 9ನೇ ತರಗತಿವರೆಗೆ ರಜೆ ನೀಡಿ ಸರ್ಕಾರ ಆದೇಶ ಹೊರಡಿಸಿದೆ. ಡಿಸೆಂಬರ್ 4ರಂದು ತರಗತಿಗಳು ಪುನರಾರಂಭಗೊಂಡಿದ್ದವು.

ಮಹಾರಾಷ್ಟ್ರದಲ್ಲಿ ಮಾರ್ಗಸೂಚಿ ಪರಿಷ್ಕರಣೆ: ಮಹಾರಾಷ್ಟ್ರ ಸರ್ಕಾರ ಭಾನುವಾರ ಕೋವಿಡ್ ಮಾರ್ಗಸೂಚಿಗಳನ್ನು ಪರಿಷ್ಕರಿಸಿದೆ. ಜಿಮ್, ಪಾರ್ಲರ್‌ಗಳ ಮೇಲೆ ನಿರ್ಬಂಧ ಹೇರಿದ್ದು, ಶೇ 50ರಷ್ಟು ಹಾಜರಿಗೆ ಅವಕಾಶ ಕಲ್ಪಿಸಿದೆ. ಶನಿವಾರ, ಜಿಮ್ ಮತ್ತು ಸಲೂನ್‌ಗಳನ್ನು ಮುಚ್ಚಲು ಆದೇಶಿಸಿತ್ತು. ಲಸಿಕೆ ಪಡೆದವರು ಮಾತ್ರ ಕಾರ್ಯನಿರ್ವಹಿಸಬೇಕು ಎಂದು ಹೇಳಿದೆ.

ಶೇ 20 ವಿಮಾನಯಾನ ರದ್ದು: ಸೋಂಕು ಏರಿಕೆ ಹಿನ್ನೆಲೆಯಲ್ಲಿ ಇಂಡಿಗೋ ವಿಮಾನಯಾನ ಸಂಸ್ಥೆ ಶೇ 20ರಷ್ಟು ಸೇವೆಯನ್ನು ರದ್ದುಪಡಿಸಿದೆ. ಜನವರಿ 31ರವರೆಗೆ ಕಾಯ್ದಿರಿಸಿದ್ದ ಟಿಕೆಟ್‌ಗೆ ಅನ್ವಯಿಸಿ, ಪ್ರಯಾಣಿಕರಿಗೆ ಮಾ. 31ರವರೆಗೆ ಟಿಕೆಟ್ ವ್ಯತ್ಯಾಸದ ಮೊತ್ತ ವಿನಾಯಿತಿ ನೀಡಲಾಗುತ್ತದೆ ಎಂದು ತಿಳಿಸಿದೆ.

ಹಿಮಾಚಲ ಪ್ರದೇಶದಲ್ಲಿ ಕಾರ್ಯಕ್ರಮಗಳು ರದ್ದು: ಕೋವಿಡ್ ಸೋಂಕು ತಡೆ ಕ್ರಮವಾಗಿ ಜನವರಿ 24ರವರೆಗೆ ಎಲ್ಲ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಿಗೆ ಹಿಮಾಚಲ ಪ್ರದೇಶ ಸರ್ಕಾರ ನಿರ್ಬಂಧ ಏರಿದೆ. ಅಲ್ಲದೆ, ಸರ್ಕಾರಿ ಕಚೇರಿಗಳಲ್ಲಿ ಐದು ದಿನದ ಕೆಲಸ ಅವಧಿಯನ್ನು ಜಾರಿಗೊಳಿಸಿದೆ.

ಮುಖ್ಯಮಂತ್ರಿ ಜೈರಾಂ ಠಾಕೂರ್ ಜ. 15ರವರೆಗೆ ತಮ್ಮ ಎಲ್ಲ ಕಾರ್ಯಕ್ರಮ ರದ್ದುಪಡಿಸಿದ್ದಾರೆ. ರಾಜ್ಯದಲ್ಲಿ 12 ದಿನದಲ್ಲಿ 3,000 ಪ್ರಕರಣ ವರದಿಯಾಗಿದ್ದು, ಈ ಅವಧಿಯಲ್ಲಿ ಎಂಟು ಜನರು ಮೃತಪಟ್ಟಿದ್ದಾರೆ.

ಸಂಸದ ವರುಣ್ ಗಾಂಧಿಗೆ ಕೋವಿಡ್: ಬಿಜೆಪಿ ಸಂಸದ ವರುಣ್ ಗಾಂಧಿ ಅವರಿಗೆ ಕೋವಿಡ್ ದೃಢಪಟ್ಟಿದೆ. ಈ ಕುರಿತು ಅವರು ಟ್ವೀಟ್ ಮಾಡಿದ್ದಾರೆ.

ಐದು ರಾಜ್ಯಗಳಿಗೆ ಚುನಾವಣೆ ಆಯೋಗ ಚುನಾವಣೆ ಘೋಷಿಸಿದೆ. ಅಭ್ಯರ್ಥಿಗಳು, ರಾಜಕೀಯ ಪಕ್ಷಗಳ ಕಾರ್ಯಕರ್ತರು ಮುಂಜಾಗ್ರತೆಯಾಗಿ ಕೋವಿಡ್ ಲಸಿಕೆ ಪಡೆಯುವಂತೆಯೂ ನೋಡಿಕೊಳ್ಳಬೇಕು ಎಂದಿದೆ.

ಕಚೇರಿಗೆ ಹಾಜರು: ಗರ್ಭಿಣಿಯರು, ಅಂಗವಿಕಲರಿಗೆ ವಿನಾಯಿತಿ

ನವದೆಹಲಿ (ಪಿಟಿಐ): ಕೋವಿಡ್ ಏರಿಕೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಗರ್ಭಿಣಿಯರು ಮತ್ತು ಅಂಗವಿಕಲ ನೌಕರರಿಗೆ ಕಚೇರಿಗೆ ಬರುವುದರಿಂದ ವಿನಾಯಿತಿ ನೀಡಿದೆ. ಈ ನೌಕರರು ಮನೆಯಿಂದಲೇ ಕೆಲಸ ನಿರ್ವಹಿಸಬಹುದು ಎಂದು ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ.

ಅಲ್ಲದೆ, ಕಂಟೈನ್‌ಮೆಂಟ್ ವಲಯದಲ್ಲಿ ವಾಸವಿರುವ ಸಿಬ್ಬಂದಿಗೂ, ಆ ಪ್ರದೇಶ ಕೋವಿಡ್‌ನಿಂದ ಮುಕ್ತವಾಗುವವರೆಗೆ ಕಚೇರಿಗೆ ಬರುವುದರಿಂದ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸಿಬ್ಬಂದಿ ಲಭ್ಯತೆ ಆಧರಿಸಿ ಆಯಾ ಇಲಾಖೆಗಳು ಪಾಳಿ ನಿರ್ಧರಿಸಬೇಕು. ಮನೆಯಿಂದಲೇ ಕೆಲಸ ಮಾಡುವವರು ಕಚೇರಿ ಜೊತೆಗೆ ದೂರವಾಣಿ ಸಂಪರ್ಕಕ್ಕೆ ಲಭ್ಯವಿರಬೇಕು ಎಂದು ಅವರು ತಿಳಿಸಿದ್ದಾರೆ.

21 ಲಕ್ಷ ಮಂದಿ ಮತ್ತೊಂದು ಡೋಸ್ ಲಸಿಕೆ ಪಡೆಯಲು ಅರ್ಹ

ಇಂದಿನಿಂದ ಮೂರನೇ ಡೋಸ್ ಲಸಿಕೆ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯ ಮೂರನೇ (ಬೂಸ್ಟರ್) ಡೋಸ್ ವಿತರಣೆ ರಾಜ್ಯದಲ್ಲಿ ಇದೇ ಸೋಮವಾರದಿಂದ (ಜ.10) ಪ್ರಾರಂಭವಾಗಲಿದೆ. ಸದ್ಯ ರಾಜ್ಯದಲ್ಲಿ ಆರೋಗ್ಯ ಕಾರ್ಯಕರ್ತರು ಸೇರಿದಂತೆ 21 ಲಕ್ಷ ಮಂದಿ ಮತ್ತೊಂದು ಡೋಸ್ ಲಸಿಕೆ ಪಡೆಯಲು ಅರ್ಹರಾಗಿದ್ದಾರೆ.

ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಬೆಳಿಗ್ಗೆ 10 ಗಂಟೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಲಸಿಕೆ ವಿತರಣೆಗೆ ಚಾಲನೆ ನೀಡಲಿದ್ದಾರೆ. ಎರಡನೇ ಡೋಸ್ ಪಡೆದು ಒಂಬತ್ತು ತಿಂಗಳು ಪೂರೈಸಿದ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ ಅನಾರೋಗ್ಯ ಹೊಂದಿರುವ 60 ವರ್ಷಗಳ ಮೇಲ್ಪಟ್ಟವರಿಗೆ ಲಸಿಕೆ ವಿತರಿಸಲಾಗುತ್ತದೆ.

ರಾಜ್ಯದಲ್ಲಿ 2021ರ ಜ.16 ರಿಂದ ಲಸಿಕೆ ವಿತರಿಸಲಾಗುತ್ತಿದೆ. 18 ವರ್ಷಗಳು ಮೇಲ್ಪಟ್ಟ 4.89 ಕೋಟಿ ಮಂದಿಗೆ ಲಸಿಕೆ ವಿತರಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ. ಅವರಲ್ಲಿ 4.8 ಕೋಟಿ (ಶೇ 99) ಮಂದಿಗೆ ಮೊದಲ ಡೋಸ್ ಮತ್ತು 3.9 ಕೋಟಿ ಮಂದಿಗೆ (ಶೇ 81) ಎರಡನೇ ಡೋಸ್ ಲಸಿಕೆ ನೀಡಲಾಗಿದೆ. ಇದೇ ಜ.3 ರಿಂದ 15ರಿಂದ 18 ವರ್ಷದವರಿಗೆ ಲಸಿಕೆ ವಿತರಣೆ ಪ್ರಾರಂಭಿಸಲಾಗಿದ್ದು, 31.75 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿ ಹಾಕಿಕೊಳ್ಳಲಾಗಿದೆ. ಅವರಲ್ಲಿ 15.5 ಲಕ್ಷ (ಶೇ 49) ಮಂದಿಗೆ ಮೊದಲನೇ ಡೋಸ್ ಲಸಿಕೆ ನೀಡಲಾಗಿದೆ.

6 ಲಕ್ಷ ಆರೋಗ್ಯ ಕಾರ್ಯಕರ್ತರು, 7 ಲಕ್ಷ ಮುಂಚೂಣಿ ಕಾರ್ಯಕರ್ತರು ಮತ್ತು 8 ಲಕ್ಷ 60 ವರ್ಷಗಳು ಮೇಲ್ಪಟ್ಟ ಅಸ್ವಸ್ಥರು ರಾಜ್ಯದಲ್ಲಿ ಎರಡೂ ಡೋಸ್ ಲಸಿಕೆ ಪಡೆದು 9 ತಿಂಗಳು ಕಳೆದಿವೆ. ಇವರು ಮೂರನೇ ಡೋಸ್ ಪಡೆಯಲು ಅರ್ಹರಾಗಿದ್ದಾರೆ. 'ಕೋವ್ಯಾಕ್ಸಿನ್' ಮತ್ತು 'ಕೋವಿಶೀಲ್ಡ್' ಲಸಿಕೆಯ ಮೊದಲ ಮತ್ತು ಎರಡನೇ ಡೋಸ್ ಪಡೆದವರು ಮಾತ್ರ ಮುನ್ನೆಚ್ಚರಿಕೆ ಡೋಸ್ ಪಡೆಯಲು ಅರ್ಹರಾಗಿರುತ್ತಾರೆ. ಸ್ಪುಟ್ನಿಕ್ ಲಸಿಕೆ ಪಡೆದವರು ಮೂರನೇ ಡೋಸ್ ಪಡೆಯುವಂತಿಲ್ಲ. ಎಲ್ಲ ಜಿಲ್ಲೆಗಳಲ್ಲಿಯೂ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಮೂರನೇ ಡೋಸ್ ಲಸಿಕೆ ಪಡೆಯಲು ಹೊಸದಾಗಿ ನೋಂದಣಿ ಮಾಡಬೇಕಾಗಿಲ್ಲ. 9 ತಿಂಗಳು ಪೂರೈಸಿದವರಿಗೆ 'ಕೋವಿನ್ ಪೋರ್ಟಲ್'ನಿಂದ ಸಂದೇಶ ರವಾನೆಯಾಗುತ್ತದೆ. ಫಲಾನುಭವಿಗಳು ಪೋರ್ಟಲ್ ನೆರವಿನಿಂದ ತಮ್ಮ ಸಮಯವನ್ನು ಕಾಯ್ದಿರಿಸುವ ಅವಕಾಶ ಇರುತ್ತದೆ. ನೇರವಾಗಿ ಕೇಂದ್ರಗಳಿಗೆ ತೆರಳಿಯೂ ಲಸಿಕೆ ಪಡೆದುಕೊಳ್ಳಬಹುದು. ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಲಸಿಕೆ ಒದಗಿಸಲಾಗುತ್ತದೆ ಎಂದು ಇಲಾಖೆ ಪ್ರಕಟಣೆ ತಿಳಿಸಿದೆ.

ಮಕ್ಕಳು, ವೈದ್ಯರಲ್ಲಿ ಹೆಚ್ಚಿದ ಸೋಂಕು: ಮೈಸೂರು ಜಿಲ್ಲೆಯಲ್ಲಿ ಭಾನುವಾರ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಸೋಂಕು ದೃಢಪಟ್ಟವರಲ್ಲಿ 60 ಮಕ್ಕಳು ಸೇರಿದ್ದಾರೆ. ವೈದ್ಯರು, ವೈದ್ಯಕೀಯ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳು ಸೇರಿದಂತೆ 7 ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ. ಮೂವರು ಪೊಲೀಸರು ಸೋಂಕಿತರಾಗಿದ್ದಾರೆ.



ಸಂಸದ ಪಿ.ಸಿ.ಗದ್ದಿಗೌಡರಗೆ ಕೋವಿಡ್

ಬಾಗಲಕೋಟೆ: ಸಂಸದ ಪಿ.ಸಿ. ಗದ್ದಿಗೌಡರ ಅವರಿಗೆ ಕೋವಿಡ್–19 ದೃಢಪಟ್ಟಿದೆ. ಅವರಿಗೆ ಯಾವುದೇ ಲಕ್ಷಣಗಳು ಇಲ್ಲ. ಬಾದಾಮಿಯ ತಮ್ಮ ಮನೆಯಲ್ಲಿಯೇ ಅವರು ಕ್ವಾರೆಂಟೈನ್‌ಗೆ ಒಳಗಾಗಿದ್ದಾರೆ. ದೆಹಲಿಯಿಂದ ಶುಕ್ರವಾರ ಬಾದಾಮಿಗೆ ಮರಳಿದ್ದ ಅವರು ಸ್ವಯಂ ಪ್ರೇರಿತವಾಗಿ ಕೋವಿಡ್ ತಪಾಸಣೆಗೆ ಒಳಗಾಗಿದ್ದರು. ಭಾನುವಾರ ಫಲಿತಾಂಶ ಬಂದಿದೆ.

- ಜ.17ರಂದು ಬನದ ಹುಣ್ಣಿಮೆ ದಿನ ನಡೆಯಲಿದ್ದ ಬಾದಾಮಿ ಬನಶಂಕರಿದೇವಿ ರಥೋತ್ಸವವನ್ನು ಕೋವಿಡ್–19 ರ ಹಿನ್ನೆಲೆಯಲ್ಲಿ ರದ್ದು ಮಾಡಲಾಗಿದೆ ಎಂದು ತಹಶೀಲ್ದಾರ್ ಸುಹಾಸ ಇಂಗಳೆ ತಿಳಿಸಿದ್ದಾರೆ.
- ಆನೇಕಲ್ ತಾಲ್ಲೂಕಿನಲ್ಲಿ ಭಾನುವಾರ ಒಂದೇ ದಿನ 281 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಇದರೊಂದಿಗೆ 15 ದಿನಗಳ ಅವಧಿಯಲ್ಲಿ ಸೋಂಕಿತರ ಸಂಖ್ಯೆ ಸಾವಿರ ಗಡಿ ದಾಟಿದೆ.
- ಹಾಸನ ಜಿಲ್ಲೆಯ 24 ಪೊಲೀಸರಲ್ಲಿ ಕೋವಿಡ್–19 ಪಾಸಿಟಿವ್ ಇರುವುದು ಪತ್ತೆಯಾಗಿದೆ. ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಹಾಗೂ ಅವರ ಕುಟುಂಬ ಸದಸ್ಯರಿಗೆ ಕೋವಿಡ್ ಇರುವುದು ದೃಢಪಟ್ಟಿದೆ.
- ಅವಳಿ ಜಿಲ್ಲೆಗಳಾದ ವಿಜಯನಗರ–ಬಳ್ಳಾರಿಯಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 107ಕ್ಕೇರಿದೆ. ಭಾನುವಾರ ಒಬ್ಬರು ಮೃತಪಟ್ಟಿದ್ದಾರೆ.
- ಯಳಂದೂರು ತಾಲ್ಲೂಕಿನ ವಿವಿಧ ಗ್ರಾಮಗಳಿಂದ ತಮಿಳುನಾಡಿನ ಓಂಶಕ್ತಿ ದೇವಾಲಯಕ್ಕೆ ತೆರಳಿದ್ದ 12 ಭಕ್ತರಲ್ಲಿ ಕೋವಿಡ್ ಇರುವುದು ಭಾನುವಾರ ದೃಢಪಟ್ಟಿದೆ.

ಸೋಮವಾರ, ಜನವರಿ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 10 | ಪುಟ 14

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಕಲಿಕಾ ಹಂತದಲ್ಲಿ ಕೋರ್ಸ್ ಆಯ್ಕೆಗೆ ಮುನ್ನವೇ ಸೂಕ್ತ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಬೇಕು. ಇದೇ 'ವೃತ್ತಿ ಯೋಜನೆ'. ಇದನ್ನು ರೂಪಿಸಲು ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕಿದೆ.

ಆಳ-ಅಗಲ

'ಉತ್ತರ'ದ ಗದ್ದುಗೆಗೆ ಕಾರ್ಯತಂತ್ರ ಹತ್ತಾರು

ಡಿಸೆಂಬರ್ 26 ಇನ್ನು 'ವೀರ ಬಾಲ ದಿವಸ' 8

ಸಂಕ್ರಾಂತಿ: ಜಾಗತಿಕ ಸೂರ್ಯ ನಮಸ್ಕಾರ 8

₹ 107 ಕೋಟಿ ವಂಚನೆ ಪ್ರಕರಣ

ಅಲಯನ್ಸ್ ವಿ.ವಿ ಮಾಜಿ ಕುಲಪತಿ ಬಂಧನ 9

ಅಧಿಕಾರಕ್ಕಾಗಿ ಅಲ್ಲ, ನೀರಿಗಾಗಿ ಪಾದಯಾತ್ರೆ: ಕಾಂಗ್ರೆಸ್ • ಕೋವಿಡ್ ನಿಯಮ ಗಾಳಿಗೆ ತೂರಿದ ನಾಯಕರು

ಮೇಕೆದಾಟು ಪಾದಯಾತ್ರೆ: ಭರ್ಜರಿ ಶುರು

• ರಾಜೇಶ್ ರೈ ಚಟ್ಲ

ಸಂಗಮ (ರಾಮನಗರ ಜಿಲ್ಲೆ): 'ಮೇಕೆದಾಟು ಜೈ' ಎಂದು ಗರ್ಜಿಸಿ, ಅಧಿಕಾರಕ್ಕಾಗಿ ಅಲ್ಲ, ನೀರಿಗಾಗಿ ಎನ್ನುತ್ತಲೇ 'ಕೈ' ನಾಯಕರು ಬಿಜೆಪಿ, ಜೆಡಿಎಸ್ ವಿರುದ್ಧ ತೊಡೆತಟ್ಟಿ ಇಲ್ಲಿ ಹೋರಾಟದ 'ನಗಾರಿ' ಬಾರಿಸಿದರು.

ಆ ಮೂಲಕ, ಇನ್ನೂ ಒಂದು ವರ್ಷ ಮೂರು ತಿಂಗಳು ದೂರ ಇರುವ ರಾಜ್ಯ ವಿಧಾನಸಭೆ ಚುನಾವಣೆಗೆ ಜನಾಭಿಪ್ರಾಯ ರೂಪಿಸಲು 'ರಾಜಕೀಯ ಅಸ್ತ್ರ'ವಾಗಿ ಮೇಕೆದಾಟು ಪಾದಯಾತ್ರೆಯನ್ನು ಬಳಸುವ ಮುನ್ಸೂಚನೆ ನೀಡಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾವೇರಿ–ಅರ್ಕಾವತಿಯ 'ಸಂಗಮ'ದಿಂದ ಭಾನುವಾರ ಆರಂಭಿಸಿದ 10 ದಿನಗಳ ಪಾದಯಾತ್ರೆಯನ್ನು ನಾಡಿನ ಅಭಿವೃದ್ಧಿಗಾಗಿ ಪಕ್ಷಾತೀತ ಹೋರಾಟ ಎಂದು ಘೋಷಿಸಿದ ಕಾಂಗ್ರೆಸ್ ನಾಯಕರು, ಯೋಜನೆ ವಿಳಂಬಕ್ಕೆ ರಾಜ್ಯ ಬಿಜೆಪಿ ಸರ್ಕಾರವೇ ಕಾರಣವೆಂದು ಗುಡುಗಿದರು.

ಅದರ ಜೊತೆಯಲ್ಲೇ, ಕೋವಿಡ್ ನಿಯಮ ಪಾಲಿಸಿಯೇ ಪಾದಯಾತ್ರೆ ಮಾಡುತ್ತೇವೆ ಎಂದು ಮಾತು ನೀಡಿದ್ದ ಈ ನಾಯಕರು, ಸರ್ಕಾರ ವಿಧಿಸಿರುವ ಎಲ್ಲ ನಿರ್ಬಂಧಗಳನ್ನೂ ಗಾಳಿಗೆ ತೂರಿದರು. ಕಾರ್ಯಕ್ರಮ-ಕ್ಕೆ ಬಂದ ನಾಯಕರು ಸೇರಿದಂತೆ ಸಾವಿರಾರು ಜನರು ಮಾಸ್ಕ್ ಇಲ್ಲದೆ, ಅಂತರ ಕಾಪಾಡದೆ ನಿಯಮಗಳನ್ನು ಉಲ್ಲಂಘಿಸಿದರು. ಪಾದಯಾತ್ರೆಯ ಅಬ್ಬರಕ್ಕೆ ಭದ್ರತೆಗಾಗಿ ನಿಯೋಜಿಸಿದ್ದ ಪೊಲೀಸರು ಮೂಕಪ್ರೇಕ್ಷಕರಾದರು.

ಸಂಗಮದಲ್ಲಿ ನಿರ್ಮಿಸಿದ್ದ ಬೃಹತ್ ವೇದಿಕೆಯಲ್ಲಿ, ಎಐಸಿಸಿ ಪ್ರತಿನಿಧಿಯಾಗಿ ಬಂದಿದ್ದ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನಗಾರಿ ಬಾರಿಸಿ ಪಾದಯಾತ್ರೆಗೆ ಚಾಲನೆ ನೀಡಿದರು. ಬಳಿಕ ಸಿದ್ದರಾಮಯ್ಯ ಅವರ ಕೈಹಿಡಿದು ಡಿ.ಕೆ. ಶಿವಕುಮಾರ್ ನಗಾರಿ ಬಾರಿಸಿದ್ದು ಗಮನ ಸೆಳೆಯಿತು.

8ನೇ ಪುಟ ನೋಡಿ

ಮಲ್ಲಿಕಾರ್ಜುನ ಖರ್ಗೆ ಮತ್ತು ಸಿದ್ದರಾಮಯ್ಯ ನಗಾರಿ ಬಾರಿಸಿ ಪಾದಯಾತ್ರೆಗೆ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಬಿ.ವಿ. ಶ್ರೀನಿವಾಸ್, ಕೆ.ಜೆ. ಜಾರ್ಜ್, ಎಚ್.ಕೆ. ಪಾಟೀಲ, ಜಿ. ಪರಮೇಶ್ವರ, ಡಿ.ಕೆ. ಶಿವಕುಮಾರ್, ಪಿ.ಟಿ. ಪರಮೇಶ್ವರ ನಾಯ್ಕ, ಬಿ. ನಾಗೇಂದ್ರ, ರಾಮಲಿಂಗಾ ರೆಡ್ಡಿ, ಸಲೀಂ ಅಹ್ಮದ್ ಇದ್ದರು ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

> **ತಮಿಳುನಾಡಿಗೆ ಕಾನೂನಿನ ಬಲ ಇಲ್ಲ. ನೀವ್ಯಾಕೆ ಅವರ ಜೊತೆ ಸೇರಿಕೊಂಡಿರಿ. ಇದು ಕನ್ನಡಿಗರಿಗೆ ಮಾಡುವ ದ್ರೋಹ ಅಲ್ಲವೇ ಮಿ. ಕಾರಜೋಳ್, ಮಿ. ಬೊಮ್ಮಾಯಿ'**
> **ಸಿದ್ದರಾಮಯ್ಯ**
> ವಿರೋಧ ಪಕ್ಷದ ನಾಯಕ

> **ನಾವು ಹೆದರುವ ಮಕ್ಕಳಲ್ಲ. ತಾಕತ್ತಿದ್ದರೆ ವೇದಿಕೆಯಲ್ಲಿರುವ ಸ್ವಾಮೀಜಿಗಳು, ಪಕ್ಷದ ನಾಯಕರನ್ನು ಬಂಧಿಸಿ. ಮೇಕೆದಾಟು ಧ್ವಜ ಮುಟ್ಟಲು ನಿಮ್ಮಿಂದ ಸಾಧ್ಯವಿಲ್ಲ**
> **ಡಿ.ಕೆ.ಶಿವಕುಮಾರ್**
> ಅಧ್ಯಕ್ಷ, ಕೆಪಿಸಿಸಿ

> **ನಮಗೆ ಛಲ ಇರಬೇಕು. ಆ ಛಲ ಕೆಪಿಸಿಸಿ ಅಧ್ಯಕ್ಷರು, ಸಿಎಲ್‌ಪಿ ನಾಯಕರು, ಪಕ್ಷದ ಕಾರ್ಯಕರ್ತರಿಗಿದೆ. ಪಾದಯಾತ್ರೆ ವಿಫಲಗೊಳಿಸಲು ಸರ್ಕಾರ ಎಲ್ಲ ಪ್ರಯತ್ನ ಮಾಡುತ್ತಿದೆ**
> **ಮಲ್ಲಿಕಾರ್ಜುನ ಖರ್ಗೆ**
> ವಿರೋಧಪಕ್ಷದ ನಾಯಕ, ರಾಜ್ಯಸಭೆ

'ಕೈ' ಪಾದಯಾತ್ರೆ ಮೇಲೆ ತೀವ್ರ ನಿಗಾ

ಬೆಂಗಳೂರು: ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್ ಆರಂಭಿಸಿರುವ ಪಾದಯಾತ್ರೆಯ ಮೇಲೆ ತೀವ್ರ ನಿಗಾ ಇರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಪಾದಯಾತ್ರೆಯಲ್ಲಿ ಪಾಲ್ಗೊಂಡವರಲ್ಲಿ ಕೋವಿಡ್ ಹರಡಿದರೆ ಬಿಗಿಯಾದ ನಿರ್ಬಂಧಗಳನ್ನು ವಿಧಿಸುವ ಸಾಧ್ಯತೆ ಇದೆ.

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಮೇಕೆದಾಟುವಿನ ಸಂಗಮದಲ್ಲಿ ಕಾಂಗ್ರೆಸ್ ನಾಯಕರಿಂದ ಪಾದಯಾತ್ರೆ ಆರಂಭವಾದ ಬೆನ್ನಲ್ಲೇ ತಮ್ಮ ನಿವಾಸದಲ್ಲಿ ಸಚಿವರು ಮತ್ತು ಶಾಸಕರ ಸಭೆ ನಡೆಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಕುರಿತು ಚರ್ಚಿಸಿದರು. ಕಾಂಗ್ರೆಸ್‌ನ ಪಾದಯಾತ್ರೆ, ಮೇಕೆದಾಟು ಯೋಜನೆ, ಬೆಂಗಳೂರು ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡುಬಂದಿರುವ ಕುರಿತು ದೀರ್ಘ ಸಮಾಲೋಚನೆ ನಡೆಸಿದರು.

ಕಾಂಗ್ರೆಸ್ ಪಾದಯಾತ್ರೆಯಿಂದ ಆಗಬಹುದಾದ ರಾಜಕೀಯ ಪರಿಣಾಮಗಳ ಕುರಿತೂ ಸಭೆಯಲ್ಲಿ ಚರ್ಚೆ ನಡೆಯಿತು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ನಡೆದಿರುವ ಬೆಳವಣಿಗೆಗಳ ಬಗ್ಗೆ ನಿರಂತರವಾಗಿ ಹೇಳಿಕೆ ನೀಡುವ ಮೂಲಕ ಪ್ರತಿಪಕ್ಷದ ಆರೋಪಗಳಿಗೆ ತಿರುಗೇಟು ನೀಡುವ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ....
https://bit.ly/3zDAOpD

ಪ್ರಜಾವಾಣಿ ನೋಡಿಯೊ

ಕೋವಿಡ್: ಪ್ರಕರಣಗಳ ಸಂಖ್ಯೆ 12 ಸಾವಿರಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಭಾನುವಾರ 12 ಸಾವಿರ ಮಂದಿ ಕೋವಿಡ್ ಪೀಡಿತ-ರಾಗಿರುವುದು ದೃಢಪಟ್ಟಿದೆ. ಏಳೂವರೆ ತಿಂಗಳಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಒಂದು ದಿನದ ಅವಧಿಯಲ್ಲಿ 1.89 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 6.33ಕ್ಕೆ ಏರಿಕೆಯಾಗಿದೆ. ಈ ತಿಂಗಳು 9 ದಿನಗಳಲ್ಲಿ 44,621 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.51 ಲಕ್ಷ ದಾಟಿದೆ.

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗಿವೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರಂಕಿ, 16 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳ-ವಾಗಿದ್ದು, 9,020 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ರಾಜ್ಯದಲ್ಲಿ ವರದಿಯಾದ ಹೊಸ ಪ್ರಕರಣಗಳಲ್ಲಿ ಶೇ 75 ರಷ್ಟು ಪ್ರಕರಣಗಳು ಬೆಂಗಳೂರಿ-ನಲ್ಲಿಯೇ ವರದಿಯಾಗಿದ್ದು, ಕೋವಿಡ್ ದೃಢ ಪ್ರಮಾಣ ಶೇ 10 ರಷ್ಟಿದೆ.

ಮೈಸೂರಿನಲ್ಲಿ 398, ಉಡುಪಿಯಲ್ಲಿ 340, ದಕ್ಷಿಣ ಕನ್ನಡದಲ್ಲಿ 298, ಮಂಡ್ಯದಲ್ಲಿ 261, ಶಿವಮೊಗ್ಗದಲ್ಲಿ 198, ತುಮಕೂರಿನಲ್ಲಿ 190, ಹಾಸನದಲ್ಲಿ 182, ಧಾರವಾಡದಲ್ಲಿ 147, ಬಳ್ಳಾರಿಯಲ್ಲಿ 107 ಹಾಗೂ ಬೆಳಗಾವಿಯಲ್ಲಿ 105 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ 901 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖ-ರಾದವರ ಒಟ್ಟು ಸಂಖ್ಯೆ 29.63 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, 49,602ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 40,570 ಸಕ್ರಿಯ ಪ್ರಕರಣಗಳಿವೆ. ದಕ್ಷಿಣ ಕನ್ನಡ (1,267) ಹಾಗೂ ಮೈಸೂರಿನಲ್ಲಿ (1,052) ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು, ಬಳ್ಳಾರಿ ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.03 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,370ಕ್ಕೆ ಏರಿಕೆಯಾಗಿದೆ.

ದೇಶದಲ್ಲಿ 1.59 ಲಕ್ಷ ಹೊಸ ಪ್ರಕರಣ

ನವದೆಹಲಿ (ಪಿಟಿಐ): ದೇಶದಾದ್ಯಂತ 24 ಗಂಟೆಗಳಲ್ಲಿ 1.59 ಲಕ್ಷ ಕೋವಿಡ್ ಪ್ರಕರಣ ದೃಢಪಟ್ಟಿದ್ದು, ಇದು 224 ದಿನಗಳಲ್ಲೇ ದಿನವೊಂದರ ಗರಿಷ್ಠ ಪ್ರಮಾಣವಾಗಿದೆ. ಈ ಪೈಕಿ 552 ಓಮೈಕ್ರಾನ್ ಪ್ರಕರಣಗಳಾಗಿವೆ. ಇದರೊಂದಿಗೆ ಓಮೈಕ್ರಾನ್ ಪ್ರಕರಣಗಳ ಸಂಖ್ಯೆ 3,623ಕ್ಕೆ ಏರಿದೆ.

ಓಮೈಕ್ರಾನ್ ಗರಿಷ್ಠ ಪ್ರಕರಣಗಳು ಮಹಾರಾಷ್ಟ್ರದಲ್ಲಿ (1,009) ಪತ್ತೆಯಾಗಿವೆ. ಉಳಿದಂತೆ ದೆಹಲಿ 513, ಕರ್ನಾಟಕ 441, ಕೇರಳ 33 ಮತ್ತು ಗುಜರಾತ್‌ನಲ್ಲಿ 204 ಪ್ರಕರಣಗಳು ಪತ್ತೆಯಾಗಿವೆ.

ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 5,90,611ಕ್ಕೆ ಏರಿದೆ ಎಂದು ಆರೋಗ್ಯ ಸಚಿವಾಲಯ ವಿವರ ನೀಡಿದೆ.

ಅಲ್ಲದೆ, ಮತ್ತೆ 327 ಮಂದಿ ಮೃತಪಟ್ಟಿದ್ದು, ಮೃತರ ಸಂಖ್ಯೆ 4,83,790ಕ್ಕೆ ಏರಿದೆ. ಕಳೆದ ವರ್ಷ ಮೇ 29ರಂದು ಒಂದೇ ದಿನದಲ್ಲಿ 1,65,553 ಪ್ರಕರಣ ದೃಢಪಟ್ಟಿದ್ದು, ಇದುವರೆಗಿನ ಅತ್ಯಧಿಕ ಸಂಖ್ಯೆಯಾಗಿತ್ತು.

ದೇಶದಾದ್ಯಂತ ಸಕ್ರಿಯ ಪ್ರಕರಣಗಳ ಪ್ರಮಾಣ ಒಟ್ಟು ಪ್ರಕರಣಗಳ ಶೇ 1.66ರಷ್ಟಿದ್ದು, ವಾರದ ಅವಧಿಯ ದೃಢಪಡುವ ಪ್ರಮಾಣ ಶೇ 10.21ಕ್ಕೆ ಏರಿದೆ.

ಈವರೆಗೆ ಮಹಾರಾಷ್ಟ್ರದಲ್ಲಿ ಗರಿಷ್ಠ 1,41,627, ಕೇರಳ 49,547, ಕರ್ನಾಟಕದಲ್ಲಿ 36,843 ಜನರು ಮೃತಪಟ್ಟಿದ್ದಾರೆ.

12ರಿಂದ ನೀಟ್–ಪಿಜಿ ಕೌನ್ಸೆಲಿಂಗ್

ನವದೆಹಲಿ (ಪಿಟಿಐ): 'ವೈದ್ಯಕೀಯ ಕೋರ್ಸ್ ಪ್ರವೇಶಕ್ಕಾಗಿ ನೀಟ್–ಪಿಜಿ ಕೌನ್ಸೆಲಿಂಗ್ ಪ್ರಕ್ರಿಯೆ ಇದೇ 12ರಂದು ಆರಂಭವಾಗಲಿದೆ' ಎಂದು ಕೇಂದ್ರ ಆರೋಗ್ಯ ಸಚಿವ್ ಮನ್‌ಸುಖ್ ಮಾಂಡವೀಯ ಭಾನುವಾರ ತಿಳಿಸಿದರು.

ಜನವರಿ 7ರಂದು ಮಧ್ಯಂತರ ಆದೇಶ ನೀಡಿದ್ದ ಸುಪ್ರೀಂ ಕೋರ್ಟ್, 2021–22ನೇ ಶೈಕ್ಷಣಿಕ ಸಾಲಿಗೆ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನೀಟ್–ಪಿಜಿ ಕೌನ್ಸೆಲಿಂಗ್ ಆರಂಭಿಸಲು ಅನುಮೋದನೆ ನೀಡಿತ್ತು.

ಅಲ್ಲದೆ, ನೀಟ್–ಪಿಜಿ ಪ್ರವೇಶಾತಿಗೆ ಇತರೆ ಹಿಂದುಳಿದ ವರ್ಗಗಳಿಗೆ ಶೇ 27 ಮತ್ತು ಇಡಬ್ಲ್ಯುಎಸ್ ವರ್ಗಗಳಿಗೆ ಶೇ 10 ಮೀಸಲಾತಿ ಕಲ್ಪಿಸುವ ನಿರ್ಧಾರವನ್ನೂ ಎತ್ತಿಹಿಡಿದಿತ್ತು.

'ಸ್ಥಾನಿಕ ವೈದ್ಯರಿಗೆ ಭರವಸೆ ನೀಡಿದ್ದಂತೆ, ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ವೈದ್ಯಕೀಯ ಕೌನ್ಸೆಲಿಂಗ್ ಸಮಿತಿ ಇದೇ 12ರಿಂದ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭಿಸಲಿದೆ' ಎಂದು ಮಾಂಡವೀಯ ಟ್ವೀಟ್ ಮಾಡಿದ್ದಾರೆ.

'ಈ ಬೆಳವಣಿಗೆ ಕೊರೊನಾ ವಿರುದ್ಧದ ಹೋರಾಟದಲ್ಲಿ ದೇಶಕ್ಕೆ ಹೆಚ್ಚಿನ ಶಕ್ತಿ ನೀಡಲಿದೆ. ಅಭ್ಯರ್ಥಿಗಳಿ-ಗೆ ಶುಭಾಶಯಗಳು' ಎಂದು ಸಚಿವರು ತಿಳಿಸಿದ್ದಾರೆ. ನೀಟ್–ಪಿಜಿ ಪರೀಕ್ಷೆಯು 2021ರ ಸೆಪ್ಟೆಂಬರ್ 11ರಂದು ನಡೆದಿತ್ತು.

ಪಶ್ಚಿಮಘಟ್ಟ ಸೂಕ್ಷ್ಮ ಪ್ರದೇಶ: ಅಧಿಸೂಚನೆ ಅಂತಿಮಗೊಳಿಸಲು ಆರು ತಿಂಗಳ ಗಡುವು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮಘಟ್ಟದಲ್ಲಿ-ರುವ ಪರಿಸರ ಸೂಕ್ಷ್ಮ ಪ್ರದೇಶಗಳಿಗೆ ಅನ್ವಯಿಸಿ ಅಧಿಸೂಚನೆಯನ್ನು ಅಂತಿಮಗೊಳಿಸಲು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (ಎನ್‌ಜಿಟಿ) ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ಇನ್ನೂ ಆರು ತಿಂಗಳು ಸಮಯಾವಕಾಶ ನೀಡಿದೆ.

ಪರಿಸರಸ್ನೇಹಿ ವಲಯಗಳಿಗೆ ಸಂಬಂಧಿಸಿ ಹಾಲಿ ಇರುವ ಅಧಿಸೂಚನೆ ಕುರಿತಂತೆ ವಸ್ತುಸ್ಥಿತಿ ವರದಿ ಸದ್ಯ ಲಭ್ಯವಿಲ್ಲ ಎಂದು ಎನ್‌ಜಿಟಿ ಪ್ರಧಾನಪೀಠದ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯಲ್ ಹೇಳಿದರು. 'ಆದಷ್ಟು ಶೀಘ್ರ ಅಂದರೆ ಆರು ತಿಂಗಳೊಳಗೆ ಅಧಿಸೂಚನೆಯನ್ನು ಪೂರ್ಣಗೊಳಿಸಬೇಕು' ಎಂದು ಸೂಚಿಸಿದರು.

ಸಾಂದರ್ಭಿಕ ಚಿತ್ರ

ಅಧಿಸೂಚನೆಯನ್ನು ಅಂತಿಮ-ಗೊಳಿಸುವಲ್ಲಿ ಅನಗತ್ಯ ವಿಳಂಬವಾಗು-ತ್ತಿದೆ ಎಂದು ಗೋವಾ ಫೌಂಡೇಷನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ವೇಳೆ ನ್ಯಾಯಪೀಠ ಈ ಗಡುವು ನಿಗದಿಪಡಿಸಿತು.

'ಅಭಿವೃದ್ಧಿ ಅಗತ್ಯವಿದೆ' ಎಂದು ವಾದಿಸುವವರಿಂದ ವಿನಾಯಿತಿ ಕೋರಿ ಹೆಚ್ಚು ಬೇಡಿಕೆ ಬರುತ್ತಿದೆ. ಆದರೆ, 'ಪರಿಸರ ರಕ್ಷಣೆಯ ಅಗತ್ಯ' ಪ್ರತಿಪಾದಿಸುವವರು ಇಂಥ ಬೇಡಿಕೆಗಳಿಗೆ ಅವಕಾಶ ನೀಡುತ್ತಿಲ್ಲ. ಕಳೆದ ಎಂಟು ವರ್ಷದಿಂದಲೂ ಇಂತಹ ಬೇಡಿಕೆ ಕುರಿತ ಮನವಿಗಳು ಬಾಕಿ ಉಳಿದಿದ್ದು, ಇತ್ಯರ್ಥಗೊಳಿಸಬೇಕಾಗಿದೆ ಎಂದೂ ಪೀಠ ಹೇಳಿತು.

ಈ ವಿಷಯದಲ್ಲಿ ನಿರಂತರವಾಗಿ ವಿಳಂಬ ಆಗುವುದನ್ನು ಒಪ್ಪಲಾಗದು. ಪರಿಸರ ರಕ್ಷಣೆಯ ದೃಷ್ಟಿಯಿಂದ ಆದಷ್ಟು ತುರ್ತಾಗಿ ಕ್ರಮಗಳು ಅಗತ್ಯವಾಗಿವೆ ಎಂದು ನ್ಯಾಯಪೀಠವು ಅಭಿಪ್ರಾಯ-ಪಟ್ಟಿತು.

ಇದಕ್ಕೂ ಮೊದಲು ಎನ್‌ಜಿಟಿಯು ಕೇಂದ್ರ ಸಚಿವಾಲಯಕ್ಕೆ ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮ ಪ್ರದೇಶಗಳಿಗೆ ಅನ್ವಯಿಸಿ ಅಧಿಸೂಚನೆಯನ್ನು ಅಂತಿಮಗೊಳಿಸಲು 2020ರ ಡಿಸೆಂಬರ್ 31ರ ಗಡುವು ನಿಗದಿಪಡಿಸಿತ್ತು.

8ನೇ ಪುಟ ನೋಡಿ

'ಸುಲ್ಲಿ ಡೀಲ್ಸ್' ಆ್ಯಪ್ ಸೃಷ್ಟಿಕರ್ತನ ಬಂಧನ

ನವದೆಹಲಿ/ಇಂದೋರ್ (ಪಿಟಿಐ): ವಿವಾದಾಸ್ಪದ 'ಸುಲ್ಲಿ ಡೀಲ್ಸ್' ಮೊಬೈಲ್ ಆ್ಯಪ್ ರೂಪಿಸಿದ್ದ ಓಂಕಾರೇಶ್ವರ್ ಠಾಕೂರ್ (26) ಎಂಬವರನ್ನು ದೆಹಲಿ ಪೊಲೀಸರು ಮಧ್ಯ ಪ್ರದೇಶದ ಇಂದೋರ್‌ನಲ್ಲಿ ಭಾನುವಾರ ಬಂಧಿಸಿದ್ದಾರೆ. 8

ಎಲೆಕ್ಟ್ರಾನಿಕ್ಸ್ ಉಪಕರಣಗಳ ಬೆಲೆ ಶೇ 10ರವರೆಗೆ ಏರಿಕೆ

ನವದೆಹಲಿ (ಪಿಟಿಐ): ಹೊಸ ವರ್ಷದಲ್ಲಿ ಹವಾ ನಿಯಂತ್ರಕಗಳು ಹಾಗೂ ರೆಫ್ರಿಜರೇಟರ್‌ಗಳ ಬೆಲೆ ಹೆಚ್ಚಳ ಆಗಿದೆ. ಇವುಗಳ ತಯಾರಿಕೆಗೆ ಅಗತ್ಯವಿರುವ ಕಚ್ಚಾ ವಸ್ತುಗಳ ಬೆಲೆಯಲ್ಲಿ ಏರಿಕೆ ಆಗಿರುವುದು, ಸರಕು ಸಾಗಣೆ ವೆಚ್ಚ ಜಾಸ್ತಿ ಆಗಿರುವುದು ಇದಕ್ಕೆ ಕಾರಣ. 9

ಟೆನಿಸ್: ರೋಹನ್–ರಾಮ್‌ಕುಮಾರ್ ಜೋಡಿಗೆ ಪ್ರಶಸ್ತಿ

ಅಡಿಲೇಡ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ರಾಮ್‌ಕುಮಾರ್ ರಾಮನಾಥನ್, ಅಡಿಲೇಡ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು. ಭಾನುವಾರ ನಡೆದ ಫೈನಲ್‌ನಲ್ಲಿ ಬೋಪಣ್ಣ–ರಾಮ್‌ಕುಮಾರ್ ಅವರು ಇವಾನ್ ದೊಡಿಗ್ ಮತ್ತು ಮಾರ್ಸೆಲೊ ಮೆಲೊ ಅವರನ್ನು 7-6 (6), 6-1ರಲ್ಲಿ ಮಣಿಸಿದರು. 10

ಚಿನಕುರಳಿ

ಪ್ರಕಾಶ್ ಶೆಟ್ಟಿ

PhonePe ಇನ್ಶ್ಯುರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (IRDAI ನೋಂ. 766) ಡೈರೆಕ್ಟ್ ಬ್ರೋಕರ್ - ಲೈಫ್ ಮತ್ತು ಜನರಲ್ – ಆಗಸ್ಟ್ 10, 2024ರ ವರೆಗೆ ಮಾನ್ಯ. CIN - U66000KA2020FTC132814. ನೋಂದಾಯಿತ ಕಚೇರಿ – ಕಚೇರಿ-2, ಮಹಡಿ 4,5,6,7, ವಿಂಗ್ A, ಬ್ಲಾಕ್ A, ಸಲಾರ್ಪುರಿಯಾ ಸಾಫ್ಟ್ ಜೋನ್, ಸರ್ವೀಸ್ ರೋಡ್, ಗ್ರೀನ್ ಗ್ಲೆನ್ ಲೇಔಟ್, ಬೆಳ್ಳಂದೂರು, ಬೆಂಗಳೂರು, ಕರ್ನಾಟಕ – 560103. ಮಾರಾಟವನ್ನು ಮುಕ್ತಾಯ ಮಾಡುವುದಕ್ಕಿಂತ ಮೊದಲು ಸಂಬಂಧಿಸಿದ ವಿಮೆದಾರರ ಮಾರಾಟ ಕೈಪಿಡಿಯನ್ನು ದಯವಿಟ್ಟು ಗಮನವಿಟ್ಟು ಓದಿ. PhonePe ಟ್ರೇಡ್ ಲೋಗೋದ ಮಾಲೀಕತ್ವವನ್ನು PhonePe ಪ್ರೈವೇಟ್ ಲಿಮಿಟೆಡ್ ಹೊಂದಿದೆ ಮತ್ತು ಬಳಕೆದಾರರ ಲೈಸೆನ್ಸ್ ಕರಾರು ಅಡಿಯಲ್ಲಿ PhonePe ಇನ್ಶ್ಯುರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಬಳಸಿದೆ. ಜಾಹೀರಾತು ಕೋಡ್: PM/279

*ಸ್ವಂತ ಹಾನಿ ಕವರ್ ಮೇಲೆ ಹಿಂದಿನ ಟ್ಯಾರಿಫ್ ದರಗಳಿಗೆ ಶಿಫಾರಸು ಮಾಡಿದ ರಿಯಾಯಿತಿ ಇರುತ್ತದೆ ಮತ್ತು ಇದು ಆಯ್ದ ಮೇಕ್-ಮಾಡೆಲ್‌ಗಳಿಗಾಗಿದೆ ಮತ್ತು ಎಲ್ಲ ಮಾಡೆಲ್‌ಗಳ ಫ್ಲಾಟ್ ರಿಯಾಯಿತಿಗೆ ಅಲ್ಲ. ^ವಿಮೆದಾರರ ರಿಸ್ಕ್ ಸಮ್ಮತಿ ಮತ್ತು ಕಾಲಾವಧಿಯೊಳಗೆ ವಿವರಗಳನ್ನು ಸಲ್ಲಿಸುವುದಕ್ಕೆ ಒಳಪಟ್ಟಿದೆ. ಪ್ರಸ್ತಾವನೆ ಸಲ್ಲಿಕೆ/ಪ್ರೀಮಿಯಂ ಪಾವತಿಯು ವಿಮೆದಾರರು ಸಮ್ಮತಿಸಿದ ರಿಸ್ಕ್ ಅನ್ನು ಪರಿಭಾವಿಸುವುದಿಲ್ಲ.

ಸೋಮವಾರದ ಉಷ್ಣಾಂಶ 28° ಗರಿಷ್ಠ 17° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಮುಸುಕಿದ, ನಂತರ ಮೋಡ ಕವಿದ ವಾತಾವರಣ

ಹವಾಮಾನ: ಮಂಗಳವಾರ 29° 17° | ಬುಧವಾರ 29° 17° | ಗುರುವಾರ 29° 17°

ಸೂರ್ಯೋದಯ: 6:45 ಸೂರ್ಯಾಸ್ತ : 6:09 ಚಂದ್ರೋದಯ: ಬೆ. 11:59 ಚಂದ್ರಾಸ್ತ: ರಾ. 12:00 ಭಾನುವಾರದ ಹವಾಮಾನ : ಗರಿಷ್ಠ 28° ಕನಿಷ್ಠ 18°

103 ಗ್ರಾಂ ಕೊಕೇನ್, ದ್ವಿಚಕ್ರ ವಾಹನ ಜಪ್ತಿ

ಮಾದಕ ವಸ್ತು ಮಾರಾಟ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರ ರಾಜ್ಯಗಳಿಂದ ಮಾದಕ ವಸ್ತುಗಳನ್ನು ತಂದು ನಗರದ ವಿವಿಧೆಡೆ ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆಯೊಬ್ಬನನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜಾಗೊ (37) ಬಂಧಿತ ಆರೋಪಿ. ಪಶ್ಚಿಮ ಆಫ್ರಿಕಾದ ಈತನಿಂದ 103 ಗ್ರಾಂ ಕೊಕೇನ್, ದ್ವಿಚಕ್ರವಾಹನ, ಮೊಬೈಲ್ ಹಾಗೂ ಅಳತೆ ಮಾಪನವನ್ನು ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹8.24 ಲಕ್ಷ ಎಂದು ಅಂದಾಜಿಸಲಾಗಿದೆ. ಜೊತೆಗೆ ₹2,000 ನಗದನ್ನೂ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿಯು ಜಯನಗರ ಒಂದನೇ ಬ್ಲಾಕ್‌ನ ಲಾಲ್‌ಬಾಗ್ ಕಲ್ಯಾಣಿ ಬಳಿ ದ್ವಿಚಕ್ರ ವಾಹನದಲ್ಲಿ ಮಾದಕ ವಸ್ತು ತಂದು ಮಾರಾಟ ಮಾಡುತ್ತಿದ್ದ. ಈ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು. ಅದರ ಆಧಾರದಲ್ಲಿ ದಾಳಿ ನಡೆಸಿ ಆತನನ್ನು ಬಂಧಿಸಲಾಗಿದೆ. ಮಾದಕ ವಸ್ತು ಮಾರಾಟ ಸಂಬಂಧ ಈತ ಈ ಹಿಂದೆ ಹೆಣ್ಣೂರು ಹಾಗೂ ಸಂಜಯನಗರ ಠಾಣೆ ಪೊಲೀಸರಿಂದಲೂ ಬಂಧನಕ್ಕೊಳಗಾಗಿದ್ದ. ಜಾಮೀನಿನ ಮೇಲೆ ಬಿಡುಗಡೆಯಾದ ನಂತರವೂ ಡ್ರಗ್ಸ್ ಮಾರಾಟ ಜಾಲದಲ್ಲಿ ಸಕ್ರಿಯನಾಗಿದ್ದ. ಈತನ ವಿರುದ್ಧ ಎನ್‌.ಡಿ.ಪಿ.ಎಸ್. ಕಾಯ್ದೆಯ ಅಡಿ ಪ್ರಕರಣ ದಾಖಲಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

PUBLIC NOTICE

ICICI Bank
ICICI Bank Limited
Registered office: Landmark, Race Course Circle, Vadodara 390 007.
Corporate office: ICICI Bank Towers, Bandra-Kurla Complex, Mumbai 400 051.
ಚಿನ್ನ ಹರಾಜು ಕಂ ಆಹ್ವಾನ ಪ್ರಕಟಣೆ

ಈ ಕೆಳಗಿನ ಸಾಲಗಾರರಿಗೆ, ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ("ಐಸಿಐಸಿಐ ಬ್ಯಾಂಕ್") ಇವರಿಂದ ಪಡೆದಿದ್ದ ಚಿನ್ನಾಭರಣಗಳ ಮೇಲಿನ ಸಾಲ ಸೌಲಭ್ಯಕ್ಕೆ ("ಫೆಸಿಲಿಟಿ") ಸಂಬಂಧಿತ ಸಂಪೂರ್ಣ ಬಾಕಿಮೊತ್ತವನ್ನು ಮರುಪಾವತಿಸಬೇಕೆಂದು ಸೂಚನೆ ನೀಡಲಾಗಿತ್ತು. ಅದಾಗ್ಯೂ ಸಾಲಗಾರರು ವಿಫಲರಾಗಿದ್ದರಿಂದ, ಸದರಿ ಅಡಮಾನ ಚಿನ್ನಾಭರಣಗಳನ್ನು 20-01-2022ರಂದು ಹರಾಜು ಹಾಕುವುದು ಅನಿವಾರ್ಯವಾಗಿದೆ. ಯಾವುದೇ ಪೂರ್ವ ಸೂಚನೆ ನೀಡದೆಯೆ ಖಾತೆಯನ್ನು ಕೈಬಿಡುವ/ಹರಾಜು ದಿನಾಂಕ ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ. ಸದರಿ ಹರಾಜನ್ನು https://gold.samil.in ಮೂಲಕ ಆನ್‌ಲೈನ್‌ನಲ್ಲಿ 12:30 ರಿಂದ 3:30 ಗಂಟೆಯೊಳಗೆ ಕೈಗೊಳ್ಳಲಾಗುತ್ತದೆ. ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು ವೆಬ್‌ಸೈಟ್‌ಗೆ ಲಾಗಿನ್ ಮಾಡಿರಿ. ಒಂದು ವೇಳೆ ಸಾಲಗಾರರು ಮೃತರಾಗಿದ್ದಲ್ಲಿ, ಅವರ ಉತ್ತರಾಧಿಕಾರಿಗಳಿಗೆ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ, ಯಾವುದೇ ಪೂರ್ವ ಸೂಚನೆ ನೀಡದೆಯೆ ಸದರಿ ಹರಾಜು ದಿನಾಂಕವನ್ನು ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಅತ್ತಿಬೆಲೆ	
438805000237	ಹೇಮಾವತಿ. ಎ
ಶಾಖೆ ಹೆಸರು: ಬೆಂಗಳೂರು-8ನೇ ಮೈಲಿ, ಟಿ. ದಾಸರಹಳ್ಳಿ	
344005000830	ಭವಾನಿ. ಕೆ.ಆರ್
ಶಾಖೆ ಹೆಸರು: ಬೆಂಗಳೂರು-ಬಸವನಗುಡಿ	
232005001098	ಮುನಿರಾಜು. ಆರ್
ಶಾಖೆ ಹೆಸರು: ಬೆಂಗಳೂರು-ಭಟ್ಟರಹಳ್ಳಿ	
369805000897	ಮಮತ. ಬಿ
369805001205	ಪೂರ್ಣಿಮ. ಹೆಚ್
ಶಾಖೆ ಹೆಸರು: ಬೆಂಗಳೂರು-ಭರತ್‌ನಗರ	
727905000198	ಕೆ. ಗೀತಾ
ಶಾಖೆ ಹೆಸರು: ಬೆಂಗಳೂರು-ಹೆಣ್ಣೂರು ರಸ್ತೆ	
233105001252	ಎ. ಮರಿಯಾ ಅಮಾಲನ್
ಶಾಖೆ ಹೆಸರು: ಬೆಂಗಳೂರು-ಕನಕಪುರ ರಸ್ತೆ	
440505000136	ಅಲ್ಲೂರಿ ಉಷಾ ಭವಾನಿ
ಶಾಖೆ ಹೆಸರು: ಬೆಂಗಳೂರು-ಕೆಂಗೇರಿ	
233505000948	ಎಂ.ಎಸ್. ಚೇತನ್ ಕುಮಾರ್
ಶಾಖೆ ಹೆಸರು: ಬೆಂಗಳೂರು-ಮಹದೇವಪುರ	
369405000924	ಉದೇಶ. ಎಸ್. ಆರ್
ಶಾಖೆ ಹೆಸರು: ಬೆಂಗಳೂರು-ರಾಮಮೂರ್ತಿನಗರ ಮುಖ್ಯರಸ್ತೆ	
431905000550	ಉಷಾ ಅರುಂಧತಿ
431905000558	ಉಷಾ ಅರುಂಧತಿ
431905000812	ಶಿವಕುಮಾರ್. ಆರ್
431905000557	ಪಿ. ಸುರೇಶ್
ಶಾಖೆ ಹೆಸರು: ಬೆಂಗಳೂರು - ಟಿ ಸಿ ಪಾಳ್ಯ	
233005001014	ಪಿ. ಕೇಶವ ಕುಮಾರ್
233005001285	ಬಿ. ತೇಜಸ್
ಶಾಖೆ ಹೆಸರು: ಬೆಂಗಳೂರು - ಥಣಿಸಂದ್ರ	
232705000632	ಶಶಿಕಿರಣ್. ಕೆ
ಶಾಖೆ ಹೆಸರು: ಬೆಂಗಳೂರು -ವಿಲ್‌ಸನ್ ಗಾರ್ಡನ್	
343605001247	ಶರವಣ. ಎಸ್
ಶಾಖೆ ಹೆಸರು: ಬೆಂಗಳೂರು - ಅನ್ನಪೂರ್ಣೇಶ್ವರಿನಗರ್	
315705000667	ರಾಕೇಶ್. ಎ

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಬೆಂಗಳೂರು-ಬನಶಂಕರಿ	
100905001545	ಶ್ರೀನಿವಾಸ. ಎಂ.ಆರ್
ಶಾಖೆ ಹೆಸರು: ಬೆಂಗಳೂರು-ಬಂಗಾರ್‌ಪೇಟ್	
047805012425	ಉಮಾರಾಣಿ. ಎನ್
047805009320	ಅಜಾಜ್ ಪಾಷ
047805012400	ನವನೀತ ಕೃಷ್ಣ. ಕೆ
047805012424	ನವನೀತ ಕೃಷ್ಣ. ಕೆ
047805012430	ನವನೀತ ಕೃಷ್ಣ. ಕೆ
ಶಾಖೆ ಹೆಸರು: ಬೆಂಗಳೂರು-ಬಸವೇಶ್ವರನಗರ	
230105002463	ಚೇತನ್. ಎಂ.ಎಸ್
ಶಾಖೆ ಹೆಸರು: ಬೆಂಗಳೂರು-ಬಿಡದಿ ಟೌನ್	
141405003339	ಆನಂದ ನಾಯಕ
141405003456	ಕುಮಾರ್. ಹೆಚ್.ಎನ್
ಶಾಖೆ ಹೆಸರು: ಬೆಂಗಳೂರು-ಕಂಟೋನ್‌ಮೆಂಟ್	
625205021387	ಸುನೀಲ್. ಡಿ
ಶಾಖೆ ಹೆಸರು: ಬೆಂಗಳೂರು-ಕಾಕ್‌ಟೌನ್	
025205005080	ಷರ್ಫಾ ತರೆನಮ್
ಶಾಖೆ ಹೆಸರು: ಬೆಂಗಳೂರು-ಕನಿಂಗ್‌ಹ್ಯಾಮ್ ರೋಡ್	
142105001551	ನಾಗ ಸಂಕೀರ್ತ್
ಶಾಖೆ ಹೆಸರು: ಬೆಂಗಳೂರು-ಹನುಮಂತನಗರ	
232505001156	ಗೋವಿಂದರಾಜ್. ಕೆ
ಶಾಖೆ ಹೆಸರು: ಬೆಂಗಳೂರು-ಇಂದಿರಾನಗರ	
016905014031	ಪವನ್ ಕುಮಾರ್‌ಬರಳ
016905016154	ಹಾಲ ಶಿವರಂಜಿನಿ
ಶಾಖೆ ಹೆಸರು: ಬೆಂಗಳೂರು-ಜಯನಗರ 7ನೇ ಬ್ಲಾಕ್	
025105008608	ಸಾದಿಯಾ ಕೌಸರ್
ಶಾಖೆ ಹೆಸರು: ಬೆಂಗಳೂರು-ಜಯನಗರ 9ನೇ ಬ್ಲಾಕ್	
029905004006	ಸಾಯಿಕ್ ಅಹಮದ್ ನಯಾಜ್
029905004210	ಸಿ. ಕೆಂಪೇಗೌಡ
ಶಾಖೆ ಹೆಸರು: ಬೆಂಗಳೂರು-ಜೆ.ಪಿ.ನಗರ 4ನೇ ಹಂತ	
344105000485	ಅಂಬಿಕಾ ಅರ್ಜುನ್ ಹೆಬ್ಬೂರ್
ಶಾಖೆ ಹೆಸರು: ಬೆಂಗಳೂರು-ಜೆ.ಪಿ.ನಗರ	
040105005490	ಪುನೀತ್. ಎಂ.ಎಸ್

ಸಾಲದ ಖಾತೆ ಸಂ.	ಗ್ರಾಹಕರ ಹೆಸರು
ಶಾಖೆ ಹೆಸರು: ಬೆಂಗಳೂರು-ಕನ್ನಮಂಗಲ	
317005000335	ಜಿಷಾ ಜನಾರ್ಧನ್
317005000773	ರಾಜು. ಎನ್.
ಶಾಖೆ ಹೆಸರು: ಬೆಂಗಳೂರು-ಕೋರಮಂಗಲ	
004705016256	ಪ್ರಶಾಂತ್ ಬೆಡೆಕರ್
004705015862	ಸಲ್ಮಾನ್ ಅಹಮದ್ ಖಾನ್
ಶಾಖೆ ಹೆಸರು: ಬೆಂಗಳೂರು - ನ್ಯೂಬೆಲ್ ರಸ್ತೆ	
093705002792	ಮನೋಜ್ ಮೆನನ್
ಶಾಖೆ ಹೆಸರು: ಬೆಂಗಳೂರು-ಒಮ್‌ಬಾರ್ ಲೇಔಟ್	
185105001352	ಅರುಪುದ್ದೈ ನಂಬಿ.ಎಸ್
185105001791	ಎಸ್. ಸ್ವಾತಿ
185105001947	ರೇಣುಕ ರೇಣುಕ
185105001953	ವಿನೋದ್ ಕುಮಾರ್. ಎಂ
ಶಾಖೆ ಹೆಸರು: ಬೆಂಗಳೂರು-ಹಲಸೂರು	
390405000398	ಸಾಯಿನಾಥ್ ಬುರ್ಡೆ
ಶಾಖೆ ಹೆಸರು: ಬೆಂಗಳೂರು - ವಿಜಯನಗರ	
015905009770	ಗೀತಾ. ಜಿ
015905009797	ವಾಸಂತಿ ರಮೇಶ್
ಶಾಖೆ ಹೆಸರು: ಚನ್ನಪಟ್ಟಣ	
141605009937	ಆಸಿಫ್ ಅಲಿಖಾನ್
141605010303	ಕುಮಾರ
141605008401	ಸೈಯದ್ ಜುಬೇರ್
141605007756	ಅಬ್ದುಲ್ ಸಮದ್
141605008466	ಸೈಫ್ ಉಲ್ಲಾ
141605009032	ಷಾ ಅಲ್ಲ ಬಕಾಶ್
141605009100	ಷಾ ಅಲ್ಲ ಬಕಾಶ್
141605009197	ಷಾ ಅಲ್ಲ ಬಕಾಶ್
ಶಾಖೆ ಹೆಸರು: ಹೊಸಕೋಟೆ - ಕೆ.ಆರ್. ರಸ್ತೆ	
279305000148	ಬೈಜುಮಾನ್ ವಿ.ಎಸ್
279305000986	ಅಜಿತ್ ಸಿ.ಎಂ.
ಶಾಖೆ ಹೆಸರು : ಕೋಲಾರ	
185205002669	ಶೈಕ್ ಮುಜಾಹಿದ್ ಪಾಶ
ಶಾಖೆ ಹೆಸರು : ಕುಂಬಳಗೋಡು	
263705000927	ಸುರೇಶ್ ಕುಮಾವತ್
ಶಾಖೆ ಹೆಸರು : ಯಶವಂತಪುರ	
028705003736	ರವಿ ನಿಂಗೇ ಗೌಡ
028705003945	ಪುನೀತ್ ಕುಮಾರ್. ಕೆ.

ದಿನಾಂಕ: 10-01-2022
ಸ್ಥಳ: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ರಾಮನಗರ

ಸಹಿ/- ಅಧಿಕೃತ ಅಧಿಕಾರಿ
ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ಪರವಾಗಿ

ಇನ್ನೂ ಸಿಕ್ಕಿಲ್ಲ ಒಳಚರಂಡಿ, ವಿದ್ಯುತ್, ನೀರಿನ ಸಂಪರ್ಕ • ಮನೆ ಕಟ್ಟಲಾಗದೆ ನಿವೇಶನದಾರರ ಚಡಪಡಿಕೆ

ಅಡಕತ್ತರಿಯಲ್ಲಿ ಕೆಂಪೇಗೌಡ ಬಡಾವಣೆ ಸೌಕರ್ಯ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಪಡಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿ ಅನುದಾನದ ಕೊರತೆಯಿಂದಾಗಿ ಅಡಕತ್ತರಿಯಲ್ಲಿ ಸಿಲುಕಿದೆ. ತಮ್ಮ ನಿವೇಶನದಲ್ಲಿಮನೆ ಕಟ್ಟುವ ಕನಸು ಕೈಗೂಡದೇ ನಿವೇಶನದಾರರು ಚಡಪಡಿಸುತ್ತಿದ್ದಾರೆ.

ಹೆಚ್ಚುವರಿ ಕಾಮಗಾರಿ ಇಕ್ಕಟ್ಟು: ಬಿಡಿಎ ಈ ಬಡಾವಣೆಗಾಗಿ 4,043 ಎಕರೆ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ್ದರೂ 2,252 ಎಕರೆಗಳಷ್ಟು ಜಾಗಕ್ಕೆ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಗಳಿಗೆ ಮಾತ್ರ ಆರಂಭಿಕ ಹಂತದಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿತ್ತು. ಕೆಲವೆಡೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ಸದ್ಯ 2,180 ಎಕರೆದಲ್ಲಿ ಮಾತ್ರ ನಿವೇಶನಗಳನ್ನು ನಿರ್ಮಿಸಲಾಗಿದೆ. ನಿವೇಶನಗಳು ಅಲ್ಲಲ್ಲಿ ಹಂಚಿ ಹೋಗಿದ್ದು, ಅವುಗಳಿಗೆ ಮೂಲಸೌಕರ್ಯ ಕಲ್ಪಿಸುವಾಗ ಡಿಪಿಆರ್‌ನಲ್ಲಿರುವುದಕ್ಕಿಂತ ಹೆಚ್ಚುವರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ಈ ಬಡಾವಣೆಯ 10 ಬ್ಲಾಕ್‌ಗಳಿಗೆ ಕುಡಿಯುವ ನೀರು, ಒಳಚರಂಡಿ, ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳ ಗುತ್ತಿಗೆ ನೀಡಲಾಗಿದೆ. 1, 2, 3, 4 ಹಾಗೂ 5ಎ ಬ್ಲಾಕ್‌ಗಳ ಮೂಲಸೌಕರ್ಯ ಕಲ್ಪಿಸುವ ₹806 ಕೋಟಿ ವೆಚ್ಚದ ಪ್ಯಾಕೇಜ್-1ರ ಗುತ್ತಿಗೆಯನ್ನು ಎಲ್ ಆ್ಯಂಡ್ ಟಿ ಕಂಪನಿಗೆ ಹಾಗೂ 5ಬಿ, 6, 7, 8, 9ನೇ ಬ್ಲಾಕ್‌ಗಳ ಮೂಲಸೌಕರ್ಯ ಕಲ್ಪಿಸುವ ಪ್ಯಾಕೇಜ್-2ರ ₹813 ಕೋಟಿ ವೆಚ್ಚದ ಗುತ್ತಿಗೆಯನ್ನು ಎಸ್‌ಪಿಎಂಎಲ್ ಅಮೃತ್ ಕಂಪನಿಗೆ ವಹಿಸಲಾಗಿದೆ. ಪ್ಯಾಕೇಜ್-1ರಲ್ಲಿ ಮೂಲಸೌಕರ್ಯ ಕೊಳವೆಗಳ ಉದ್ದ 85 ಕಿ.ಮೀ ಎಂದು ಅಂದಾಜಿಸಲಾಗಿದೆ. ಆದರೆ, ಇಲ್ಲಿಗೆ 127 ಕಿ.ಮೀ ಉದ್ದದ ನೀರಿನ ಕೊಳವೆ ಅಳವಡಿಸಬೇಕಾಗಿದೆ. ಪ್ಯಾಕೇಜ್-2ರಲ್ಲಿ 65 ಕಿ.ಮೀ ಉದ್ದದ ಮೂಲಸೌಕರ್ಯ ಕೊಳವೆಮಾರ್ಗ ನಿರ್ಮಿಸಬೇಕಾಗುತ್ತದೆ ಎಂದು ಅಂದಾಜಿಸಲಾಗಿತ್ತು. ಆದರೆ, ಇಲ್ಲಿ 139 ಕಿ.ಮೀ ಉದ್ದದಷ್ಟು ನೀರಿನ ಕೊಳವೆ ಅಳವಡಿಸಬೇಕಿದೆ.

ಪ್ರಜಾವಾಣಿ ವಿಶೇಷ

ಹೆಚ್ಚುವರಿ ಕಾಮಗಾರಿಗಳಿಗೆ ₹ 672 ಕೋಟಿ ವೆಚ್ಚ ತಗಲುತ್ತದೆ ಎಂದು ಅಂದಾಜಿಸಲಾಗಿದೆ. ಈ ಹಣ ಬಿಡುಗಡೆಗೆ ಬಿಡಿಎ ಆಡಳಿತ ಮಂಡಳಿಯ ಸಮ್ಮತಿ ಸಿಕ್ಕಿಲ್ಲ. ಹಾಗಾಗಿ ಬಡಾವಣೆಯ ಮೂಲಸೌಕರ್ಯ ಕಾಮಗಾರಿಗಳು ಅರ್ಧಂಬರ್ಧ ಅನುಷ್ಠಾನಗೊಂಡಿವೆ. ಹೆಚ್ಚುವರಿ ಕಾಮಗಾರಿಗೆ ಅನುದಾನ ಒದಗಿಸಿದ್ದರೆ ಒಳಚರಂಡಿ. ಕುಡಿಯುವ ನೀರು ವಿದ್ಯುತ್ ಸಂಪರ್ಕ ಪೂರ್ಣವಾಗುವುದಿಲ್ಲ. ಈ ಸೌಕರ್ಯಗಳಿಲ್ಲದೇ ನಾವು ಮನೆ ನಿರ್ಮಿಸುವುದಾದರೂ ಹೇಗೆ ಎಂದು ಪ್ರಶ್ನಿಸುತ್ತಾರೆ ನಿವೇಶನದಾರರು.

'ಸಾಲ ಮಾಡಿ ನಿವೇಶನ ಖರೀದಿಸಿದವರಿಗ ಆರ್ಥಿಕವಾಗಿ ಭಾರಿ ಹೊಡೆತ ಬೀಳುತ್ತಿದೆ. ಇಲ್ಲಿ ಮನೆ ಕಟ್ಟಲು ಆಗುತ್ತಿಲ್ಲ. ಅಂತಹವರು ಬ್ಯಾಂಕ್ ಬಡ್ಡಿ ಮತ್ತು ಮನೆ ಬಾಡಿಗೆ ಎರಡನ್ನೂ ಆರೂ ವರ್ಷಗಳಿಂದ ಕಟ್ಟುತ್ತಿದ್ದಾರೆ. ನಿವೇಶನದಾರರನ್ನು ಈ ಅಡಕತ್ತರಿಯಿಂದ ಬಿಡಿಎ ಆದಷ್ಟು ಬೇಗ ಬಿಡುಗಡೆಗೊಳಿಸಬೇಕು' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನದಾರರ ಮುಕ್ತ ವೇದಿಕೆಯ ಅಧ್ಯಕ್ಷ ಎನ್.ಶ್ರೀಧರ್ ಒತ್ತಾಯಿಸಿದರು.

'ಹೆಚ್ಚುವರಿ ಕಾಮಗಾರಿಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದೇವೆ. ಇದಕ್ಕೆ ಮುಖ್ಯಮಂತ್ರಿಯವರು ಅನುಮೋದನೆಯ ಅಗತ್ಯವಿದೆ. ಅನುಮೋದನೆ ಸಿಕ್ಕ ತಕ್ಷಣವೇ ಕಾಮಗಾರಿ ನಡೆಸಲು ಸಿದ್ಧರಿದ್ದೇವೆ' ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಮೂಲಸೌಕರ್ಯವನ್ನು ತ್ವರಿತವಾಗಿ ಕಲ್ಪಿಸಿದಷ್ಟೂ ಬಿಡಿಎಗೇ ಲಾಭ. ಇಲ್ಲಿನ ಮೂಲೆನಿವೇಶನಗಳು ಪ್ರಾಧಿಕಾರಕ್ಕೆ ಹೆಚ್ಚಿನ ವರಮಾನ ತರಲಿವೆ

ಎನ್.ಶ್ರೀಧರ್, ಎನ್‌ಪಿಕೆಎಲ್ ಮುಕ್ತ ವೇದಿಕೆ ಅಧ್ಯಕ್ಷ

'ಪ್ರತಿ ವರ್ಷವೂ ಹೆಚ್ಚಲಿದೆ ₹ 225 ಕೋಟಿ ಹೊರೆ'

'ಬಾಕಿ ಕೆಲಸಗಳಿಗಾಗಿ ಬಿಡಿಎ ಇನ್ನೂ ₹1,500 ಕೋಟಿ ಖರ್ಚು ಮಾಡಬೇಕಾಗುತ್ತದೆ. ಈ ವೆಚ್ಚ ವರ್ಷಕ್ಕೆ ಸರಾಸರಿ ಶೇ 15ರಷ್ಟು ಹೆಚ್ಚಳವಾಗುತ್ತದೆ ಎಂದು ಅಂದಾಜಿಸಿದರೂ, ಬಿಡಿಎ ಪ್ರತಿವರ್ಷ ₹ 225 ಕೋಟಿಗಳಷ್ಟು ಹೆಚ್ಚುವರಿ ಹೊರೆಯನ್ನು ಹೊರಬೇಕಾಗುತ್ತದೆ' ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ನಿವೇಶನದಾರರ ಮುಕ್ತ ವೇದಿಕೆಯ ಎ.ಎಸ್.ಸೂರ್ಯಕಿರಣ್ ವಿಶ್ಲೇಷಿಸಿದರು.

'ಹೆಚ್ಚುವರಿ ಕಾಮಗಾರಿಗಳು, ವಿದ್ಯುತ್ ಉಪಕೇಂದ್ರಗಳು, ತಾತ್ಕಾಲಿಕ ವಿದ್ಯುತ್ ಸರಬರಾಜು ಕೆಲಸಗಳಿಗೆ ಹಾಗೂ ಡಾಂಬರೀಕರಣಕ್ಕೆ ಇನ್ನೂ ಅನುಮೋದನೆ ಸಿಕ್ಕಿಲ್ಲ. ಭೂಸ್ವಾಧೀನದ ತೊಡಕಿನಿಂದಾಗಿ ಯೋಜಿತ ನೀರು ಸರಬರಾಜು ಕೊಳವೆ ಮಾರ್ಗವನ್ನು ಅಳವಡಿಸಿಲ್ಲ. ಪಾವತಿ ಬಾಕಿಯಿಂದಾಗಿ ಕಾಮಗಾರಿಗಳ ಪ್ರಗತಿ ಶೂನ್ಯ ಹಂತಕ್ಕೆ ತಲುಪಿದೆ. ಕಾರ್ಮಿಕರ ಕೊರತೆಯೂ ಕಾಡುತ್ತಿದೆ. ಈ ವಿಳಂಬದಿಂದ ಆಗುತ್ತಿರುವ ನಷ್ಟ ಹಾಗೂ ವೆಚ್ಚ ಹೆಚ್ಚಳ ಬಗ್ಗೆ ಸರ್ಕಾರಕ್ಕಾಗಲೀ, ಪ್ರಾಧಿಕಾರಕ್ಕಾಗಲೀ ಚಿಂತೆಯೇ ಇಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

'ನಿವೇಶನದ ಪೂರ್ಣ ಮೌಲ್ಯವನ್ನು ಪಾವತಿಸಿಯೂ ನಾವು 6 ವರ್ಷಗಳಿಂದ ಮೂಲಸೌಕರ್ಯಕ್ಕಾಗಿ ಕಾಯುತ್ತಿದ್ದೇವೆ. ನಿವೇಶನ ಸಾಲದ ಮೇಲೆ ಬಡ್ಡಿ, ಮನೆ ಬಾಡಿಗೆ ಕಟ್ಟುತ್ತಿದ್ದೇವೆ. ಇನ್ನು ಇಲ್ಲಿ ಮನೆ ಕಟ್ಟುವಾಗ ಸಾಮಗ್ರಿಗಳ ದರ ಹೆಚ್ಚಳದ ಹೊರೆಯನ್ನು ಹೊರಬೇಕಾಗುತ್ತದೆ' ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

2025ರ ವೇಳೆಗೆ ಕ್ಷಯ ನಿರ್ಮೂಲನೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ವಲಯದ ಸಹಭಾಗಿತ್ವದಲ್ಲಿ 2025ರ ವೇಳೆಗೆ ರಾಜ್ಯದಲ್ಲಿ ಕ್ಷಯರೋಗವನ್ನು (ಟಿಬಿ) ನಿರ್ಮೂಲನೆ ಮಾಡಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

'ಸಾಂಕ್ರಾಮಿಕ ರೋಗವಾದ ಕ್ಷಯವನ್ನು ತಡೆಗಟ್ಟುವುದು ಪ್ರತಿಯೊಬ್ಬರ ಜವಾಬ್ದಾರಿ. ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿ ಈ ರೋಗ ತಡೆಗೆ ಕ್ರಮವಹಿಸಲಾಗಿದೆ. ಸಮುದಾಯದ ಹಂತದಲ್ಲಿ ಕ್ಷಯರೋಗದ ಪತ್ತೆ ಮತ್ತು ಚಿಕಿತ್ಸೆಗೆ ಖಾಸಗಿ ವಲಯವು ಇಲಾಖೆಯ ಜೊತೆಗೆ ಕೈಜೋಡಿಸಬೇಕು. ಎರಡು ವಾರಕ್ಕಿಂತ ಹೆಚ್ಚು ಅವಧಿ ಕೆಮ್ಮು, ರಾತ್ರಿ ವೇಳೆ ಜ್ವರ, ಬೆವರುವಿಕೆ, ಕಫದಲ್ಲಿ ರಕ್ತ, ತೂಕ ಇಳಿಕೆ, ಹಸಿವಾಗುವಿಕೆ ಸಮಸ್ಯೆಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಕಫ ಪರೀಕ್ಷೆ ಮಾಡಿಸಿಕೊಳ್ಳಬೇಕು' ಎಂದು ಇಲಾಖೆ ತಿಳಿಸಿದೆ.

'ಕ್ಷಯ ರೋಗಕ್ಕೆ ಪ್ರತಿದಿನ ನೀಡುವ ಔಷಧವನ್ನು ಸರ್ಕಾರದಿಂದ ಉಚಿತವಾಗಿ ನೀಡಲಾಗುತ್ತದೆ. ಈ ರೋಗಕ್ಕೆ ಕನಿಷ್ಠ 6 ತಿಂಗಳು ಚಿಕಿತ್ಸೆ ನೀಡಲಾಗುತ್ತದೆ. ನಿರಂತರ ಚಿಕಿತ್ಸೆಯಿಂದ ರೋಗವನ್ನು ಸಂಪೂರ್ಣ ಗುಣಪಡಿಸಬಹುದು. ಈ ರೋಗವು ಚಿಕಿತ್ಸೆ ಇಲ್ಲದೆಯೇ ಗುಣವಾಗುವುದಿಲ್ಲ. ರೋಗಿಯ ತೂಕಕ್ಕೆ ಅನುಸಾರ ಔಷಧಗಳನ್ನು ನೀಡಲಾಗುತ್ತದೆ' ಎಂದು ಹೇಳಿದೆ.

'ಕ್ಷಯ ರೋಗ ನಿರ್ಮೂಲನೆಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೇ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕು. ಈಗಾಗಲೇ ನಮ್ಮ ದೇಶವನ್ನು ಪೋಲಿಯೊ ಮುಕ್ತ ಮಾಡಲಾಗಿದೆ. ಪೂರಕ ಕಾರ್ಯಕ್ರಮಗಳ ಮೂಲಕ ಈ ರೋಗವನ್ನೂ ನಿವಾರಿಸಬೇಕು' ಎಂದು ತಿಳಿಸಲಾಗಿದೆ.

ಸಂಕ್ರಾಂತಿಗಾಗಿ ಆನ್‌ಲೈನ್ ಸ್ಪರ್ಧೆಗಳು

ಬೆಂಗಳೂರು: ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ರಾಜ್ಯಮಟ್ಟದ ಸಂಕ್ರಾಂತಿ ವಿಶೇಷ ಸ್ಪರ್ಧೆಗಳನ್ನು ಆನ್‌ಲೈನ್ ಮೂಲಕ ಏರ್ಪಡಿಸಿದೆ.

ಸಂಗೀತ, ನೃತ್ಯ, ಚಿತ್ರಕಲೆ, ರಂಗೋಲಿ, ಮಿಮಿಕ್ರಿ, ವೇಷಭೂಷಣ, ವಾದ್ಯಗಳನ್ನು ನುಡಿಸುವುದು ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿವೆ.

ಸ್ಪರ್ಧೆಗಳಲ್ಲಿ ಭಾಗವಹಿಸುವ ಎಲ್ಲರಿಗೂ ಬಹುಮಾನ ನೀಡಲಾಗುವುದು. ಹೆಸರು ನೋಂದಾಯಿಸಿಕೊಳ್ಳಲು ಜ.10 ಹಾಗೂ ವಿಡಿಯೊ ಕಳುಹಿಸಲು ಜ.13 ಕೊನೆಯ ದಿನ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ:9380671947

ಕೊಲೆ: 9 ಯುವಕರ ಸೆರೆ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ಮೆಹಬೂಬ್ (19) ಎಂಬ ಯುವಕನನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ 9 ಆರೋಪಿಗಳನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎನ್.ಕಿರಣ್ ಯಾನೆ ಜಾಕ್ಸನ್ (19), ಎಸ್.ಪವನ್ ಯಾನೆ ಸೊಳ್ಳೆ (19), ಎನ್.ಕಾರ್ತಿಕ್ (19), ಮಣಿಕಂಠ ಯಾನೆ ಮಣಿ (19), ಪವನ್ ಕುಮಾರ್ ಯಾನೆ ಪುಟ್ಟೇನಹಳ್ಳಿ ಪವನ (20), ಯು.ಅಭಿಷೇಕ್ ಯಾನೆ ಪೋಲಾರ್ಡ್ (19), ಬಿ.ಎಸ್. ಅನಿಲ್‌ಕುಮಾರ್ ಯಾನೆ ಅನಿ (20), ಬಿ.ಟಿ.ಮುನೇಶ್ ಕುಮಾರ್ ಯಾನೆ ಮುನೇಶ್ (19), ಟಿ.ಶಶಾಂಕ್ (18) ಬಂಧಿತರು. ಇವರಿಂದ ಕೃತ್ಯಕ್ಕೆ ಬಳಸಿದ್ದ ಲಾಂಗ್, ಡ್ರ್ಯಾಗರ್, ಹಾಕಿ ಸ್ಟಿಕ್, ಮರದ ದೊಣ್ಣೆ ಹಾಗೂ ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಪ್ರಕರಣದ ನಾಲ್ಕನೇ ಆರೋಪಿ ಕಿರಣ್ ಯಾನೆ ಬಚ್ಚನ್ ಹಾಗೂ ಐದನೇ ಆರೋಪಿ ಹರ್ಷ ಯಾನೆ ಪುಳ್ಚಾರ್ ತಲೆಮರೆಸಿಕೊಂಡಿದ್ದಾರೆ. ಮೂವರು ಬಾಲಕರನ್ನು ವಶಕ್ಕೆ ಪಡೆದು ಬಾಲ ನ್ಯಾಯ ಮಂಡಳಿ ಮುಂದೆ ಹಾಜರುಪಡಿಸಲಾಗಿದೆ' ಎಂದಿದ್ದಾರೆ.

ಆರೋಪಿಗಳಿಂದ ಜಪ್ತಿ ಮಾಡಿರುವ ಲಾಂಗ್, ಡ್ರ್ಯಾಗರ್, ಹಾಕಿ ಸ್ಟಿಕ್ ಹಾಗೂ ಮರದ ದೊಣ್ಣೆ

'ಮೊಬೈಲ್‌ನಲ್ಲಿ 'ಫ್ರೀ ಫೈರ್' ಆ್ಯಪ್‌ನ ಅಕೌಂಟ್ ಖರೀದಿಸಲು ಸಾಲವಾಗಿ ಕೊಟ್ಟಿದ್ದ ₹1,200 ಹಣ ಹಿಂತಿರುಗಿಸುವಂತೆ ಒತ್ತಾಯಿಸಿದ್ದ ವೇಳೆ ಯುವಕರ ನಡುವೆ ಇದೇ 4ರಂದು ಗಲಾಟೆ ನಡೆದಿತ್ತು. ಈ ವೇಳೆ ಮಂಜುನಾಥ್ ಹಾಗೂ ಮೆಹಬೂಬ್ ಮೇಲೆ ಆರೋಪಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಇಬ್ಬರನ್ನೂ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಮೆಹಬೂಬ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಆತ ಮೃತಪಟ್ಟಿದ್ದ' ಎಂದು ಮಾಹಿತಿ ನೀಡಿದ್ದಾರೆ.

ಯಶವಂತ ಸರದೇಶಪಾಂಡೆಗೆ ಪಿತೃವಿಯೋಗ

ಹುಬ್ಬಳ್ಳಿ: ವೃತ್ತಿರಂಗಭೂಮಿ ಶಾಲೆಯ ರಂಗನಿರ್ದೇಶಕ ಯಶವಂತ ಸರದೇಶಪಾಂಡೆ ಅವರ ತಂದೆ ಶ್ರೀಧರ ಗೋಪಾಲರಾವ್ ಸರದೇಶಪಾಂಡೆ (92) ಭಾನುವಾರ ಇಲ್ಲಿನ ತಮ್ಮ ನವನಗರದ ನಿವಾಸದಲ್ಲಿ ನಿಧನರಾದರು. ಅವರಿಗೆ ನಾಲ್ವರು ಪುತ್ರರು, ಸೊಸೆಯಂದಿರು ಮತ್ತು ಐದು ಜನ ಮೊಮ್ಮಕ್ಕಳಿದ್ದಾರೆ.

ಶ್ರೀಧರ ಸರದೇಶಪಾಂಡೆ

ಶ್ರೀಧರ ಅವರು ಮೂಲತಃ ವಿಜಯಪುರ ಹತ್ತಿರದ ಉಕ್ಕಲಿ ಗ್ರಾಮದವರು. ಮುಂಬೈ, ಹುಬ್ಬಳ್ಳಿ, ಮಂಗಳೂರು ಮತ್ತು ಕಲಬುರಗಿಯಲ್ಲಿ ಆರ್‌ಎಂಎಸ್‌ನಲ್ಲಿ ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸೂಚಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ತಿಳಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಶ್ರೀ ರೊನಾಲ್ಡ್ ಕೊಲಾಕೊ, ವಯಸ್ಸು ಸುಮಾರು 67 ವರ್ಷ ಬಿನ್ ಲೇಟ್ ಶ್ರೀ ಎಫ್.ಬಿ.ಎಲ್. ಕೊಲಾಕೊ, ಇವರ ಕಛೇರಿಯ ವಿಳಾಸ : "ಪಾಯ್ನೀರ್ ಹೌಸ್", ನಂ. 1, ಹಾಲಿವುಡ್ ಟೌನ್, ಸಾದಹಳ್ಳಿ ಅಂಚೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110 ಇವರಿಂದ (ಮಾಲೀಕರು) ಕೊಂಡುಕೊಳ್ಳಲು ಉದ್ದೇಶಿಸಿದ್ದಾರೆ.

ತಾವು ಷೆಡ್ಯೂಲ್ ಸ್ವತ್ತಿನ ಏಕೈಕ ಮಾಲೀಕರು ಮತ್ತು ಸದರಿ ಸ್ವತ್ತು ತಮ್ಮ ಸ್ವಾಧೀನಾನುಭವದಲ್ಲಿದ್ದು ಸದರಿ ಸ್ವತ್ತು ಯಾವುದೇ ರೀತಿಯ ಋಣಭಾರ, ದಾವೆಗಳು ಮತ್ತು ಯಾವುದೇ ಕಾನೂನಿನ ನಡಾವಳಿಗಳಿಗಳಿಲ್ಲದೆ ಮುಕ್ತವಾಗಿರುವುದೆಂದು ಸ್ವತ್ತಿನ ಮಾಲೀಕರು ಪ್ರತಿಪಾದಿಸಿದ್ದಾರೆ. ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ಬಗ್ಗೆ ಅಥವಾ ಅದರ ಯಾವುದೇ ಭಾಗದ ಬಗ್ಗೆ ಕ್ರಯ, ವಿನಿಮಯ, ಆಧಾರ, ಪ್ರಭಾರ, ಧರಣಾಧಿಕಾರ, ಉಡುಗೊರೆ, ದಾನ, ವಾರಸುದಾರಿಕೆ, ಉಯಿಲು, ಸವಾಧೀನತೆ, ಹಕ್ಕು ಇತ್ಯರ್ಥವಾಗದೆ ಉಳಿದಿರುವುದು, ಜೀವನಾಂಶ, ಅನುಭೋಗ, ಒಪ್ಪಂದ ಪತ್ರ, ಕರಾರು ಪತ್ರ, ಪವರ್ ಆಫ್ ಅಟಾರ್ನಿ, ಆಯ್ಕೆ ಹಕ್ಕು, ಪ್ರಥಮ ನಿರಾಕರಣೆ ಹಕ್ಕು, ಪೂರ್ವಕ್ರಯದ ಹಕ್ಕು ಅಥವಾ ಇನ್ನಿತರೆ ರೂಪದಲ್ಲಿ ಯಾವುದೇ ಹಕ್ಕು, ಹೊಂದಿದ್ದರೆ ಈ ನೋಟೀಸ್ ಪ್ರಕಟವಾದ ದಿನಾಂಕದಿಂದ ಹದಿನೈದು (15) ದಿನಗಳ ಅವಧಿಯ ಒಳಗಾಗಿ ಸಂಬಂಧಿಸಿದ ಎಲ್ಲಾ ದಾಖಲಾತಿ ಪುರಾವೆಯೊಡನೆ ಲಿಖಿತ ರೂಪದಲ್ಲಿ ಕೆಳಸಹಿದಾರರಿಗೆ ತಿಳಿಸ ತಕ್ಕದ್ದು. ಇಲ್ಲದಿದ್ದರೆ, ಷೆಡ್ಯೂಲ್ ಸ್ವತ್ತಿನ ಹಕ್ಕುಪತ್ರಗಳು ಸ್ಪಷ್ಟವಾಗಿ ರುವುದಾಗಿ ಮತ್ತು ಮಾರಾಟ ಮಾಡಬಹುದಾದ ಹಕ್ಕುಗಳನ್ನು ಮಾಲೀಕರು ಹೊಂದಿರುವುದಾಗಿ ನಮ್ಮ ಕಕ್ಷಿದಾರರು ಭಾವಿಸುವರು ಹಾಗೂ ಮಾರಾಟ ವ್ಯವಹಾರ ನಡೆಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತು

ಐಟಂ ನಂ. 1 : ಬೆಂಗಳೂರು, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಮೀಸಗಾನಹಳ್ಳಿ ಗ್ರಾಮ, ಖಾಲಿ ಭೂಮಿಯ, ಕೃಷಿಯೇತರ/ ಸಾರ್ವಜನಿಕ/ ಅರೆ ಸಾರ್ವಜನಿಕವಾಗಿ ಪರಿವರ್ತಿಸಲಾದ ಹೊಸ ಸರ್ವೇ ನಂ. 78, (ಹಳೇ ಸರ್ವೇ ನಂ. 35/4) ವಿಸ್ತೀರ್ಣ 4 ಎಕರೆ (05 ಗುಂಟಾಗಳ ಖರಾಬು ಪ್ರದೇಶ ಹಾಗೂ 3 ಎಕರೆ ಮತ್ತು 35 ಗುಂಟಾಗಳ ಬಾಕಿ ಪ್ರದೇಶವನ್ನು ಹೊಂದಿದೆ) ಇದರ ಚಕ್ಕುಬಂಧಿ ಕೆಳಕಂಡಂತಿರುವುದು :

ಪೂರ್ವಕ್ಕೆ : ಹಳೇ ಸರ್ವೇ ನಂ. 35/8; ಹೊಸ ಸರ್ವೇ ನಂ.79;
ಪಶ್ಚಿಮಕ್ಕೆ : ಹಳೇ ಸರ್ವೇ ನಂ. 35 ಪೈಕಿ ಮತ್ತು ಹೊಸ ಸರ್ವೇ ನಂ. 77;
ಉತ್ತರಕ್ಕೆ : ಸರ್ವೇ ನಂ. 84 ರ ಭಾಗ ಮತ್ತು ಭಾಗಶಃ ಸರ್ಕಾರ, ರಸ್ತೆ, ಮತ್ತು
ದಕ್ಷಿಣಕ್ಕೆ : ಬಾಗಲೂರು ಗ್ರಾಮದ ಗಡಿ.

ಐಟಂ ನಂ. 2 : ಬೆಂಗಳೂರು, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಮೀಸಗಾನಹಳ್ಳಿ ಗ್ರಾಮ, ಖಾಲಿ ಭೂಮಿಯ, ಕೃಷಿಯೇತರ/ ಸಾರ್ವಜನಿಕ/ ಅರೆ ಸಾರ್ವಜನಿಕವಾಗಿ ಪರಿವರ್ತಿಸಲಾದ ಹೊಸ ಸರ್ವೇ ನಂ. 79, (ಹಳೇ ಸರ್ವೇ ನಂ. 35/8) ವಿಸ್ತೀರ್ಣ 4 ಎಕರೆ (05 ಗುಂಟಾಗಳ ಖರಾಬು ಪ್ರದೇಶ ಹಾಗೂ 3 ಎಕರೆ ಮತ್ತು 35 ಗುಂಟಾಗಳ ಬಾಕಿ ಪ್ರದೇಶವನ್ನು ಹೊಂದಿದೆ) ಇದರ ಚಕ್ಕುಬಂಧಿ ಕೆಳಕಂಡಂತಿರುವುದು :

ಪೂರ್ವಕ್ಕೆ : ಹಳೇ ಸರ್ವೇ ನಂ. 35/7; ಹೊಸ ಸರ್ವೇ ನಂ. 80;
ಪಶ್ಚಿಮಕ್ಕೆ : ಹಳೇ ಸರ್ವೇ ನಂ. 35/4 ಮತ್ತು ಹೊಸ ಸರ್ವೇ ನಂ. 78;
ಉತ್ತರಕ್ಕೆ : ಸರ್ವೇ ನಂ. 85 ರ ಭಾಗ ಮತ್ತು ಭಾಗಶಃ ಸರ್ಕಾರ, ರಸ್ತೆ, ಮತ್ತು
ದಕ್ಷಿಣಕ್ಕೆ : ಬಾಗಲೂರು ಗ್ರಾಮದ ಗಡಿ.

ಸದಾನಂದ ಪಿ. ನಾಗನೂರ್
ಸದಾನಂದ ಅಂಡ್ ಕಂ., ಕಾನೂನು ಸಲಹೆಗಾರರು
ನಂ. 54/1, ಸೆಂಟ್ರಲ್ ಸ್ಟ್ರೀಟ್, 8ನೇ ಕ್ರಾಸ್ ಪಕ್ಕ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020,
spn@sadanandalaw.co.in Ph: 080-23449994

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸೂಚಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ತಿಳಿಸಿರುವ ಷೆಡ್ಯೂಲ್ ಸ್ವತ್ತುಗಳನ್ನು ಶ್ರೀ ರೊನಾಲ್ಡ್ ಕೊಲಾಕೊ, ವಯಸ್ಸು ಸುಮಾರು 67 ವರ್ಷ ಬಿನ್ ಲೇಟ್ ಶ್ರೀ ಎಫ್.ಬಿ.ಎಲ್. ಕೊಲಾಕೊ, ಇವರ ಕಛೇರಿಯ ವಿಳಾಸ : "ಪಾಯ್ನೀರ್ ಹೌಸ್", ನಂ. 1, ಹಾಲಿವುಡ್ ಟೌನ್, ಸಾದಹಳ್ಳಿ ಅಂಚೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110 ಇವರಿಂದ (ಮಾಲೀಕರು) ಕೊಂಡುಕೊಳ್ಳಲು ಉದ್ದೇಶಿಸಿದ್ದಾರೆ.

ತಾವು ಷೆಡ್ಯೂಲ್ ಸ್ವತ್ತಿನ ಏಕೈಕ ಮಾಲೀಕರು ಮತ್ತು ಸದರಿ ಸ್ವತ್ತು ತಮ್ಮ ಸ್ವಾಧೀನಾನುಭವದಲ್ಲಿದ್ದು ಸದರಿ ಸ್ವತ್ತು ಯಾವುದೇ ರೀತಿಯ ಋಣಭಾರ, ದಾವೆಗಳು ಮತ್ತು ಯಾವುದೇ ಕಾನೂನಿನ ನಡಾವಳಿಗಳಿಗಳಿಲ್ಲದೆ ಮುಕ್ತವಾಗಿರುವುದೆಂದು ಸ್ವತ್ತಿನ ಮಾಲೀಕರು ಪ್ರತಿಪಾದಿಸಿದ್ದಾರೆ. ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ಬಗ್ಗೆ ಅಥವಾ ಅದರ ಯಾವುದೇ ಭಾಗದ ಬಗ್ಗೆ ಕ್ರಯ, ವಿನಿಮಯ, ಆಧಾರ, ಪ್ರಭಾರ, ಧರಣಾಧಿಕಾರ, ಉಡುಗೊರೆ, ದಾನ, ವಾರಸುದಾರಿಕೆ, ಉಯಿಲು, ಸವಾಧೀನತೆ, ಹಕ್ಕು ಇತ್ಯರ್ಥವಾಗದೆ ಉಳಿದಿರುವುದು, ಜೀವನಾಂಶ, ಅನುಭೋಗ, ಒಪ್ಪಂದ ಪತ್ರ, ಕರಾರು ಪತ್ರ, ಪವರ್ ಆಫ್ ಅಟಾರ್ನಿ, ಆಯ್ಕೆ ಹಕ್ಕು, ಪ್ರಥಮ ನಿರಾಕರಣೆ ಹಕ್ಕು, ಪೂರ್ವಕ್ರಯದ ಹಕ್ಕು ಅಥವಾ ಇನ್ನಿತರೆ ರೂಪದಲ್ಲಿ ಯಾವುದೇ ಹಕ್ಕು, ಹೊಂದಿದ್ದರೆ ಈ ನೋಟೀಸ್ ಪ್ರಕಟವಾದ ದಿನಾಂಕದಿಂದ ಹದಿನೈದು (15) ದಿನಗಳ ಅವಧಿಯ ಒಳಗಾಗಿ ಸಂಬಂಧಿಸಿದ ಎಲ್ಲಾ ದಾಖಲಾತಿ ಪುರಾವೆಯೊಡನೆ ಲಿಖಿತ ರೂಪದಲ್ಲಿ ಕೆಳಸಹಿದಾರರಿಗೆ ತಿಳಿಸ ತಕ್ಕದ್ದು. ಇಲ್ಲದಿದ್ದರೆ, ಷೆಡ್ಯೂಲ್ ಸ್ವತ್ತಿನ ಹಕ್ಕುಪತ್ರಗಳು ಸ್ಪಷ್ಟವಾಗಿರುವುದಾಗಿ ಮತ್ತು ಮಾರಾಟ ಮಾಡಬಹುದಾದ ಹಕ್ಕುಗಳನ್ನು ಮಾಲೀಕರು ಹೊಂದಿರುವುದಾಗಿ ನಮ್ಮ ಕಕ್ಷಿದಾರರು ಭಾವಿಸುವರು ಹಾಗೂ ಮಾರಾಟ ವ್ಯವಹಾರ ನಡೆಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತು

ಐಟಂ ನಂ. 1 : ಬೆಂಗಳೂರು, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಮೀಸಗಾನಹಳ್ಳಿ ಗ್ರಾಮ, ಖಾಲಿ ಭೂಮಿಯ, ಕೃಷಿಯೇತರ/ ಸಾರ್ವಜನಿಕ/ ಅರೆ ಸಾರ್ವಜನಿಕವಾಗಿ ಪರಿವರ್ತಿಸಲಾದ ಸರ್ವೇ ನಂ. 35/4, ವಿಸ್ತೀರ್ಣ 4 ಎಕರೆ (05 ಗುಂಟಾಗಳ ಖರಾಬು ಪ್ರದೇಶ ಹಾಗೂ 3 ಎಕರೆ ಮತ್ತು 35 ಗುಂಟಾಗಳ ಬಾಕಿ ಪ್ರದೇಶವನ್ನು ಹೊಂದಿದೆ) ಇದರ ಚಕ್ಕುಬಂಧಿ ಕೆಳಕಂಡಂತಿರುವುದು :

ಪೂರ್ವಕ್ಕೆ : ಸರ್ವೇ ನಂ. 35/8;
ಪಶ್ಚಿಮಕ್ಕೆ : ಸರ್ವೇ ನಂ. 35 ಪೈಕಿ;
ಉತ್ತರಕ್ಕೆ : ಸರ್ವೇ ನಂ. 35 ರ ಭಾಗ ಮತ್ತು ಭಾಗಶಃ ಸರ್ಕಾರ, ರಸ್ತೆ, ಮತ್ತು
ದಕ್ಷಿಣಕ್ಕೆ : ಬಾಗಲೂರು ಗ್ರಾಮದ ಗಡಿ.

ಐಟಂ ನಂ. 2 : ಬೆಂಗಳೂರು, ಬೆಂಗಳೂರು ಉತ್ತರ ತಾಲ್ಲೂಕು, ಜಾಲ ಹೋಬಳಿ, ಮೀಸಗಾನಹಳ್ಳಿ ಗ್ರಾಮ, ಖಾಲಿ ಭೂಮಿಯ, ಕೃಷಿಯೇತರ/ ಸಾರ್ವಜನಿಕ/ಅರೆ ಸಾರ್ವಜನಿಕವಾಗಿ ಪರಿವರ್ತಿಸಲಾದ ಸರ್ವೇ ನಂ. 35/8, ವಿಸ್ತೀರ್ಣ 4 ಎಕರೆ (05 ಗುಂಟಾಗಳ ಖರಾಬು ಪ್ರದೇಶ ಹಾಗೂ 3 ಎಕರೆ ಮತ್ತು 35 ಗುಂಟಾಗಳ ಬಾಕಿ ಪ್ರದೇಶವನ್ನು ಹೊಂದಿದೆ) ಇದರ ಚಕ್ಕುಬಂಧಿ ಕೆಳಕಂಡಂತಿರುವುದು :

ಪೂರ್ವಕ್ಕೆ : ಸರ್ವೇ ನಂ. 35/7;
ಪಶ್ಚಿಮಕ್ಕೆ : ಸರ್ವೇ ನಂ. 35/4;
ಉತ್ತರಕ್ಕೆ : ಸರ್ವೇ ನಂ. 35 ರ ಭಾಗ ಮತ್ತು ಭಾಗಶಃ ಸರ್ಕಾರ, ರಸ್ತೆ, ಮತ್ತು
ದಕ್ಷಿಣಕ್ಕೆ : ಬಾಗಲೂರು ಗ್ರಾಮದ ಗಡಿ.

ಸದಾನಂದ ಪಿ. ನಾಗನೂರ್
ಸದಾನಂದ ಅಂಡ್ ಕಂ., ಕಾನೂನು ಸಲಹೆಗಾರರು
ನಂ. 54/1, ಸೆಂಟ್ರಲ್ ಸ್ಟ್ರೀಟ್, 8ನೇ ಕ್ರಾಸ್ ಪಕ್ಕ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020,
spn@sadanandalaw.co.in Ph: 080-23449994

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Announcements

'AISHWARYA GROUP' Invest 25L- 50L in Trading, Multiple Businesses. Property Security. Monthly 5% Fixed Returns. Investors Welcome. Contact:-7892818780.

ನೋಂದಣಿ ಸಂಖ್ಯೆ: ಜಿ.ಆರ್.ಬಿ/ಆರ್.ಜಿ.ಎಸ್/39/4916/83-84 ದಿನಾಂಕ:11-08-1983

ಕರ್ನಾಟಕ ದೂರಸಂಪರ್ಕ ಇಲಾಖಾ ನೌಕರರ ಸಹಕಾರ ಸಂಘ ನಿಯಮಿತ
ಅಮೀಮಾಸ್ ಕ್ಯಾಸ್ಟೆಲ್, ನಂ. 706, 1ನೇ ಮಹಡಿ, ಸಿ.ಬಿ.ಐ. ರಸ್ತೆ, ಹೆಚ್.ಎಂ.ಟಿ. ಲೇಔಟ್, ಆರ್.ಟಿ.ನಗರ ಪೋಸ್ಟ್, (ಸೆಂಟ್ ಜುಡೆ ಕ್ಯಾತಲಿಕ್ ಚರ್ಚ್ ಹತ್ತಿರ) ಬೆಂಗಳೂರು–560 032.

ಚುನಾವಣಾ ಪ್ರಕಟಣೆ

ಕರ್ನಾಟಕ ದೂರಸಂಪರ್ಕ ಇಲಾಖಾ ನೌಕರರ ಸಹಕಾರ ಸಂಘ ನಿಯಮಿತ, ಅಮೀಮಾಸ್ ಕ್ಯಾಸ್ಟೆಲ್, ನಂ. 706, 1ನೇ ಮಹಡಿ, ಸಿ.ಬಿ.ಐ. ರಸ್ತೆ, ಹೆಚ್.ಎಂ.ಟಿ. ಲೇಔಟ್, ಆರ್.ಟಿ.ನಗರ ಪೋಸ್ಟ್, (ಸೆಂಟ್ ಜುಡೆ ಕ್ಯಾತಲಿಕ್ ಚರ್ಚ್ ಹತ್ತಿರ) ಬೆಂಗಳೂರು–560 032. ಇದರ ಚುನಾವಣಾಧಿಕಾರಿಯನ್ನಾಗಿ **ಶ್ರೀ ನಂದೀಶ್ ಡಿ.ಆರ್. ಅಧೀಕ್ಷಕರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು** ಆದ ಇವರನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಚುನಾವಣಾಧಿಕಾರಿಗಳು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು–560 027 ರವರು ನೇಮಕ ಮಾಡಿದ್ದು, ಅದರಂತೆ ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ಸಂಘದ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ **ದಿನಾಂಕ: 05-01-2022ರ ಬುಧವಾರದಂದು** ಸಂಘದ ಕಛೇರಿಯಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದು, ಅದರ ರೀತ್ಯಾ **ದಿನಾಂಕ: 23-01-2022 ರ ಭಾನುವಾರ ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ಸಂಯುಕ್ತ ಗುಜರಾತಿ ಸಮಾಜ್, (ಸರ್ದಾರ್ ಪಟೇಲ್ ಭವನ) ನಂ. 16, ತಿಮ್ಮಯ್ಯ ರಸ್ತೆ, ವಸಂತನಗರ, ಕಂಟೋನ್ಮೆಂಟ್ ರೈಲ್ವೇ ಸ್ಟೇಷನ್ ಎದುರು, ಬೆಂಗಳೂರು** ರಲ್ಲಿ ಚುನಾವಣೆ ನಡೆಸಲಾಗುವುದು. ಸಂಘದ ಎಲ್ಲಾ ಅರ್ಹ ಸದಸ್ಯರಿಗೂ ಅಂಚೆ ಮೂಲಕ ವೈಯಕ್ತಿಕ ತಿಳುವಳಿಕೆ ಪತ್ರವನ್ನು ಚುನಾವಣಾ ವೇಳಾಪಟ್ಟಿಯೊಂದಿಗೆ ಕಳುಹಿಸಿಕೊಡಲಾಗಿದೆ. ತಿಳುವಳಿಕೆ ಪತ್ರ ತಲುಪದೆ ಇದ್ದ ಪಕ್ಷದಲ್ಲಿ ಇದನ್ನೆ ತಿಳುವಳಿಕೆ ಪತ್ರವೆಂದು ಪರಿಗಣಿಸಿ ಚುನಾವಣೆ ಪ್ರಕ್ರಿಯೆಯಲ್ಲಿ ಎಲ್ಲಾ ಸದಸ್ಯರು ಭಾಗವಹಿಸಬೇಕಾಗಿ ಕೋರಿದೆ. ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಂಘದ ಗುರುತಿನ ಚೀಟಿ ಕಡ್ಡಾಯವಾಗಿರುವುದರಿಂದ ಗುರುತಿನ ಚೀಟಿಯನ್ನು ತಪ್ಪದೆ ತರಬೇಕಾಗಿ ಕೋರಿದೆ.

ಸಹಿ/- (ಬಿ.ಎಸ್.ಮಂಜುನಾಥ್)
ಮುಖ್ಯಕಾರ್ಯನಿರ್ವಾಹಣಾಧಿಕಾರಿ
ಕರ್ನಾಟಕ ದೂರಸಂಪರ್ಕ ಇಲಾಖಾ ನೌಕರರ ಸಹಕಾರ ಸಂಘ ನಿಯಮಿತ, ಬೆಂಗಳೂರು
080-23658877 & 23557788

ಸ್ಥಳ: ಬೆಂಗಳೂರು
ದಿನಾಂಕ: 05-01-2022

ROUNAQH

Change of Name

I, S Sachin alias Sachin S alias Sachin Srinivasan S/o K Srinivasan, R/o: #294, Beml 2nd Stage Rajarajeshwari Nagara, Mysore- 570022, changed my name to Sachin S Shandilya for all purposes

BUSINESS

Business Offers

Finance

NRI'S INVESTMENT And Finance Available On Low Interest Against Properties, Land And Building, Sites, Flats, Converted And Agriculture Lands Call: 7411265189

Business to Business

Financial Services

'AISHWARYA GROUP' Invest 1L- 10L in Trading, Multiple Businesses. Monthly 7% Secured Fixed Returns. Investors welcome. Contact:-7892818780.

Finance

WE HAVE Good Clients/ Files for Loan Against Properties. 1Cr to 10Cr. Direct Financiers, Genuine Consultants, Freelancers, Welcome for pvt. fin/ Bank/ Co-op Banks. No Upfront. Contact:- 8867203488.

EDUCATIONAL

Admission

ONE SITTING: LL.B, B.TECH, M.TECH, DIPLOMA, MBA, MCA, M.Sc, BBA, BCA, B.Sc, B.Com, B.PHARM, GNM, MLT, PU, SSLC. Asha Institute, Bangalore. Ph: 9448460103/ 7093438248.

CONNECT ಕ್ಲಾಸಿಫೈಡ್ಸ್

Analytical /Jewellery Scale
Table Top Scale
3 Window Weighing/ Counting
41 years of Excellence 1980-2021
Crane Scale
BELL ESTD: 1980
Portable Platform Scale
Platform Scale Weighing/ Counting
Heavy Duty Weighing/ Counting Scale
...and more
BELL SCALES PVT. LTD.
An ISO 9001:2015 Company
B- 190, 5th Main, 2nd Stage, Peenya Indl. Estate, Bangalore- 560 058
Ph: 28360504, 28366468, 28362315 Mob: 9845356868, 8296873933, 8296873932
Email: bellscales@gmail.com, info@bellscales.com www. bellscales.com

JOB OPPORTUNITIES

General

OPPORTUNITY WORK from Home, Banking, Kalyani Motors, Accounts, Salary 16000/-, 24000/- SSLC, PUC, Degree. 7022920578.

WANTED PRIVATE banking jobs Male/ Female Education PUC, Degree. Salary 15000 to 32000 contact 8904879948/ 8904879491

Hospital & Medical Jobs

WANTED PHARMACIST'S to work in MSIL (JANA AOSHADI KENDRA'S) all over Karnataka With certificate of B-Pharma/ D-Pharma/ M-Pharma Contact immediately @ 9845996744 /7760137876 or mail: poojyaya2005@gmail.com

Part-Time Jobs

THOSE WHO Are Residing Malleswaram, 30 to 35k MNC Provide Work From Home: 7019215243/ 9886641282

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

DH DECCAN HERALD
BOOK YOUR CLASSIFIEDS ONLINE
ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in
condition apply*

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಅಪಾಯದ ತಿರುವು

ಬನಶಂಕರಿ 6ನೇ ಹಂತದಿಂದ ಕರಿಯನಪಾಳ್ಯಕ್ಕೆ ಹೋಗುವ ತಿರುವಿನಲ್ಲಿ ಒಳಚರಂಡಿ ಮುಚ್ಚಳ ತೆರೆದುಕೊಂಡು ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಈ ಪ್ರದೇಶದ ಪ್ರಮುಖ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ಶಾಲಾ–ಕಾಲೇಜುಗಳ ಬಸ್‌ಗಳೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತಿವೆ. ತಿರುವಿನಲ್ಲಿರುವ ಈ ಒಳಚರಂಡಿಯ ಮುಚ್ಚಳವು ಭಾರಿ ವಾಹನಗಳ ಓಡಾಟದಿಂದ ಮುರಿದು ಬಿದ್ದಿದೆ. ಇದು, ವಾಹನ ಸವಾರರ ಕಣ್ಣಿಗೆ ತಕ್ಷಣ ಕಾಣುವುದಿಲ್ಲ. ಅಪಾಯ ಸಂಭವಿಸುವ ಮುನ್ನವೇ ಸಂಬಂಧಪಟ್ಟ ಇಲಾಖೆಯು ಇದನ್ನು ತುರ್ತಾಗಿ ಸರಿಪಡಿಸಲಿ.

ಜಿ.ವಿ.ಸತೀಶ್, ಸ್ಥಳೀಯ ನಿವಾಸಿ

ಕರಿಯನಪಾಳ್ಯದ ತಿರುವಿನಲ್ಲಿ ತೆರೆದುಕೊಂಡಿರುವ ಒಳಚರಂಡಿ ಮುಚ್ಚಳ

ರಸ್ತೆಯಲ್ಲೇ ಕಸದ ರಾಶಿ: ಪ್ಲಾಸ್ಟಿಕ್ ತಿನ್ನುವ ಹಸುಗಳು

ಯಲಹಂಕದ ರೈತರ ಸಂತೆ ಬಳಿ ಅರ್ಧ ರಸ್ತೆಯನ್ನು ಕಸ ನುಂಗಿದರೆ, ಕಸದಲ್ಲಿರುವ ಪ್ಲಾಸ್ಟಿಕ್ ಅನ್ನು ಹಸುಗಳು ನುಂಗುತ್ತವೆ. ಇದು, ರೈತರ ಸಂತೆ ಸನಿಹದ ದಿನನಿತ್ಯದ ಚಿತ್ರಣ. ನಾಗರಿಕರೇ ಎಲ್ಲೆಂದರಲ್ಲಿ ಕಸ ಎಸೆಯುತ್ತಾರೆ. ಅದನ್ನು ಕಂಡೂ ಕಾಣದಂತೆ ಪಾಲಿಕೆ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಾರೆ. ಅಲ್ಲಿ ಸಂಗ್ರಹವಾಗುವ ಕಸದಲ್ಲಿ ಹಸುಗಳು ಆಹಾರ ಅರಸಿ ಬರುತ್ತವೆ. ಆದರೆ, ಅಲ್ಲಿ ಕಸದ ಜೊತೆ ಪ್ಲಾಸ್ಟಿಕ್ ಅನ್ನೂ ತಿನ್ನುತ್ತವೆ.ಮಾಲೀಕರ ಬೇಜವಾಬ್ದಾರಿಯಿಂದ ಬಿಡಾಡಿ ಹಸುಗಳ ಹೊಟ್ಟೆ ಪ್ಲಾಸ್ಟಿಕ್ ವಿಷದ ಕಣಜಗಳಾಗುತ್ತಿವೆ. ಪಕ್ಕದಲ್ಲೇ ಇರುವ ಮಾರುಕಟ್ಟೆಯ ತರಕಾರಿ ವ್ಯಾಪಾರಿಗಳು ಸ್ವಚ್ಛತೆ ಬಗ್ಗೆ ಕಾಳಜಿ ವಹಿಸುವುದು ಅಗತ್ಯ. ಅಲ್ಲಿ ಸಂಗ್ರಹವಾಗುವ ಕಸದ ಸಮರ್ಪಕ ವಿಲೇವಾರಿ ಪಾಲಿಕೆ ಹೊಣೆ. ಎಲ್ಲೆಂದರಲ್ಲಿ ಕಸ ಬಿಸಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ಅಂಬರೀಷ್, ಯಲಹಂಕ

ಯಲಹಂಕ ರೈತರ ಸಂತೆ ಬಳಿಯ ರಸ್ತೆಯಲ್ಲಿ ರಾಶಿ ಹಾಕಿರುವ ಕಸವನ್ನು ಹಸುಗಳು ತಿನ್ನುತ್ತಿರುವುದು

ಕಾನ್ಶಿರಾಮ ನಗರದಲ್ಲಿ ಪ್ರಯಾಣಿಕರಿಂದ ತುಂಬಿರುವ ಬಿಎಂಟಿಸಿ ಬಸ್

ಬಿಎಂಟಿಸಿ ಬಸ್ ಸೇವೆ ಹೆಚ್ಚಿಸಿ

ಹೆಸರಘಟ್ಟ, ಲಕ್ಷ್ಮೀಪುರ, ಕಾನ್ಶಿರಾಮ ನಗರ, ಎಂ.ಎಸ್.ಪಾಳ್ಯ ಭಾಗಗಳಲ್ಲಿನ ಪ್ರಯಾಣಿಕರಿಗೆ ಬಿಎಂಟಿಸಿ ಬಸ್‌ಗಳ ಸೇವೆ ಸಮರ್ಪಕವಾಗಿಲ್ಲ. ಈ ಮಾರ್ಗದಿಂದ ಕೆಂಪೇಗೌಡ ಬಸ್ ನಿಲ್ದಾಣ (ಮೆಜೆಸ್ಟಿಕ್) ಹಾಗೂ ಕೆ.ಆರ್.ಮಾರುಕಟ್ಟೆಗಳಿಗೂ ಸರಿಯಾದ ಪ್ರಮಾಣದಲ್ಲಿ ಬಸ್‌ಗಳ ಸಂಚಾರವಿಲ್ಲ. ಇರುವ ಬಸ್‌ಗಳಿಗೆ ತಂಗುದಾಣಗಳಲ್ಲಿ ಗಂಟೆಗಟ್ಟಲೆ ಕಾಯಬೇಕು. ಇದರಿಂದ ಕಾಲೇಜು ವಿದ್ಯಾರ್ಥಿಗಳು ಹಾಗೂ ಉದ್ಯೋಗಗಳಿಗೆ ತೆರಳುವವರಿಗೆ ಭಾರಿ ಸಮಸ್ಯೆ ಆಗುತ್ತಿದೆ.

ಬೆಳಿಗ್ಗೆ ಮತ್ತು ಸಂಜೆ ವೇಳೆ ಬಸ್‌ಗಳಲ್ಲಿ ನೂಕುನುಗ್ಗಲು ಇರುತ್ತದೆ. ಬಸ್‌ಗಳ ಕೊರತೆ ಇರುವುದರಿಂದ ಒಂದು ಬಸ್‌ನಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚಿನ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲಾಗುತ್ತದೆ. ಪ್ರಯಾಣಿಕರಿಗೆ ಈ ಸಂಕಷ್ಟದ ಪ್ರಯಾಣ ಅನಿವಾರ್ಯ. ಬಿಎಂಟಿಸಿ ಸಂಸ್ಥೆ ಈ ಮಾರ್ಗಗಳಲ್ಲಿ ಬಸ್‌ಗಳ ಸಂಖ್ಯೆ ಹೆಚ್ಚಿಸಿದರೆ, ಎಲ್ಲರೂ ಆರಾಮವಾಗಿ ಪ್ರಯಾಣಿಸಬಹುದು. ಈ ಮಾರ್ಗಕ್ಕೆ 'ವಜ್ರ' ಬಸ್‌ಗಳ ಸೇವೆಯೂ ಇಲ್ಲ. ಈ ಬಗ್ಗೆಯೂ ಗಮನಹರಿಸಿ.

ರಘು ಕೋಟ್ಯಾನ್, ಕಾನ್ಶಿರಾಮನಗರ ನಿವಾಸಿ

ಜಲಮಂಡಳಿ ಗುಂಡಿ ಮುಚ್ಚಲು ಕ್ರಮ

ಜ್ಞಾನಭಾರತಿ ವಾರ್ಡ್‌ನ ಮುತ್ತುರಾಯನಗರದಲ್ಲಿ ಜಲಮಂಡಳಿ ಕೈಗೆತ್ತಿಕೊಂಡಿದ್ದ ಕುಡಿಯುವ ನೀರಿನ ಪೈಪ್‌ಲೈನ್ ಸಂಪರ್ಕದ ಕಾಮಗಾರಿಯಿಂದ ರಸ್ತೆ ಬದಿಯಲ್ಲೇ ಬಾಯ್ತೆರೆದುಕೊಂಡಿದ್ದ ಬೃಹತ್ ಗುಂಡಿಯನ್ನು ಸಿಮೆಂಟ್ ಹಾಗೂ ಕಲ್ಲಿನಿಂದ ಮುಚ್ಚಲಾಗಿದೆ. 'ಆರು ತಿಂಗಳುಗಳ ಹಿಂದೆ ಕಾಮಗಾರಿ ಪೂರ್ಣಗೊಂಡಿತ್ತು. ಅಲ್ಲಿ ಅಗೆಯಲಾಗಿದ್ದ ದೊಡ್ಡ ಗುಂಡಿಯನ್ನು ಮುಚ್ಚದೆ ಹಾಗೆಯೇ ಬಿಡಲಾಗಿತ್ತು. ಇದರ ಪಕ್ಕದಲ್ಲೇ ರಸ್ತೆ ಇದ್ದು, ಹೆಚ್ಚು ಜನ ಈ ರಸ್ತೆಯಲ್ಲಿ ಸಂಚರಿಸುತ್ತಾರೆ. ಅಗೆದ ಮಣ್ಣನ್ನು ರಸ್ತೆಗೆ ಬರುವಂತೆ ರಾಶಿ ಹಾಕಲಾಗಿದೆ. ರಾತ್ರಿ ವೇಳೆ ವಾಹನಗಳು ಆಯತಪ್ಪಿ, ಈ ತೆರೆದ ಗುಂಡಿಗೆ ಬೀಳುವ ಅಪಾಯದ ಸ್ಥಿತಿ ಇದ್ದು, ಗುಂಡಿಯನ್ನು ಶೀಘ್ರವಾಗಿ ಮುಚ್ಚಿರಿ' ಎಂದು ಸಾರ್ವಜನಿಕರು 'ಪ್ರಜಾವಾಣಿ'ಗೆ ಸಮಸ್ಯೆಯನ್ನು ಚಿತ್ರಸಹಿತ ತಿಳಿಸಿದ್ದರು. ಈ ಕುರಿತು ಕಳೆದ ಸೋಮವಾರದ (ಜ.3) 'ಕುಂದು–ಕೊರತೆ' ಅಂಕಣದಲ್ಲಿ ವರದಿ ಪ್ರಕಟವಾಗಿತ್ತು. ನಂತರ ಎಚ್ಚೆತ್ತುಕೊಂಡ ಜಲಮಂಡಳಿಯವರು ಗುಂಡಿಯನ್ನು ಮುಚ್ಚಲು ಕ್ರಮ ಕೈಗೊಂಡಿದ್ದಾರೆ.

ವರದಿ ಪರಿಣಾಮ

ರಸ್ತೆಗೆ ಬಾಗಿದ ಮರ ತೆರವುಗೊಳಿಸಿ

ನಗರದ ಎಂ.ಸಿ.ಬಡಾವಣೆಯಲ್ಲಿನ ಗೀತಾಂಜಲಿ ಅಪಾರ್ಟ್‌ಮೆಂಟ್ ಸಮುಚ್ಚಯ ಎದುರಿನ ರಸ್ತೆಗೆ ಅಡ್ಡವಾಗಿ ಮರವೊಂದು ಹಲವಾರು ವರ್ಷಗಳಿಂದ ಬೆಳೆದುಕೊಂಡಿದೆ. ಇದು ಬಾಗಿದ ಸ್ಥಿತಿಯಲ್ಲೇ ಬೆಳೆದಿದ್ದು, ಈ ರಸ್ತೆಯಲ್ಲಿ ಬಸ್ ಹಾಗೂ ಸರಕು ಸಾಗಿಸುವ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ. ಕೆಲವು ವಾಹನಗಳು ಬಂದು ಮರಕ್ಕೆ ಸಿಲುಕಿಕೊಂಡ ಘಟನೆಗಳೂ ಸಾಕಷ್ಟಿವೆ.

ಗಾಳಿ, ಮಳೆಗೆ ಮರ ಯಾವಾಗ ಬೀಳುತ್ತದೆಯೋ ಎಂಬ ಆತಂಕದಲ್ಲೇ ಸ್ಥಳೀಯರು ನಡೆದಾಡುತ್ತಾರೆ. ಮರದಿಂದ ವಾಹನಗಳನ್ನು ನಿಲ್ಲಿಸಲು ಸ್ಥಳೀಯರು ಹಿಂದೇಟು ಹಾಕುತ್ತಾರೆ. ಈ ಬಗ್ಗೆ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಆಗಲಿಲ್ಲ. ಅನಾಹುತಗಳು ನಡೆಯುವ ಮುನ್ನ ಈ ಬಾಗಿದ ಮರವನ್ನು ಸುರಕ್ಷಿತವಾಗಿ ತೆರವುಗೊಳಿಸಿದರೆ ಅನುಕೂಲ.

ಕುಮಾರಸ್ವಾಮಿ, ವಿಜಯನಗರ

ಎಂ.ಸಿ.ಬಡಾವಣೆಯಲ್ಲಿನ ಗೀತಾಂಜಲಿ ಅಪಾರ್ಟ್‌ಮೆಂಟ್ ಸಮುಚ್ಚಯ ಎದುರಿನ ರಸ್ತೆಗೆ ಬಾಗಿರುವ ಬೃಹತ್ ಮರ

4,997 ವಿದ್ಯುತ್ ಮಾರ್ಗಗಳ ಬದಲಾವಣೆ ಕಾರ್ಯ

1,783 ಶಾಲೆಗಳು ವಿದ್ಯುತ್ ಮಾರ್ಗದ ಅಪಾಯದಿಂದ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಶಾಲಾ–ಕಾಲೇಜುಗಳ ಆವರಣದಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗಗಳ ಸ್ಥಳಾಂತರ ಕಾರ್ಯವನ್ನು ಇಂಧನ ಇಲಾಖೆ ಆರಂಭಿಸಿದ್ದು, ಈವರೆಗೆ ಒಟ್ಟು 1,783 ಶಾಲೆಗಳ ಆವರಣದಲ್ಲಿದ್ದ ಅಪಾಯಕಾರಿ ವಿದ್ಯುತ್ ಮಾರ್ಗಗಳನ್ನು ತೆರವುಗೊಳಿಸಲಾಗಿದೆ.

ಈ ಸಂಬಂಧ ಪ್ರಕಟಣೆ ಹೊರಡಿಸಿರುವ ಇಂಧನ ಸಚಿವ ವಿ.ಸುನಿಲ್ ಕುಮಾರ್, ಬಾಕಿ ಉಳಿದಿರುವ ಅಪಾಯಕಾರಿ ಮಾರ್ಗಗಳ ಬದಲಾವಣೆಯನ್ನು ಅತಿ ಶೀಘ್ರದಲ್ಲೇ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

2021 ರ ಆಗಸ್ಟ್ 15 ರಂದು ತುಮಕೂರಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ಧ್ವಜಾರೋಹಣ ನಡೆಸುವಾಗ ಶಾಲಾ ಆವರಣದಲ್ಲಿ ಹಾದು ಹೋಗಿದ್ದ ಅಪಾಯಕಾರಿ ವಿದ್ಯುತ್ ಮಾರ್ಗಕ್ಕೆ ಧ್ವಜ ಕಂಬ ತಗುಲಿ ವಿದ್ಯಾರ್ಥಿಯೊಬ್ಬರು ಮೃತಪಟ್ಟಿದ್ದರು. ಹಾಸನದಲ್ಲೂ ಇಂಥದ್ದೇ ಘಟನೆ ನಡೆದಿತ್ತು. ಈ ಬಗ್ಗೆ ರಾಜ್ಯಾದ್ಯಂತ ಕಳವಳ ವ್ಯಕ್ತವಾಗಿತ್ತು. ವಿದ್ಯುತ್ ತಂತಿಯನ್ನು ಸ್ಥಳಾಂತರ ಮಾಡುವಂತೆ ಹೈಕೋರ್ಟ್ ಕೂಡ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು.

ರಾಜ್ಯದಲ್ಲಿ ಒಟ್ಟು 6,883 ಇಂತಹ ಅಪಾಯಕಾರಿ ಮಾರ್ಗಗಳು ಶಾಲಾ–ಕಾಲೇಜು ಆವರಣದಲ್ಲಿ ಹಾದು ಹೋಗಿರುವುದನ್ನು ಗುರುತಿಸಲಾಗಿದೆ. ಆದೇಶ ನೀಡಿದ ಮೂರೇ ತಿಂಗಳಲ್ಲಿ 1,783 ಮಾರ್ಗಗಳನ್ನು ಬದಲಿಸಿ ಹೊಸ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿ: ಅತಿ ಹೆಚ್ಚು ಮಾರ್ಗ

ಬೆಸ್ಕಾಂ ವ್ಯಾಪ್ತಿಯಲ್ಲೇ ಈ ರೀತಿಯ ಅತಿ ಹೆಚ್ಚು ಮಾರ್ಗಗಳು ಇವೆ. ಒಟ್ಟು 2,299 ಸ್ಥಳ ಗುರುತಿಸಲಾಗಿದೆ. ಈ ಪೈಕಿ 157 ಕಡೆ ಹೊಸ ಮಾರ್ಗ ಅಳವಡಿಸಲಾಗಿದ್ದು, 2,147 ಮಾರ್ಗ ಬದಲಾವಣೆ ಪ್ರಗತಿಯಲ್ಲಿದೆ. ಚೆಸ್ಕಾಂ ವ್ಯಾಪ್ತಿಯ 881 ರ ಪೈಕಿ 809, ಮೆಸ್ಕಾಂನ 1,323 ರ ಪೈಕಿ 116, ಹೆಸ್ಕಾಂನ 1,721 ಪೈಕಿ 228 ಹಾಗೂ ಜೆಸ್ಕಾಂ ವ್ಯಾಪ್ತಿಯ 662 ರ ಪೈಕಿ 473 ಅಪಾಯಕಾರಿ ಮಾರ್ಗಗಳನ್ನು ಸರಿಪಡಿಸಲಾಗಿದೆ. 4,997 ಮಾರ್ಗಗಳಿಗೆ ಸದ್ಯದಲ್ಲೇ ಕಾಯಕಲ್ಪ ಸಿಗಲಿದೆ, ಇಂಧನ ಇಲಾಖೆಯ ಈ ಕ್ರಮದಿಂದ ಶಾಲಾ ಆವರಣದಲ್ಲಿ ಆತಂಕ ತಪ್ಪಿದೆ.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಾಲಮಿತಿಯಲ್ಲಿ ಕೆಲಸ ಪೂರ್ಣಗೊಳಿಸಲಾಗುತ್ತಿದೆ. ಬಾಕಿ ಇರುವ ಮಾರ್ಗ ಬದಲಾವಣೆ ಕಾರ್ಯ ಕೆಲವೇ ದಿನದಲ್ಲಿ ಮುಕ್ತಾಯಗೊಳ್ಳುತ್ತದೆ

ವಿ.ಸುನೀಲ್ ಕುಮಾರ್, ಇಂಧನ ಸಚಿವ

ಇನ್ನುಳಿದ 4,997 ಮಾರ್ಗಗಳ ಬದಲಾವಣೆ ಕಾರ್ಯ ಪ್ರಗತಿಯಲ್ಲಿದ್ದು, ಶೀಘ್ರವೇ ಪೂರ್ಣಗೊಳ್ಳಲಿದೆ. ಇದಕ್ಕಾಗಿ ₹114.50 ಕೋಟಿಯನ್ನು ಇಂಧನ ಇಲಾಖೆ ವೆಚ್ಚ ಮಾಡುತ್ತಿದೆ.

'ಭೂಮಿ ಬುಕ್ಸ್' ಪ್ರಕಾಶನದ ಕೃತಿಗಳ ಲೋಕಾರ್ಪಣೆ

'ಕ್ಷೀಣಿಸುತ್ತಿರುವ ಚಳವಳಿಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದಿನ ಸಾಮಾಜಿಕ ಮಾಧ್ಯಮಗಳ ಯುಗದಲ್ಲಿ ಪರಿಸರ ರಕ್ಷಣೆ ಸೇರಿದಂತೆ ವಿವಿಧ ನೈಜ ಸಮಸ್ಯೆಗಳ ಕುರಿತಾದ ಚಳವಳಿಗಳು ಕಡಿಮೆಯಾಗುತ್ತಿರುವುದು ದುರದೃಷ್ಟಕರ' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಹೇಳಿದರು.

ಭಾನುವಾರ ನಡೆದ ಕಾರ್ಯಕ್ರಮದಲ್ಲಿ 'ಭೂಮಿ ಬುಕ್ಸ್' ಪ್ರಕಾಶನ ಪ್ರಕಟಿಸಿರುವ ಪತ್ರಕರ್ತ ನಾಗೇಶ ಹೆಗಡೆ ಅವರ 'ನಡು ಬಾಗದ ಪತ್ರಕರ್ತನ ನಡುರಾತ್ರಿಯ ಸ್ವಗತ', ಗುರುರಾಜ್ ಎಸ್. ದಾವಣಗೆರೆ ಅವರ 'ಡೇಟಾ ದೇವರು ಬಂದಾಯ್ತು' ಮತ್ತು ಮಲ್ಲಿಕಾರ್ಜುನ ಹೊಸಪಾಳ್ಯ ಅವರ 'ಬೆಲ್ಲಂಪುಲ್ಲಕ್ಕ' ಹಳ್ಳಿಗಾಡಿನ ಸುತ್ತಾಟದ ಕಥನಗಳು' ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಯಾವುದಾದರೂ ನೈಜ ವಿಷಯವನ್ನು ಅಪ್‌ಲೋಡ್ ಮಾಡಿದರೆ ಟ್ರೋಲ್ ಮಾಡುವವರೇ ಹೆಚ್ಚು. ಇದು ಒಂದು ರೀತಿಯ ಸಾಮಾಜಿಕ ಮತ್ತು ಬಂಡವಾಳಶಾಹಿಗಳ ವ್ಯವಸ್ಥೆಯ ಸಮಸ್ಯೆಯಾಗಿದೆ' ಎಂದು ಅಭಿಪ್ರಾಯಪಟ್ಟರು.

'ಉತ್ತಮವಾಗಿರುವ ಈ ಮೂರು ಕೃತಿಗಳು ಬೇರೆ ಭಾಷೆಗಳಿಗೂ ಅನುವಾದವಾಗಬೇಕು. ಪರಿಸರ, ಕೃಷಿ, ಗ್ರಾಮೀಣ ಪ್ರದೇಶ, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಮತ್ತು ಪರಿಣಾಮಗಳ ಕುರಿತು ಈ ಕೃತಿಗಳಲ್ಲಿ ವಿಶ್ಲೇಷಿಸಲಾಗಿದೆ' ಎಂದು ಹೇಳಿದರು.

'ನದಿ ಜೋಡಣೆಗಳ ಬಗ್ಗೆ ನಾಗೇಶ ಹೆಗಡೆ ಅವರು ತಮ್ಮ ಕೃತಿಯಲ್ಲಿ ಬರೆದಿದ್ದಾರೆ. ನದಿ ಜೋಡಣೆ ಎನ್ನುವುದು ಶಾಪ. ನದಿಗಳಿಗೆ ಅಡ್ಡವಾಗಿ ದೊಡ್ಡ ಜಲಾಶಯಗಳನ್ನು ನಿರ್ಮಿಸಲಾಗುತ್ತಿದೆ. ಮಹಾರಾಷ್ಟ್ರದಲ್ಲಿ ಕೆಲ ವರ್ಷಗಳ ಹಿಂದೆ ಭೂಕಂಪವಾಯಿತು. ಕೊಯ್ನಾ ಜಲಾಶಯದಿಂದ ಅಲ್ಲಿ ಭೂಕಂಪ ಸಂಭವಿಸಿತು ಎಂದು ಹೇಳಲಾಗಿದೆ. ನದಿ ನೀರನ್ನು ಬೇರೆ ಕಡೆ ಹರಿಸಿದರೆ ಅದು ಅತಿಕ್ರಮಣವಾಗುತ್ತದೆ' ಎಂದು ವಿವರಿಸಿದರು.

'ನಡು ಬಾಗದ ಪತ್ರಕರ್ತನ ನಡುರಾತ್ರಿಯ ಸ್ವಗತ' ಕೃತಿಯನ್ನು ಡಾ.ಎಂ.ಜಿ.ಈಶ್ವರಪ್ಪ ಪರಿಚಯಿಸಿದರು. 'ಡೇಟಾ ದೇವರು ಬಂದಾಯ್ತು' ಕೃತಿಯನ್ನು ಡಾ.ಕೆ.ಎನ್. ಗಣೇಶಯ್ಯ ಮತ್ತು 'ಬೆಲ್ಲಂಪುಲ್ಲಕ್ಕ' ಹಳ್ಳಿಗಾಡಿನ ಸುತ್ತಾಟದ ಕಥನಗಳು ಕೃತಿಯನ್ನು ಡಾ. ಆರ್. ಪೂರ್ಣಿಮಾ ಅವರು ಪರಿಚಯ ಮಾಡಿಕೊಟ್ಟರು.

ಭಾರತೀಯ ವಿದ್ಯಾಭವನ ಗಾಂಧಿ ಕೇಂದ್ರದ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬುಕ್ ಬ್ರಹ್ಮದಲ್ಲಿ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಯಿತು.

ನಗರದಲ್ಲಿ ಇಂದು

ಬೂಸ್ಟರ್ ಡೋಸ್ ಲಸಿಕಾ ವಿತರಣೆ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆರೋಗ್ಯ ಸಚಿವ ಕೆ.ಸುಧಾಕರ್, ಸ್ಥಳ–ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಆವರಣ, ಶಿವಾಜಿನಗರ, ಬೆಳಿಗ್ಗೆ 10

ಬೆಂಗಳೂರು ನಗರ ಜಿಲ್ಲಾ ಕಾಲೇಜು ರಂಗೋತ್ಸವ: ಉದ್ಘಾಟನೆ–ಶಾಸಕ ಅರವಿಂದ ಲಿಂಬಾವಳಿ, ಅಧ್ಯಕ್ಷತೆ–ರಂಗಾಯಣ ನಿರ್ದೇಶಕ ಸಂದೇಶ ಜವಳಿ, ಅತಿಥಿಗಳು–ಅಜಿತ್ ಕುಮಾರ್ ರೈ, ಎಸ್.ರಂಗಪ್ಪ, ಬಿ.ವಿ.ಜಯರಾಂ, ಪಾಪಣ್ಣ, ಎಸ್‌ಎಸ್‌ಎಂಆರ್‌ವಿ ಕಾಲೇಜು ವತಿಯಿಂದ 'ರಕ್ತ ಕಣಗಿಲೆ' ನಾಟಕ ಪ್ರದರ್ಶನ, ನಿರ್ದೇಶನ–ಮಾಲತೇಶ ಬಡಿಗೇರ, ಆಯೋಜನೆ–ಶಿವಮೊಗ್ಗ ರಂಗಾಯಣ, ಸ್ಥಳ–ಜನಪದರು ರಂಗಮಂದಿರ, ನಿಂಬೆಕಾಯಿಪುರ, ಸಂಜೆ 5

ಮೂಡಲಪಾಯ ಯಕ್ಷಗಾನ ಪರಿಷತ್ತು ಉದ್ಘಾಟನೆ ಮತ್ತು ಮೂಡಲಪಾಯ ಯಕ್ಷಗಾನ ಪ್ರದರ್ಶನ: ಸಾನ್ನಿಧ್ಯ–ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ–ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಅತಿಥಿಗಳು–ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಶಾಸಕರಾದ ಕೆ.ರಮೇಶ್ ಕುಮಾರ್, ಎಂ.ಶ್ರೀನಿವಾಸ್, ಸ್ಥಳ–ಎಡಿಎ ರಂಗಮಂದಿರ, ಸಂಜೆ 5.30

ಎಸ್.ಅನಿಲ್ ಕುಮಾರ್ ಅವರ 'ದ್ರೋಣಾಚಾರ್ಯರು' ಪುಸ್ತಕ ಬಿಡುಗಡೆ: ಪಿ.ವಿ.ನಾರಾಯಣ, ಅಧ್ಯಕ್ಷತೆ–ಪಾವಗಡ ಪ್ರಕಾಶ್ ರಾವ್, ಅತಿಥಿಗಳು–ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ, ಟಿ.ಎನ್. ವಾಸುದೇವಮೂರ್ತಿ, ಸವಿತಾ ಎ.ರಾವ್, ಆಯೋಜನೆ–ಸಕಿ ಸಮೂಹ ಸಂಸ್ಥೆಗಳು, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 6

ಸಿಜಿಕೆ ರಾಷ್ಟ್ರೀಯ ರಂಗೋತ್ಸವ–'ಮತ್ತ ವಿಲಾಸ ಪ್ರಹಸನಂ' ನಾಟಕ

ಸಿಜಿಕೆ ರಾಷ್ಟ್ರೀಯ ರಂಗೋತ್ಸವ–2022: ಸಂಜೆ 6.30ಕ್ಕೆ ಉದ್ಘಾಟನೆ–ಪ್ರತಿಭಾ ಪ್ರಹ್ಲಾದ್, ಅತಿಥಿಗಳು–ಮೋಹನ್ ಕುಮಾರ್ ಕೊಂಡಜ್ಜಿ, ಎಸ್.ರಂಗಪ್ಪ, ಬನಶಂಕರಿ ಅಂಗಡಿ, ಎಚ್.ಎಲ್. ಪುಷ್ಪ, ಗೌರವ ಸಮರ್ಪಣೆ–ಶೇಖರ್, ಪೆಂಚಿಲಯ್ಯ, ಶ್ರೀನಿವಾಸ, ಸಂಜೆ 7ಕ್ಕೆ 'ಮತ್ತ ವಿಲಾಸ ಪ್ರಹಸನಂ' ನಾಟಕ ಪ್ರದರ್ಶನ, ತಂಡ–ಚೆನ್ನೈ ಕಲೈ ಕುಜು, ನಿರ್ದೇಶನ–ಪ್ರಳಯನ್, ಆಯೋಜನೆ–ರಂಗನಿರಂತರ, ಸಹಕಾರ–ಜನಪದರು ಸಾಂಸ್ಕೃತಿಕ ವೇದಿಕೆ, ಸ್ಥಳ–ಡಿ.ಕೆ.ಚೌಟ ವೇದಿಕೆ, ರವೀಂದ್ರ ಕಲಾಕ್ಷೇತ್ರ

'ಉತ್ತಮನಾಗು ಉಪಕಾರಿಯಾಗು' ಅಭಿಯಾನ 12ರಿಂದ

ಬೆಂಗಳೂರು: ಸಮರ್ಥ ಭಾರತ ಸಂಸ್ಥೆಯು ಸ್ವಾಮಿ ವಿವೇಕಾನಂದರ ಜಯಂತಿ, ರಾಷ್ಟ್ರೀಯ ಯುವ ದಿನದ ಅಂಗವಾಗಿ 'ಉತ್ತಮನಾಗು-ಉಪಕಾರಿಯಾಗು' ಅಭಿಯಾನವನ್ನು ರಾಜ್ಯದಾದ್ಯಂತ ಇದೇ 12ರಿಂದ 26ರವರೆಗೆ ಹಮ್ಮಿಕೊಂಡಿದೆ.

ಅಭಿಯಾನವು ಭೌತಿಕ ಮತ್ತು ಆನ್‌ಲೈನ್ ವೇದಿಕೆಗಳಲ್ಲಿ ನಡೆಯಲಿದೆ. ಜ.12ರಂದು ಶಾಲಾ- ಕಾಲೇಜುಗಳಲ್ಲಿ, ಸಾಮಾಜಿಕ ಸಂಸ್ಥೆಗಳಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆಯೊಂದಿಗೆ ಆರಂಭಗೊಳ್ಳಲಿದೆ. ಅಂದು ಬೆಳಿಗ್ಗೆ 7.30ಕ್ಕೆ ವಿವಿಧ ಜಿಲ್ಲೆಗಳಲ್ಲಿ ವಾಕಥಾನ್ ನಡೆಯಲಿದೆ. ಅಭಿಯಾನದ ಪ್ರತಿದಿನ ಸಂಜೆ 6 ಗಂಟೆಗೆ ಆನ್‌ಲೈನ್ ಉಪನ್ಯಾಸಗಳು ನಡೆಯಲಿವೆ. ಶಿಕ್ಷಣ ತಜ್ಞರು, ಚಿಂತಕರು, ಲೇಖಕರು, ಯುವ ಸಾಧಕರು, ಸಾಮಾಜಿಕ ಕಾರ್ಯಕರ್ತರು ಸ್ವಾಮಿ ವಿವೇಕಾನಂದರ ಜೀವನ-ವಿಚಾರಗಳ ಕುರಿತು ಉಪನ್ಯಾಸ ನೀಡಲಿದ್ದಾರೆ. ಇದನ್ನು ಸಮರ್ಥ ಭಾರತದ ಫೇಸ್‌ಬುಕ್ ಪುಟ www.facebook.com/SamarthaBharata ಮೂಲಕ ವೀಕ್ಷಿಸಬಹುದು.

ಹೆಚ್ಚಿನ ಮಾಹಿತಿಗೆ 9113263342 ಅಥವಾ www.samarthabharata.org ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಎಲೆ ಮಲ್ಲಪ್ಪಶೆಟ್ಟಿ ಕೆರೆ ಒತ್ತುವರಿ: ವರದಿ ಸಲ್ಲಿಸದ ಸಣ್ಣ ನೀರಾವರಿ ಇಲಾಖೆ

ಸರ್ಕಾರಿ ಇಲಾಖೆಗಳಿಗೆ ಎನ್‌ಜಿಟಿ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ ಸಮೀಪದ ಎಲೆ ಮಲ್ಲಪ್ಪ ಶೆಟ್ಟಿ ಕೆರೆ ಸಂರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರಿ ಇಲಾಖೆಗಳ ನಡವಳಿಕೆಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ದಕ್ಷಿಣ ವಲಯದ ಚೆನ್ನೈ ಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

'ಖಾಸಗಿ ವ್ಯಕ್ತಿಗಳು ಮತ್ತು ಸರ್ಕಾರಿ ಇಲಾಖೆಗಳು ಕೆರೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುವುದು ಜಂಟಿ ಸಮಿತಿ ವರದಿಯಿಂದ ಗೊತ್ತಾಗಿದೆ. ಕೆರೆ ನಿರ್ವಹಣೆಯ ಜವಾಬ್ದಾರಿಯನ್ನು ಸಣ್ಣ ನೀರಾವರಿ ಇಲಾಖೆ ವಹಿಸಿಕೊಂಡಿದೆ. ಹೀಗಾಗಿ ಒತ್ತುವರಿಯಾಗಿದ್ದರೆ ಅಗತ್ಯ ಕ್ರಮಗಳನ್ನು ಇಲಾಖೆಯೇ ಕೈಗೊಳ್ಳಬೇಕು' ಎಂದು ಸೂಚಿಸಿದೆ. 'ಕೆರೆ ಒತ್ತುವರಿ ತೆರವುಗೊಳಿಸಲು ಮತ್ತು ಮೂಲ ಸ್ವರೂಪದಲ್ಲೇ ಸಂರಕ್ಷಿಸುವ ಕುರಿತು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎನ್ನುವ ಬಗ್ಗೆ ಸಣ್ಣ ನೀರಾವರಿ ಇಲಾಖೆಯು ಸ್ವತಂತ್ರವಾದ ವರದಿ ಅಥವಾ ಹೇಳಿಕೆಯ ಅರ್ಜಿ ಸಲ್ಲಿಸಿಲ್ಲ' ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿದೆ.

'ಅರ್ಜಿಯನ್ನು ಯಾಕೆ ಸಲ್ಲಿಸಿಲ್ಲ ಎನ್ನುವ ಬಗ್ಗೆ ಕೇಳಿದರೆ ರಾಜ್ಯ ಸರ್ಕಾರಿ ಇಲಾಖೆ ಪರ ಹಾಜರಿದ್ದ ವಕೀಲರು, ಸಮಯಾವಕಾಶ ಕೋರಿದ್ದಾರೆ. ರಾಜ್ಯ ಸರ್ಕಾರಿ ಇಲಾಖೆಗಳ ಈ ನಡವಳಿಕೆಗಳ ಬಗ್ಗೆ ನಮಗೆ ಬೇಸರವಾಗಿದೆ. ಒತ್ತುವರಿ ವಿಷಯವನ್ನು ಈ ಇಲಾಖೆಗಳ ಗಮನಕ್ಕೆ ತಂದಿದ್ದರೂ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎನ್ನುವ ಕುರಿತು ಸಕಾಲಕ್ಕೆ ವರದಿ (ಎಟಿಆರ್) ಸಲ್ಲಿಸಿಲ್ಲ. ಪರಿಸರ ಕಾನೂನುಗಳನ್ನು ಅನುಷ್ಠಾನಗೊಳಿಸುವಲ್ಲಿ ಅಧಿಕಾರಿಗಳು ತೋರುತ್ತಿರುವ ಸೋಮಾರಿತನ ಮತ್ತು ಜಡತ್ವ ಮನಸ್ಥಿತಿಗೆ ಇದು ಸಾಕ್ಷಿಯಾಗಿದೆ' ಎಂದು ಪೀಠ ತರಾಟೆಗೆ ತೆಗೆದುಕೊಂಡಿದೆ.

'ಒತ್ತುವರಿ ವಿರುದ್ಧ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಕೆರೆಯನ್ನು ಮೂಲ ಸ್ಥಿತಿಯಲ್ಲೇ ಉಳಿಸಿಕೊಳ್ಳಲು ಯಾವ ರೀತಿಯ ಯೋಜನೆಗಳನ್ನು ರೂಪಿಸಲಾಗಿದೆ ಎನ್ನುವ ಬಗ್ಗೆ ವರದಿ ಸಲ್ಲಿಸಬೇಕು. ಜತೆಗೆ, ಕೆರೆ ಆವರಣದಲ್ಲಿರುವ ಪಂಪಿಂಗ್ ಸ್ಟೇಷನ್ ಅನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸುವ ಬಗ್ಗೆ ಪರಿಗಣಿಸಬೇಕು' ಎಂದು ಪೀಠವು ಇದೇ ಸಂದರ್ಭದಲ್ಲಿ ನಿರ್ದೇಶನ ನೀಡಿದೆ.

'ಒಂದು ವೇಳೆ ವರದಿ ಸಲ್ಲಿಸದಿದ್ದರೆ ಒತ್ತುವರಿ ತೆರವುಗೊಳಿಸಲು ಮತ್ತು ಮೂಲ ಸ್ಥಿತಿಯಲ್ಲಿ ಕೆರೆ ಉಳಿಸಿಕೊಳ್ಳುವ ಕುರಿತು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನಗಳನ್ನು ನೀಡುವುದು ಅನಿವಾರ್ಯವಾಗಲಿದೆ' ಎಂದು ಪೀಠ ಎಚ್ಚರಿಕೆ ನೀಡಿದೆ. ಈ ಪ್ರಕರಣದ ವಿಚಾರಣೆಯನ್ನು ಜ.28ಕ್ಕೆ ಮುಂದೂಡಲಾಗಿದೆ.

ಎನ್‌ಜಿಟಿ ಆದೇಶದಲ್ಲಿನ ಅಂಶಗಳು

- ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಗೆ ಅರ್ಜಿದಾರ ಜೆ. ಜಗನ್ ಕುಮಾರ್ ಆಕ್ಷೇಪ.
- ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎನ್ನುವ ವಿವರಗಳನ್ನು ಒಳಗೊಂಡ ವರದಿ ಸಲ್ಲಿಸಬೇಕು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚನೆ.
- ರಾಜ್ಯ ಇದುವರೆಗೆ ಸ್ವತಂತ್ರವಾದ ಹೇಳಿಕೆಯ ವರದಿಯನ್ನು ಸಲ್ಲಿಸಿಲ್ಲ.
- ಕೆರೆ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಸಹ ವರದಿ ಸಲ್ಲಿಸಬೇಕು.
- ಎನ್‌ಜಿಟಿಯ ಆದೇಶದ ಎಲ್ಲ ವಿವರಗಳನ್ನು ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ಮತ್ತು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಸಣ್ಣ ನೀರಾವರಿ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗೆ ಸೂಕ್ತ ಕ್ರಮಕೈಗೊಳ್ಳಲು ಸಲ್ಲಿಸುವಂತೆ ರಿಜಿಸ್ಟ್ರಾರ್ ಅವರಿಗೆ ಸೂಚನೆ.

ಎಲೆ ಮಲ್ಲಪ್ಪ ಶೆಟ್ಟಿ ಕೆರೆ

ಆರ್‌ಎಸ್‌ಎಸ್ ಕಾರ್ಯಕಾರಿಣಿ ಸದಸ್ಯ ರಾಮ್ ಮಾಧವ್

'ಜಾಗತಿಕ ನಾಯಕತ್ವಕ್ಕೆ 10 ವರ್ಷಗಳು ನಿರ್ಣಾಯಕ'

ಪ್ರಜಾವಾಣಿ ವಾರ್ತೆ

ರಾಮ್ ಮಾಧವ್

ಬೆಂಗಳೂರು: 'ಸಾಂಕ್ರಾಮಿಕ ಕಾಯಿಲೆಯಾದ ಕೋವಿಡ್ ಜಗತ್ತನ್ನು ಕಾಡುತ್ತಿರುವ ಈ ವೇಳೆ ಜಾಗತಿಕ ವ್ಯವಸ್ಥೆಯಲ್ಲಿ ಸಾಕಷ್ಟು ಮಾರ್ಪಾಡಾಗಿದೆ. ಈ ಸಂದರ್ಭದಲ್ಲಿ ಭಾರತವು ವಿದೇಶಾಂಗ ಆಲೋಚನೆಗಳನ್ನು ಬದಲಾಯಿಸಿಕೊಂಡು ಸಾಗಬೇಕು' ಎಂದು ಆರ್‌ಎಸ್‌ಎಸ್ ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ ರಾಮ್ ಮಾಧವ್ ತಿಳಿಸಿದರು.

ಸಂವಾದ ವರ್ಲ್ಡ್ ಆಯೋಜಿಸಿದ ಕಾರ್ಯಕ್ರಮದಲ್ಲಿ 'ದಿ ನ್ಯೂ ವರ್ಲ್ಡ್ ಆರ್ಡರ್' ಹಾಗೂ ಅದರ ಕನ್ನಡ ಅವತರಣಿಕೆ 'ನವ ಜಾಗತಿಕ ವ್ಯವಸ್ಥೆ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

'ದೇಶಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ಜಾಗತಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಲು ಸಾಕಷ್ಟು ಅವಕಾಶಗಳಿದ್ದವು. ಆದರೆ, ಆಯ್ದುಕೊಂಡ ಮಾರ್ಗದಲ್ಲಿ ದೋಷವಿದ್ದಿದ್ದರಿಂದ ಅವಕಾಶಗಳು ಕೈತಪ್ಪಿದವು. 1962ರ ನಂತರ ಭಾರತ ಹೊರಜಗತ್ತಿನ ಕಡೆಗೆ ಆಲೋಚಿಸುವುದನ್ನು ಬಿಟ್ಟು, ಸಂಪೂರ್ಣ ಅಂತರ್ಮುಖಿಯಾಯಿತು. ಇದರಿಂದಾಗಿ ತಲಾ ಆದಾಯ, ಯುದ್ಧೋಪಕರಣಗಳ ಖರೀದಿ, ಸಂಶೋಧನೆ, ಹೂಡಿಕೆ ಸೇರಿ ಅನೇಕ ಆರ್ಥಿಕ ವಿಚಾರದಲ್ಲಿ ಭಾರತ ಸಾಕಷ್ಟು ಹಿಂದೆ ಬೀಳಬೇಕಾಯಿತು. ಈಗ ಪರಿಸ್ಥಿತಿ ದೇಶಕ್ಕೆ ಪೂರಕವಾಗಿದ್ದು, ದೇಶವು ಜಾಗತಿಕ ನಾಯಕತ್ವ ವಹಿಸಲು ಮುಂದಿನ 10 ವರ್ಷಗಳು ನಿರ್ಣಾಯಕ' ಎಂದು ರಾಮ್ ಮಾಧವ್ ಹೇಳಿದರು.

ಮಣಿಪಾಲ್ ಅಕಾಡೆಮಿ ಹೈಯರ್ ಎಜುಕೇಷನ್‌ನ ಭೌಗೋಳಿಕ ರಾಜಕೀಯ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ವಿಭಾಗದ ನಿರ್ದೇಶಕ ಪ್ರೊ. ಮಾಧವ ದಾಸ್ ನಳಪತ್, 'ಅಂತರರಾಷ್ಟ್ರೀಯ ವಿಚಾರಗಳನ್ನು ಕೇವಲ ಐಎಎಸ್ ಅಧಿಕಾರಿಗಳಷ್ಟೇ ನಿಭಾಯಿಸಬಲ್ಲರು ಎಂಬ ಸ್ಥಿತಿಯಿದೆ. ಭಾರತದ ಇಷ್ಟು ದೊಡ್ಡ ಕ್ರಿಯಾಶೀಲ ಸಮಾಜದ ಅನುಭವವನ್ನು ವಿದೇಶಾಂಗ ವ್ಯವಸ್ಥೆಯಲ್ಲಿ ಗಣನೆಗೇ ತೆಗೆದುಕೊಳ್ಳದಿರುವುದು ಸರಿಯಲ್ಲ. ಅಂತರರಾಷ್ಟ್ರೀಯ ವಿಚಾರಗಳ ನಿರ್ವಹಣೆ ಕುರಿತು ಈ ಕೃತಿಯು ಹೊಸ ದೃಷ್ಟಿಯನ್ನು ಒದಗಿಸುತ್ತದೆ' ಎಂದರು.

ಪುದುಚೇರಿ ವಿಶ್ವವಿದ್ಯಾಲಯದ ರಾಜಕೀಯ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ನಂದಕಿಶೋರ್, 'ತನ್ನ ರಾಷ್ಟ್ರೀಯ ಹಿತಾಸಕ್ತಿಯು ಜಾಗತಿಕ ಹಿತಕ್ಕೆ ಪೂರಕವಾಗಿದೆ ಎಂದು ಭಾರತ ನಂಬಿದೆ. ತನ್ನ ನಂಬಿಕೆ ಮತ್ತು ಅವುಗಳನ್ನು ಸಾಕಾರಗೊಳಿಸುವ ಸಾಮರ್ಥ್ಯದ ಮಧ್ಯೆ ಇರುವ ಅಂತರವನ್ನು ರಾಷ್ಟ್ರವೊಂದು ಹೇಗೆ ನಿಭಾಯಿಸುತ್ತದೆ ಎಂಬ ಆಸಕ್ತಿದಾಯಕ ವಿಷಯವನ್ನು ಕೃತಿಯಲ್ಲಿ ವಿವರಿಸಲಾಗಿದೆ' ಎಂದು ಹೇಳಿದರು.

ಅಮೃತ ವಿಶ್ವ ವಿದ್ಯಾಪೀಠದಲ್ಲಿ ಬಿ.ಟೆಕ್‌ಗೆ ಪ್ರವೇಶ

ಬೆಂಗಳೂರು: ಅಮೃತ ವಿಶ್ವ ವಿದ್ಯಾಪೀಠಂನಲ್ಲಿ ವಿದ್ಯಾರ್ಥಿಗಳು ಬಿ.ಟೆಕ್ ಪದವಿ ಪ್ರವೇಶ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರ್ಥಿಗಳು ಅಮೃತ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ (ಎಇಇ) ಅಥವಾ ಇತರ ನಾಲ್ಕು ಅರ್ಹತಾ ಪ್ರವೇಶ ಪರೀಕ್ಷೆಗೆ ಹಾಜರಾಗಿರಬೇಕು. ಎಇಇ ಪರೀಕ್ಷೆಗೆ ಹಾಜರಾಗಲು 12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯ ಭೌತವಿಜ್ಞಾನ, ರಸಾಯನ ವಿಜ್ಞಾನ ಮತ್ತು ಗಣಿತದಲ್ಲಿ ತಲಾ ಶೇ 55ರಷ್ಟು ಅಂಕಗಳನ್ನು ಪಡೆದಿರಬೇಕು ಮತ್ತು ಒಟ್ಟಾರೆಯಾಗಿ ಗಣಿತ, ರಸಾಯನ ವಿಜ್ಞಾನ ಮತ್ತು ಭೌತ ವಿಜ್ಞಾನದಲ್ಲಿ ಶೇ 60 ಅಂಕಗಳಿಸಿರಬೇಕು. ಪ್ರವೇಶ ಪಡೆಯುವ ಅಭ್ಯರ್ಥಿ 2001ರ ಜುಲೈ 1 ಅಥವಾ ನಂತರ ಜನಿಸಿರಬೇಕು ಎಂದು ತಿಳಿಸಿದೆ.

ಮಾಹಿತಿಗೆ amrita.edu/btech ನೋಡಬಹುದು.

ವೈವಾಹಿಕ ಜಾಲತಾಣಗಳ ಮೂಲಕ ವಂಚನೆ: 'ಆನ್‌ಲೈನ್ ವರ' ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ವೈವಾಹಿಕ ಜಾಲತಾಣಗಳ ಮೂಲಕ ಯುವತಿಯರನ್ನು ಪರಿಚಯಿಸಿಕೊಂಡು ಮದುವೆಯಾಗುವುದಾಗಿ ನಂಬಿಸಿದ್ದ, ಹೆಸ್ಕಾಂನಲ್ಲಿ ಉದ್ಯೋಗ ಕೊಡಿಸುವುದಾಗಿ ಆನ್‌ಲೈನ್ ಮೂಲಕ ₹21.30 ಲಕ್ಷಕ್ಕೂ ಹೆಚ್ಚು ಹಣ ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದ 'ಆನ್‌ಲೈನ್ ವರ'ನನ್ನು ಆಗ್ನೇಯ ವಿಭಾಗದ ಸಿ.ಇ.ಎನ್. ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿಜಯಪುರ ಜಿಲ್ಲೆ ಹಿಟ್ಟನಹಳ್ಳಿ ಗ್ರಾಮದ ಜೈ ಭೀಮ್ ವಿಠಲ್ ಪಡುಕೋಟೆ (33) ಬಂಧಿತ. ಈತನಿಂದ ನಿಸಾನ್ ಕಂಪನಿಯ ಕಾರು, ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಹಾಗೂ ಬ್ಯಾಂಕ್ ಖಾತೆಯಲ್ಲಿದ್ದ ₹1.66 ಲಕ್ಷಕ್ಕೂ ಹೆಚ್ಚಿನ ಹಣ ಜಪ್ತಿ ಮಾಡಲಾಗಿದೆ. ಆರೋಪಿಯನ್ನು ವಿಜಯಪುರದಿಂದ ಕರೆತಂದು ಠಾಣೆಯಲ್ಲಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿಯ ತಂದೆ ಹೆಸ್ಕಾಂನಲ್ಲಿ ಕೆಲಸ ಮಾಡುತ್ತಿದ್ದರು. ಅವರು ಮೃತಪಟ್ಟ ನಂತರ ಅನುಕಂಪದ ಮೇಲೆ ಆರೋಪಿಗೆ ಲೈನ್‌ಮೆನ್ ಕೆಲಸ ಸಿಕ್ಕಿತ್ತು. ಇಲಾಖೆಯಲ್ಲಿ 8 ತಿಂಗಳು ಕೆಲಸ ಮಾಡಿದ್ದ ಆತ 2013ರಲ್ಲಿ ಮುದ್ದೇಬಿಹಾಳ ಮೂಲದ 23 ವರ್ಷದ ಸವಿತಾ ಎಂಬ ಯುವತಿಯನ್ನು ಕೊಲೆ ಮಾಡಿದ್ದ. 2 ವರ್ಷ ಜೈಲಿನಲ್ಲಿದ್ದು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ. ಹೀಗಾಗಿ ಇಲಾಖೆಯವರು ಕೆಲಸದಿಂದ ವಜಾ ಮಾಡಿದ್ದರು' ಎಂದು ತಿಳಿಸಿದ್ದಾರೆ.

ಜೈ ಭೀಮ್ ವಿಠಲ್ ಪಡುಕೋಟೆ

'ಜೈಲಿನಿಂದ ಹೊರ ಬಂದ ನಂತರ ಜೀವನೋಪಾಯಕ್ಕೆ ಯಾವುದೇ ಕೆಲಸ ಇರಲಿಲ್ಲ. ಹೀಗಾಗಿ ಜೀವನ್ ಸಾಥಿ ಡಾಟ್ ಕಾಂ, ಭಾರತ್ ಮ್ಯಾಟ್ರಿಮೋನಿ ಡಾಟ್ ಕಾಂ, ಶಾದಿ ಡಾಟ್ ಕಾಂ, ಕಮ್ಯೂನಿಟಿ ಮ್ಯಾಟ್ರಿಮೋನಿ ಡಾಟ್ ಕಾಂ, ಕನ್ನಡ ಮ್ಯಾಟ್ರಿಮೋನಿ ಡಾಟ್ ಕಾಂ ಜಾಲತಾಣಗಳಲ್ಲಿ ನಕಲಿ ಪ್ರೊಫೈಲ್ ಸೃಷ್ಟಿಸಿದ್ದ. ತಾನು ಹುಬ್ಬಳ್ಳಿಯ ಹೆಸ್ಕಾಂನಲ್ಲಿ ಸೆಕ್ಷನ್ ಅಧಿಕಾರಿಯಾಗಿರುವುದಾಗಿ ಉಲ್ಲೇಖಿಸಿದ್ದ. ಈ ಜಾಲತಾಣಗಳಲ್ಲಿ ಖಾತೆ ತೆರೆದಿದ್ದ ಶಿವಮೊಗ್ಗ, ಹಾವೇರಿ, ಮೈಸೂರು, ಬೆಂಗಳೂರು, ಧಾರವಾಡ, ಹುಬ್ಬಳ್ಳಿ, ಯಾದಗಿರಿ, ರಾಯಚೂರು ಮೂಲದ ಒಟ್ಟು 26 ಯುವತಿಯರನ್ನು ಸಂಪರ್ಕಿಸಿದ್ದ ಈತ ಮದುವೆಯಾಗುವುದಾಗಿ ಎಲ್ಲರನ್ನೂ ನಂಬಿಸಿದ್ದ. ಯುವತಿಯರ ಕುಟುಂಬದ ಹಿನ್ನೆಲೆಯ ಬಗ್ಗೆ ತಿಳಿದುಕೊಳ್ಳುತ್ತಿದ್ದ ಆರೋಪಿ, ಹೆಸ್ಕಾಂನಲ್ಲಿ ಕೆಲಸ ಕೊಡಿಸುವ ಆಮಿಷ ಒಡ್ಡುತ್ತಿದ್ದ. ಆನ್‌ಲೈನ್ ಮೂಲಕ ತನ್ನ ಖಾತೆಗೆ ಹಣವನ್ನೂ ವರ್ಗಾವಣೆ ಮಾಡಿಕೊಂಡಿದ್ದ' ಎಂದು ವಿವರಿಸಿದ್ದಾರೆ.

'ಯುವತಿಯರಿಂದ ಪಡೆದ ಹಣದಿಂದ ಆರೋಪಿಯು ಪ್ರಮುಖ ನಗರಗಳಿಗೆ ಪ್ರವಾಸ ಕೈಗೊಂಡು ಮೋಜು ಮಸ್ತಿ ಮಾಡುತ್ತಿದ್ದ' ಎಂದೂ ಮಾಹಿತಿ ನೀಡಿದ್ದಾರೆ.

ಸೋಂಕಿನಿಂದ ಸಾಯುವವರ ಪ್ರಮಾಣ ಶೇ 0.05ಕ್ಕೆ ಇಳಿಕೆ • ಶೇ 10ರ ಗಡಿ ದಾಟಿದ ಸೋಂಕು ಪತ್ತೆ ದರ

ಕೋವಿಡ್: ಹತ್ತೇ ದಿನಗಳಲ್ಲಿ ಹತ್ತು ಪಟ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹತ್ತೇ ದಿನಗಳಲ್ಲಿ ಕೋವಿಡ್ ಸೋಂಕು ಹರಡುವಿಕೆ ಪ್ರಮಾಣ ಹತ್ತು ಪಟ್ಟು ಹೆಚ್ಚಳ ಕಂಡಿದೆ. ಬಿಬಿಎಂಪಿಯು ಕೋವಿಡ್ ವಾರ್ ರೂಂ ಬಿಡುಗಡೆ ಮಾಡಿರುವ ಅಂಕಿ ಅಂಶಗಳ ಪ್ರಕಾರ ಭಾನುವಾರ ಒಂದೇ ದಿನ 9,020 ಮಂದಿಯಲ್ಲಿ ಕೋವಿಡ್ ದೃಢಪಟ್ಟಿದ್ದು, ಸೋಂಕು ಪತ್ತೆ ದರ ಶೇ 10.61ಕ್ಕೆ ಹೆಚ್ಚಳವಾಗಿದೆ.

ಆದರೆ, ಈ ಸೋಂಕಿನಿಂದ ಸತ್ತವರ ಪ್ರಮಾಣ 2021ರ ಕೊನೆಯ ವಾರದ ಸರಾಸರಿಗೆ (ಶೇ 77) ಹೋಲಿಸಿದರೆ ಈಗ ಶೇ 0.05ಕ್ಕೆ ಇಳಿಕೆ ಕಂಡಿದೆ. 2021ರ ಡಿ. 31ರಂದು 810 ಕೋವಿಡ್ ಪ್ರಕರಣಗಳು ದಾಖಲಾಗಿದ್ದವು. ಆಗ ನಗರದಲ್ಲಿ ಸೋಂಕು ಪತ್ತೆ ದರದ ವಾರದ ಸರಾಸರಿ 0.88 ಮಾತ್ರ ಇತ್ತು. ಈಗ ಈ ಸರಾಸರಿಯು ಶೇ 6.41ರಷ್ಟಿದೆ.

ನಗರದ ಮಹದೇವಪುರ ವಲಯದ ಬೆಳ್ಳಂದೂರು ವಾರ್ಡ್, ಹಗದೂರು ವಾರ್ಡ್ ಬೊಮ್ಮನಹಳ್ಳಿ ವಲಯದ ಬೇಗೂರು ವಾರ್ಡ್‌ಗಳಲ್ಲಿ ನಿತ್ಯ ಸರಾಸರಿ 100ಕ್ಕೂ ಅಧಿಕ ಕೊರೊನಾ ಸೋಂಕು ಪ್ರಕರಣಗಳು ಪತ್ತೆಯಾಗುತ್ತಿವೆ. ಹೊಸ ತಿಪ್ಪಸಂದ್ರ, ದೊಡ್ಡನೆಕ್ಕುಂದಿ, ಹಗದೂರು, ವರ್ತೂರು, ಎಚ್ಎಸ್ಆರ್ ಬಡಾವಣೆ, ಬೆಳ್ಳಂದೂರು, ಬೇಗೂರು ವಾರ್ಡ್‌ಗಳಲ್ಲಿ 500ಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ. ನಗರದಲ್ಲಿ ಕಂಟೈನ್‌ಮೆಂಟ್ ವಲಯಗಳ ಸಂಖ್ಯೆಯನ್ನು 382ಕ್ಕೆ ಹೆಚ್ಚಿಸಲಾಗಿದೆ.

ಅಂತರರಾಷ್ಟ್ರೀಯ ಪ್ರಯಾಣಕ್ಕೆ ನಿಯಂತ್ರಣ ಕ್ರಮಗಳನ್ನು ಬಿಗುಗೊಳಿಸಿದ ಬಳಿಕ ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ನಗರಕ್ಕೆ ಬರುವ ಅಂತರರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಕಡಿಮೆ ಆಗಿದೆ. ಆದರೆ, ಅವರಲ್ಲಿ ಸೋಂಕು ಪತ್ತೆ ಪ್ರಮಾಣ ಹೆಚ್ಚಳವಾಗಿದೆ. ವಾರದ ಹಿಂದೆ ಸಾವಿರಕ್ಕೂ ಅಧಿಕ ಪ್ರಯಾಣಿಕರು ನಗರಕ್ಕೆ ಬಂದಾಗಲೂ ಅವರಲ್ಲಿ 10ರಿಂದ 15 ಮಂದಿಗಷ್ಟೇ ಕೋವಿಡ್ ಸೋಂಕು ದೃಢಪಟ್ಟಿತ್ತು. ಜ. 4ರಂದು 995 ಮಂದಿ ಅಂತರರಾಷ್ಟ್ರೀಯ ಪ್ರಯಾಣಿಕರು ನಗರಕ್ಕೆ ಬಂದಿದ್ದು, ಅವರಲ್ಲಿ 10 ಮಂದಿಗೆ ಸೋಂಕು ಇತ್ತು. ಜ. 5ರಂದು ಬಂದಿದ್ದ 1,222 ಅಂತರರಾಷ್ಟ್ರೀಯ ಪ್ರಯಾಣಿಕರಲ್ಲಿ 14 ಮಂದಿ ಸೋಂಕು ಹೊಂದಿರುವುದು ದೃಢಪಟ್ಟಿತ್ತು. ಶನಿವಾರ 94 ಪ್ರಯಾಣಿಕರಷ್ಟೇ ಬಂದಿದ್ದರು. ಅವರಲ್ಲಿ ಐವರು ಸೋಂಕು ಹೊಂದಿರುವುದು ಪತ್ತೆಯಾಗಿತ್ತು. ಶುಕ್ರವಾರ 353 ಮಂದಿ ವಿಮಾನನಿಲ್ದಾಣದಲ್ಲಿ ಬಂದಿಳಿದಿದ್ದು, ಅವರಲ್ಲಿ ಏಳು ಮಂದಿ ಸೋಂಕು ಹೊಂದಿದ್ದರು.

ವೈದ್ಯಕೀಯ ಮೂಲಸೌಕರ್ಯ ಹೆಚ್ಚಳಕ್ಕೆ ಪ್ರಧಾನಿ ಮೋದಿ ಕರೆ

ನವದೆಹಲಿ (ಪಿಟಿಐ): ದೇಶದಲ್ಲಿ ಹೆಚ್ಚಳವಾಗುತ್ತಿರುವ ಕೋವಿಡ್ ಪ್ರಕರಣಗಳ ಪರಿಣಾಮಕಾರಿ ನಿರ್ವಹಣೆಗಾಗಿ ಜಿಲ್ಲಾ ಮಟ್ಟದಲ್ಲಿ ವೈದ್ಯಕೀಯ ಮೂಲಸೌಕರ್ಯವನ್ನು ಹೆಚ್ಚಿಸಲು ಪ್ರಧಾನಿ ನರೇಂದ್ರ ಮೋದಿ ರಾಜ್ಯಗಳಿಗೆ ಕರೆ ನೀಡಿದ್ದಾರೆ. ಜತೆಗೆ 15–18 ವರ್ಷದ ಮಕ್ಕಳಿಗೆ ಲಸಿಕೆ ನೀಡುವ ಅಭಿಯಾನವನ್ನು ಯುದ್ಧೋಪಾದಿಯಲ್ಲಿ ನಡೆಸಲು ಅವರು ಸೂಚಿಸಿದ್ದಾರೆ.

ದೇಶದಲ್ಲಿ ಕೋವಿಡ್ ಸ್ಥಿತಿ ಕುರಿತು ರಾಜ್ಯಗಳ ಮುಖ್ಯಮಂತ್ರಿಗಳ ಜತೆ ನಡೆದ ಸಭೆಯಲ್ಲಿ ಪ್ರಧಾನಿ ಈ ಮಾತು ಹೇಳಿದ್ದಾರೆ ಎಂದು ಪ್ರಧಾನಿ ಕಾರ್ಯಾಲಯದ ಪ್ರಕಟಣೆ ಹೇಳಿದೆ.

ಕೊರೊನಾ ವೈರಾಣುವಿನ ರೂಪಾಂತರ ತಳಿಗಳ ಬಗ್ಗೆ ಸಂಶೋಧನೆಗಳು ಮುಂದುವರಿಯಬೇಕು. ಲಸಿಕೆ ಅಭಿವೃದ್ಧಿಗೆ ಒತ್ತು ನೀಡಬೇಕು. ವೈರಾಣು ಸಂರಚನೆ ವಿಶ್ಲೇಷಣೆಗೆ ಆದ್ಯತೆ ನೀಡಬೇಕು. ಕೋವಿಡ್ ಹರಡುವುದನ್ನು ತಡೆಯಲು ಎಲ್ಲರೂ ತಪ್ಪದೇ ಮಾಸ್ಕ್ ಧರಿಸಬೇಕು ಎಂದು ಮೋದಿ ಕರೆ ನೀಡಿದ್ದಾರೆ ಎಂದು ಪ್ರಕಟಣೆ ಹೇಳಿದೆ.

ಅತಿ ಹೆಚ್ಚು ಕೋವಿಡ್ ಪ್ರಕರಣಗಳು ಪತ್ತೆಯಾದ ವಾರ್ಡ್‌ಗಳು (7 ದಿನಗಳಲ್ಲಿ)

ವಾರ್ಡ್	ದೈನಂದಿನ ಸರಾಸರಿ
ಬೆಳ್ಳಂದೂರು	228
ಬೇಗೂರು	116
ಹಗದೂರು	114
ದೊಡ್ಡನೆಕ್ಕುಂದಿ	91
ವರ್ತೂರು	84
ಎಚ್ಎಸ್ಆರ್ ಬಡಾವಣೆ	82
ಹೊಸ ತಿಪ್ಪಸಂದ್ರ	80
ಕೋರಮಂಗಲ	66
ಆರ್.ಆರ್.ನಗರ	64



ಸುದ್ದಿ 2 ನಿಮಿಷ

ಜ.12ರಿಂದ ಹಾಲುಮತ ಸಂಸ್ಕೃತಿ ವೈಭವ ಪ್ರಾರಂಭ: ಸಿದ್ಧತೆ

ಜಾಲಹಳ್ಳಿ (ರಾಯಚೂರು ಜಿಲ್ಲೆ): 'ತಿಂಥಣಿ ಬ್ರಿಡ್ಜ್‌ನಲ್ಲಿರುವ ಕಲಬುರಗಿ ವಿಭಾಗದ ಕನಕ ಗುರುಪೀಠ–ಹಾಲುಮತ ಕೇಂದ್ರದಲ್ಲಿ ಜನವರಿ 12 ರಿಂದ 14ರವರೆಗೆ ಕೋವಿಡ್ ನಿಯಮಾವಳಿ ಪಾಲನೆಯೊಂದಿಗೆ ಹಾಲುಮತ ಸಂಸ್ಕೃತಿ ವೈಭವ ಸರಳವಾಗಿ ನಡೆಯಲಿದೆ' ಎಂದು ಕನಕಗುರು ಪೀಠದ ಸಿದ್ದರಾಮಾನಂದಪುರಿ ಸ್ವಾಮಿ ಹೇಳಿದರು.

'ಜನವರಿ 12ರಂದು ಬೆಳಿಗ್ಗೆ 8 ಗಂಟೆಗೆ ಭಕ್ತರು ಬೀರದೇವರ ಹೊಳೆ ಪೂಜೆ ಪಲ್ಲಕ್ಕಿ ಮೆರವಣಿಗೆ ನಡೆಸುವರು. ಮಹಾದ್ವಾರ ಉದ್ಘಾಟನೆ, ಮಠದ ಆವರಣದಲ್ಲಿ ಕನಕದಾಸ, ವಾಲ್ಮೀಕಿ, ಡಾ.ಬಿ. ಆರ್. ಅಂಬೇಡ್ಕರ್, ಗಾಂಧೀಜಿ, ವಿವೇಕಾನಂದರ ಮೂರ್ತಿ ಅನಾವರಣ ಮಾಡಲಾಗುವುದು' ಎಂದು ಅವರು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಉದ್ಘಾಟನಾ ದಿನದಂದೇ ರಾಜ್ಯ ಕುರಿ ಮತ್ತು ಉಣ್ಣೆ ನೇಕಾರರ ಸಮಾವೇಶ ನಡೆಯಲಿದ್ದು, ಸಂಜೆ 4ಕ್ಕೆ ಟಗರುಗಳ ಕಾಳಗ ನಡೆಯಲಿದೆ. ಜನವರಿ 13ರಂದು ಸಾಧಕರಿಗೆ ಪ್ರಶಸ್ತಿ ಪ್ರದಾನ ಹಾಗೂ ಕರ್ನಾಟಕ ಆದಿವಾಸಿ ಗೊಂಡ್ ಸಂಘ ಉದ್ಘಾಟನೆ ಸಮಾರಂಭ ಜರುಗಲಿದೆ.

ಸೈಪ್ರಸ್: ಹೊಸ ತಳಿ 'ಡೆಲ್ಟಾಕ್ರಾನ್' ಪ್ರಕರಣಗಳು ಪತ್ತೆ

ನಿಕೊಸಿಯಾ, ಸೈಪ್ರಸ್: ಕೊರೊನಾ ವೈರಸ್‌ನ ರೂಪಾಂತರ ತಳಿಗಳಾದ ಡೆಲ್ಟಾ ಹಾಗೂ ಓಮೈಕ್ರಾನ್ ಸಂಯೋಜನೆಯ ಹೊಸ ತಳಿಯ ಸೋಂಕಿನ ಪ್ರಕರಣಗಳು ಸೈಪ್ರಸ್‌ನಲ್ಲಿ ವರದಿಯಾಗಿವೆ. ವಿಜ್ಞಾನಿಗಳು ವೈರಸ್‌ನ ಈ ತಳಿಗೆ 'ಡೆಲ್ಟಾಕ್ರಾನ್' ಎಂದು ಕರೆದಿದ್ದಾರೆ.

'ಡೆಲ್ಟಾಕ್ರಾನ್ ತಳಿ ಸೋಂಕಿನ 25 ಪ್ರಕರಣಗಳು ಪತ್ತೆಯಾಗಿವೆ. ರೋಗಿಗಳಲ್ಲಿ ಡೆಲ್ಟಾ ಹಾಗೂ ಓಮೈಕ್ರಾನ್ ಸಂಯೋಜಿತ ತಳಿಯ ಸೋಂಕು ಇರುವುದು ಜಿನೋಮ್ ಸಿಕ್ವೆನ್ಸಿಂಗ್ ಪರೀಕ್ಷೆಯಿಂದ ಕಂಡುಬಂದಿದೆ' ಎಂದು ಸೈಪ್ರಸ್ ವಿಶ್ವವಿದ್ಯಾಲಯದ ಜೀವವಿಜ್ಞಾನ ವಿಭಾಗದ ಪ್ರಾಧ್ಯಾಪಕ ಲಿಯೋನ್‌ಡಿಯಾಸ್ ಕೋಸ್ಟ್ರಿಕಿಸ್ ತಿಳಿಸಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ಕೊರೊನಾ ವೈರಸ್‌ನ ರೂಪಾಂತರ ಪ್ರಕ್ರಿಯೆಯ ಮಾಹಿತಿ ದಾಖಲಿಸುವ ಅಂತರರಾಷ್ಟ್ರೀಯ ಸಂಸ್ಥೆಯಾದ 'ಜಿಐಎಸ್ಎಐಡಿ'ಗೆ, ಡೆಲ್ಟಾಕ್ರಾನ್ ತಳಿ ಸೋಂಕಿತರ ಜಿನೋಮ್ ಸಿಕ್ವೆನ್ಸಿಂಗ್ ಪರೀಕ್ಷೆ ವರದಿ ಕಳುಹಿಸಲಾಗಿದೆ. ಈ ತಳಿ ಹೆಚ್ಚು ರೋಗಕಾರಕವೇ, ವೇಗವಾಗಿ ಪ್ರಸರಣ ಆಗುತ್ತದೆಯೇ ಎಂಬುದರ ಕುರಿತು ಹೆಚ್ಚಿನ ಅಧ್ಯಯನದ ಅಗತ್ಯ ಇದೆ' ಎಂದೂ ಹೇಳಿದ್ದಾರೆ.

ಪ್ರಮುಖ ರಸ್ತೆ, ಮುಖ್ಯ ವೃತ್ತಗಳಿಗಷ್ಟೇ ಸೀಮಿತವಾದ ತಪಾಸಣೆ: ನೆಪ ಹೇಳಿಕೊಂಡು ಓಡಾಡಿದ ಜನ

ವಾರಾಂತ್ಯ ಕರ್ಫ್ಯೂ ಇದ್ದರೂ ರಸ್ತೆಗಿಳಿದ ವಾಹನಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾರಾಂತ್ಯ ಕರ್ಫ್ಯೂ ಜಾರಿ ಇದ್ದರೂ ಕೂಡ ರಸ್ತೆಗಳಲ್ಲಿ ವಾಹನಗಳು ಓಡಾಡುತ್ತಿದ್ದ ದೃಶ್ಯ ಭಾನುವಾರ ನಗರದ ಬಹುತೇಕ ಭಾಗಗಳಲ್ಲಿ ಕಂಡುಬಂತು.

ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಪೊಲೀಸರು ಬ್ಯಾರಿಕೇಡ್‌ಗಳನ್ನು ಅಳವಡಿಸಿ ಆ ಮಾರ್ಗದಲ್ಲಿ ಸಂಚರಿಸುತ್ತಿದ್ದವರನ್ನು ತಡೆದು ಗುರುತಿನ ಚೀಟಿ ಪರಿಶೀಲಿಸುತ್ತಿದ್ದರು. ಮುಖ್ಯ ರಸ್ತೆಯ ಮೂಲಕ ಸಾಗಿದರೆ ಪೊಲೀಸರು ತಡೆಯಬಹುದೆಂಬುದನ್ನು ಅರಿತಿದ್ದ ನಾಗರಿಕರು ಒಳ ಮಾರ್ಗಗಳ ಮೂಲಕ ವಾಹನಗಳಲ್ಲಿ ಓಡಾಡುತ್ತಿದ್ದರು.

ಸೀತಾ ವೃತ್ತ, ರಾಜರಾಜೇಶ್ವರಿ ನಗರ, ಹೊಸಕೆರೆಹಳ್ಳಿ ಸೇರಿದಂತೆ ಬಹುತೇಕ ಕಡೆ ಮೈದಾನಗಳು ಯುವಕರು ಹಾಗೂ ಮಕ್ಕಳಿಂದ ತುಂಬಿದ್ದವು. ಅವರು ಮುಖಗವಸು ಧರಿಸದೆಯೇ ಕ್ರಿಕೆಟ್ ಆಡುತ್ತಿದ್ದ ದೃಶ್ಯಗಳೂ ಕಂಡವು. ಭಾನುವಾರವಾಗಿದ್ದರಿಂದ ಹಲವೆಡೆ ಮಾಂಸ, ಮೀನು ಖರೀದಿಗೆ ಜನ ಮುಗಿ ಬಿದ್ದಿದ್ದರು.

ಔಷಧ, ದಿನಸಿ, ತರಕಾರಿ ಅಂಗಡಿಗಳು ತೆರೆದಿದ್ದವು. ಕೆಲವೆಡೆ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳೂ ಕಾರ್ಯನಿರ್ವಹಿಸುತ್ತಿದ್ದವು. ಕುಂಟು ನೆಪಗಳನ್ನು ಹೇಳಿಕೊಂಡು ನಾಗರಿಕರು ರಸ್ತೆಗಳಲ್ಲಿ ಓಡಾಡುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಕಮ್ಮನಹಳ್ಳಿಯಿಂದ ತಾಯಿಯ ಆರೋಗ್ಯ ವಿಚಾರಿಸಲು ಬಂದಿದ್ದ ಗಣಪತಿ ಎಂಬುವರನ್ನು ಪೊಲೀಸರು ತಡೆದು, ವಾಹನ ಜಪ್ತಿ ಮಾಡಿದರು. 'ತಾಯಿಯ ಆರೋಗ್ಯ ವಿಚಾರಿಸಲು ಬಂದಿದ್ದೆ. ತಪ್ಪಾಗಿದೆ ದಂಡ ಕಟ್ಟುತ್ತೇನೆ ಎಂದು ಹೇಳಿದರೂ ಪೊಲೀಸರು ಕೇಳುತ್ತಿಲ್ಲ. ವಾಹನವನ್ನೂ ಕೊಡುತ್ತಿಲ್ಲ' ಎಂದು ಅವರು ಕಣ್ಣೀರಿಟ್ಟರು.

ಮೆಜೆಸ್ಟಿಕ್ ಹಾಗೂ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣಗಳು ಭಾನುವಾರವೂ ಬಿಕೊ ಎನ್ನುತ್ತಿದ್ದವು. ಪ್ರಯಾಣಿಕರ ಸಂಖ್ಯೆ ವಿರಳವಾಗಿದ್ದರಿಂದ ಕೆಲವೊಂದು ಬಸ್‌ಗಳಷ್ಟೇ ರಸ್ತೆಗಿಳಿದಿದ್ದವು. ಆದರೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಜನದಟ್ಟಣೆ ಕಂಡುಬಂತು. ತಮ್ಮ ಊರುಗಳಿಗೆ ಹೊರಟಿದ್ದವರು ಬ್ಯಾಗ್‌ಗಳನ್ನು ಹಿಡಿದು ನಿಲ್ದಾಣದತ್ತ ಸಾಗುತ್ತಿದ್ದುದು ಕಂಡುಬಂತು. ಮುಖಗವಸು ಧರಿಸದೆ ಬೈಕ್‌ನಲ್ಲಿ ಓಡಾಡುತ್ತಿದ್ದ ವ್ಯಕ್ತಿಯೊಬ್ಬರನ್ನು ಜಾಲಹಳ್ಳಿ ಬಳಿ ತಡೆದ ಪೊಲೀಸರು ಸ್ಥಳದಲ್ಲಿಯೇ ದಂಡ ಕಟ್ಟಿಸಿಕೊಂಡರು. ಕೆ.ಆರ್.ಮಾರುಕಟ್ಟೆಯಲ್ಲಿ ಬೀದಿಬದಿ ವ್ಯಾಪಾರ ನಿರ್ಬಂಧಿಸಲಾಗಿತ್ತು. ಬೆಳಿಗ್ಗೆಯಿಂದಲೇ ಕಾರ್ಯಾಚರಣೆಗೆ ಇಳಿದಿದ್ದ ಪೊಲೀಸರು ವಾಹನಗಳ ತಪಾಸಣೆ ನಡೆಸುತ್ತಿದ್ದರು.



ವಾರಾಂತ್ಯದ ಕರ್ಫ್ಯೂ ಜಾರಿಯಾಗಿದ್ದರಿಂದ ವಾಹನಗಳ ಸಂಚಾರವಿಲ್ಲದೆ ಹೊಸೂರು ರಸ್ತೆಯ ಮೇಲ್ಸೇತುವೆ ಬಿಕೊ ಎನ್ನುತ್ತಿತ್ತು– ಪ್ರಜಾವಾಣಿ ಚಿತ್ರ/ ಅನೂಪ್ ರಾಘ್ ಟಿ.

ನಿಂಬೆಹಣ್ಣು ವ್ಯಾಪಾರ ಮಾಡುತ್ತಿದ್ದ ಮಕ್ಕಳಿಬ್ಬರು ಗಾಡಿಗೆ ಒರಗಿಕೊಂಡೆ ಪುಸ್ತಕ ಓದುತ್ತಿದ್ದ ದೃಶ್ಯ ಅವೆನ್ಯೂ ರಸ್ತೆಯಲ್ಲಿ ಭಾನುವಾರ ಕಂಡುಬಂತು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಒಟ್ಟು 944 ವಾಹನಗಳ ಜಪ್ತಿ

ವಾರಾಂತ್ಯ ಕರ್ಫ್ಯೂ ಅವಧಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ರಸ್ತೆಯಲ್ಲಿ ಓಡಾಡುತ್ತಿದ್ದ ಒಟ್ಟು 944 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

'ಎರಡು ದಿನಗಳಲ್ಲಿ 864 ದ್ವಿಚಕ್ರ, 26 ತ್ರಿಚಕ್ರ ಹಾಗೂ 54 ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಪಶ್ಚಿಮ (414), ದಕ್ಷಿಣ (171), ಉತ್ತರ (147) ಹಾಗೂ ಪೂರ್ವ (91) ವಿಭಾಗಗಳಲ್ಲಿ ಹೆಚ್ಚು ವಾಹನಗಳನ್ನು ಜಪ್ತಿ ಮಾಡಲಾಗಿದೆ.

ಕಾಣೆಯಾದ ಮಾಸ್ಕ್; ಎಲ್ಲೆಲ್ಲೂ ಜನಜಂಗುಳಿ

ಸಂಗಮ (ರಾಮನಗರ): ಇಲ್ಲಿ ಭಾನುವಾರ ಆರಂಭಗೊಂಡ ಮೇಕೆದಾಟು ಪಾದಯಾತ್ರೆಯಲ್ಲಿ ಕೋವಿಡ್ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಕಂಡುಬಂದಿತು.

ವಾರಾಂತ್ಯ ಕರ್ಫ್ಯೂ ಹಿನ್ನೆಲೆಯಲ್ಲಿ ಪ್ರವಾಸಿ ತಾಣವಾದ ಸಂಗಮ ಪ್ರದೇಶಕ್ಕೆ ಸಾರ್ವಜನಿಕರ ಪ್ರವೇಶ ನಿಷೇಧಿಸಿ ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿಗೊಳಿಸಿತ್ತು. ಆದರೆ ಅದನ್ನು ಧಿಕ್ಕರಿಸಿ ಸಾವಿರಾರು ಮಂದಿ ಪಾದಯಾತ್ರೆಯ ವೇದಿಕೆಯತ್ತ ಧಾವಿಸಿದರು. ಪರಸ್ಪರ ಅಂತರ ಪಾಲನೆ ಎನ್ನುವುದು ಮರೀಚಿಕೆಯಾಯಿತು. ಇದಕ್ಕೆ ಕಾಂಗ್ರೆಸ್ ನಾಯಕರು ಮೂಕಸಾಕ್ಷಿಯಾದರು. ಕಾರ್ಯಕ್ರಮದ ವೇದಿಕೆಯಲ್ಲೂ ಅಂತರ ಪಾಲನೆ ಮಾಡಲಿಲ್ಲ.

ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವವರಿಗಾಗಿ ಕಾಂಗ್ರೆಸ್ 1 ಲಕ್ಷ ಬಟ್ಟೆ ಮಾಸ್ಕ್‌ಗಳನ್ನು ಸಿದ್ಧಪಡಿಸಿತ್ತು. ಅದನ್ನು ಕಾರ್ಯಕ್ರಮದಲ್ಲಿ ವಿತರಣೆ ಮಾಡಲಾಯಿತು. ಆದರೆ ಹೆಚ್ಚಿನವರು ಮಾಸ್ಕ್ ಜೇಬಿಗೆ ಇಳಿಸಿ ಹಾಗೆಯೇ ತಿರುಗಾಡಿದರು. ಸಿದ್ದರಾಮಯ್ಯ, ಡಿ.ಕೆ. ಸುರೇಶ್ ಸೇರಿದಂತೆ ಹಲವು ನಾಯಕರು ಈ ಬಗ್ಗೆ ವೇದಿಕೆ ಮೂಲಕ ಎಚ್ಚರಿಸಿದರೂ ಪಾದಯಾತ್ರಿಗರು ಜಗ್ಗಲಿಲ್ಲ. ಇದರಿಂದ ಸಿಟ್ಟಿಗೆದ್ದ ಸಿದ್ದರಾಮಯ್ಯ ಗದರಿದ ಪ್ರಸಂಗವೂ ನಡೆಯಿತು. ಪಾದಯಾತ್ರೆ ಸಾಗಿದ ಹಾದಿಯಲ್ಲಿಯೂ ಸ್ವಯಂಸೇವಕರು ಮಾಸ್ಕ್ ಧರಿಸುವಂತೆ ಜನರನ್ನು ಎಚ್ಚರಿಸುತ್ತಲೇ ಇದ್ದರು.

ಕಾರ್ಕಳದಲ್ಲಿ 'ಯಕ್ಷ ರಂಗಾಯಣ'

ಕಾರ್ಕಳ: ರಾಜ್ಯದ 6ನೇ ರಂಗಾಯಣವಾಗಿ ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ 'ಯಕ್ಷ ರಂಗಾಯಣ' ಆರಂಭವಾಗಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದ್ದಾರೆ.

'ಈಗಾಗಲೇ ಸರ್ಕಾರಿ ಆದೇಶ ಹೊರಬಿದ್ದಿದೆ. ಶೀಘ್ರದಲ್ಲೇ 'ಯಕ್ಷ ರಂಗಾಯಣ'ವು ಕಾರ್ಕಳದ ಕೋಟಿ ಚೆನ್ನಯ ಥೀಮ್ ಪಾರ್ಕ್‌ನ ಸಮೀಪದ 2 ಎಕರೆ ವಿಶಾಲ ಆವರಣದಲ್ಲಿ ₹2 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿದೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಯಕ್ಷ ರಂಗಾಯಣಕ್ಕೆ ಶೀಘ್ರದಲ್ಲಿ ಪೂರ್ಣಾವಧಿ ನಿರ್ದೇಶಕರನ್ನು ನೇಮಕ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in
Azadi Ka Amrit Mahotsav

10, 12 ಮತ್ತು 13 ವರ್ಷ ಪರಿಪಕ್ವತಾ ಅವಧಿಯ ಕರ್ನಾಟಕ ಸರ್ಕಾರ ಭದ್ರತಾ ಪತ್ರಗಳ ಹರಾಜು

ಕರ್ನಾಟಕ ರಾಜ್ಯ ಸರ್ಕಾರವು ಒಟ್ಟು **₹5,000 ಕೋಟಿ ರೂಪಾಯಿಗಳ (ಮುಖ ಬೆಲೆ)** ಭದ್ರತಾ ಪತ್ರಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಉದ್ದೇಶಿಸಿದೆ.

ಬಹು ದರ ನಮೂನೆಯ ಅಡಿಯಲ್ಲಿ, ಹುಟ್ಟುವಳಿ ಆಧಾರಿತ ಹರಾಜನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಸಲ್ಯೂಷನ್ (**ಈ-ಕುಬೇರ್**) ವ್ಯವಸ್ಥೆಯ ಮೂಲಕ **11 ಜನವರಿ 2022** (**ಮಂಗಳವಾರ**) ರಂದು ನಡೆಸಲಾಗುವುದು. ರಿಟೇಲ್ ಡೈರೆಕ್ಟ್ ಪೋರ್ಟಲ್ ಮೂಲಕ (https://rbiretaildirect.org.in) ನಾನ್–ಕಾಂಪಿಟೆಟಿವ್ ಸ್ಕೀಮ್ ಅನುಸಾರ ವೈಯಕ್ತಿಕ ವಿನಿಯೋಜಕರು ಕೂಡಾ ಬಿಡ್ ಮಾಡಬಲ್ಲರು.

ಹೆಚ್ಚಿನ ವಿವರಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ **07 ಜನವರಿ 2022** (**ಶುಕ್ರವಾರ**) ದಿನಾಂಕದ ಪತ್ರಿಕಾ ಪ್ರಕಟಣೆ ಆರ್‌ಬಿಐ ವೆಬ್ ತಾಣ (www.rbi.org.in) ವನ್ನು ನೋಡಿ.

"ಹಣ ನೀಡುವ ಭರವಸೆ ಕೊಡುವ ಇ-ಮೇಲ್/ಎಸ್‌ಎಂಎಸ್/ದೂರವಾಣಿ ಕರೆಗಳಿಂದ ಮೋಸ ಹೋಗಬೇಡಿ"

ಆಸ್ಪತ್ರೆಗೆ ದಾಖಲು ಪ್ರಮಾಣ ತುಸು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣದಲ್ಲಿ ಒಂದು ವಾರದಿಂದ ಈಚೆಗೆ ತುಸು ಏರಿಕೆ ಕಂಡುಬಂದಿದೆ.

ನಗರದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆ ನೀಡಲು 1,538 ಹಾಸಿಗೆಗಳನ್ನು ವಿವಿಧ ಆಸ್ಪತ್ರೆಗಳಲ್ಲಿ ಕಾಯ್ದಿರಿಸಲಾಗಿದೆ. ಅಲ್ಲದೆ, ಖಾಸಗಿ ಆಸ್ಪತ್ರೆಗಳಲ್ಲಿ 3,800 ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ (ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು) ದಾಖಲಾಗುವವರ ದೈನಂದಿನ ಪ್ರಮಾಣವು ವಾರದಿಂದ ಈಚೆಗೆ 33ರಿಂದ 80ಕ್ಕೆ ಹೆಚ್ಚಿದೆ. 2021ರ ಡಿಸೆಂಬರ್ ಕೊನೆಯ ವಾರದಲ್ಲಿ ಈ ಪ್ರಮಾಣವು 21ರಿಂದ 26ಕ್ಕೆ ಹೆಚ್ಚಿತ್ತು.

ಸರ್ಕಾರಿ ಆಸ್ಪತ್ರೆಗಳಲ್ಲಿ 472 ಎಚ್‌ಡಿಯು ಹಾಸಿಗೆಗಳನ್ನು, ತೀವ್ರ ನಿಗಾ ಘಟಕಗಳಲ್ಲಿ (ಐಸಿಯು) 80 ಸಾಮಾನ್ಯ ಹಾಸಿಗೆಗಳನ್ನು ಹಾಗೂ ವೆಂಟಿಲೇಟರ್ ಸೌಕರ್ಯ ಇರುವ 145 ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಕಾಯ್ದಿರಿಸಲಾಗಿದೆ. ಬಿಬಿಎಂಪಿ ಭಾನುವಾರ ಬಿಡುಗಡೆ ಮಾಡಿದ ಅಂಕಿ–ಅಂಶಗಳ ಪ್ರಕಾರ ವಿವಿಧ ಬಗೆಯವು ಸೇರಿ ಒಟ್ಟು 230 ಹಾಸಿಗೆಗಳು ಭರ್ತಿ ಆಗಿವೆ.

ಐಸಿಯು ಹಾಗೂ ವೆಂಟಿಲೇಟರ್ ಸೌಕರ್ಯ ಬಳಸುವ ಕೋವಿಡ್ ರೋಗಿಗಳ ಸಂಖ್ಯೆಯೂ ತುಸು ಹೆಚ್ಚಳವಾಗಿದೆ. ಏಳು ದಿನಗಳಲ್ಲಿ 200 ಕೋವಿಡ್ ರೋಗಿಗಳು ಆಸ್ಪತ್ರೆಗೆ ದಾಖಲಾಗಿದ್ದು, ಅವರಲ್ಲಿ 27 ಮಂದಿ ಸಾಮಾನ್ಯ ಐಸಿಯು ಹಾಗೂ 7 ಮಂದಿ ವೆಂಟಿಲೇಟರ್ ಸೌಕರ್ಯ ಇರುವ ಐಸಿಯುವಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಕೋವಿಡ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದೃಢಪಡುತ್ತಿರುವುದರಿಂದ ಸಹಜವಾಗಿಯೇ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣವೂ ಹೆಚ್ಚಾದಂತೆ ಕಾಣಿಸುತ್ತದೆ. ಆದರೆ, ಗಾಬರಿಯಾಗುವ ಸನ್ನಿವೇಶ ಸೃಷ್ಟಿಯಾಗಿಲ್ಲ. ಒಟ್ಟು ಸೋಂಕಿತರ ಪ್ರಮಾಣಕ್ಕೆ ಹೋಲಿಸಿದರೆ, ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಕಡಿಮೆಯೇ ಇದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಐಸಿಯುಗಳಲ್ಲಿ 53 ಸಾಮಾನ್ಯ ಹಾಸಿಗೆಗಳು, ವೆಂಟಿಲೇಟರ್ ಸೌಕರ್ಯ ಇರುವ 138 ಹಾಸಿಗೆಗಳು, ಹಾಗೂ ಎಚ್‌ಡಿಯು ಸೌಕರ್ಯದ 405 ಹಾಸಿಗೆಗಳು ಸೇರಿ ಒಟ್ಟು 1,308 ಹಾಸಿಗೆಗಳು ಕೋವಿಡ್ ಚಿಕಿತ್ಸೆಗೆ ಈಗಲೂ ಲಭ್ಯ ಇವೆ.





24 ಗಂಟೆಯಲ್ಲೇ ಆರೋಪಿ ಸೆರೆ

ಸಿರಿಗೆರೆ: ಸಮೀಪದ ಕೋಣನೂರು ಗ್ರಾಮದಲ್ಲಿ ಡಿ.25ರಂದು ಪತ್ನಿಯನ್ನು ಕೊಲೆ ಮಾಡಿ ಮಂಚದ ಕೆಳಗೆ ಹೂತಿಟ್ಟಿದ್ದ ಪ್ರಕರಣ ಸಂಬಂಧ ಪತಿಯನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕೋಣನೂರು ಗ್ರಾಮದ ಆರ್. ನಾರಪ್ಪ (40) ಬಂಧಿತ. ಈತ ತನ್ನ ಪತ್ನಿ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಬೆಣ್ಣೆಹಳ್ಳಿ ಗ್ರಾಮದ ಸುಮಾ (26) ಅವರನ್ನು ಕೊಲೆ ಮಾಡಿದ್ದ.

ಶವ ಪತ್ತೆಯಾದ 24 ಗಂಟೆಯೊಳಗೆ ಮಿಂಚಿನ ಕಾರ್ಯಾಚರಣೆ ನಡೆಸಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಚಿತ್ರದುರ್ಗದ ಡಿವೈಎಸ್ಪಿ ತಂಡ ಆರೋಪಿಯನ್ನು ಮಹಜರು ಮಾಡಲು ಕೋಣನೂರು ಗ್ರಾಮಕ್ಕೆ ಕರೆತಂದಿತು. ಕೊಲೆ ಮಾಡಿದ ಸಂದರ್ಭದಲ್ಲಿ ಬಳಸಿದ ಪರಿಕರಗಳ ಮಾಹಿತಿ ಪಡೆದು ಬಳಿಕ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಆರೋಪಿಯನ್ನು ಪೊಲೀಸರು ಗ್ರಾಮಕ್ಕೆ ಕರೆತಂದಾಗ ಗ್ರಾಮಸ್ಥರು ಆರೋಪಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಮರಣದಂಡನೆ ಜಾರಿಯಾಗಬೇಕು ಎಂದು ಮಹಿಳೆಯರು ಶಪಿಸುತ್ತಿದ್ದ ದೃಶ್ಯ ಕಂಡುಬಂದಿತು. 24 ಗಂಟೆಯೊಳಗೆ ಬಂಧಿಸಿದ ಪೊಲೀಸರಿಗೂ ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–1/ಉಮುಅ(ನಿ)–1/ತಾಂಸ(ನಿ)–1/5351/2021–22	ದಿನಾಂಕ: 07.01.2022
ಸಕಾನಿಅ(ವಾಯುವ್ಯ–1) ಉಪವಿಭಾಗ, ಕೇತಮಾರನಹಳ್ಳಿ ಸೇವಾಠಾಣೆ ಪ್ರದೇಶದಡಿ ಬರುವ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ, ವಾರ್ಡ್ ಸಂಖ್ಯೆ–66 ಸುಬ್ರಮಣ್ಯನಗರದ ಇ & ಎ ಬ್ಲಾಕ್ ಮತ್ತು ವಾರ್ಡ್ ಸಂಖ್ಯೆ–76 ಗಾಯತ್ರಿನಗರದ ಡಿ ಬ್ಲಾಕ್‌ನಲ್ಲಿ ಹಾನಿಯಾಗಿರುವ 230ಮಿಮೀ ವ್ಯಾಸದ ಒಳಚರಂಡಿ ಮಾರ್ಗದ ಬದಲಾಗಿ 300ಮಿಮೀ ವ್ಯಾಸದ ಆರ್‌ಸಿಸಿ ಮಾರ್ಗವನ್ನು ಒದಗಿಸಿ ಅಳವಡಿಸುವುದು ಮತ್ತು ಹೊಸ ಆರ್‌ಸಿಸಿ ವೈರ್‌ಕಟ್ ಮ್ಯಾನ್‌ಹೋಲ್‌ಗಳ ನಿರ್ಮಾಣ	₹ 338.17 ಲಕ್ಷಗಳು / ₹ 5.073 ಲಕ್ಷಗಳು
ಭರ್ತಿಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ **10.02.2022**ರ ಸಂಜೆ **4:00** ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ **14.02.2022**ರ ಸಂಜೆ **4:00** ಗಂಟೆಯ ನಂತರ ತೆರೆಯಲಾಗುವುದು.	
ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–2/ಉಮುಅ(ನಿ)–2/ತಾಂಸ(ನಿ)–2/5349/2021–22	ದಿನಾಂಕ: 07.01.2022
ಸಕಾನಿಅ(ನೈರುತ್ಯ–4) ಉಪವಿಭಾಗದ, ಪಿಪಿ ಬಡಾವಣೆ ಸೇವಾಠಾಣೆ ಪ್ರದೇಶದಡಿ ಬರುವ ಬ್ರಿಗೇಡ್ ಒಮೆಗಾ ಅಪಾರ್ಟ್‌ಮೆಂಟ್‌ಗೆ ನೀರು ಸರಬರಾಜು ಸೌಲಭ್ಯಗಳನ್ನು ಒದಗಿಸಲು ಗುಬ್ಬಲಾಳದ ಆಂಜನೇಯ ದೇವಸ್ಥಾನದ ಬಳಿಯಿಂದ 80 ಅಡಿ ರಸ್ತೆ, ಬ್ರಿಗೇಡ್ ಒಮೆಗಾವರೆಗೆ 300ಮಿಮೀ, 200ಮಿಮೀ, 150ಮಿಮೀ ಮತ್ತು 100ಮಿಮೀ ವ್ಯಾಸದ ನೀರು ಸರಬರಾಜು ಮಾರ್ಗಗಳನ್ನು ಒದಗಿಸುವುದು ಮತ್ತು ಅಳವಡಿಸುವುದು.	₹ 1,10,22,507/- / ₹ 1,66,000/-
ಭರ್ತಿಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ **10.02.2022**ರ ಮಧ್ಯಾಹ್ನ **3:00** ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ **11.02.2022**ರ ಸಂಜೆ **5:00** ಗಂಟೆಯ ನಂತರ ತೆರೆಯಲಾಗುವುದು.	

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ಪಶ್ಚಿಮ)

ವಾ.ಸಾ.ಸಂ.ಇ: 2758/2021–22

ವಿದ್ಯಾಸಾಗರ ತೀರ್ಥ ಶ್ರೀಗಳ ಪುರಪ್ರವೇಶ ಇಂದು

ಉಡುಪಿ: 'ಕೋವಿಡ್ ಪ್ರಸರಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಿ ಸರಳ ಹಾಗೂ ಸಂಪ್ರದಾಯಬದ್ಧವಾಗಿ ಕೃಷ್ಣಾಪುರ ಮಠದ ಪರ್ಯಾಯ ಮಹೋತ್ಸವ ನಡೆಸಲು ತೀರ್ಮಾನಿಸಲಾಗಿದೆ' ಎಂದು ಶಾಸಕ ಹಾಗೂ ಪರ್ಯಾಯೋತ್ಸವ ಸಮಿತಿ ಕಾರ್ಯಾಧ್ಯಕ್ಷರೂ ಆಗಿರುವ ಕೆ. ರಘುಪತಿ ಭಟ್ ತಿಳಿಸಿದರು.

ಭಾನುವಾರ ಕೃಷ್ಣಾಪುರ ಮಠದ ಸಭಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜ.10ರಂದು ಮಧ್ಯಾಹ್ನ 3 ಗಂಟೆಗೆ ನಗರದ ಜೋಡುಕಟ್ಟೆ ಮೂಲಕ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥರು ಪುರಪ್ರವೇಶ ಮಾಡಲಿದ್ದಾರೆ. ಬಳಿಕ ಪರ್ಯಾಯ ಮೆರವಣಿಗೆಗೆ ಚಾಲನೆ ಸಿಗಲಿದೆ' ಎಂದರು.

'ಕೋವಿಡ್ ಹಿನ್ನೆಲೆಯಲ್ಲಿ ಕಲಾ ತಂಡಗಳ ಪ್ರದರ್ಶನ, ಟ್ಯಾಬ್ಲೊಗಳು ಇರುವುದಿಲ್ಲ. ಸಂಪ್ರದಾಯದಂತೆ ಚಂಡೆ, ವಾದ್ಯ, ಭಜನೆ, ಸಂಕೀರ್ತನೆ ಇರಲಿದೆ. ತೆರೆದ ವಾಹನದಲ್ಲಿ ಪರ್ಯಾಯ ಶ್ರೀಗಳನ್ನು ರಥಬೀದಿಗೆ ಕರೆತರಲಾಗುವುದು. 200 ಮಂದಿ ಗಣ್ಯರಿಗೆ ಆಹ್ವಾನ ನೀಡಲಾಗಿದೆ. ಸಂಜೆ 5.20ಕ್ಕೆ ಮೆರವಣಿಗೆ ರಥಬೀದಿ ತಲುಪಲಿದ್ದು, 6ಕ್ಕೆ ಪೌರ ಸಮ್ಮಾನ ಹಾಗೂ ಅಭಿನಂದನಾ ಸಮಾರಂಭ ನಡೆಯಲಿದೆ' ಎಂದು ತಿಳಿಸಿದರು.

ಜ.18ರಂದು ಬೆಳಗಿನ ಜಾವ 2.30ಕ್ಕೆ ಪರ್ಯಾಯ ಮೆರವಣಿಗೆ ಸಂಪ್ರದಾಯದಂತೆ ನಡೆಯಲಿದೆ. ರಾತ್ರಿ ಕರ್ಫ್ಯೂ ಹಿನ್ನೆಲೆಯಲ್ಲಿ ದಸರಾ ಮಾದರಿಯಲ್ಲಿ ಸರಳವಾಗಿ ಉಡುಪಿ ಪರ್ಯಾಯ ಮಹೋತ್ಸವ ಆಚರಣೆಗೆ ಅನುಮತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಶಾಸಕ ರಘುಪತಿ ಭಟ್ ಅವರು ಹೇಳಿದರು.

₹60 ಲಕ್ಷ ಮೌಲ್ಯದ 200 ಕೆ.ಜಿ ಗಾಂಜಾ ಜಪ್ತಿ

ಆಂಧ್ರದಲ್ಲಿ ಬೆಳೆದ ಗಾಂಜಾ ಬೆಂಗಳೂರಿನಲ್ಲಿ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದಲ್ಲಿ ಬೆಳೆದ ಗಾಂಜಾವನ್ನು ರೌಡಿಗಳ ನೆರವಿನಿಂದ ನಗರಕ್ಕೆ ತಂದು ಮಾರಾಟ ಮಾಡುತ್ತಿದ್ದ ನಾಲ್ವರು ಪೆಡ್ಲರ್‌ಗಳನ್ನು ಕೆಂಪೇಗೌಡ ನಗರ (ಕೆ.ಜಿ.ನಗರ) ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ₹60 ಲಕ್ಷ ಮೌಲ್ಯದ 200 ಕೆ.ಜಿ. ಗಾಂಜಾ ಹಾಗೂ ಒಂದು ಟಾಟಾ ಮ್ಯಾಜಿಕ್ ಏಸ್ ವಾಹನ ಜಪ್ತಿ ಮಾಡಲಾಗಿದೆ.

'ಪೋತಯ್ಯ (19), ಪಲ್ಲೆಂ ವರಪ್ರಸಾದ್ (19), ವಂಥಲಾ ರಮೇಶ್ (19) ಹಾಗೂ ಕೊಂಡಜ್ಜಿ ಪ್ರಸಾದ್ (19) ಬಂಧಿತರು. ಇವರು ಪೂರ್ವ ಗೋದಾವರಿ, ವಿಶಾಖಪಟ್ಟಣ ಜಿಲ್ಲೆಯವರು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಮಾದಕ ವ್ಯಸನಿಗಳ ಮೇಲೆ ಹದ್ದಿನ ಕಣ್ಣಿಡಲು ವಿಶೇಷ ತಂಡವೊಂದನ್ನು ರಚಿಸಲಾಗಿತ್ತು. ಇದೇ 7ರಂದು ಠಾಣೆ ವ್ಯಾಪ್ತಿಯ ಜಿಂಕೆ ಪಾರ್ಕ್ ಬಳಿಯ ದೋಬಿಘಾಟ್ ಮುಖ್ಯರಸ್ತೆಯಲ್ಲಿ ಆರೋಪಿಗಳು ಮೂಟೆಗಳಲ್ಲಿ ಗಾಂಜಾ ತುಂಬಿಕೊಂಡು ಬಂದು ಮಾರಾಟ ಮಾಡುತ್ತಿದ್ದ ನಾಲ್ವರನ್ನು ಬಂಧಿಸಲಾಗಿದೆ' ಎಂದು ವಿವರಿಸಿದರು.

'ಆರೋಪಿಗಳು ಈ ಹಿಂದೆ ನಗರದ ರೌಡಿಗಳಾದ ಕುಳ್ಳು ರಿಜ್ವಾನ್, ಸ್ಟಾರ್ ನವೀನ್, ಸ್ಟಾರ್ ರಾಹುಲ, ಉಲ್ಲಾಳ ಕಾರ್ತಿಕ್, ಉಲ್ಲಾಳ ಹಮೀದ್ ಹಾಗೂ ಸನಾವುಲ್ಲ ಎಂಬುವರಿಗೆ ಗಾಂಜಾ ಮಾರಿದ್ದನ್ನು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ. ಆಂಧ್ರದಿಂದ ತಂದ ಗಾಂಜಾವನ್ನು ರೌಡಿಶೀಟರ್‌ಗಳ ನೆರವಿನಿಂದ ನಗರದ ವಿವಿಧೆಡೆ ಮಾರಾಟ ಮಾಡುತ್ತಿದ್ದುದಾಗಿಯೂ ತಿಳಿಸಿದ್ದಾರೆ' ಎಂದು ಮಾಹಿತಿ ನೀಡಿದರು.

ಹಳೆಯ ಬಸ್‌ಗಳಲ್ಲಿ ಬಚ್ಚಿಟ್ಟಿದ್ದ ಗಾಂಜಾ ಜಪ್ತಿ

ಶಾಖಾಂಬರಿನಗರ ಬಳಿಯ ಮೆಟ್ರೊ ನಿಲ್ದಾಣದ ವಾಹನ ನಿಲುಗಡೆ ಸ್ಥಳದಲ್ಲಿದ್ದ ಹಳೆಯ ಬಸ್‌ಗಳಲ್ಲಿ ಗಾಂಜಾ ಬಚ್ಚಿಟ್ಟಿದ್ದ ಆರೋಪಿಯನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆತನಿಂದ ₹8 ಲಕ್ಷ ಮೌಲ್ಯದ 20 ಕೆ.ಜಿ. ಗಾಂಜಾ ಜಪ್ತಿ ಮಾಡಲಾಗಿದೆ.

'ದೂರವಾಣಿ ನಗರದ ನಿವಾಸಿ ಸನಾವುಲ್ಲಾ (39) ಬಂಧಿತ ಆರೋಪಿ. ಈತ ಕೆ.ಜಿ.ನಗರ ಪೊಲೀಸರು ಬಂಧಿಸಿರುವ ನಾಲ್ವರು ಆರೋಪಿಗಳಿಂದ ಗಾಂಜಾ ಖರೀದಿಸಿ ಕಾಲೇಜು ವಿದ್ಯಾರ್ಥಿಗಳು ಹಾಗೂ ನಾಗರಿಕರಿಗೆ ಮಾರಾಟ ಮಾಡುತ್ತಿದ್ದ. ಹೆಚ್ಚು ಹಣ ಸಂಪಾದಿಸುವ ದುರಾಸೆಯಿಂದ ಡ್ರಗ್ಸ್ ಜಾಲದಲ್ಲಿ ಸಕ್ರಿಯನಾಗಿದ್ದ' ಎಂದು ಪೊಲೀಸರು ಹೇಳಿದ್ದಾರೆ.

ಕ್ರೀಡಾ ಸ್ಕಾಲರ್‌ಷಿಪ್‌ಗೆ 'ಚಿನ್ನದ' ಅವಕಾಶ

ವಿಕ್ರಂ ಕಾಂತಿಕೆರೆ

ವಿದ್ಯಾರ್ಥಿ ವೇತನ ಕೈಪಿಡಿ

ಮಕ್ಕಳನ್ನು ಕ್ರೀಡಾಪಟುಗಳನ್ನಾಗಿ ಮಾಡಲು ಮನಸ್ಸು ಇರುವ ಹೆಚ್ಚಿನವರನ್ನು ಕಾಡುವ ಪ್ರಮುಖ ಸಮಸ್ಯೆ ಶಿಕ್ಷಣ ಮತ್ತು ಕ್ರೀಡಾ ಚಟುವಟಿಕೆಗೆ ತಗಲುವ ವೆಚ್ಚವನ್ನು ಆರ್ಥಿಕವಾಗಿ ಸರಿದೂಗಿಸುವುದು ಹೇಗೆ ಎಂಬುದು. ಕ್ರೀಡಾ ತರಬೇತಿಗೆ ಸೇರಿಸಿದರೆ ಶೈಕ್ಷಣಿಕವಾಗಿ ಹಿಂದುಳಿಯುತ್ತಾರೆ ಅಥವಾ ಎರಡೂ ಕಡೆಗೆ ಸಮಯ ಹೊಂದಿಸಲು ಸಾಧ್ಯವಾಗದು ಎಂಬುದು ಸಾಮಾನ್ಯ ಗೊಣಗಾಟವಾದರೆ, ಕ್ರೀಡಾಪಟುಗಳನ್ನಾಗಿ ಮಾಡಲೇಬೇಕು ಎಂದು ಬಯಸುವವರನ್ನು 'ಆರ್ಥಿಕ ಗೊಂದಲ' ಕಾಡಿಯೇ ಕಾಡುತ್ತದೆ. ಆದರೆ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳಿಂದ ಕಾಸಿನ ಬಲ ಸಿಗುವ ವಿಚಾರ ಬಹಳಷ್ಟು ಮಂದಿಗೆ ಗೊತ್ತಿಲ್ಲ.

ಓದಿನ ಜೊತೆ ಕ್ರೀಡಾಂಗಣದಲ್ಲೂ ಸಾಧನೆ ಮಾಡುವವರಿಗೆ ಹಣದ ಕೊರತೆ ಉಂಟಾಗಬಾರದು, ಅದರಿಂದಾಗಿ ಶಿಕ್ಷಣ ಅಥವಾ ಕ್ರೀಡಾಸಾಮರ್ಥ್ಯ ಕುಂಠಿತಗೊಳ್ಳಬಾರದು ಎಂಬ ಕಾರಣದಿಂದ ಸರ್ಕಾರಗಳು ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿವೆ. ಇದಕ್ಕೆ ಪೂರಕವಾಗಿ ಬಗೆಬಗೆಯ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಕಾರ್ಯನಿರ್ವಹಿಸುವ ಖಾಸಗಿ ಸಂಸ್ಥೆಗಳು ಕೂಡ ಇವೆ.



ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿಯಂಥ ಯೋಜನೆಗಳು ಕರ್ನಾಟಕದಲ್ಲಿ ಕ್ರೀಡಾ ಪ್ರತಿಭೆಗಳಿಗೆ ಸರ್ಕಾರ ನೀಡುವ ಸೌಲಭ್ಯಗಳು. 6ರಿಂದ 10ನೇ ತರಗತಿಯ ಸಾಧಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಪಿಯುಸಿಯಿಂದ ಉನ್ನತ ವ್ಯಾಸಂಗದಲ್ಲಿ ತೊಡಗಿರುವವರಿಗೆ ಮತ್ತು ವೃತ್ತಿಪರ ಕೋರ್ಸ್‌ಗಳನ್ನು ಮಾಡುವವರಿಗೆ ಶುಲ್ಕ ಮರುಪಾವತಿಯ ಅನುಕೂಲವಿದೆ. ಇದೇ ವೇಳೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆಲ್ಲುವ ಕ್ರೀಡಾಪಟುಗಳಿಗೆ ನೀಡುವ ಪ್ರೋತ್ಸಾಹಧನದ ಸೌಲಭ್ಯ ವಿದ್ಯಾರ್ಥಿ ಕ್ರೀಡಾಪಟುಗಳಿಗೂ ಲಭಿಸುತ್ತದೆ.

ಅರ್ಹತೆ ಏನು? ಯಾವಾಗ ಸಿಗುವುದು?

ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ, ಹಿಂದಿನ ವರ್ಷದ ಏಪ್ರಿಲ್ 1 ರಿಂದ ಶೈಕ್ಷಣಿಕ ವರ್ಷ ಆರಂಭವಾಗುವುದಕ್ಕೂ ಮೊದಲಿನ ಮಾರ್ಚ್ ಕೊನೆಯವರೆಗಿನ ಅವಧಿಯಲ್ಲಿ ಸಾಧನೆ ಮಾಡಿರಬೇಕು ಎನ್ನುತ್ತಾರೆ ಕ್ರೀಡಾ ಕ್ಷೇಮಾಭಿವೃದ್ಧಿ ಯೋಜನೆಯ ಉಪನಿರ್ದೇಶಕ ಶ್ರೀನಿವಾಸ.

ರಾಜ್ಯ ಕ್ರೀಡಾ ಪ್ರಾಧಿಕಾರದಲ್ಲಿ (ಸ್ಯಾಕ್) ನೋಂದಾಯಿಸಿಕೊಂಡಿರುವ ಕ್ರೀಡಾಸಂಸ್ಥೆಗಳು ಆಯೋಜಿಸುವ ಕ್ರೀಡಾಕೂಟಗಳಲ್ಲಿ ಚಿನ್ನ ಗೆದ್ದವರು, ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡವರು, ಖೇಲೊ ಇಂಡಿಯಾ ಕೂಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿದವರು, ಸ್ಕೂಲ್ ಗೇಮ್ಸ್ ಫೆಡರೇಷನ್ ಆಯೋಜಿಸುವ ಕ್ರೀಡಾಕೂಟಗಳಲ್ಲಿ ರಾಜ್ಯಮಟ್ಟದಲ್ಲಿ ಚಿನ್ನ ಗೆದ್ದವರು ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪಾಲ್ಗೊಂಡವರು ವಿದ್ಯಾರ್ಥಿವೇತನಕ್ಕೆ ಅರ್ಹರು. ಅರ್ಹತೆ ಗಳಿಸಿದವರಿಗೆ ವಾರ್ಷಿಕ ₹ 10,000 ಸಿಗುತ್ತದೆ. ಶುಲ್ಕ ಮರುಪಾವತಿ ಯೋಜನೆಯಲ್ಲಿ ಗರಿಷ್ಠ ₹ 50,000ದಷ್ಟು ಮೊತ್ತ ನೀಡಲಾಗುತ್ತದೆ.

ಆಯ್ಕೆ ಪ್ರಕ್ರಿಯೆ ಹೇಗೆ?

ಸಾಧಕರನ್ನು ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಲಾಗುತ್ತದೆ. ಪತ್ರಿಕೆಗಳಲ್ಲಿ ಈ ಕುರಿತು ಪ್ರಕಟಣೆ ನೀಡಲಾಗುತ್ತದೆ. ಕ್ರೀಡಾ ಸಂಸ್ಥೆಗಳಿಗೂ ಮಾಹಿತಿ ರವಾನಿಸಲಾಗುತ್ತದೆ. ಅರ್ಹತೆ ಇದ್ದ ಎಲ್ಲರಿಗೂ 'ಪ್ರೋತ್ಸಾಹ' ಸಿಗುತ್ತದೆ. ಇದಕ್ಕೆ ಸಂಖ್ಯಾ ಮಿತಿ ಇಲ್ಲ.

ಮಾಹಿತಿ https://dyes.karnataka.gov.inನಲ್ಲಿ ಲಭ್ಯ.

(ಮುಂದಿನವಾರ: ವಿದ್ಯಾರ್ಥಿ ವೇತನಕ್ಕೆ ಆದಾಯ ಮಿತಿ ಇಲ್ಲ)

> **"ಕ್ರೀಡಾ ಪ್ರತಿಭೆ, ವಿದ್ಯಾರ್ಥಿಗಳಿಗೆ ನೀಡುವ ಆರ್ಥಿಕ ನೆರವು, ಆಟೋಟದಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳಬೇಕು ಎಂದು ಬಯಸುವ ಪಾಲಕರಿಗೆ ಬಹಳಷ್ಟು ಅನುಕೂಲ ಮಾಡುತ್ತದೆ. ತರಬೇತಿ, ಅಭ್ಯಾಸ, ಪೋಷಕ ಆಹಾರ ಇತ್ಯಾದಿಗಳಿಗೆ ಆಗುವ ವೆಚ್ಚದ ದೃಷ್ಟಿಯಲ್ಲಿ ಸರ್ಕಾರದ ಯೋಜನೆ 'ಹೊನ್ನು' ಇದ್ದಂತೆ.**
>
> **ಎಚ್.ಎನ್.ಗೋಪಾಲಕೃಷ್ಣ**
> ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಯಲ್ಲೂ ಸಾಧನೆ ಮಾಡುವವರಿಗೆ ಆರ್ಥಿಕ ನೆರವು ನೀಡಲು ಸರ್ಕಾರ 'ವಿದ್ಯಾರ್ಥಿ ವೇತನ'ದಂತಹ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿವೆ. ಅಂಥ ಯೋಜನೆಗಳನ್ನು ಈ ಸರಣಿಯಲ್ಲಿ ಪರಿಚಯಿಸಲಾಗುತ್ತದೆ.

'ವೃತ್ತಿ ಯೋಜನೆ'ಗಿರಲಿ ಶಿಕ್ಷಕರ ಮಾರ್ಗದರ್ಶನ

> ಕಲಿಕಾ ಹಂತದಲ್ಲಿ ಕೋರ್ಸ್ ಆಯ್ಕೆಗೆ ಮುನ್ನವೇ ಸೂಕ್ತ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಬೇಕು. ಇದೇ 'ವೃತ್ತಿ ಯೋಜನೆ'. ಇದನ್ನು ರೂಪಿಸಲು ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕಿದೆ.

ಪ್ರದೀಪ್ ವೆಂಕಟರಾಮ್

ಮುಬೈನಲ್ಲಿದ್ದ ನನ್ನ ಸ್ನೇಹಿತರ ಮಗ ರಾಹುಲ್‌ಗೆ ಶಿಕ್ಷಣ ಮಾರ್ಗದರ್ಶನ ನೀಡುತ್ತಿದ್ದೆ. ಒಮ್ಮೆ ಅವನನ್ನು 'ಮುಂದೆ ನೀನು ಏನಾಗಬೇಕು ಎಂದುಕೊಂಡಿದ್ದೀಯಾ' ಎಂದು ಕೇಳಿದೆ. 'ನಾನು ಏರೋ ನಾಟಿಕಲ್ ಎಂಜಿನಿಯರ್ ಆಗಿ, ಅಮೆರಿಕದ ನಾಸಾ ಸಂಸ್ಥೆಗೆ ಸೇರುವ ಕನಸಿದೆ' ಎಂದಿದ್ದ. ಆಗ ಅವನ ವಯಸ್ಸು 8 ವರ್ಷ. ಹೀಗೆ ಚಿಕ್ಕ ವಯಸ್ಸಿನಿಂದಲೇ ನಿಖರ ಗುರಿ ಇಟ್ಟುಕೊಂಡು, ಸೂಕ್ತ ಮಾರ್ಗದರ್ಶನ ಮತ್ತು ಪೋಷಕರ ಬೆಂಬಲದೊಂದಿಗೆ ಹೆಜ್ಜೆ ಹಾಕಿದ ರಾಹುಲ್ ಈಗ ನಾಸಾ ಉದ್ಯೋಗಿ !

ಇನ್ನೊಂದು ಘಟನೆ; ಜಾನ್, ಅಮೆರಿಕದಲ್ಲಿ ಎಂಎಸ್ (ಮೆಕಾಟ್ರಾನಿಕ್ಸ್) ಪದವಿ ಮುಗಿಸಿ, ಉದ್ಯೋಗದ ಕನಸಿನೊಂದಿಗೆ ಭಾರತಕ್ಕೆ ಬಂದ. ದುರದೃಷ್ಟವಶಾತ್ ಆ ಪದವಿಗೆ ಎಲ್ಲೂ ಉದ್ಯೋಗ ಸಿಗಲಿಲ್ಲ. ಎಲ್ಲೇ ಹೋದರೂ 'ನಮಗೆ ಮೆಕ್ಯಾನಿಕಲ್ ಅಥವಾ ಎಲೆಕ್ಟ್ರಾನಿಕ್ಸ್ ಪದವೀಧರರ ಬೇಕು. ಮೆಕಾಟ್ರಾನಿಕ್ಸ್ ಪದವೀಧರರು ಬೇಡ' ಎನ್ನುತ್ತಿದ್ದರು. ಓದುವಾಗ ಇದ್ದ ಬೇಡಿಕೆ, ಕೋರ್ಸ್ ಮುಗಿಸುವ ಹೊತ್ತಿಗೆ ಕುಸಿದಿತ್ತು. ಇದರಿಂದ ಜಾನ್ ಬೇಸರಗೊಂಡ. 'ಯಾಕಾದರೂ ಈ ಕೋರ್ಸ್ ಮಾಡಿದೆನೋ' ಪರಿತಪಿಸಿದ. ಕ್ಲಿಷ್ಟ ಸಮಸ್ಯೆಗಳಿಂದ ಖಿನ್ನನಾಗಿದ್ದ ಜಾನ್, ನನ್ನ ಬಳಿ ಮಾರ್ಗದರ್ಶನಕ್ಕಾಗಿ ಬರುವ ವೇಳೆಗೆ ಸಂಪೂರ್ಣ ಕುಸಿದು ಹೋಗಿದ್ದ. ಆತನ ಸಮಸ್ಯೆ ಗಂಭೀರವಾಗಿತ್ತು; ಪರಿಹಾರಕ್ಕೆ ಹೆಚ್ಚು ಶ್ರಮ ಹಾಕಬೇಕಾಯಿತು. ಮೆಕಟ್ರಾನಿಕ್ಸ್ ಕೋರ್ಸ್ ಆಯ್ಕೆ ಮಾಡಿಕೊಳ್ಳುವಾಗ ತಜ್ಞರ ಮಾರ್ಗದರ್ಶನ ಪಡೆಯದೇ, ವೃತ್ತಿಯೋಜನೆ ರೂಪಿಸಿಕೊಳ್ಳದ ಕಾರಣ ಜಾನ್‌ಗೆ ಈ ಸಮಸ್ಯೆ ಎದುರಾಗಿತ್ತು.

ವಿದ್ಯಾರ್ಥಿಗಳು ಕಲಿಕೆಯ ಹಂತದಲ್ಲೇ 'ವೃತ್ತಿ ಯೋಜನೆ' ರೂಪಿಸಿಕೊಳ್ಳುವ ಬಗ್ಗೆ ಏಕೆ ಚಿಂತಿಸ ಬೇಕು? ಎಂಬುದಕ್ಕೆ ಈ ಮೇಲಿನ ಎರಡು ವಿಭಿನ್ನ ಘಟನೆಗಳು ಸೂಕ್ತ ಉದಾಹರಣೆಯಾಗುತ್ತವೆ.

ಏನಿದು ವೃತ್ತಿ ಯೋಜನೆ?

ಪ್ರಸ್ತುತ ವಿದ್ಯಾರ್ಥಿಗಳು 'ಮೊದಲು ಕೋರ್ಸ್, ನಂತರ ವೃತ್ತಿ' ಎಂಬ ಪದ್ಧತಿ ಅನುಸರಿಸುತ್ತಿದ್ದಾರೆ. ಆದರೆ, ಇನ್ನು ಮುಂದೆ 'ಮೊದಲು ವೃತ್ತಿಯ ಆಯ್ಕೆ, ನಂತರ ಕೋರ್ಸ್ ಆಯ್ಕೆ' ಎಂದು ಬದಲಾಯಿಸಿಕೊಳ್ಳಬೇಕಿದೆ. ಕೋರ್ಸ್ ಆಯ್ಕೆಗೆ ಮುನ್ನವೇ ಇಂಥ ವೃತ್ತಿಗೆ ಸೇರಬೇಕೆಂದು ಯೋಜನೆ ರೂಪಿಸುವುದೇ, 'ವೃತ್ತಿ ಯೋಜನೆ'.

ವೃತ್ತಿ ಯೋಜನೆ ಆಯ್ಕೆ ಮಾಡಿಕೊಳ್ಳಲು ಶಿಕ್ಷಕರ/ ಶಿಕ್ಷಣ ತಜ್ಞರ ಮಾರ್ಗದರ್ಶನ ಅತ್ಯಗತ್ಯ. ಶಾಲೆಯಲ್ಲಿ ಕೋರ್ಸ್ ಆಯ್ಕೆ ಮಾಡಿಕೊಳ್ಳುವ ಹಂತದಲ್ಲೇ ವಿದ್ಯಾರ್ಥಿಗಳು ವೃತ್ತಿಯೋಜನೆ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ, ಶಿಕ್ಷಕರು ವೃತ್ತಿ ಯೋಜನೆಯ ಮಹತ್ವ ಮತ್ತು ಅನಿವಾರ್ಯತೆಯ ಅರಿವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕು.

ವೃತ್ತಿ ಯೋಜನೆ ಏಕೆ ಬೇಕು?

ವಿದ್ಯಾಭ್ಯಾಸದ ನಂತರ ಬಹುತೇಕ ವಿದ್ಯಾರ್ಥಿಗಳು ಹೆಚ್ಚು ವೇತನ ನೀಡುವ ವೃತ್ತಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅದಕ್ಕೆ ಬೇಕಾದ ಕೋರ್ಸ್‌ಗಳಿಗೆ ಆದ್ಯತೆ ನೀಡುತ್ತಿದ್ದಾರೆ. ಆದರೆ, ಇಂತಹ ವೃತ್ತಿಗಳಲ್ಲಿನ ಕಾರ್ಯ ಕ್ಷಮತೆಯ ನಿರೀಕ್ಷೆ ಅಪಾರವಾಗಿ ರುತ್ತದೆ. ಅದನ್ನು ಸಾಧಿಸಲಾಗದೆ ಕೆಲವರ ವೈಯಕ್ತಿಕ ಬದುಕಿನ ಮೇಲೆ ದುಷ್ಪರಿಣಾಮಗಳಾಗಿರುವ ಉದಾಹರಣೆಗಳಿವೆ. ಈ ಹಿನ್ನೆಲೆಯಲ್ಲಿ ಭವಿಷ್ಯದ ಕುಟುಂಬ ನಿರ್ವಹಣೆಗೆ ಬೇಕಾದಷ್ಟು ವೇತನ, ಸಮಾಜದಲ್ಲಿ ಗೌರವ ಮತ್ತು ಮನ್ನಣೆ ಸಿಗುವಂತಹ ಜೊತೆಗೆ, ಸಂತೃಪ್ತಿ ನೀಡುವಂತಹ ವೃತ್ತಿಯ ಆಯ್ಕೆ ಕುರಿತು ವಿದ್ಯಾರ್ಥಿಗಳಿಗೆ ಶಿಕ್ಷಕರು ಮಾರ್ಗದರ್ಶನ ನೀಡುವುದು ಅಗತ್ಯವಾಗಿದೆ.

ಕೌಶಲ ಅಗತ್ಯ: ಬದುಕಿನ ಸಾರ್ಥಕತೆಗೆ ಶಿಕ್ಷಣವಿದ್ದರಷ್ಟೇ ಸಾಲದು. ಜೀವನ ರೂಪಿಸಿಕೊಳ್ಳಲು ಅಗತ್ಯ ಕೌಶಲಗಳೂ ಬೇಕು. ಸ್ವಯಂ-ಪ್ರೇರಣೆ, ಸ್ವಯಂ-ಗೌರವ, ಆತ್ಮವಿಶ್ವಾಸ, ಪ್ರಾಮಾಣಿಕತೆ, ಆಶಾವಾದಿತ್ವ, ಜೀವನೋತ್ಸಾಹ ಮುಂತಾದ ನಿಲುವುಗಳು ಮತ್ತು ಕೌಶಲಗಳು, ವೃತ್ತಿ ಮತ್ತು ವೈಯಕ್ತಿಕ ಬದುಕಿನ ಯಶಸ್ಸಿಗೆ ಕಾರಣವಾಗುತ್ತದೆ. ಶಿಕ್ಷಕರು, ಯಶಸ್ವಿ ಬದುಕಿಗೆ ಅವಶ್ಯವಾದ ಇಂತಹ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಿ, ಕಲಿಕೆಯ ಪ್ರಕ್ರಿಯೆಯಲ್ಲಿ ಮಾರ್ಗದರ್ಶನ ನೀಡಲು ಸಾಧ್ಯವಿದೆ. ಹಾಗಾಗಿ, ಶಿಕ್ಷಕರ ಜವಾಬ್ದಾರಿ ಪಠ್ಯಕ್ರಮಕ್ಕೆ ಮಾತ್ರ ಸೀಮಿತವಾಗದೆ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಮತ್ತು ಬದುಕಿಗೆ ದಾರಿದೀಪವಾಗಬೇಕು.

ವೃತ್ತಿಯೋಜನೆ ಮಾಡುವುದು ಹೇಗೆ?

ವಿದ್ಯಾರ್ಥಿಗಳು ಅನುಸರಿಸಬೇಕಾದ ವೃತ್ತಿಯೋಜನೆಯ ಕುರಿತು ಶಿಕ್ಷಕರು ಈ ರೀತಿಯ ಮಾರ್ಗದರ್ಶನವನ್ನು ನೀಡಬಹುದು.

- ವಿದ್ಯಾರ್ಥಿಯ ವೈಯಕ್ತಿಕ ಸಾಮರ್ಥ್ಯ ಮತ್ತು ಅಭಿರುಚಿಯನ್ನು ಅರಿತು, ಯಾವ ವೃತ್ತಿ ಸರಿಹೊಂದ ಬಹುದೆಂದು ಅಂದಾಜಿಸಿ.
- ಅಂತಹ ವೃತ್ತಿಜೀವನದ ಬಗ್ಗೆ ಸಂಶೋಧನೆ ನಡೆಸಿ, ದೀರ್ಘಾವಧಿಯಲ್ಲೂ ಆ ವೃತ್ತಿಗೆ ಬೇಡಿಕೆ ಇರುತ್ತದೆಯೇ ಎಂದು ಖಚಿತಮಾಡಿಕೊಳ್ಳಿ.
- ವೃತ್ತಿಯ ಮತ್ತು ವೈಯಕ್ತಿಕ ಬದುಕಿನ ಧ್ಯೇಯಗಳನ್ನು ನಿಶ್ಚಯಿಸಿ, ಶಿಕ್ಷಣದ ಅವಶ್ಯಕತೆಗಳನ್ನು ತೀರ್ಮಾನಿಸಿ.
- ಅದರಂತೆ, ಆಯ್ಕೆ ಮಾಡಿದ ಕೋರ್ಸ್‌ಗೆ ಬೇಕಾದ ಪ್ರವೇಶ ಪರೀಕ್ಷೆಗೆ ತಯಾರಾಗಿ.
- ಮುಖ್ಯವಾಗಿ, ವಿದ್ಯಾರ್ಥಿಗಳಲ್ಲಿ ಈಗ ಅನುಸರಿಸುತ್ತಿರುವ 'ಮೊದಲು ಕೋರ್ಸ್ ಆನಂತರ ವೃತ್ತಿ' ಎನ್ನುವ ಪದ್ಧತಿ ಬದಲಾಯಿಸಿ, 'ಮೊದಲು ವೃತ್ತಿಯ ಆಯ್ಕೆ, ನಂತರವೇ ಕೋರ್ಸ್ ಆಯ್ಕೆ' ಎನ್ನುವ ತರ್ಕವನ್ನು ಮೂಡಿಸಬೇಕು. ಈ ನಿಟ್ಟಿನಲ್ಲಿ, ಎಲ್ಲ ಕಡೆಗಳಲ್ಲೂ ಶಿಕ್ಷಕರಿಗೆ ಮಾಹಿತಿ ಮತ್ತು ತರಬೇತಿ ಕಾರ್ಯಾಗಾರಗಳನ್ನು ನಡೆಸಬೇಕು. ವಿಶೇಷವಾಗಿ, ಸರ್ಕಾರಿ ಪ್ರೌಢಶಾಲೆಗಳಲ್ಲಿ ಇಂಥ ತರಬೇತಿ-ಕಾರ್ಯಾಗಾರಗಳನ್ನು ಆಯೋಜಿಸಬೇಕು.

ವಿದ್ಯಾರ್ಥಿಗಳೊಡನೆ ಹೆಚ್ಚು ಸಮಯವನ್ನು ಕಳೆಯುವ ಶಿಕ್ಷಕರು, ವಿದ್ಯಾರ್ಥಿಗಳಿಗೆ ಸೂಕ್ತ ಪ್ರೇರಣೆ ಮತ್ತು ಮಾರ್ಗದರ್ಶನ ನೀಡಿ ಅವರ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕಬಲ್ಲರು.

ವೃತ್ತಿಯೋಜನೆ ಮಾಡುವ ಮಾರ್ಗದರ್ಶನಕ್ಕಾಗಿ ಈ ವೀಡಿಯೊ ವೀಕ್ಷಿಸಬಹುದು :https://www.youtube.com/

ಕೋವಿಡ್: ಕ್ರ್ಯಾಶ್ ಕೋರ್ಸ್

ಗುರುರಾಜ್ ಎಸ್. ದಾವಣಗೆರೆ

ಕೋರ್ಸ್ ಕಾರ್ನರ್

- **ವಿದ್ಯಾರ್ಹತೆ:** ಎಸ್ಎಸ್ಎಲ್‌ಸಿ, ಪಿಯುಸಿ ಪಾಸ್ ಅಥವಾ ಫೇಲ್
- **ತರಬೇತಿಯ ಅವಧಿ:** 3 ತಿಂಗಳು (350 ಗಂಟೆ)
- **ಕೋರ್ಸ್ ಶುಲ್ಕ:** ಇರುವುದಿಲ್ಲ
- **ಪ್ರಶಿಕ್ಷಣಾರ್ಥಿಗಳಿಗೆ ದಿನಭತ್ಯೆ:** ₹125

ಕೋವಿಡ್ ವೈರಾಣು ದಿನಕ್ಕೊಂದು ಹೊಸರೂಪ ತಳೆದು ಜನರನ್ನು ಆತಂಕಕ್ಕೆ ದೂಡುತ್ತಿದೆ. ಸೋಂಕು ಪತ್ತೆಯಾದ ತಕ್ಷಣ ಹೀಗೆ ಹೀಗೆ ಮಾಡಿ ಎಂದು ಮಾರ್ಗದರ್ಶನ ನೀಡುತ್ತಿದ್ದರೂ, ಜನ ಆಸ್ಪತ್ರೆಗೆ ದೌಡಾಯಿಸುವುದನ್ನು ಬಿಡುತ್ತಿಲ್ಲ. ಕಳೆದ ಎರಡು ಅಲೆಗಳಲ್ಲೂ ಆಸ್ಪತ್ರೆಗಳು ಭರ್ತಿಯಾಗಿ, ಬೆಡ್ ಸಿಗದೇ, ಆಕ್ಸಿಜನ್ ಸಿಗದೇ, ರೋಗಿಗಳ ಆರೈಕೆಗೆ ವೈದ್ಯರು, ವೈದ್ಯಕಿಯೇತರ ಸಿಬ್ಬಂದಿಯ ಕೊರತೆಯಾಗಿ ಪರದಾಡಿದ್ದನ್ನು ಎಲ್ಲರೂ ನೋಡಿದ್ದಾರೆ.

ಇದರ ನಡುವೆ ಆರೋಗ್ಯ ತುರ್ತು ಪರಿಸ್ಥಿತಿಯಲ್ಲಿ ಜೀವದ ಹಂಗು ತೊರೆದು ಸೇವೆ ಮಾಡುತ್ತಿರುವ ವೈದ್ಯರು, ದಾದಿಯರು, ಮೇಲ್ ನರ್ಸ್‌ಗಳು ತಮಗೆ ಸಿಗಬೇಕಾದ ಭತ್ಯೆ - ಸಂಬಳ ದೊರಕದಿದ್ದಾಗ ಮುಷ್ಕರ ನಡೆಸಿ ಸರ್ಕಾರಗಳನ್ನು ಹೈರಾಣ ಮಾಡಿದ್ದೂ ಇದೆ.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಸೋಂಕು ನಿಯಂತ್ರಿಸಲು, ರೋಗಿಗಳಿಗೆ ಚಿಕಿತ್ಸೆ ನೀಡಲು ಏಕಾಏಕಿ ಸಾವಿರಾರು ವೈದ್ಯರು, ನರ್ಸ್‌ಗಳನ್ನು ನೇಮಿಸಿಕೊಳ್ಳುವ ಪರಿಸ್ಥಿತಿ ಎದುರಾಗಿತ್ತು. ಆದರೆ, ಏಕಾ ಏಕಿ ಇಷ್ಟು ದೊಡ್ಡ ಪ್ರಮಾಣದಲ್ಲಿ ವೈದ್ಯ ಸಿಬ್ಬಂದಿ ನೇಮಿಸಿಕೊಳ್ಳಲು ಸರ್ಕಾರದ ಬಳಿ ದೊಡ್ಡ ಬಜೆಟ್ ಇರಲಿಲ್ಲ.

ಕೋವಿಡ್ ಕಾಲದಲ್ಲಿ ಎದುರಾದ ಮಾನವ ಸಂಪನ್ಮೂಲ ಕೊರತೆಯನ್ನು ಎದುರಿಸಲು ಹಾಗೂ ಭವಿಷ್ಯದ ಆರೋಗ್ಯ ಕ್ಷೇತ್ರದಲ್ಲಿ ವೈದ್ಯಕೀಯೇತರ ಆರೋಗ್ಯ ಕಾರ್ಯಕರ್ತರ ಸಂಖ್ಯೆ ಹೆಚ್ಚಿಸಲು ಕೇಂದ್ರ ಸರ್ಕಾರ ಕೊರೊನಾ ವಾರಿಯರ್‌ಗಳಿಗೆ ತರಬೇತಿ ನೀಡಲು 'ಕ್ರ್ಯಾಶ್ ಕೋರ್ಸ್' ಆರಂಭಿಸಿದೆ. ರಾಜ್ಯದಲ್ಲಿ ಕರ್ನಾಟಕ ಸ್ಕಿಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಕೆಎಸ್‌ಡಿಸಿ) ಹಾಗೂ ವಿಪ್ರೊ ಮತ್ತು ಜಿ.ಇ ಹೆಲ್ತ್ ಕೇರ್ ಕಂಪನಿಗಳ ಸಹಯೋಗದಲ್ಲಿ ಕಡಿಮೆ ಖರ್ಚು ಮತ್ತು ಅವಧಿಯಲ್ಲಿ ಕ್ರ್ಯಾಶ್ ಕೋರ್ಸ್‌ಗಳನ್ನು ಪ್ರಾರಂಭಿಸಿದೆ.

ನೋಡಿ-ಮಾಡಿ-ಕಲಿ ಎನ್ನುವ ತಳಹದಿಯ ಮೇಲೆ ಜಿಲ್ಲಾ ಕೇಂದ್ರಗಳಲ್ಲಿ ನುರಿತ ತರಬೇತುದಾರರಿಂದ ತರಬೇತಿ ನೀಡಲಾಗುತ್ತದೆ. ತರಬೇತಿ ಸಮಯದಲ್ಲಿ ಊಟ, ದೂರದೂರಿನಿಂದ ಬಂದವರಿಗೆ ವಸತಿ ಸೌಲಭ್ಯ ಕಲ್ಪಿಸಲಾಗುತ್ತದೆ.

ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ, 'ರೋಗಿಗಳಿಗೆ ಮಾರ್ಗದರ್ಶನ ನೀಡುವುದು', ವೈದ್ಯರಿಗೆ ನೆರವಾಗುವುದು, ಆರೈಕೆಯ ವಿಧಾನ ಮತ್ತು ಆರೋಗ್ಯ ತುರ್ತುಪರಿಸ್ಥಿತಿಯಲ್ಲಿ ಎದುರಾಗುವ ಸಂದರ್ಭಗಳನ್ನು ಹೇಗೆ ನಿಭಾಯಿಸಬೇಕು ಎಂಬುದರ ಕುರಿತು ಮಾಹಿತಿ ನೀಡಲಾಗುತ್ತದೆ. ಮೂರು ವರ್ಷಗಳ ನರ್ಸಿಂಗ್ ಕೋರ್ಸ್‌ನಲ್ಲಿ ಕಲಿಸುವಂತೆ ಮೂರು ತಿಂಗಳ ಒಜೆಟಿ (ಆನ್ ಜಾಬ್ ಟ್ರೈನಿಂಗ್) ಇರುತ್ತದೆ.

ಈ ಮಾರ್ಚ್ ವೇಳೆಗೆ ಸುಮಾರು 20,000 ಯುವಕ/ ಯುವತಿಯರಿಗೆ ತರಬೇತಿ ನೀಡುವ ಉದ್ದೇಶ ಹೊಂದಿರುವ ಕೆಎಸ್‌ಡಿಸಿ ಈಗಾಗಲೇ 24 ಜಿಲ್ಲಾ ತರಬೇತಿ ಕೇಂದ್ರಗಳ 38 ಕ್ರೇಂದ್ರಗಳಲ್ಲಿ ತರಬೇತಿ ಪ್ರಾರಂಭಿಸಿದೆ.

ರಾಷ್ಟ್ರೀಯ ಕೌಶಲಾಭಿವೃದ್ಧಿ ಮಂಡಳಿಯ(ಎನ್‌ಎಸ್‌ಡಿಸಿ) ಮಾರ್ಗಸೂಚಿಯಂತೆ ಮೊದಲ ಹಂತದ ಆರು ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿ ಥಿಯರಿ ಮತ್ತು ಪ್ರಾಕ್ಟಿಕಲ್ ಎರಡೂ ಇರುವ ಈ ಕೋರ್ಸ್‌ಗಳಲ್ಲಿ, ಪ್ರಾಯೋಗಿಕ ಕಲಿಕೆಯನ್ನು ಜಿಲ್ಲಾ ವೈದ್ಯಕೀಯ ಕೇಂದ್ರಗಳಲ್ಲಿ ನೀಡಲಾಗುತ್ತಿದೆ.

ಜೀವ ಮತ್ತು ಜೀವನೋಪಾಯಗಳೆರಡನ್ನೂ ಕಾಪಾಡುವ ಬದ್ಧತೆಯನ್ನು ಹೊಂದಿರುವ ತರಬೇತಿ ಮಾಡ್ಯೂಲ್‌ಗಳು ಇರುವ, ಕೋವಿಡ್ ನಂತರವೂ ಉಪಯೋಗಕ್ಕೆ ಬರುವ ತರಬೇತಿ ಇದಾಗಿದೆ. ಈ ಕೋರ್ಸ್ ಮುಗಿಸಿದ ನಂತರ ರಾಜ್ಯ ಸರ್ಕಾರ ಪ್ರಮಾಣ ಪತ್ರ ನೀಡುತ್ತದೆ. ಈ ಪ್ರಮಾಣ ಪತ್ರದ ಆಧಾರದಲ್ಲಿ ಕೆನಡಾ ಸೇರಿದಂತೆ ಇತರ ದೇಶಗಳಲ್ಲೂ ಉದ್ಯೋಗ ಸಿಗುತ್ತದೆ.

ಹೆಚ್ಚಿನ ಮಾಹಿತಿಗಾಗಿ www.kaushalkar.com / www.skillconnect.kaushalkar.com ಈ ಜಾಲತಾಣಗಳಿಗೆ ಭೇಟಿ ನೀಡಿ. ಕೌಶಲ ಸಹಾಯವಾಣಿ: 155267 ಇಲ್ಲಿಗೂ ಸಂಪರ್ಕಿಸ ಬಹುದು.

ಬಿಟೆಕ್ (ಆಹಾರ ತಂತ್ರಜ್ಞಾನ) ಕೋರ್ಸ್: ಅವಕಾಶಗಳೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್

- **1. ಸರ್, ಬಿಟೆಕ್ (ಆಹಾರ ತಂತ್ರಜ್ಞಾನ) ಕೋರ್ಸ್ ಅವಕಾಶಗಳೇನು?**

ಹೆಸರು, ಊರು ತಿಳಿಸಿಲ್ಲ.

ಬೆಳೆಯುತ್ತಿರುವ ಜನಸಂಖ್ಯೆ, ಹೆಚ್ಚುತ್ತಿರುವ ನಗರೀಕರಣ, ಬದಲಾಗುತ್ತಿರುವ ಜೀವನ ಶೈಲಿ ಇತ್ಯಾದಿ ಕಾರಣಗಳಿಂದ ಆಹಾರ ಸಂಸ್ಕರಣಾ ಕ್ಷೇತ್ರ ಅಭಿವೃದ್ಧಿಯ ಪಥದಲ್ಲಿದೆ. ಕಚ್ಚಾ ಧಾನ್ಯಗಳು ಮತ್ತು ಇನ್ನಿತರ ಆಹಾರ ಪದಾರ್ಥಗಳ ಸಂಗ್ರಹಣೆ, ಶುದ್ಧೀಕರಣ, ಸಂಸ್ಕರಣೆ, ಸುರಕ್ಷತೆ ಮತ್ತು ಸೂಕ್ತ ಪ್ಯಾಕಿಂಗ್ ನಂತರ ಬಳಕೆಗೆ ಯೋಗ್ಯ ರೀತಿಯಲ್ಲಿ ಸಿದ್ದಪಡಿಸುವ ಕಾರ್ಯ ಗಳಲ್ಲಿ ಆಹಾರ ತಂತ್ರಜ್ಞಾನ ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದ, ಆಹಾರ ತಂತ್ರಜ್ಞಾನ ಕ್ಷೇತ್ರದ ಪದವೀಧರರಿಗೂ ಹೆಚ್ಚಿನ ಬೇಡಿಕೆಯಿದೆ. ಹಾಗಾಗಿ, ಈ ಕ್ಷೇತ್ರದಲ್ಲಿ ಆಸಕ್ತಿಯಿದ್ದರೆ, ಬಿಟೆಕ್ (ಆಹಾರ ತಂತ್ರಜ್ಞಾನ) ಕೋರ್ಸ್ ಮಾಡಿ, ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು. ಈ ಕೋರ್ಸ್ ನಂತರ, ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದ ಆಹಾರ ಪದಾರ್ಥ ಮತ್ತು ಪಾನೀಯ ತಯಾರಿಕಾ ಉದ್ದಿಮೆಗಳು, ಆಹಾರ ಸಂಬಂಧಿತ (ಕೃತಕ ಮತ್ತು ನೈಸರ್ಗಿಕ ಸಂರಕ್ಷಕಗಳು, ಬಣ್ಣಗಳು, ಸ್ವಾದಗಳು ಇತ್ಯಾದಿ) ಉದ್ದಿಮೆಗಳು, ಕೃಷಿ ಉದ್ದಿಮೆಗಳು, ಸಾವಯವ ಉದ್ದಿಮೆಗಳು, ಹೋಟೆಲ್ಸ್ ಮತ್ತು ರೆಸ್ಟೊರೆಂಟ್ಸ್, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಫಾರ್ಮಾ ಉದ್ದಿಮೆಗಳು, ಸಂಶೋಧನಾ ಸಂಸ್ಥೆಗಳು, ಆಹಾರ ಪರೀಕ್ಷಾ ಪ್ರಯೋಗಾಲಯಗಳು ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ವಿಪುಲವಾದ ಉದ್ಯೋಗಾವಕಾಶಗಳಿವೆ. ಬಿಟೆಕ್ ನಂತರ ಎಂ.ಟೆಕ್ ಮಾಡಿ, ಈ ಕ್ಷೇತ್ರದಲ್ಲಿ ಹೆಚ್ಚಿನ ತಜ್ಞತೆಯನ್ನು ಪಡೆಯಬಹುದು. ವೃತ್ತಿಯ ಅನುಭವದ ನಂತರ ಸ್ವಂತ ಉದ್ದಿಮೆಯನ್ನೂ ಪ್ರಾರಂಭಿಸಬಹುದು.

- **2. ನಾನು ಬಿಸಿಎ ಮುಗಿಸಿದ್ದೇನೆ. ಯುಪಿಎಸ್‌ಸಿ ಪರೀಕ್ಷೆ ಬರೆಯಬೇಕು ಎಂದುಕೊಂಡಿದ್ದೇನೆ. ಆದರೆ, ಎಂಸಿಎ ಕೋರ್ಸ್ ಸೇರುವುದೋ ಅಥವಾ ಕೆಲಸಕ್ಕೆ ಸೇರಿ ಪರೀಕ್ಷೆಗೆ ಸಿದ್ದತೆ ನಡೆಸುವುದೋ ಎನ್ನುವ ಗೊಂದಲದಲ್ಲಿದ್ದೇನೆ. ಸಲಹೆ ನೀಡಿ.**

ನಾಗರಕ್ಷಿತಾ ಕೆ. ಆರ್., ಊರು ತಿಳಿಸಿಲ್ಲ.

ನೀವು ತಿಳಿಸಿರುವ ಎರಡೂ ವೃತ್ತಿಯ ಆಯ್ಕೆಗಳಿಗೆ ಉಜ್ವಲ ಭವಿಷ್ಯವಿದೆ. ಹಾಗಾಗಿ, ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸಿ.

- **3. ನಾನು ಡಿಪ್ಲೊಮಾ (ಸಿವಿಲ್) ವಿದ್ಯಾರ್ಥಿ. ಈಗಾಗಲೇ ಡಿಸಿಇಟಿ ಪರೀಕ್ಷೆ ಬರೆದು ಮುಂದಿನ ಹಂತದ ಸೀಟು ಹಂಚಿಕೆಯಲ್ಲಿ ಭಾಗವಹಿಸಿದ್ದೇನೆ. ಆದರೆ, ಡಿಪ್ಲೊಮಾ ನಂತರ ಮುಂದೇನು ಮಾಡಬೇಕು ಎಂಬ ಗೊಂದಲವಿದೆ. ಬಿಇ ಮಾಡಿದರೆ 3 ವರ್ಷ ಆಗುತ್ತದೆ. ಅತಿ ಕಡಿಮೆ ಸಮಯದಲ್ಲಿ ವಿದ್ಯಾಭ್ಯಾಸ ಮುಗಿಸಿ ಕೆಲಸಕ್ಕೆ ಸೇರಬೇಕು. ಡಿಪ್ಲೊಮಾ ನಂತರ ಬಿಇ ಕೋರ್ಸ್ ಆಯ್ಕೆಗಳ ಮಾಹಿತಿ ನೀಡಿ.**

ಪಿ. ಕರೀಶ್ಮಾ, ಹಾವೇರಿ

ಡಿಪ್ಲೊಮಾ (ಸಿವಿಲ್) ನಂತರ ಸಂಬಂಧಿತ ವಿಷಯಗಳಲ್ಲಿ ಎಂಜಿನಿಯರಿಂಗ್ ಕೋರ್ಸ್ (ಸಿವಿಲ್, ಟ್ರಾನ್ಸ್‌ಪೋರ್ಟೇಷನ್, ಎನ್ವಿರಾನ್ಮೆಂಟ್, ಕನ್‌ಸ್ಟ್ರಕ್ಷನ್ ಇತ್ಯಾದಿ) ಮಾಡಬಹುದು. ಅಥವಾ, ಸಿವಿಲ್ ಎಂಜಿನಿಯರಿಂಗ್ ಸಂಬಂಧಿತ ಕೆಲಸಕ್ಕೆ ಸೇರಿ ಎರಡು ವರ್ಷದ ಅನುಭವದ ನಂತರ ಎಂಜಿನಿಯರಿಂಗ್ ಕೋರ್ಸ್ ಅನ್ನು ಸಂಜೆ ಕಾಲೇಜಿನ ಮುಖಾಂತರ ಮಾಡಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಅದು ಕಾರ್ಯರೂಪಕ್ಕೆ ಬರುತ್ತದೆ ಎಂದು ನೀವು ನಂಬಿದರೆ, ನಿಮಗೆ ಅವಕಾಶಗಳು ಕಾಣುತ್ತವೆ. ಅದು ಆಗದು ಎಂದು ನಂಬಿದರೆ, ಅಡೆತಡೆಗಳು ಕಾಣುತ್ತವೆ.

-ವೇನ್ ಡಯರ್

ಕೋವಿಡ್ 3ನೇ ಅಲೆ ನಡುವೆಯೇ ಚುನಾವಣೆ: ಅತೀವ ಎಚ್ಚರ ಅಗತ್ಯ

ರಾಜಕೀಯ ಪಕ್ಷಗಳಿಗೆ ಅತ್ಯಂತ ಮಹತ್ವದ್ದಾದ ಉತ್ತರಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆಗೆ ಚುನಾವಣಾ ದಿನಾಂಕಗಳನ್ನು ಚುನಾವಣಾ ಆಯೋಗವು ಶನಿವಾರ ಪ್ರಕಟಿಸಿದೆ. ಗೋವಾ, ಉತ್ತರಾಖಂಡ, ಪಂಜಾಬ್ ಮತ್ತು ಮಣಿಪುರ ವಿಧಾನಸಭೆಗೂ ಚುನಾವಣೆ ನಡೆಯಲಿದೆ. 'ಕೋವಿಡ್ ಸಾಂಕ್ರಾಮಿಕದ ಮೂರನೇ ಅಲೆಯು ದೇಶವನ್ನು ಈಗಾಗಲೇ ಅಪ್ಪಳಿಸಿದೆ. ಈ ಬಾರಿ ಕೋವಿಡ್ ಪ್ರಕರಣಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಲಿದೆ' ಎಂದು ತಜ್ಞರು ಎಚ್ಚರಿಸಿದ್ದಾರೆ. ಎರಡನೇ ಅಲೆ ಸಂದರ್ಭದಲ್ಲಿ ಜನರು ಹೈರಾಣಾಗಿದ್ದರ ನೆನಪು ಇನ್ನೂ ಹಸಿಯಾಗಿಯೇ ಇದೆ. ಈಗ ಮೂರನೇ ಅಲೆಯ ನಡುವಲ್ಲಿಯೇ ಆಯೋಗವು ಚುನಾವಣಾ ದಿನಾಂಕಗಳನ್ನು ಘೋಷಿಸಿದೆ. ಹಲವು ದೇಶಗಳಲ್ಲಿ ಪತ್ತೆಯಾಗಿರುವ ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್, ಭಾರತದಲ್ಲಿಯೂ ಗಣನೀಯ ಸಂಖ್ಯೆಯಲ್ಲಿ ಇದೆ. ಇಂತಹ ಸಂದರ್ಭದಲ್ಲಿ ಚುನಾವಣೆ ನಡೆಸಬೇಕಾದ ಅನಿವಾರ್ಯ ಸೃಷ್ಟಿಯಾಗಿದೆ. ಚುನಾವಣೆಯು ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗ ಮತ್ತು ಅನಿವಾರ್ಯ ಪ್ರಕ್ರಿಯೆ. ಜನರ ಆರೋಗ್ಯ ಮತ್ತು ಜೀವನೋಪಾಯ ಹಾಗೂ ದೇಶದ ಅರ್ಥ ವ್ಯವಸ್ಥೆಯನ್ನು ಸಂರಕ್ಷಿಸಬೇಕಾದುದು ಕಡಿಮೆ ಮಹತ್ವದ ವಿಚಾರ ಏನಲ್ಲ. ಜನರ ಆರೋಗ್ಯಕ್ಕೆ ಯಾವ ಧಕ್ಕೆಯೂ ಆಗದ ರೀತಿಯಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಆಯೋಗವು ನಡೆಸಬೇಕಿದೆ.

ಕೋವಿಡ್ ಮಾರ್ಗಸೂಚಿಗಳನ್ನು ಅತ್ಯಂತ ಎಚ್ಚರಿಕೆಯಿಂದ ಪಾಲಿಸುವ ಸದ್ಬುದ್ಧಿಯನ್ನು ಜನ ಮತ್ತು ಜನನಾಯಕರು ಇಬ್ಬರೂ ಪ್ರದರ್ಶಿಸಲೇಬೇಕಿದೆ

ಈ ದಿಸೆಯಲ್ಲಿ ಆಯೋಗವು ಯೋಚನೆ ಮಾಡಿದೆ ಎಂಬುದು ಸ್ವಾಗತಾರ್ಹ ಸಂಗತಿ. ಇದೇ 15ರವರೆಗೆ ಪಾದಯಾತ್ರೆ, ರ‍್ಯಾಲಿ, ಸಮಾವೇಶ, ಬಹಿರಂಗ ಸಭೆಗಳನ್ನು ಆಯೋಗವು ನಿಷೇಧಿಸಿದೆ. ಮನೆ ಮನೆ ಪ್ರಚಾರಕ್ಕೆ ಕೂಡ ಅಭ್ಯರ್ಥಿ ಸೇರಿ ಐವರಿಗಿಂತ ಹೆಚ್ಚು ಜನರು ಹೋಗುವಂತಿಲ್ಲ ಎಂಬ ನಿಯಮ ರೂಪಿಸಿದೆ. ರಾತ್ರಿ ಎಂಟು ಗಂಟೆಯಿಂದ ಬೆಳಿಗ್ಗೆ ಎಂಟು ಗಂಟೆಯವರೆಗೆ, ಬಹಿರಂಗವಾದ ಯಾವುದೇ ಪ್ರಚಾರಕ್ಕೆ ಅವಕಾಶ ಇಲ್ಲ. ಮತ ಎಣಿಕೆಯ ಬಳಿಕವೂ ವಿಜಯೋತ್ಸವವನ್ನು ನಿಷೇಧಿಸಿದೆ. ವರ್ಚುವಲ್ ರೂಪದಲ್ಲಿಯೇ ಪ್ರಚಾರ ನಡೆಸಿ ಎಂದು ರಾಜಕೀಯ ಪಕ್ಷಗಳಿಗೆ ಆಯೋಗವು ಸಲಹೆ ಕೊಟ್ಟಿದೆ. ರಾಜಕೀಯ ಪಕ್ಷಗಳು ಈ ಸಲಹೆಯನ್ನು ಗಂಭೀರವಾಗಿ ತೆಗೆದುಕೊಳ್ಳಲೇಬೇಕಿದೆ. ಇಲ್ಲದೇ ಹೋದರೆ, ಜನರ ಮತ ಯಾಚನೆಗೆ ಹೋಗುವ ರಾಜಕೀಯ ಪಕ್ಷಗಳ ನಾಯಕರಿಗೆ ಜನರ ಬಗ್ಗೆ ಯಾವ ಕಾಳಜಿಯೂ ಇಲ್ಲ; ಮಾತ್ರವಲ್ಲ, ಜನರನ್ನು ಅವರು ತೃಣ ಸಮಾನವಾಗಿ ಕಾಣುತ್ತಾರೆ ಎಂಬುದರಲ್ಲಿ ಯಾವುದೇ ಅನುಮಾನ ಉಳಿಯುವುದಿಲ್ಲ.

ತಪ್ಪುಗಳಿಂದ ಪಾಠ ಕಲಿಯುವುದಿಲ್ಲ ಎಂಬುದನ್ನು ನಾವು ಪದೇ ಪದೇ ಸಾಬೀತು ಮಾಡುತ್ತಲೇ ಬಂದಿದ್ದೇವೆ. ಮಾಸ್ಕ್ ಧರಿಸುವುದು, ಪರಸ್ಪರ ಅಂತರ ಕಾಯ್ದುಕೊಳ್ಳುವುದು, ಗುಂಪುಗೂಡದೇ ಇರುವುದು, ಲಸಿಕೆ ಹಾಕಿಸಿಕೊಳ್ಳುವುದು ಕೋವಿಡ್‌ನಿಂದ ರಕ್ಷಣೆ ಪಡೆದುಕೊಳ್ಳಲು ಇರುವ ಮಾರ್ಗಗಳು. ಪ್ರಧಾನಿ ನರೇಂದ್ರ ಮೋದಿ ಅವರು ಕೋವಿಡ್ ಸಾಂಕ್ರಾಮಿಕದ ಮೊದಲ ಅಲೆ ಬಂದಾಗಿನಿಂದ ಹಲವು ಹತ್ತು ಬಾರಿ ಈ ಸಲಹೆಯನ್ನು ದೇಶದ ಜನರಿಗೆ ಕೊಟ್ಟಿದ್ದಾರೆ. ಆದರೆ, ಚುನಾವಣೆ ಘೋಷಣೆ ಆಗುವುದಕ್ಕಿಂತ ಮೊದಲು ಅವರು ಉತ್ತರಪ್ರದೇಶ, ಮಣಿಪುರ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಹಲವು ರ‍್ಯಾಲಿಗಳಲ್ಲಿ ಭಾಗಿಯಾಗಿದ್ದಾರೆ. ಉತ್ತರ-ಪ್ರದೇಶದ ಕಾಶಿ ವಿಶ್ವನಾಥ ಕಾರಿಡಾರ್‌ನ ಒಂದು ಹಂತದ ಯೋಜನೆಯ ಉದ್ಘಾಟನಾ ಸಮಾರಂಭ ಸೇರಿ ಹಲವು ರ‍್ಯಾಲಿಗಳಲ್ಲಿ ಮೋದಿ ಅವರು ಮಾಸ್ಕ್ ಇಲ್ಲದೆಯೇ ಕಾಣಿಸಿಕೊಂಡಿದ್ದಾರೆ. ದೇಶದ ಜನರಿಗೆ ಪ್ರಧಾನಿ ಮಾದರಿ ಆಗಬೇಕಲ್ಲವೇ? ಈ ಮಾತು ಪ್ರಧಾನಿಯವರಿಗೆ ಸೀಮಿತವಾಗಬೇಕಿಲ್ಲ. ಇತರ ರಾಜಕೀಯ ಪಕ್ಷಗಳ ಮುಖಂಡರೂ ಮಾಸ್ಕ್ ಇಲ್ಲದೆ ಸಾರ್ವಜನಿಕವಾಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ. ಅವರೂ, ಮಾದರಿಯಾಗುವಂತಹ ನಡವಳಿಕೆಯನ್ನು ತೋರಬೇಕು. ದೆಹಲಿ ಮುಖ್ಯಮಂತ್ರಿ ಮತ್ತು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರೂ ಹಲವು ಸಭೆಗಳಲ್ಲಿ ಮಾಸ್ಕ್ ಇಲ್ಲದೆ ಭಾಗಿಯಾಗಿದ್ದಾರೆ. ಅವರಿಗೆ ಕೊರೊನಾ ಸೋಂಕು ಇತ್ತೀಚೆಗೆ ದೃಢಪಟ್ಟಿತ್ತು. ಜನಪ್ರತಿನಿಧಿಗಳು ಮತ್ತು ಸಾಂವಿಧಾನಿಕ ಹುದ್ದೆಯಲ್ಲಿ ಇರುವವರ ಇಂತಹ ನಡವಳಿಕೆಯನ್ನು ಬೇಜವಾಬ್ದಾರಿ ಎನ್ನದೆ ಬೇರೆ ಏನೆನ್ನಬಹುದು? ಈ ವರ್ಷ ಫೆಬ್ರುವರಿ 10ರಿಂದ ಮಾರ್ಚ್ 7ರ ನಡುವೆ ಏಳು ಹಂತಗಳಲ್ಲಿ ಮತದಾನ ನಡೆಯಲಿದೆ. ಕಳೆದ ವರ್ಷವೂ ಸರಿಸುಮಾರು ಇದೇ ಅವಧಿಯಲ್ಲಿ ಅಂದರೆ ಮಾರ್ಚ್- ಏಪ್ರಿಲ್‌ನಲ್ಲಿ ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಅಸ್ಸಾಂ, ಪುದುಚೇರಿ ವಿಧಾನಸಭೆಗಳಿಗೆ ಚುನಾವಣೆ ನಡೆದಿತ್ತು. ಚುನಾವಣೆ ಘೋಷಣೆಗೆ ಮುನ್ನ ದೇಶದಲ್ಲಿ ದಿನನಿತ್ಯ ದೃಢಪಡುತ್ತಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ 20 ಸಾವಿರದ ಒಳಗೆ ಇತ್ತು. ಚುನಾವಣೆ ಮುಗಿದ ನಂತರ ಮೇ ತಿಂಗಳ ಹೊತ್ತಿಗೆ ದಿನವೂ ದೃಢಪಡುತ್ತಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ ನಾಲ್ಕು ಲಕ್ಷವನ್ನು ದಾಟಿತ್ತು. ರಾಜಕೀಯ ನೇತಾರರು ಚುನಾವಣೆ ಇರುವ ರಾಜ್ಯಗಳಲ್ಲಿ ಯಾವ ಎಗ್ಗೂ ಇಲ್ಲದೆ ರ‍್ಯಾಲಿ, ಸಮಾವೇಶಗಳನ್ನು ನಡೆಸಿದರು. ಜನರು ಸಾವಿರಾರು ಸಂಖ್ಯೆಯಲ್ಲಿ ಸೇರಿದರು. ಯಾವ ಮುನ್ನೆಚ್ಚರಿಕೆಯನ್ನು ಯಾರೂ ಕೈಗೊಳ್ಳಲಿಲ್ಲ. ತಿಳಿ ಹೇಳಬೇಕಾದ ನಾಯಕರೇ ಕೋವಿಡ್ ತಡೆ ನಿಯಮಗಳನ್ನು ಗಾಳಿಗೆ ತೂರಿದರು. ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯ ಹೊಡೆತಕ್ಕೆ ಜನರು ದಿಕ್ಕೆಡುವಂತಾಯಿತು. ಈಗ ಮೂರನೇ ಅಲೆ ಆರಂಭವಾಗಿದೆ. ಚುನಾವಣೆ ನಡೆಯಬೇಕಿದೆ. ಕೋವಿಡ್ ತಡೆ ನಿಯಮಗಳನ್ನು ಅತ್ಯಂತ ಎಚ್ಚರಿಕೆಯಿಂದ ಪಾಲಿಸುವ ಸದ್ಬುದ್ಧಿಯನ್ನು ರಾಜಕೀಯ ನಾಯಕರು ಪ್ರದರ್ಶಿಸಲೇಬೇಕಿದೆ. ಹಳೆಯ ತಪ್ಪುಗಳಿಂದ ಪಾಠ ಕಲಿಯಲು ಜನರು ಮನಸ್ಸು ಮಾಡಲೇಬೇಕಾದ ಸ್ಥಿತಿಯಲ್ಲಿ ಇಂದು ದೇಶವು ಇದೆ. ಇಲ್ಲದಿದ್ದರೆ ಕೋವಿಡ್‌ನ ಇನ್ನೊಂದು ಅಲೆಯು ದೇಶವು ತತ್ತರಿಸುವಂತೆ ಮಾಡಬಹುದು.

ದಿನದ ಟ್ವೀಟ್

ಇಂತಹ ತಾರತಮ್ಯವೇಕೆ?

ಸಂವಿಧಾನದ 348ನೇ ವಿಧಿ ಪ್ರಕಾರ, ಕೆಲವೊಂದಿಷ್ಟು ರಾಜ್ಯಗಳಲ್ಲಿ ಹಿಂದಿಯನ್ನು ಹೈಕೋರ್ಟಿನಲ್ಲಿ ಬಳಸಲು ಅವಕಾಶ ನೀಡಲಾಗಿದೆ. ಆದರೆ, ಸಂವಿಧಾನದಲ್ಲಿ ಅವಕಾಶವಿದ್ದರೂ ಕರ್ನಾಟಕ, ತಮಿಳುನಾಡು, ಗುಜರಾತ್ ರಾಜ್ಯಗಳಲ್ಲಿ ಆಯಾ ರಾಜ್ಯದ ಭಾಷೆಯನ್ನು ಬಳಸಲು ಅವಕಾಶ ನೀಡಿಲ್ಲ. ಗುಜರಾತಿನ ಹೈಕೋರ್ಟಿನಲ್ಲಿ ಗುಜರಾತಿ ಬಳಸಲು ಅವಕಾಶವಿಲ್ಲದ್ದು, ಕರ್ನಾಟಕದ ಹೈಕೋರ್ಟಿನಲ್ಲಿ ಕನ್ನಡ ಬಳಸಲು ಅವಕಾಶ ಇಲ್ಲದಿರುವುದು ಎರಡೂ ಒಂದೇ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ

ನಮ್ಮ ನೀರು ನಮ್ಮ ಹಕ್ಕು ಎನ್ನುವ ಬದ್ಧತೆ ನಮ್ಮದು. ಮೇಕೆದಾಟು ಯೋಜನೆ ಅನುಷ್ಠಾನಗೊಳಿಸಲು ಡಿ.ಕೆ. ಶಿವಕುಮಾರ್ ಅವರ ಗೆಳೆಯ ಎಂ.ಕೆ. ಸ್ಟಾಲಿನ್ ಅಡ್ಡಗಾಲು ಹಾಕಿದ್ದಾರೆ. ತಮಿಳುನಾಡಿನಲ್ಲಿ ಮಗುವನ್ನು ಚಿವುಟಿ ಕರ್ನಾಟಕದಲ್ಲಿ ತೊಟ್ಟಿಲು ತೂಗುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಇದು ಜನರಿಗೆ ತಿಳಿಯಲ್ಲ ಎನ್ನುವ ಭ್ರಮೆಯಲ್ಲಿದ್ದಾರೆ.

ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಶುಕ್ರವಾರ, 10-1-1997

• ಅಂಗನವಾಡಿ ಅಕ್ರಮ ಬಯಲು

ಬೆಂಗಳೂರು, ಜ. 9– ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಪೌಷ್ಟಿಕ ಆಹಾರದ ಖರೀದಿ ಮತ್ತು ವಿತರಣೆಯಲ್ಲಿ ಭಾರಿ ಅವ್ಯವಹಾರ ನಡೆದು, ಸರ್ಕಾರಕ್ಕೆ ಕನಿಷ್ಠ ₹25 ಕೋಟಿ ನಷ್ಟವಾಗಿರುವ ಪ್ರಕರಣವನ್ನು ವಿಧಾನಮಂಡಲದ ವಿಷಯ ಸಮಿತಿ ಬಯಲು ಮಾಡಿದೆ.

ರಾಜ್ಯದಲ್ಲಿನ 39,985 ಅಂಗನವಾಡಿಗಳಲ್ಲಿ 32,31,730 ಫಲಾನುಭವಿಗಳಿಗೆ ನೀಡುತ್ತಿರುವ ಪೌಷ್ಟಿಕ ಆಹಾರ ಖರೀದಿ, ವಿತರಣೆಯಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದಿದ್ದು ಈ ಬಗ್ಗೆ ಸಿಓಡಿ ತನಿಖೆ ನಡೆಸುವಂತೆ ಕಾರ್ಮಿಕ, ಸಮಾಜ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ವಿಷಯ ಸಮಿತಿ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ.

50 ವರ್ಷಗಳ ಹಿಂದೆ

ಸೋಮವಾರ, 10-1-1972

• ನೆರವು ಸ್ವೀಕಾರದ ಬಗ್ಗೆ ಬಾಂಗ್ಲಾದೇಶ ಸರ್ಕಾರದ ಎಚ್ಚರಯುಕ್ತ ಧೋರಣೆ

ನವದೆಹಲಿ, ಜ. 9– ತಮ್ಮ ಸರ್ಕಾರವು ನೆರವಿಗಾಗಿ ಭಿಕ್ಷೆ ಬೇಡದೆಂದೂ ಸಮರತಪ್ತ ದೇಶದ ಪುನರ್‌ನಿರ್ಮಾಣ ಕಾರ್ಯಕ್ಕೆ ಮಿತ್ರ ರಾಷ್ಟ್ರಗಳಿಂದ ನೆರವು ಪಡೆಯುವುದೆಂದೂ ಬಾಂಗ್ಲಾದೇಶದ ವಿದೇಶಾಂಗ ಸಚಿವ ಅಬ್ದುಸಮದ್ ಅವರು ಇಂದು ಇಲ್ಲಿ ಹೇಳಿದರು.

'ಭಿಕ್ಷುಕರಿಗೆ ಏನು ಬೇಕೆಂದು ಕೇಳುವ ಹಕ್ಕಿಲ್ಲ'ವೆಂಬ ಗಾದೆಯನ್ನು ಪ್ರಸ್ತಾಪಿಸುತ್ತ 'ನಮ್ಮ ವಿಷಯದಲ್ಲಿ ಪರಿಸ್ಥಿತಿ ಸ್ವಲ್ಪ ಬೇರೆ ರೀತಿಯದು, ನಮಗೆ ಏನು ಬೇಕೆಂದು ಕೇಳುವ ಹಕ್ಕು ನಮಗಿದೆ. ನಮ್ಮ ಮಿತ್ರರು ಯಾರು, ಶತ್ರುಗಳು ಯಾರು ಎಂಬುದು ವಿಮೋಚನಾ ಸಮರದ ಕಾಲದಲ್ಲಿ ತಿಳಿದುಬಂದಿತು. ಮಿತ್ರರೊಬ್ಬರು ಒಂದು ಲೋಟ ನೀರು ಕೊಟ್ಟರೆ ಯಾವ ಯೋಚನೆಯೂ ಇಲ್ಲದೆ ಅದನ್ನು ಸ್ವೀಕರಿಸುತ್ತೇವೆ. ಆದರೆ ಶತ್ರುವೊಬ್ಬರು ಇಲ್ಲವೆ ಶತ್ರುವಿನ ಮಿತ್ರರೊಬ್ಬರು ನೀರು ಕೊಟ್ಟರೆ ಅದು ವಿಷವಿರಬಹುದೆಂದು ನಾನು ಶಂಕಿಸುತ್ತೇನೆ' ಎಂದು ಸಚಿವ ಸಮದ್ ಹೇಳಿದರು.

ಶಾಲೆ ಮುಚ್ಚುವುದರಿಂದ ಆಗುವ ನಷ್ಟವನ್ನು ಲಘುವಾಗಿ ಪರಿಗಣಿಸುತ್ತಿರುವುದು ದುರದೃಷ್ಟಕರ

ಶಾಲಾ ಶಿಕ್ಷಣ ಮತ್ತು ಕಲಿಕಾ ವಾಸ್ತವ

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಸರ್ಕಾರವು ಶಾಲೆಗಳನ್ನು ಮುಚ್ಚುವ ಬಗ್ಗೆ ಮತ್ತೊಮ್ಮೆ ಚರ್ಚೆ ಪ್ರಾರಂಭಿಸಿದೆ. ಬೆಂಗಳೂರು ನಗರದಲ್ಲಿ ಎರಡು ವಾರಗಳ ಕಾಲ ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಈಗಾಗಲೇ ಪ್ರಕಟಿಸಿದೆ. ವಿದ್ಯಾಗಮ ಪ್ರಾರಂಭಿಸುವಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಇದು ನಿಜಕ್ಕೂ ಆತಂಕದ ವಿಚಾರ. ಸಮಸ್ಯೆಯನ್ನು ನಿರ್ವಹಿಸಲು ಸಾಧ್ಯವಿಲ್ಲವೆಂಬ ಕಾರಣಕ್ಕೆ ಶಾಲೆಗಳನ್ನು ಮುಚ್ಚುವುದು ಪರಿಹಾರವಾಗಲಾರದು. ನಾವು ಕೋವಿಡ್ ಕಾಲಘಟ್ಟದ ಎರಡು ವರ್ಷಗಳ ಅನುಭವದಿಂದ ಹೆಚ್ಚೇನೂ ಕಲಿತಂತೆ ಕಾಣಿಸುತ್ತಿಲ್ಲ.

2020ರ ಮಾರ್ಚ್‌ನಿಂದ 2021ರ ಅಕ್ಟೋಬರ್‌ವರೆಗೆ ಹೆಚ್ಚುಕಡಿಮೆ ಶಾಲೆಗಳು ಮುಚ್ಚಿದ್ದ ಕಾರಣ, ಲಕ್ಷಾಂತರ ಮಕ್ಕಳ ಪೋಷಣೆ, ಪೌಷ್ಟಿಕತೆ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳು ಉಲ್ಬಣಿಸಿದ್ದನ್ನು ನೀತಿ ಆಯೋಗದ ಸೂಚ್ಯಂಕವೂ ಸೇರಿದಂತೆ ಹಲವು ವರದಿಗಳು ದೃಢಪಡಿಸಿವೆ. ಜೊತೆಗೆ, ದೀರ್ಘಕಾಲ ಶಾಲೆಗಳು ಮುಚ್ಚಿದ್ದರಿಂದ ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹ, ಕೌಟುಂಬಿಕ ದೌರ್ಜನ್ಯ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಮಕ್ಕಳ ಭಿಕ್ಷಾಟನೆ ಅಂತಹವುಗಳೆಲ್ಲವೂ ಮೂರ್ನಾಲ್ಕು ಪಟ್ಟು ಹೆಚ್ಚಿದ್ದೂ ಹಲವು ಅಧ್ಯಯನಗಳಲ್ಲಿ ಕಂಡುಬಂದಿದೆ.

ಮಕ್ಕಳ ಅದರಲ್ಲೂ ವಿಶೇಷವಾಗಿ ಗ್ರಾಮೀಣ-ನಗರ ಭಾಗದ ಅವಕಾಶವಂಚಿತ ಹಾಗೂ ಕೆಳಸ್ತರದ ಸಾಮಾಜಿಕ ಗುಂಪುಗಳಿಗೆ ಸೇರಿದ ಮಕ್ಕಳ ಕಲಿಕೆ ಸಂಪೂರ್ಣ ಹಳಿ ತಪ್ಪಿದ್ದು, ಕೋವಿಡ್ ಪೂರ್ವದಲ್ಲಿ ಕಲಿತ ಭಾಷಾ ಹಾಗೂ ಗಣಿತ ಜ್ಞಾನವನ್ನು ಅವರು ಕಳೆದುಕೊಂಡಿರುವುದನ್ನು ಕ್ಷೇತ್ರ ಮಟ್ಟದ ಹಲವು ಅಧ್ಯಯನಗಳು ದೃಢಪಡಿಸಿವೆ. ಈ ಮಕ್ಕಳು ರಚನಾತ್ಮಕ ಕಲಿಕೆಯ ಅವಕಾಶಗಳನ್ನು ಕಳೆದುಕೊಂಡ ಕಾರಣ ತೀವ್ರವಾದ ಶೈಕ್ಷಣಿಕ ಬಿಕ್ಕಟ್ಟು ಉಂಟಾಗಿರುವುದನ್ನು ಶಿಕ್ಷಣ ಇಲಾಖೆಯ ಅಧ್ಯಯನಗಳು ಸಹ ದೃಢಪಡಿಸಿವೆ.

ಕಲಿಕೆ ದೀರ್ಘಕಾಲ ಸ್ಥಗಿತಗೊಂಡರೆ ವಿಶೇಷವಾಗಿ ಚಿಕ್ಕ ಮಕ್ಕಳು ಕಲಿಕಾ ಅಭ್ಯಾಸಗಳನ್ನೇ ಮರೆತುಬಿಡುವ ಸಾಧ್ಯತೆ ಇರುತ್ತದೆ. ಈ ಮೂಲಕ ಮೂಲ ಕೌಶಲಗಳಾದ ಆಲಿಸುವುದು, ಓದುವುದು, ಬರೆಯುವುದು ಹಾಗೂ ಉಳಿದ ಐಚ್ಛಿಕ ವಿಷಯಗಳ ಜ್ಞಾನವನ್ನು ಅವರು ಕಳೆದುಕೊಂಡು ಕಲಿಕೆಯಲ್ಲಿ ನಿರಾಸಕ್ತರಾಗಿರುವುದನ್ನು ಶಾಲಾ ಪುನರಾರಂಭದ ನಂತರ ಹಲವು ಶಿಕ್ಷಕರು ವರದಿ ಮಾಡಿದ್ದಾರೆ. ಪರಿಣಾಮವಾಗಿ, ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಶಾಲೆ ತೊರೆದಿರುವುದು ಕಂಡುಬಂದಿದೆ.

ಆನ್‌ಲೈನ್ ಶಿಕ್ಷಣದ ಬಗ್ಗೆ ನಾವು ಎಷ್ಟೇ ಹೇಳಿದರೂ ಅದು ಶೈಕ್ಷಣಿಕವಾಗಿ ಅರ್ಥಪೂರ್ಣವಲ್ಲ ಎಂಬುದು ಕೂಡ ಅಧ್ಯಯನಗಳಿಂದ ಕಂಡುಬಂದಿದೆ. ಇಂತಹ ಬೆಳವಣಿಗೆಗಳು, ಇಡೀ ಒಂದು ತಲೆಮಾರಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಈ ಎಲ್ಲಾ ಅಂಶಗಳು ಸರ್ಕಾರಕ್ಕೆ ಗೊತ್ತಿದ್ದರೂ ಶಾಲೆಗಳನ್ನು ಮುಚ್ಚಲು ಹಾತೊರೆಯುವುದನ್ನು ನೋಡಿದರೆ, ಅದು ವೈಚಾರಿಕ ನಿಲುವು ಹಾಗೂ ಸಾಕ್ಷ್ಯಾಧಾರಗಳ ಬದಲಿಗೆ, ಕೇವಲ ಆತಂಕ ಹಾಗೂ ಅವೈಜ್ಞಾನಿಕವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿರುವುದು ಗೋಚರಿಸುತ್ತದೆ.

ಇಲ್ಲಿಯವರೆಗಿನ ಸಂಶೋಧನೆಗಳ ಅನ್ವಯ, ಮಕ್ಕಳಲ್ಲಿ ಕೋವಿಡ್ ಸಂಬಂಧಿ ಸಾವು-ನೋವು ತೀರಾ ಅತ್ಯಲ್ಪ. ಶಾಲಾ ಹಂತದಲ್ಲಿ ಪ್ರಮಾಣೀಕರಿಸಿದ ಸಾಮಾನ್ಯ ಸಾರ್ವಜನಿಕ ಆರೋಗ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವ ಮೂಲಕ ಸೋಂಕು ಪ್ರಸರಣವನ್ನು ತಡೆಯಬಹುದಾಗಿದೆ. ಈ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳ ನಡುವೆಯೂ ಮಕ್ಕಳಲ್ಲಿ ರೋಗ ಲಕ್ಷಣಗಳು ದೃಢಪಟ್ಟರೆ ಅವರನ್ನು ಪ್ರತ್ಯೇಕಿಸಿ ನಿಯಮಾನುಸಾರ ಚಿಕಿತ್ಸೆ ನೀಡುವುದು ವೈಜ್ಞಾನಿಕ ಕ್ರಮವಾಗುತ್ತದೆ. ಈ ಅಂಶವನ್ನು ಮರೆಮಾಚಿ ಎಲ್ಲಾ ಶಾಲೆಗಳನ್ನು ಮುಚ್ಚುವ ತೀರ್ಮಾನ ಸರ್ಕಾರದ ವೈಫಲ್ಯವನ್ನು ತೋರಿಸುತ್ತದೆ.

ರಾಜಕೀಯ ನಾಯಕತ್ವವು ವೈಜ್ಞಾನಿಕ ತತ್ವಗಳು ಮತ್ತು ಸಂಶೋಧನೆಯ ತಾರ್ಕಿಕತೆಯ ಆಧಾರದ ಮೇಲೆ ತೀರ್ಮಾನಗಳನ್ನು ಕೈಗೊಳ್ಳಬೇಕೆಂದು ಪ್ರಜ್ಞಾವಂತರು ಪದೇಪದೇ ಒತ್ತಾಯಿಸುತ್ತಿದ್ದಾರೆ. ಜೊತೆಗೆ ಜನರ ಆರ್ಥಿಕ, ಸಾಮಾಜಿಕ ಹಾಗೂ ಜೀವನಾಧಾರ ವಿಷಯಗಳ ಮೇಲೆ ಲಾಕ್‌ಡೌನ್ ಎಂತಹ ಕೆಟ್ಟ ಪರಿಣಾಮ ಬೀರುತ್ತದೆ ಎಂಬುದನ್ನು ಪರಿಗಣಿಸಬೇಕಿದೆ. ಇದೇ ರೀತಿ, ಮಕ್ಕಳ ಶೈಕ್ಷಣಿಕ, ದೈಹಿಕ, ಮಾನಸಿಕ ಹಾಗೂ ಸರ್ವತೋಮುಖ ಬೆಳವಣಿಗೆಯ ಮೇಲೆ ಲಾಕ್‌ಡೌನ್ ಉಂಟು ಮಾಡಬಹುದಾದ ನಷ್ಟವನ್ನೂ ಪರಿಗಣಿಸಬೇಕಿದೆ. ಆದರೆ ಸರ್ಕಾರಗಳು ಈ ನಷ್ಟವನ್ನು ಲಘುವಾಗಿ ಮತ್ತು ನಿರ್ದಯವಾಗಿ ಪರಿಗಣಿಸುತ್ತಿರುವುದು ದುರದೃಷ್ಟಕರ.

ಶಾಲೆಗಳನ್ನು ತೆರೆಯುವ ಬದಲು ಮುಚ್ಚುವುದರಿಂದ ಉಂಟಾಗಬಹುದಾದ ಹಾನಿಯ ಪ್ರಮಾಣವನ್ನು ಹೋಲಿಸಿ ನೋಡಿದರೆ, ಶಾಲೆಗಳು ಏಕೆ ಮುಚ್ಚಬಾರದು ಎಂಬುದು ಸ್ಪಷ್ಟವಾಗುತ್ತದೆ. ಈ ಕಾರಣದಿಂದಲೇ ಜಗತ್ತಿನ ಹಲವು ದೇಶಗಳಲ್ಲಿ ಸಾಂಕ್ರಾಮಿಕ ರೋಗದ ಕಾಲಘಟ್ಟದುದ್ದಕ್ಕೂ ಶಾಲೆಗಳನ್ನು ತೆರೆಯುವುದಕ್ಕೇ ಹೆಚ್ಚು ಒತ್ತು ನೀಡಲಾಗಿದೆ.

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಹೆಚ್ಚಿನ ಸಂಖ್ಯೆಯ ಶಾಲೆಗಳಲ್ಲಿ, ಅಂದರೆ ಸರಿಸುಮಾರು 23,176 ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ತಲಾ 50ಕ್ಕಿಂತ ಕಡಿಮೆ. ಈ ಶಾಲೆಗಳಿಗೆ ಬರುವ ಮಕ್ಕಳು ಅನೇಕ ಸಂದರ್ಭಗಳಲ್ಲಿ ಯಾವುದೇ ನಿರ್ಬಂಧಗಳಿಲ್ಲದೆ ತಮ್ಮ ಮನೆಗಳ ಹೊರಗೆ ಪರಸ್ಪರ ಆಟವಾಡುತ್ತಿರುತ್ತಾರೆ.

ಕಡಿಮೆ ದಾಖಲಾತಿ ಇರುವ ಯಾವುದೇ ಶಾಲೆಗಳನ್ನು ಮುಚ್ಚುವುದರಲ್ಲಿ ಅರ್ಥವಿಲ್ಲ. ಮಕ್ಕಳು ಅಲ್ಲಿ ಸುರಕ್ಷಿತರಾಗಿದ್ದಾರೆ ಎಂದು ಪುರಾವೆಗಳು ಸೂಚಿಸುತ್ತವೆ. ಈ ಎಲ್ಲಾ ಶಾಲೆಗಳಲ್ಲಿ ಬಿಸಿಯೂಟವನ್ನು ಒದಗಿಸಬೇಕು. ಕಾರಣ, ಅಪೌಷ್ಟಿಕತೆ ಇರುವ ಮಕ್ಕಳಿಗೆ ಒಣ ಪಡಿತರ ವಿತರಣೆಯಿಂದ ಹೆಚ್ಚು ಪ್ರಯೋಜನವಿಲ್ಲ. ಶಾಲೆಯಲ್ಲಿ ತಯಾರಿಸಿದ ಬಿಸಿಯೂಟವು ಮಕ್ಕಳ ಅಪೌಷ್ಟಿಕತೆ ತೊಡೆದು ಹಾಕುವುದಲ್ಲದೆ ಅವರ ಆರೋಗ್ಯವನ್ನು ನಿರಂತರವಾಗಿ ಕಾಪಾಡುತ್ತದೆ.

ಶಾಲೆ ತೆರೆಯುವ ಅಥವಾ ಮುಚ್ಚುವ ವಿಚಾರವನ್ನು ವಿಧಾನಸೌಧದಲ್ಲಿ ತೀರ್ಮಾನಿಸುವ ಬದಲು ಜಿಲ್ಲಾ, ತಾಲ್ಲೂಕು ಪಂಚಾಯಿತಿ ಹಂತದ ಸ್ಥಳೀಯ ಸರ್ಕಾರಗಳಿಗೆ ಹಾಗೂ ಶಾಲಾ ಹಂತದಲ್ಲಿನ ಕಾನೂನುಬದ್ಧ ಸಂಸ್ಥೆಗಳಾದ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳಿಗೆ ಬಿಡಬೇಕು. ಈ ಸಂಸ್ಥೆಗಳು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೊರಡಿಸಿದ ವಿಸ್ತೃತ ಮಾರ್ಗಸೂಚಿಗಳ ಅನ್ವಯ ಹೆಚ್ಚಿನ ನಮ್ಯತೆಯಿಂದ ತೀರ್ಮಾನಗಳನ್ನು ತೆಗೆದುಕೊಳ್ಳಲು ಅನುಕೂಲ ಕಲ್ಪಿಸಬೇಕು. ಕೋವಿಡ್ ಪ್ರಕರಣಗಳು ಪತ್ತೆಯಾದಾಗ, ನಿಯಂತ್ರಣ ಮತ್ತು ವೈದ್ಯಕೀಯ ಆರೈಕೆಗಾಗಿ ಸ್ಥಳೀಯವಾಗಿ ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಲು ಅಗತ್ಯ ಸಂಪನ್ಮೂಲಗಳನ್ನು ಒದಗಿಸಬೇಕು.

ಒಂದು ನಿರ್ದಿಷ್ಟ ಗ್ರಾಮ ಪಂಚಾಯಿತಿಯಲ್ಲಿ ಟಿಪಿಆರ್ (ಪಾಸಿಟಿವಿಟಿ ದರ) ಹೆಚ್ಚಿದ್ದರೆ, ಕಡಿಮೆ ಟಿಪಿಆರ್ ಹೊಂದಿರುವ ಪಕ್ಕದಲ್ಲಿನ ಪಂಚಾಯಿತಿಗಳ ಶಾಲೆಗಳನ್ನು ಮುಚ್ಚಬೇಕಾಗಿಲ್ಲ. ಮಕ್ಕಳ ಮೇಲೆ ಪರಿಣಾಮ ಬೀರುವ ಹೆಚ್ಚಿನ ಸಂಖ್ಯೆಯ ತೀವ್ರತರವಾದ ಪ್ರಕರಣಗಳು ಕಂಡುಬಂದರೆ ಮಾತ್ರ ತಾಲ್ಲೂಕು ಅಥವಾ ಜಿಲ್ಲಾ ಹಂತದಲ್ಲಿ ವ್ಯಾಪಕವಾಗಿ ಶಾಲೆಗಳನ್ನು ಮುಚ್ಚುವ ಬಗ್ಗೆ ಪರಿಗಣಿಸಬೇಕು.

ಬಹುತೇಕ ಶಿಕ್ಷಕರಿಗೆ ಈಗಾಗಲೇ ಲಸಿಕೆ ಹಾಕಲಾಗಿದೆ. ಶಿಕ್ಷಕರು ಶಾಲೆಗಳಲ್ಲಿ ಇರಬೇಕು ಮತ್ತು ಕಲಿಸಬೇಕು. ಕೋವಿಡ್ ಸಂಬಂಧಿ ಅಥವಾ ಇತರ ಕಾರ್ಯಗಳಿಗೆ ಅವರನ್ನು ನಿಯೋಜಿಸಬಾರದು. ಈ ಕೆಲಸಗಳಿಗೆ ಸರ್ಕಾರಗಳು ಪರ್ಯಾಯ ವ್ಯವಸ್ಥೆಗಳನ್ನು ಮಾಡಬೇಕು. ಉದಾಹರಣೆಗೆ, ತಮಿಳುನಾಡಿನಲ್ಲಿ ಸಮುದಾಯ ಸಂಬಂಧಿತ ಚಟುವಟಿಕೆಗಳಿಗೆ ಶಿಕ್ಷಕರ ಬದಲು ನಿರುದ್ಯೋಗಿ ಯುವ ಸ್ವಯಂಸೇವಕರನ್ನು ನೇಮಿಸಿಕೊಳ್ಳಲಾಗಿದೆ. ಇದು ಅನುಕರಣೀಯ.

ಕೊನೆಯದಾಗಿ, ಶಾಲೆಗಳು ಬಹಳಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ನೈರ್ಮಲ್ಯವನ್ನು ಖಚಿತಪಡಿಸಿಕೊಳ್ಳಲು ನೀರು, ಸಾಬೂನು, ಅಗತ್ಯ ಇದ್ದಲ್ಲಿ ಮುಖಗವಸಿನಂತಹ ಅಗತ್ಯ ಸಂಪನ್ಮೂಲಗಳನ್ನು ಸರ್ಕಾರ ಶಾಲೆಗಳಿಗೆ ಒದಗಿಸಬೇಕು. ತರಗತಿಗಳನ್ನು ಸಾಧ್ಯವಾದಷ್ಟೂ ತೆರೆದ ಸ್ಥಳದಲ್ಲಿ ಅಥವಾ ಚೆನ್ನಾಗಿ ಗಾಳಿ ಬರುವ ಕೋಣೆಗಳಲ್ಲಿ ನಡೆಸಬೇಕು.

ಒಟ್ಟಾರೆ, ಶಾಲೆಗಳನ್ನು ಮುಚ್ಚುವುದು ಮಕ್ಕಳ ಕಲಿಕೆಗೆ ಮಾತ್ರವಲ್ಲದೆ ಸರ್ವತೋಮುಖ ಅಭಿವೃದ್ಧಿಗೆ ಗಂಭೀರ ಹಾನಿಯನ್ನು ಉಂಟುಮಾಡುತ್ತದೆ. ಈ ಹಾನಿಯ ಪ್ರಮಾಣವನ್ನು ತಗ್ಗಿಸಲು ಮತ್ತು ಕಲಿಕಾ ಪ್ರಕ್ರಿಯೆಗಳನ್ನು ಪುನರಾರಂಭಿಸಲು ಶಾಲೆಗಳನ್ನು ತೆರೆದಿರುವುದು ಅತ್ಯವಶ್ಯಕ. ಸರ್ಕಾರಗಳಿಗೆ ಶಾಲೆಗಳನ್ನು ಮುಚ್ಚುವುದು ಕೊನೆಯ ಹಾಗೂ ತೆರೆಯುವುದು ಮೊದಲ ಆದ್ಯತೆಯಾಗಿರಬೇಕು.

ಲೇಖಕ: ಅಭಿವೃದ್ಧಿ ಶಿಕ್ಷಣ ತಜ್ಞ

ಚುರುಮುರಿ



ಕೋವಿಡಣ್ಣನ ಸಭೆ

• ಸುಮಂಗಲಾ

ಹಿರಿ ಕೋವಿಡಣ್ಣನ ಅಧ್ಯಕ್ಷತೆಯಲ್ಲಿ ಮರಿ, ಕಿರಿ ಕೋವಿಡ್ಡುಗಳೆಲ್ಲ ಸಭೆ ಸೇರಿದ್ದವು.

'ಕರುನಾಡಿನಲ್ಲಿ ಕೊರೊನಾ ಎಲ್ಲೈತೆ? ಒಬ್ಬರಾದ್ರೂ ಐಸಿಯುನಲ್ಲಿ ಮಕ್ಕಂಡಿದಾರಾ?' ಎಂಬ ಡಿಕೇಶಣ್ಣನ ಪ್ರಶ್ನೆಯ ಕೂರಂಬು ಹಿರಿ ಕೋವಿಡಣ್ಣನ ಎದೆಯ ಹೊಕ್ಕಿತ್ತು.

'ಏನ್ರಲೇ... ಕೊರೊನಾ ಎಲ್ಲೈತೆ ಅಂತ ಕೇಳ್ತಾವರೆ... ನೀವೆಲ್ಲ ಎಲ್ಲಿ ತಣ್ಣಗೆ ಬಿದ್ಕಂಡಿದೀರಿ' ಎಂದು ಹಿರಿ ಕೋವಿಡಣ್ಣ ಗುಡುಗಿದ.

'ಡೆಲ್ಟಾ ಸಾಕು, ಓಮೈಕ್ರಾನ್ ವೇಷ ಹಾಕ್ಕಂಡು ಹೋಗ್ರಿ ಅಂತ ನೀನು ಹೇಳಿದಂಗೇ ಮಾಡಾಕೆ ಹತ್ತೀವಿ' ಒಂದು ಮರಿ ಕೋವಿಡ್ಡು ತುಸು ಧೈರ್ಯದಿಂದ ಉಸುರಿತು.

'ಈಗ ನಮ್ಮ ಬಗ್ಗೆ ಯಾರಿಗೂ ಭಯಭಕ್ತಿ ಏನೂ ಉಳಿದಿಲ್ಲ. ವೀಕೆಂಡು ಕರ್ಫ್ಯೂ ಅಂತಾರೆ... ನೋಡಿದ್ರೆ ಗೃಹ ಸಚಿವರ ಹುಟ್ಟೂರಿನಲ್ಲೇ ಜಾತ್ರೆ ನಡೆಸ್ತಾರೆ, ಇನ್ನೆಲ್ಲೋ ಕುರಿ ಸಂತೆ ನಡೆಸ್ತಾರೆ. ಏನೇನೋ ಸುಡುಗಾಡು ಸುಂಟಕೊಂಬು ಪ್ರಚಾರ, ಸಭೆ, ಸಮ್ಮೇಳನ ಅಂತ ಗುಂಪುಗೂಡ್ತವರೆ, ಮುಖಕ್ಕೆ ಮಾಸ್ಕೂ ಇಲ್ಲದೆ ರಾಜಾರೋಷವಾಗಿ ಓಡಾಡ್ತವರೆ' ಹಿರಿ ಕೋವಿಡಣ್ಣ ಮತ್ತೆ ಗುಡುಗಿದ.

'ನಾವೇನ್ ಸುಮ್ಮನೆ ಕುತ್ತಿಲ್ಲ... ಒಂದೇ ದಿನದಾಗೆ ಕರುನಾಡಿನಾಗೆ 12 ಸಾವಿರ ಮಂದಿ ಮ್ಯಾಲೆ, ದೇಶದಾಗೆ ಸುಮಾರು ಒಂದೂವರೆ ಲಕ್ಷ ಮಂದಿ ಮ್ಯಾಲೆ ದಾಳಿ ನಡಿಸೀವಿ, ಅವರ ಮನೆ ಮ್ಯಾಲೆ ಕೊರೊನಾ ಧ್ವಜ ಹಾರಿಸಿದೀವಿ' ಇನ್ನೊಂದು ಕಿರಿ ಕೋವಿಡ್ಡು ಅಂಕಿಸಂಖ್ಯೆ ಮುಂದಿಟ್ಟಿತು.

'ಏನೇ ಹೇಳಪ್ಪೋ... ಭರತಖಂಡದ ರಾಜಕಾರಣಿಗಳ, ಕೂಗುಮಾರಿಗಳ ವೀರನಾಲಿಗೆಗಳ ಮುಂದೆ ಯಾರೂ ಗೆಲ್ಲೋದಕ್ಕೆ ಆಗಲ್ಲ, ಅಬ್ಬಬ್ಬ...' ಎಂದು ಮುದಿ ಕೋವಿಡ್ಡು ಒಂದು ಗೊಣಗಿತು.

ಸಂಗತ

ತೆರೆಯಲಿ ಅರಿವಿನ ಕಿಟಕಿ

ಮಾನವೀಯ ಮೌಲ್ಯಗಳಿರುವ ಸ್ವಚ್ಛ ಭಾರತವನ್ನು ಉಳಿಸಿಕೊಳ್ಳಬೇಕಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

'ಹಿಂದೆಲ್ಲಾ ಕಲೆ, ಸಾಹಿತ್ಯ, ಸಂಸ್ಕೃತಿಗಳೆಂದರೆ ಬದುಕನ್ನು ಹಿತವಾಗಿ ಪ್ರಚೋದಿಸುವ, ಪ್ರೇರೇಪಿಸುವ, ಪೋಷಿಸುವ ಹಾಗೆಯೇ ಸಮಾಜವನ್ನು ಪರಿವರ್ತಿಸುವ ವಿಶಿಷ್ಟ ಸಂವೇದನಾ ವಲಯಗಳಾಗಿ ಗುರುತಾಗಿದ್ದವು. ಆದರೆ ಕಲೆ, ಕ್ರೀಡೆ, ಮಾಧ್ಯಮ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪ್ರಾಕಾರಗಳಿಂದು ಪರಿಶುದ್ಧವಾಗಿ ಉಳಿದಿಲ್ಲ. ಜಾತಿ-ಧರ್ಮ, ರಾಜಕೀಯ ಹಿತಾಸಕ್ತಿ ಮತ್ತು ಯಾವುದೋ ಅಗೋಚರ ತತ್ವಸಿದ್ಧಾಂತಗಳ ನೆರಳಲ್ಲಿ ಅವೀಗ ತಮ್ಮ ಸಹಜ ಚೈತನ್ಯ, ಸೃಜನಶೀಲತೆ, ಸ್ವಾತಂತ್ರ್ಯ-ಸ್ವಾಯತ್ತತೆಗಳನ್ನು ಕಳಕೊಂಡು ನರಳುತ್ತಿವೆ'– ಹೀಗಂತ ಸಭೆಯೊಂದರಲ್ಲಿ ಲೇಖಕರೊಬ್ಬರು ವಿಷಾದಿಸುತ್ತಿದ್ದರು.

ನಿಜ, ಸಮಾಜದ ಅಂತಃಸತ್ವಗಳಾದ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳಿಂದು ಹಣ ಅಧಿಕಾರದ ಹಿಂದೆ ಬಿದ್ದಿವೆ. ಆತ್ಮವಂಚನೆ ಮಾಡಿಕೊಳ್ಳುತ್ತಿವೆ, ಅಪಹಾಸ್ಯ ಕ್ರೀಡಾಗುತ್ತಿವೆ. ಇಂತಹ ವೈಪರೀತ್ಯಕ್ಕೆ ಕಾರಣವೂ ಸ್ಪಷ್ಟ. ಇವತ್ತಿನ ವಿಲಕ್ಷಣ ಕಾಲಘಟ್ಟದಲ್ಲಿ ಯಾರಿಗೂ ಸ್ವತಂತ್ರರಾಗಿ ಬದುಕುವುದು ಸಾಧ್ಯವಾಗುತ್ತಿಲ್ಲ. ಬದುಕಹೊರಟರೂ ಅವರವರ ಪರಿಸರ ಬಿಡುವುದಿಲ್ಲ. ಪ್ರತಿಯೊಬ್ಬರನ್ನೂ ಯಾವುದೋ ಚೌಕಟ್ಟಿನಲ್ಲಿ ಕಟ್ಟಿ, ತಮ್ಮದೇ ತಕ್ಕಡಿಯಲ್ಲಿಟ್ಟು ತೂಗುವ ಪರಿಪಾಟ ತೀರಾ ಸಾಮಾನ್ಯ ಎಂಬಂತಾಗಿದೆ. ವ್ಯಕ್ತಿಯ ಬೆಳವಣಿಗೆ, ನಡೆ-ನಿಲುವು, ಪ್ರತಿಭೆ, ಸಾಧನೆಗಳಲ್ಲದೆ ಅವನ ಮೋಸ, ದೋಷ, ದೌರ್ಬಲ್ಯಗಳನ್ನು ಮುಕ್ತವಾಗಿ ಸಮಷ್ಟಿ ಪ್ರಜ್ಞೆಯಲ್ಲಿ ಗ್ರಹಿಸುವ ಬದಲು ಪೂರ್ವಗ್ರಹಪೀಡಿತರಾಗಿ, ಜಾತಿ-ಧರ್ಮ, ಪಕ್ಷ-ಸಿದ್ಧಾಂತಗಳ ಕನ್ನಡಕದಲ್ಲಿ ನೋಡುವಂತಾಗಿದೆ. ಹಾಗಾಗಿ ಸತ್ಯ, ನ್ಯಾಯ, ನೀತಿಗಳೆಲ್ಲ ವೈಯಕ್ತಿಕ ನೆಲೆಯಲ್ಲಿ ಸಾಪೇಕ್ಷಗೊಂಡಿವೆ!

ಕೆಲವೆಡೆ ಅಪಾತ್ರರನ್ನೂ ತಮ್ಮವರೆಂದು ಮೆಚ್ಚುವುದಿದೆ, ಮೆರೆಸುವುದಿದೆ. ಬಹುತೇಕ ಕ್ರಿಡಾಪಟುಗಳು, ಕಲಾವಿದರದು ಕೂಡ ತಮ್ಮ ಪ್ರತಿಭೆಗೊಂದು ಸ್ಥಾನಬಲೆ ಗಿಟ್ಟಿಸಿಕೊಳ್ಳಲು ಎಗ್ಗಿಲ್ಲದೆ ಜಾತಿ-ಧರ್ಮ, ಪಕ್ಷ-ಸಿದ್ಧಾಂತದೊಟ್ಟಿಗೆ ಗುರುತಿಸಿಕೊಳ್ಳುವುದು ಅಥವಾ ತಮ್ಮ ಅಸಮರ್ಥತೆ, ಅಕ್ರಮ-ಗಳನ್ನು ಮರೆಮಾಚುವ ಪರದೆಯನ್ನಾಗಿಯೂ ಅದನ್ನು ಬಳಸಿಕೊಳ್ಳುವ ಹಪಹಪಿ.

ಇಂಥದ್ದಕ್ಕೆಲ್ಲಾ ಅಪವಾದವೆಂಬಂತೆ ಡಾ. ರಾಜ್‌ಕುಮಾರ್ ಬದುಕಿನುದ್ದಕ್ಕೂ ಘನ ವ್ಯಕ್ತಿತ್ವವನ್ನು ಜೀವಿಸಿದ್ದರು. ಅತೀವ ಒತ್ತಡವಿದ್ದಾಗಲೂ ಅವರೆಂದಿಗೂ ರಾಜಕಾರಣದೆಡೆಗೆ ತಿರುಗಿಯೂ ನೋಡದೆ ಕೇವಲ ಕಲೆಯನ್ನಷ್ಟೇ ಆರಾಧಿಸಿದರು, ಉಸಿರಾಡಿದರು. ನೆರೆಯ ತಮಿಳುನಾಡು, ಆಂಧ್ರ ಪ್ರದೇಶದಲ್ಲಿ ತಮ್ಮವಾರಿಗೆಯ ಎಂಜಿಆರ್, ಎನ್‌ಟಿಆರ್‌ರಂತಹ ಸಿನಿನಟರು ರಾಜಕೀಯ, ಅಧಿಕಾರದ ಬೆನ್ನುಹತ್ತಿ ಹೊರಟರೆ ಡಾ. ರಾಜ್ ಕೆಸರು ಮೈಗಂಟಿಸಿಕೊಳ್ಳದ ಕಮಲದಂತೆ ಅಪೂರ್ವ ಮಾದರಿಯಾಗಿ ಉಳಿದುಬಿಟ್ಟರು. ಅವರ ಸಿನಿಮಾಗಳಲ್ಲಿ ಪ್ರೇಕ್ಷಕರಿಗೆ ಅವರೊಬ್ಬ ಪರಕಾಯ ಪ್ರವೇಶಿಸಿದ ಪಾತ್ರಧಾರಿಯಾಗಿ ಕಾಣುತ್ತಿದ್ದರೇ ವಿನಾ ಜಾತಿ-ಧರ್ಮ, ಪಕ್ಷ-ಪಂಗಡಗಳ ಯಾವ ನೆನಪನ್ನೂ ತಾರದೆ ಕಲಾರಸಿಕರಿಗೆ ರಸಾಸ್ವಾದಕ್ಕಷ್ಟೇ ಆಸ್ಪದ ನೀಡುತ್ತಿದ್ದರು.

ಹಿಂದೆಲ್ಲಾ ಜನರಿಗೆ ತಮ್ಮ ಜಾತಿ, ಧರ್ಮ ಅಥವಾ ಯಾವುದೋ ಒಂದು ರಾಜಕೀಯ ಪಕ್ಷದ ಪರವಾಗಿ ಬಹಿರಂಗವಾಗಿ ಗುರುತಿಸಿಕೊಳ್ಳಲು ಮುಜುಗರ ಇರುತ್ತಿತ್ತು. ವಿಶೇಷವಾಗಿ ವಿದ್ಯಾವಂತರಿಗಂತೂ ಯಾವುದೇ ಪಕ್ಷ-ಸಿದ್ಧಾಂತಗಳೂ ಪರಿಪೂರ್ಣವಲ್ಲ ಎಂಬ ಗ್ರಹಿಕೆಯೂ ಕುಲಕಸುಬಿನ ಆಧಾರದಲ್ಲಿ ರಚನೆಗೊಂಡ ಜಾತಿಗಳ ಹುಟ್ಟು-ಬೆಳವಣಿಗೆ ಕುರಿತಾದ ಪ್ರಬುದ್ಧತೆಯೂ ಎಲ್ಲ ಧರ್ಮಗಳೂ ಶ್ರೇಷ್ಠವೆಂಬ ಪ್ರಾಥಮಿಕ ಅರಿವೂ ಇದ್ದವು. ಮತ್ತೊಂದು ಸಿದ್ಧಾಂತ, ಪಕ್ಷ, ಪಂಗಡ ಅಥವಾ ವ್ಯಕ್ತಿಗಳನ್ನು ಸಾರ್ವಜನಿಕವಾಗಿ ಟೀಕಿಸುವಾಗ ಕೂಡ ಸಂಯಮ-ವಿವೇಕದ ಗೆರೆಯನ್ನು ದಾಟುತ್ತಿರಲಿಲ್ಲ. ಮನುಷ್ಯಸಹಜ ಭಿನ್ನಧ್ವನಿಗಳ ಬಗೆಗೊಂದು ಸಹಿಷ್ಣುತೆ, ಗೌರವಗಳಿದ್ದವು. 'ಇದು ಒಂದು ಕೂಳ್ಗಂಬದ ಮೇಲೆ ನಿಂತ ಡೇರೆಯಲ್ಲ, ಸಾವಿರ ಕಂಬಗಳ ಮೇಲೆ ನಿಂತ ಚಪ್ಪರ...' ಎಂಬ ಬಹುತ್ವ ಭಾರತದ ಕುರಿತಾದ ಗೌರೀಶ ಕಾಯ್ಕಿಣಿಯವರ ಅರಿವಿನ ಮಾತು ಸಾಂದರ್ಭಿಕವಾದುದು.

ಇದು ಎಡ– ಬಲ ಸಿದ್ಧಾಂತದ ಮೇಲಾಟವಿರುವ ಕಾಲಘಟ್ಟ. ಜೀವಪರವಾಗಿ, ಮನುಷ್ಯಪರವಾಗಿ ಯೋಚಿಸುವುದೇ ಕೆಲವೊಮ್ಮೆ ಕಷ್ಟಕರ ಅನಿಸುವಷ್ಟು. ನಡುಮಾರ್ಗದ ನಡಿಗೆಗೆ ಆಸ್ಪದವೇ ಕಮ್ಮಿ. ಪ್ರತಿಯೊಬ್ಬರನ್ನೂ ಒತ್ತಾಯಪೂರ್ವಕವಾಗಿಯಾದರೂ ಸಿದ್ಧಾಂತವೊಂದಕ್ಕೆ ಕಟ್ಟಿಹಾಕುವ ಪ್ರಯತ್ನವೀಗ ನಿರಂತರವಾಗಿ ಚಾಲ್ತಿಯಲ್ಲಿದೆ.

ಸುದೀರ್ಘ ಜೀವನಾನುಭವ ಮತ್ತು ಆಳ ಅಧ್ಯಯನವುಳ್ಳ ಹಿರಿಯರನೇಕರ ಅಪರಿಮಿತ ಜ್ಞಾನ-ಸೇವೆಗಳನ್ನು ಕ್ಷುಲ್ಲಕವಾಗಿ ಅರ್ಥೈಸುವಂತಹ ಉಡಾಫೆ ಧೋರಣೆಗಳಿಗೂ ಬರವಿಲ್ಲ. ಗುಣಸಂಪನ್ನರ ಸಾಂಗತ್ಯರಾಹಿತ್ಯವೂ ಇಂಥದ್ದಕ್ಕೊಂದು ಕಾರಣ. ವಿದ್ಯಾರ್ಥಿಗಳು-ಯುವಕರು ನೈಜತೆಯನ್ನು ಪರಾಮರ್ಶಿಸುವ ಪ್ರಬುದ್ಧತೆ ತೋರದೆ ಸುಳ್ಳು, ಆಧಾರರಹಿತ ಸಂದೇಶಗಳನ್ನೇ ನಂಬುತ್ತಾ, ಹರಡುತ್ತಾ ವಾಟ್ಸ್‌ಆ್ಯಪ್ ಯೂನಿವರ್ಸಿಟಿಯ ಜ್ಞಾನವೇ ಸರ್ವೋತ್ತಮ ಎಂಬಂತೆ ವರ್ತಿಸುತ್ತಿರುವ ವಿಲಕ್ಷಣ ಮನಃಸ್ಥಿತಿ ಅಪಾಯಕಾರಿ ಅನಿಸುತ್ತದೆ.

ಒಂದು ಸಿದ್ಧಾಂತವನ್ನು ಸಂಕುಚಿತತೆಯಲ್ಲಿ ಆತುಕೊಂಡು, ಅರಿವು ತರಬಲ್ಲ ಕಿಟಕಿ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿಕೊಂಡು ಹೊಸ ಗಾಳಿ-ಬೆಳಕಿಗೆ ತೆರೆದುಕೊಳ್ಳದ ಅರೆಬೆಂದ ಮನಃಸ್ಥಿತಿಗಳ ಅರ್ಭಟ ಬಹಳಷ್ಟು ಅನಾಹುತಗಳನ್ನು ಸೃಷ್ಟಿಸುತ್ತಿದೆ. ಕಾಲಾಂತರದಿಂದ ಕಾಪಿಟ್ಟುಕೊಂಡು ಬಂದ ಸಾಮರಸ್ಯದ ಜೀವನಶೈಲಿಯನ್ನು ಹಾಳುಗೆಡವುತ್ತಿದೆ.

ಸಮಾಜವೀಗ ಹೊಣೆಗಾರಿಕೆಯನ್ನರಿತು, ಸ್ವಯಂ-ನಿಯಂತ್ರಣದಲ್ಲಿ ರಾಗ-ದ್ವೇಷಗಳ ಕೊಳೆ ತೊಳೆದು ಭವಿಷ್ಯದ ಎಳೆಯ ಕುಡಿಗಳೆದುರು ಪ್ರೀತಿ, ಕರುಣೆ, ಮಾನವೀಯ ಮೌಲ್ಯಗಳಿರುವ ಸ್ವಚ್ಛ ಭಾರತವನ್ನು ಉಳಿಸಿಕೊಳ್ಳಬೇಕಿದೆ.

ವಾಚಕರ ವಾಣಿ

ರಾಜಕೀಯ ಬಲಿಪಶುಗಳಾಗದಿರಲಿ

ಅಸ್ಪೃಶ್ಯರಲ್ಲಿ ಅತ್ಯಂತ ಅಸ್ಪೃಶ್ಯರಾದ ಜಾತಿಗೆ ಸೇರಿದವರು ದಕ್ಕಲಿಗರು. ಇವರು ಮಾದಿಗರ ಉಪಜಾತಿ. ದಲಿತರ ಕೆಲ ಜಾತಿಗಳು ಇವರನ್ನು ಮನೆಗೆ ಸೇರಿಸಿಕೊಳ್ಳುವುದಿಲ್ಲ. ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ, ಸಚಿವರಾದ ಗೋವಿಂದ ಕಾರಜೋಳ ಹಾಗೂ ಕೋಟ ಶ್ರೀನಿವಾಸ ಪೂಜಾರಿ ಅವರು ಈ ಸಮುದಾಯಕ್ಕೆ ಸೇರಿದ ದಂಪತಿಯ ಪಾದಪೂಜೆ ಮಾಡಿ ಸಮಾಜಕ್ಕೆ ಮಾದರಿ ಎನಿಸಿದ್ದಾರೆ. ಆದರೆ ಮಾದಿಗ ಉಪಜಾತಿ ದಕ್ಕಲಿಗರಾಗಲಿ, ಭಿಕ್ಷೆ ಬೇಡಿ ಜೀವನ ನಡೆಸುವ ಅಲೆಮಾರಿಗಳಾಗಲಿ ರಾಜಕೀಯ ಬಲಿಪಶುಗಳಾಗಬಾರದು.

ಸಬಲರಾಗಿರುವ ಮೇಲ್ವರ್ಗದವರಿಗೆ ನಿಗಮದ ಮೂಲಕ ಕೋಟ್ಯಂತರ ರೂಪಾಯಿ ಅನುದಾನ ದೊರಕಿಸಿಕೊಟ್ಟಿರುವಾಗ ಇವರಿಗೆ ಇಲ್ಲದ್ದು ಶೋಚನೀಯ ಸಂಗತಿ. ಬಲಿಷ್ಠ ಕೋಮುಗಳಿಗೆ ಎಲ್ಲಾ ಸವಲತ್ತು ಸಿಗುತ್ತಿರುವ ಈ ಸಂದರ್ಭದಲ್ಲಿ ಅಲೆಮಾರಿಗಳಿಗೆ ಸರ್ಕಾರದ ಸವಲತ್ತು ಅಗತ್ಯವಾಗಿದೆ. ಸರ್ಕಾರ ಇತ್ತ ಗಮನಹರಿಸಬೇಕು. ಮೊದಲಿಗೆ ಅವರ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ಸಿಗಬೇಕು.

ಡಾ. ಎ.ಆರ್. ಗೋವಿಂದಸ್ವಾಮಿ, ಬೆಂಗಳೂರು

ಸೂಕ್ತ ನೀತಿ ರೂಪಿಸುವುದೇ ಪರಿಹಾರ

ದೇವಾಲಯಗಳನ್ನು ಸರ್ಕಾರದ ಹಿಡಿತದಿಂದ ಮುಕ್ತಗೊಳಿಸಿದರೆ ಅವುಗಳಿಂದ ಬರುವ ವರಮಾನವನ್ನು ದೇವಾಲಯಗಳ ಅಭಿವೃದ್ಧಿ ಹಾಗೂ ಇತರ ಸಮಾಜಸೇವಾ ಕಾರ್ಯಗಳಿಗೆ ಬಳಸಬಹುದು ಎಂಬುದು ಒಪ್ಪಬಹುದಾದ ವಿಷಯವಾದರೂ ದೇವಾಲಯಗಳ ಹಣ ದುರ್ಬಳಕೆ ಆಗಲಾರದು ಎಂಬ ಖಾತರಿಯಿಲ್ಲ.

ನೆಮ್ಮದಿಯ ಏಕಮಾತ್ರ ತಾಣಗಳಾದ ದೇವಾಲಯಗಳೂ ಜಾತಿ, ರಾಜಕೀಯದ ಅಖಾಡಗಳಾಗುವ ಸಾಧ್ಯತೆಯೇ ಹೆಚ್ಚು. ಆದ್ದರಿಂದ ದೇವಾಲಯಗಳು ಸರ್ಕಾರದ ಹಿಡಿತದಲ್ಲೇ ಇದ್ದು, ಅವುಗಳಿಂದ ಬರುವ ವರಮಾನವನ್ನು ಅವುಗಳ ಅಭಿವೃದ್ಧಿ ಹಾಗೂ ಸಮಾಜಸೇವಾ ಕಾರ್ಯಗಳಿಗೆ ಬಳಸಿಕೊಳ್ಳುವಂತೆ ನೀತಿಯನ್ನು ರೂಪಿಸುವುದು ಇದಕ್ಕೆ ಸೂಕ್ತ ಪರಿಹಾರವಾಗಬಲ್ಲದು.

ಪ್ರಮೋದ್ ಈ.ಟಿ., ಹಿರಿಯೂರು

ಅರಿಯಬೇಕಿದೆ ರಾಜಕೀಯ ಹಿತಾಸಕ್ತಿ

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಸರ್ಕಾರಿ ಕಾಲೇಜಿನಲ್ಲಿ ಉಂಟಾಗಿರುವ ಸ್ಕಾರ್ಫ್- ಕೇಸರಿ ಶಾಲಿನ ವಿವಾದ ಆತಂಕಕಾರಿಯಾಗಿದೆ. ಸ್ಕಾರ್ಫ್ ಕೇವಲ ಮುಸಲ್ಮಾನರ ಉಡುಗೆಯಾಗಿರದೆ ಇತರರೂ ಬಳಸುವುದನ್ನು ಕಾಣಬಹುದು. ಆದರೆ, ಕೇಸರಿ ಶಾಲು ಹಿಂದೂಗಳ ಪಾರಂಪರಿಕ ಉಡುಗೆಯ ಭಾಗ ಖಂಡಿತಾ ಅಲ್ಲ (ಕೇಸರಿ ಸನ್ಯಾಸತ್ವದ ಸಂಕೇತ ಎಂದು ಪರಿಗಣಿಸಬಹುದಾದರೂ, ವಿದ್ಯಾರ್ಥಿಗಳು ಸನ್ಯಾಸ ಸ್ವೀಕರಿಸಿಲ್ಲವಲ್ಲ!).

ಇಷ್ಟೇ ಅಲ್ಲದೆ, ಕೇಸರಿ, ಹಸಿರು, ಹಳದಿ- ಕೆಂಪು ಶಾಲುಗಳು ರಾಜಕೀಯ ಹಿತಾಸಕ್ತಿ ಮತ್ತು ಉದ್ದೇಶಗಳ ಕಾರಣಕ್ಕೆ ಬಳಕೆಗೆ ಬಂದವು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದ್ದರಿಂದ, ಈ ಕುರಿತು ಕಾಲೇಜಿನ ಆಡಳಿತ ಮಂಡಳಿಯು ವಿದ್ಯಾರ್ಥಿಗಳು ಮತ್ತು ಅವರ ಪೋಷಕರಿಗೆ ತಿಳಿಹೇಳಿ, ಮಕ್ಕಳು ರಾಜಕೀಯ ಹಿತಾಸಕ್ತಿಯ ದಾಳವಾಗುವುದನ್ನು ತಪ್ಪಿಸಬೇಕಾದ ಅವಶ್ಯಕತೆಯಿದೆ.

ಭಾರ್ಗವ ರಾಮ, ಕೊಪ್ಪ

ನಿವೃತ್ತಿ ವಯಸ್ಸು ಏರಿಕೆ: ಹಿಮ್ಮುಖ ನಡಿಗೆ

ಎಲ್ಲೆಡೆ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿರುವ ಈ ಸಂದರ್ಭದಲ್ಲಿ ಆಂಧ್ರಪ್ರದೇಶ ಸರ್ಕಾರವು ತನ್ನ ನೌಕರರ ನಿವೃತ್ತಿ ವಯಸ್ಸನ್ನು 60ರಿಂದ 62ಕ್ಕೆ ಏರಿಸಲು ಮುಂದಾಗಿರುವುದು ಹಿಮ್ಮುಖ ನಡಿಗೆಯೇ ಸರಿ. ಅಷ್ಟಕ್ಕೂ ಅರವತ್ತು ವರ್ಷಗಳ ನಂತರ ಕೆಲಸ ಮಾಡಲು ಮುಂಚಿನ ಸ್ಥೈರ್ಯ ಇರುವುದು ಸಾಧ್ಯವಿಲ್ಲ. ಅಲ್ಲದೆ, ಒಂದು ರಾಜ್ಯದ ಸರ್ಕಾರ ಈ ರೀತಿ ಮಾಡಿದರೆ, ಇತರ ಎಲ್ಲ ರಾಜ್ಯಗಳ ನೌಕರರು ಇಂತಹ ಕ್ರಮಕ್ಕಾಗಿ ಹಕ್ಕೊತ್ತಾಯ ಮಂಡಿಸುತ್ತಾರೆ. ಹೀಗಾಗಿ ಇಂತಹ ನಿರ್ಧಾರ ಕೈಗೊಳ್ಳುವ ಮೊದಲು ಕೇಂದ್ರ ಹಾಗೂ ಇತರ ರಾಜ್ಯ ಸರ್ಕಾರಗಳು ಪರಸ್ಪರ ಒಮ್ಮತದ ನಿರ್ಧಾರ ಕೈಗೊಳ್ಳಬೇಕು. ಯಾವುದೇ ಸರ್ಕಾರ ನೌಕರರ ಮನವೊಲಿಸುವ ಹಾಗೂ ಚುನಾವಣಾ ಗಿಮಿಕ್ ಆಗುವಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು.

ಪ್ರೊ. ಎಂ.ಎಸ್.ರಘುನಾಥ್, ಬೆಂಗಳೂರು

ಗುರುತರ ಜವಾಬ್ದಾರಿ ಮನಗಾಣಬೇಕಿದೆ

ಕೋವಿಡ್ ಸಾಂಕ್ರಾಮಿಕದ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿ ಮಾಡುವುದಿಲ್ಲ ಎಂದು ರಾಜ್ಯ ಆರೋಗ್ಯ ಸಚಿವರು ಹೇಳಿರುವುದು ಸೂಕ್ತವಾಗಿದೆ. ಕೊರೊನಾ ವೈರಸ್ಸಿನ ಹರಡುವಿಕೆ ತಡೆಯಲು ರಾತ್ರಿ ಕರ್ಫ್ಯೂ, ವಾರಾಂತ್ಯದ ಕರ್ಫ್ಯೂವಿನ ಕಠಿಣ ಮಾರ್ಗಸೂಚಿಗಳು ಮಾತ್ರ ಜಾರಿಯಲ್ಲಿ ಇರುತ್ತವೆ ಎಂಬ ಸಚಿವರ ಸ್ಪಷ್ಟನೆಯು ಸ್ವಾಗತಾರ್ಹವಾಗಿದೆ. ಲಾಕ್‌ಡೌನ್ ಎಂಬುದು ಕೋವಿಡ್ ಸಾಂಕ್ರಾಮಿಕದ ಬಗೆಗೆ ಸ್ಪಷ್ಟ ಅರಿವು ಇರದ ಸಮಯದಲ್ಲಿ ಜಾರಿಗೆ ಬಂದ ಕ್ರಮವಾಗಿದೆ. ಈಗ ಕೊರೊನಾ ಮತ್ತು ಅದರ ರೂಪಾಂತರ ತಳಿಗಳ ರೋಗ ಲಕ್ಷಣಗಳ ಬಗ್ಗೆ ಅರಿತಿದ್ದೇವೆ. ಅಷ್ಟಾದರೂ ಈಗಲೂ ಲಾಕ್‌ಡೌನ್‌ನಂತಹ ಪದ್ಧತಿಯನ್ನೇ ಅನುಸರಿಸುವುದು ಸರಿಯಲ್ಲ. ಸಾಂಕ್ರಾಮಿಕ ರೋಗಾಣುವನ್ನು ಎದುರಿಸುವುದಕ್ಕೆ ನಾವೆಲ್ಲ ಸಂಪೂರ್ಣ ಸನ್ನದ್ಧರಾಗಿದ್ದೇವೆ ಎಂಬ ಆತ್ಮವಿಶ್ವಾಸದ ಮಾತನ್ನು ಸಚಿವರ ಸ್ಪಷ್ಟನೆಯಲ್ಲಿ ಕಾಣಬಹುದಾಗಿದೆ. ಜನ ಇನ್ನಾದರೂ ಎಚ್ಚೆತ್ತು ಕೊರೊನಾ ವೈರಾಣು ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು. ದೈಹಿಕ ಅಂತರ ಪಾಲನೆ, ಕಡ್ಡಾಯ ಮಾಸ್ಕ್ ಧರಿಸುವಿಕೆ, ಶುಚಿತ್ವದ ಬಗ್ಗೆ ಹೆಚ್ಚಿನ ಜಾಗ್ರತೆ ವಹಿಸುವಂತಹ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇದು ನಮ್ಮೆಲ್ಲರ ಕರ್ತವ್ಯವೂ ಹೌದು. ಸದಾ ಎಚ್ಚರ ವಹಿಸಿ, ಜನದಟ್ಟಣೆ ಆಗದಂತೆ ನೋಡಿಕೊಳ್ಳುವ ಮತ್ತು ಸಭೆ, ಸಮಾರಂಭಗಳನ್ನು ಹಮ್ಮಿಕೊಳ್ಳದೆ ರೋಗ ನಿಯಂತ್ರಣಕ್ಕೆ ತರುವ ದಿಸೆಯಲ್ಲಿ ಎಲ್ಲರ ಸಹಕಾರ ಅತ್ಯವಶ್ಯವಾಗಿದೆ ಹಾಗೂ ಗುರುತರ ಜವಾಬ್ದಾರಿ ಎಲ್ಲರದ್ದಾಗಿದೆ ಎಂಬುದನ್ನು ಮನಗಾಣಬೇಕಾಗಿದೆ. ನಮ್ಮ ಸುರಕ್ಷತೆಯೊಂದಿಗೆ ಪರರ ಸುರಕ್ಷತೆಗೂ ಆದ್ಯತೆ ನೀಡಿ ಸಾಮಾಜಿಕ ಬದ್ಧತೆ ಮೆರೆಯಬೇಕಾಗಿದೆ.

ಆರ್.ಬಿ.ಜಿ. ಘಂಟಿ, ಅಮೀನಗಡ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಉತ್ತರ’ದ ಗದ್ದುಗೆಗೆ ಕಾರ್ಯತಂತ್ರ ಹತ್ತಾರು

ಉತ್ತರ ಪ್ರದೇಶ ವಿಧಾನಸಭೆಗೆ ಇನ್ನೇನು ಕೆಲವೇ ದಿನಗಳಲ್ಲಿ ಮತದಾನ ಆರಂಭವಾಗಲಿದೆ. ಚುನಾವಣಾ ದಿನಾಂಕ ಘೋಷಣೆಗೂ ಮುನ್ನವೇ ರಾಜಕೀಯ ಪಕ್ಷಗಳ ಪ್ರಚಾರ ಅಬ್ಬರದಲ್ಲಿಯೇ ನಡೆದಿದೆ. ರಾಷ್ಟ್ರ ರಾಜಕಾರಣದ ದೃಷ್ಟಿಯಿಂದಲೂ ಅತ್ಯಂತ ಮಹತ್ವದ್ದಾದ ಉತ್ತರ ಪ್ರದೇಶದಲ್ಲಿ ಅಧಿಕಾರ ಉಳಿಸಿಕೊಳ್ಳಲು ಬಿಜೆಪಿ ಹರಸಾಹಸ ಪಡುತ್ತಿದೆ. ಸಮಾಜವಾದಿ ಪಕ್ಷವು ಅಧಿಕಾರಕ್ಕೆ ಏರಲು ಹಲವು ಕಾರ್ಯತಂತ್ರಗಳನ್ನು ಹಾಕಿಕೊಂಡಿದೆ. ಕಾಂಗ್ರೆಸ್ ಪಕ್ಷವು ಹೊಸ ರೀತಿಯ ಪ್ರಚಾರದ ಮೂಲಕ ಗಮನ ಸೆಳೆದಿದೆ. ಬಹುಜನ ಸಮಾಜ ಪಕ್ಷ ಮಾತ್ರ ಹುರುಪು ಕಳೆದುಕೊಂಡಂತೆ ಕಾಣಿಸುತ್ತಿದೆ

• ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.

ಬಿಜೆಪಿಯ ಮಂದಿರ – ಮಸೀದಿ ಜಪ

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯನ್ನು ಬಿಜೆಪಿ ಈ ಬಾರಿಯೂ ಹಿಂದುತ್ವದ ನೆಲೆಯಲ್ಲಿಯೇ ಎದುರಿಸಲು ಭೂಮಿಕೆಯನ್ನು ಸಿದ್ಧಪಡಿಸಿಕೊಂಡಿದೆ. 2017ರ ವಿಧಾನಸಭಾ ಚುನಾವಣೆಯನ್ನು ಎದುರಿಸುವಾಗ ಬಿಜೆಪಿಯು ಭ್ರಷ್ಟಾಚಾರ ನಿರ್ಮೂಲನೆ, ಅಭಿವೃದ್ಧಿ, ಎಲ್ಲರ ವಿಕಾಸ, ಹಿಂದುತ್ವ ಮತ್ತು ರಾಮ ಮಂದಿರ ವಿಚಾರವನ್ನು ಇಟ್ಟುಕೊಂಡಿತ್ತು. ಆದರೆ ಈ ಬಾರಿ ಹಿಂದುತ್ವದ ಪ್ರತಿಪಾದನೆಯನ್ನೇ ಬಿಜೆಪಿ ಆತುಕೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಇಲ್ಲಿ ಭಾಗಿಯಾಗಿದ್ದ ರ‍್ಯಾಲಿಯೊಂದರಲ್ಲಿ ಇದನ್ನು ಸ್ಪಷ್ಟವಾಗಿ ಹೇಳಿದ್ದರು. ‘ರಾಮಮಂದಿರ ನಿರ್ಮಾಣಕ್ಕೆ ನೆರವು ನೀಡಲು ಬಂದಿದ್ದ ಕರಸೇವಕರಿಗೆ ಸಮಾಜವಾದಿ ಪಕ್ಷದ ಸರ್ಕಾರ ಗುಂಡು ಹಾರಿಸಲು ಆದೇಶ ನೀಡಿತ್ತು. ಅವರಿಗೆ ನೀವು ಮತ ನೀಡುತ್ತೀರಾ? ನಾವು ರಾಮಮಂದಿರ ನಿರ್ಮಿಸಿದ್ದೇವೆ’ ಎಂದು ಹೇಳಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಸಹ ರ‍್ಯಾಲಿಯೊಂದರಲ್ಲಿ ಇದೇ ಮಾತುಗಳನ್ನು ಹೇಳಿದ್ದರು.

ಯೋಗಿ

ರಾಮಮಂದಿರ ನಿರ್ಮಾಣಕ್ಕೆ ಸುಪ್ರೀಂ ಕೋರ್ಟ್‌ನ ಅನುಮತಿ ದೊರೆತ ನಂತರ, ‘ರಾಮಮಂದಿರ ನಮ್ಮದಾಯಿತು, ಕಾಶಿ–ಮಥುರಾ ಇನ್ನೂ ಬಾಕಿಯಿದೆ’ ಎಂದು ರಾಜ್ಯ ಬಿಜೆಪಿ ನಾಯಕರು ಘೋಷಿಸಿದ್ದರು. ಆ ಘೋಷಣೆಯ ಪ್ರಕಾರವೇ ಬಿಜೆಪಿ ಚುನಾವಣೆಗೆ ತಯಾರಿ ನಡೆಸಿದೆ.

ಪ್ರಧಾನಿ ಮೋದಿ ಅವರ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿರುವ ಧಾರ್ಮಿಕ ಕ್ಷೇತ್ರವಾದ ಕಾಶಿಯನ್ನು ರಾಜ್ಯ ಸರ್ಕಾರವು ₹1,000 ಕೋಟಿ ವೆಚ್ಚದಲ್ಲಿ ಪುನರಭಿವೃದ್ಧಿ ಪಡಿಸಿದೆ. ಅಭಿವೃದ್ಧಿ ಕಾರ್ಯಗಳು ಪೂರ್ಣವಾಗಲು ಇನ್ನೂ ನಾಲ್ಕೈದು ತಿಂಗಳ ಕಾಮಗಾರಿ ನಡೆಯಬೇಕಿದೆ. ಆದರೆ ಚುನಾವಣೆ ಘೋಷಣೆಯಾಗುವ ಮುನ್ನವೇ ಕಾಶಿ ಕಾರಿಡಾರ್ ಅನ್ನು ಪ್ರಧಾನಿ ಉದ್ಘಾಟಿಸಿದ್ದಾರೆ.

ರಾಮ ಮಂದಿರ ವಿಚಾರದಲ್ಲಿ ಜಯ ದೊರೆತಾಗ ಘೋಷಿಸಿದ್ದಂತೆ, ಮಥುರಾದಲ್ಲಿ ಮಸೀದಿ ಕೆಡವುವ ವಿಚಾರವೂ ಭಾರಿ ದೊಡ್ಡ ಸದ್ದು ಮಾಡುತ್ತಿದೆ. ಈ ಸಂಬಂಧ ನ್ಯಾಯಾಲಯಗಳಲ್ಲಿ ಹತ್ತಾರು ಅರ್ಜಿಗಳು ಸಲ್ಲಿಕೆಯಾಗಿವೆ. ಇದನ್ನು ಸಿವಿಲ್ ವ್ಯಾಜ್ಯವೆಂದು ಪರಿಗಣಿಸಬೇಕು ಎಂದು ಆಗ್ರಹಿಸಲಾಗುತ್ತಿದೆ.

‘ಉತ್ತರ ಪ್ರದೇಶದ ಪೂರ್ವಾಂಚಲದಿಂದ ಹಲವು ದಶಕಗಳಲ್ಲಿ ಲಕ್ಷಾಂತರ ಹಿಂದೂಗಳು ವಲಸೆ ಹೋಗಿದ್ದಾರೆ. ಅವರನ್ನು ವಾಪಸ್ ಕರೆಸಲಾಗುತ್ತದೆ. ದಬ್ಬಾಳಿಕೆ ನಡೆಸಿದವರನ್ನು ಓಡಿಸುತ್ತೇವೆ’ ಎಂದು ಅಮಿತ್ ಶಾ ಘೋಷಿಸಿದ್ದರು. ಆದರೆ ಈ ವಿಚಾರಗಳು ಹೆಚ್ಚು ಫಲ ನೀಡುವುದಿಲ್ಲ. ಜನರಿಗೆ ಇಲ್ಲಿ ಹಿಂಸಾಚಾರ ನಡೆಯುವುದು ಬೇಕಿಲ್ಲ. ಬದಲಿಗೆ ‘ಮಂದಿರ–ಮಸೀದಿ’ ಎಂಬ ಪದಗಳು ಸಾಕು ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

ಬಿಜೆಪಿ ಮತಕೋಟೆ ಲೂಟಿಗೆ ಎಸ್‌ಪಿ ತಂತ್ರ

ಸಮಾಜವಾದಿ ಪಕ್ಷಕ್ಕೆ ಯಾದವರು ಮತ್ತು ಮುಸ್ಲಿಮರ ಮತವಿದ್ದರೆ ಸಾಕು ಎಂದು ಹೇಳುವ ಕಾಲವಿತ್ತು. ಅದೇ ಮಂತ್ರವನ್ನು ಪಠಿಸಿ, ಪಕ್ಷವು ಹಲವು ಚುನಾವಣೆಗಳನ್ನು ಗೆದ್ದಿತ್ತು. ಆದರೆ ಈಗ ಕಾಲ ಬದಲಾಗಿದೆ. ಈ ಎರಡು ಸಮುದಾಯಗಳನ್ನಷ್ಟೇ ನೆಚ್ಚಿಕೊಂಡು ಪಕ್ಷವು ಕೈಸುಟ್ಟುಕೊಂಡಿದೆ. ‘ಕೆಲಸವೇ ಮಾತನಾಡುತ್ತದೆ’ ಎಂದು ಕಳೆದ ಬಾರಿ ಚುನಾವಣಾ ಕಣಕ್ಕೆ ಜಿಗಿದಿದ್ದ ಅಖಿಲೇಶ್ ಯಾದವ್–ಕಾಂಗ್ರೆಸ್‌ನ ರಾಹುಲ್ ಗಾಂಧಿ ಜೋಡಿಯ ಜಂಟಿ ಸವಾರಿ ಪಲ್ಟಿ ಹೊಡೆದಿತ್ತು. ಹೀಗಾಗಿ ಈ ಎಲ್ಲಾ ತಂತ್ರಗಾರಿಕೆಗಳನ್ನು ಬದಿಗಿಟ್ಟು, ಅಖಿಲೇಶ್ ನೇತೃತ್ವದಲ್ಲಿ ಸಮಾಜವಾದಿ ಪಕ್ಷವು ಚುನಾವಣಾ ಕಣಕ್ಕೆ ಇಳಿದಿದೆ.

2014ಕ್ಕೂ ಮೊದಲು ಇತರೆ ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ಜಾತಿಗಳ ಮತಗಳು ಸಮಾಜವಾದಿ ಪಕ್ಷ ಮತ್ತು ಮಾಯಾವತಿ ಅವರ ಬಹುಜನ ಸಮಾಜ ಪಕ್ಷಕ್ಕೆ ನಿರಾಯಾಸವಾಗಿ ಬಂದು ಬೀಳುತ್ತಿದ್ದವು. 2014ರದ ಎಲ್ಲಾ ಚುನಾವಣೆಯಲ್ಲೂ ಈ ಜಾತಿಯ ಜನರ ಮತಗಳು ಅಖಿಲೇಶ್ ಅವರ ಕೈಹಿಡಿಯಲಿಲ್ಲ. ಆದರೆ ಕೋವಿಡ್ ಕಾಲ ಮತ್ತು ಆಗ ಸರ್ಕಾರವು ಈ ಸಮುದಾಯಗಳನ್ನು ನಡೆಸಿಕೊಂಡ ರೀತಿಯು ಈಗ ಸಮಾಜವಾದಿ ಪಕ್ಷದ ಅನುಕೂಲಕ್ಕೆ ಒದಗಿಬಂದಿದೆ.

ಅಖಿಲೇಶ್ ಯಾದವ್ ಸಹ ಈ ಅನುಕೂಲವನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ.

ಅಖಿಲೇಶ್ ಯಾದವ್

ಬಿಜೆಪಿ ಮತ್ತು ಕಾಂಗ್ರೆಸ್‌ನಂತಹ ದೊಡ್ಡ ಪಕ್ಷಗಳು ಮೇಲ್ಜಾತಿಯವರನ್ನಷ್ಟೇ ಓಲೈಸುತ್ತಿವೆ. ಸಮಾಜವಾದಿ ಪಕ್ಷವು ಅಧಿಕಾರಕ್ಕೆ ಬಂದರೆ, ಜಾತಿ ಆಧಾರದಲ್ಲಿ ಗಣತಿ ನಡೆಸಲಿದೆ. ಆ ಮೂಲಕ ಎಲ್ಲಾ ಜಾತಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಲಿದೆ ಎಂದು ಅಖಿಲೇಶ್ ಘೋಷಿಸುತ್ತಿದ್ದಾರೆ. ರಾಜ್ಯದ ಎಲ್ಲೆಡೆ, ಅಲ್ಲಲ್ಲಿ ಪ್ರಧಾನವಾಗಿರುವ ಮತ್ತು ಪ್ರಾಬಲ್ಯ ಹೊಂದಿರುವ ಸಣ್ಣ ಜಾತಿಗಳ ಪಕ್ಷಗಳ ಜತೆ ಸಮಾಜವಾದಿ ಪಕ್ಷವು ಮೈತ್ರಿ ಮಾಡಿಕೊಂಡಿದೆ.

ಜಾಟವಾ ಸಮುದಾಯದ ಮತಬೆಂಬಲ ಹೊಂದಿರುವ ರಾಷ್ಟ್ರೀಯ ಲೋಕದಳ, ಇತರೆ ಹಿಂದುಳಿದ ವರ್ಗಗಳು ಮತ್ತು ಪರಿಶಿಷ್ಟ ಜಾತಿಗಳ ಮತಬೆಂಬಲ ಹೊಂದಿರುವ ಅಪ್ನಾದಳ, ಡಿಎಸ್‌ಪಿ, ಪಿಜೆಪಿ, ಲೇಬರ್ ಪಾರ್ಟಿ, ಅಖಿಲ ಭಾರತೀಯ ಕಿಸಾನ್ ಸೇನಾ ಜತೆಗೆ ಅಖಿಲೇಶ್ ಮೈತ್ರಿ ಮಾಡಿಕೊಂಡಿದ್ದಾರೆ. ಆ ಪಕ್ಷಗಳ ನಾಯಕರನ್ನೇ ಕಣಕ್ಕೆ ಇಳಿಸುವ ಮೂಲಕ, ಮತಗಳು ಹಂಚಿಹೋಗುವುದನ್ನು ತಡೆಯಲು ತಂತ್ರ ರೂಪಿಸಿದ್ದಾರೆ.

ಹೀಗೆ ಹಿಂದೂ ಸಮುದಾಯದ ಸಣ್ಣ–ಸಣ್ಣ ಪಕ್ಷಗಳ ಜತೆಗೆ ಅಖಿಲೇಶ್ ಕೈಜೋಡಿಸಿದ್ದಾರೆ. ಈ ಹಿಂದಿನ ಚುನಾವಣೆಗಳಲ್ಲಿ ಬಿಜೆಪಿಗೆ ಮತ ನೀಡಿದ್ದ ಈ ಸಮುದಾಯಗಳನ್ನು ತಮ್ಮೊಟ್ಟಿಗೆ ಸೇರಿಸಿಕೊಂಡು, ಬಿಜೆಪಿಯ ಮತಕೋಟೆಯನ್ನು ಲೂಟಿಹೊಡೆಯಲು ಅಖಿಲೇಶ್ ತಂತ್ರ ರೂಪಿಸಿದ್ದಾರೆ.

ಬಿಎಸ್‌ಪಿ ಅಳಿವು ಉಳಿವಿನ ಪ್ರಶ್ನೆ


ಮಾಯಾವತಿ

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಘೋಷಣೆಗೂ ಮುನ್ನ ಬಹುತೇಕ ರಾಜಕೀಯ ಪಕ್ಷಗಳು ಸಕ್ರಿಯವಾಗಿದ್ದರೆ, ಮಾಯಾವತಿ ನೇತೃತ್ವದ ಬಿಎಸ್‌ಪಿ ಮಾತ್ರ ತೆರೆಮರೆಯಲ್ಲೇ ಇತ್ತು. ಚುನಾವಣಾ ಆಯೋಗವು ದಿನಾಂಕವನ್ನು ಪ್ರಕಟಿಸಿದ ಮರುದಿನ ಪಕ್ಷ ಜಾಗೃತವಾಗಿದೆ. ಈವರೆಗೆ ಯಾವುದೇ ಸಮಾವೇಶಗಳನ್ನು ನಡೆಸದ ಮಾಯಾವತಿ ಅವರನ್ನು ರಾಜಕೀಯ ಪಕ್ಷಗಳು ಲೇವಡಿ ಮಾಡಿದ್ದವು. ಆದರೆ ಇದಕ್ಕೆ ಪ್ರತಿಕ್ರಿಯಿಸಿದ್ದ ಮಾಯಾವತಿ, ಪಕ್ಷದ ಹಣಕಾಸಿನ ಸ್ಥಿತಿ ಸರಿಯಿಲ್ಲ ಎಂದಿದ್ದರು.

2007ರಲ್ಲಿ ರಾಜ್ಯದಲ್ಲಿ ಅಧಿಕಾರ ನಡೆಸಿದ್ದ ಮಾಯಾವತಿ ಅವರು ಆ ಬಳಿಕ ನಡೆದ ಚುನಾವಣೆಯಗಳಲ್ಲಿ ಛಾಪು ಮೂಡಿಸುವಲ್ಲಿ ವಿಫಲವಾಗಿದ್ದಾರೆ. ಆಗ 403ರ ಪೈಕಿ 206 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಎಸ್‌ಪಿ, ಶೇ 30.43ರಷ್ಟು ಮತಗಳನ್ನು ಗಳಿಸಿತ್ತು. 2017ರ ಚುನಾವಣೆಯಲ್ಲಿ ಪಕ್ಷದ ಸ್ಥಿತಿ ಇನ್ನಿಲ್ಲದಂತೆ ಕುಸಿಯಿತು. ಕೇವಲ 19 ಶಾಸಕರು ಆರಿಸಿಬಂದರು. ವಿಶ್ಲೇಷಕರ ಪ್ರಕಾರ, 2022ರ ಚುನಾವಣೆಯು ಮಾಯಾವತಿ ಅವರ ಅಳಿವು–ಉಳಿವಿನ ಪ್ರಶ್ನೆ. ಇಷ್ಟಲ್ಲದೇ, ಮುಖ್ಯವಾಹಿನಿಯ ದಲಿತ ಪಕ್ಷದ ಭವಿಷ್ಯದ ಪ್ರಶ್ನೆಯೂ ಈ ಚುನಾವಣೆಯಲ್ಲಿ ಅಡಗಿದೆ ಎನ್ನಲಾಗಿದೆ.

ಪಕ್ಷದ ಪರಮೋಚ್ಚ ನಾಯಕಿ ಮಾಯಾವತಿ ಅವರನ್ನು ಬಿಟ್ಟರೆ, ಎರಡನೇ ನಾಯಕ ಅಥವಾ ನಾಯಕಿ ಇಲ್ಲ. ಸ್ವಾಮಿ ಪ್ರಸಾದ್ ಮೌರ್ಯ, ಬ್ರಿಜೇಶ್ ಪಾಠಕ್, ರಾಮ್ ಅಚಲ್ ರಾಜ್‌ಭರ್, ನಸೀಮುದ್ದೀನ್ ಸಿದ್ದಿಕ್ ಅವರಂತಹ ಘಟಾನುಘಟಿಗಳು ವಲಸೆ ಹೋಗುವುದನ್ನು ತಡೆಹಿಡಿಯುವಲ್ಲಿ ಪಕ್ಷ ವಿಫಲವಾಯಿತು. ಚಂದ್ರಶೇಖರ ಆಜಾದ್ ರೀತಿಯ ಹೊಸ ತಲೆಮಾರಿನ ದಲಿತ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ.

ಪಕ್ಷವು ಜರ್ಜರಿತವಾಗಿದ್ದರೂ, ಈ ಬಾರಿಯ ಚುನಾವಣೆಗೆ ತಳಮಟ್ಟದಲ್ಲಿ ತೊಡಗಿಸಿಕೊಂಡಿದೆ ಎಂದು ಬಿಎಸ್‌ಪಿ ಮೂಲಗಳು ಹೇಳುತ್ತವೆ. ಉತ್ತರ ಪ್ರದೇಶದಲ್ಲಿ 84 ಮೀಸಲು ಕ್ಷೇತ್ರಗಳಿವೆ. ಈ ಪೈಕಿ 2007ರ ಚುನಾವಣೆಯಲ್ಲಿ 62 ಕ್ಷೇತ್ರಗಳಲ್ಲಿ ಗೆದ್ದಿದ್ದ ಬಿಎಸ್‌ಪಿಯು ಈ ಬಾರಿ ಅದೇ ಫಲಿತಾಂಶವನ್ನು ಪುನರಾವರ್ತಿಸುವ ವಿಶ್ವಾಸದಲ್ಲಿದೆ.

ಜಾತಿ ಸಮೀಕರಣ

ಉತ್ತರ ಪ್ರದೇಶ ರಾಜಕಾರಣವು ಜಾತಿಯ ಸುತ್ತಲೇ ಸುತ್ತುತ್ತದೆ. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಸಮುದಾಯಗಳು ಬಿಜೆಪಿ ಬೆಂಬಲಕ್ಕಿವೆ. ಇತರೆ ಹಿಂದುಳಿದ ವರ್ಗಗಳಲ್ಲಿ (ಒಬಿಸಿ) ಬರುವ ಯಾದವ ಸಮುದಾಯವು ಸಮಾಜವಾದಿ ಪಕ್ಷದ ಮತಬುಟ್ಟಿಯಾಗಿದೆ ಎಂದು ಹೇಳಲಾಗುತ್ತಿದೆ. ಯಾದವೇತರ ಒಬಿಸಿ ಜಾತಿಗಳು, ಜಾಟವಾ ಮತ್ತು ಜಾಟವಾ ಅಲ್ಲದ ಪರಿಶಿಷ್ಟ ಜಾತಿಗಳ ಮತಗಳು ಮೊದಲು ಸಮಾಜವಾದಿ ಪಕ್ಷ, ಬಿಎಸ್‌ಪಿ ಮತ್ತು ಕಾಂಗ್ರೆಸ್ ಮಧ್ಯೆ ಹಂಚಿಹೋಗುತ್ತಿದ್ದವು. ಈ ಸಮುದಾಯಗಳ ಮತಗಳು ಯಾವ ಪಕ್ಷಕ್ಕೆ ಹೆಚ್ಚು ಬೀಳುತ್ತವೋ ಅವು ಅಧಿಕಾರಕ್ಕೆ ಬರುತ್ತವೆ ಎಂಬುದು ಈ ಹಿಂದಿನ ಚುನಾವಣೆಗಳಲ್ಲಿ ಸಾಬೀತಾಗಿದೆ.



ಕಾಂಗ್ರೆಸ್‌ಗೆ ವರವಾಗುತ್ತಾರಾ ಪ್ರಿಯಾಂಕಾ?

ದೊಡ್ಡ ರಾಜ್ಯವಾದ ಉತ್ತರ ಪ್ರದೇಶದಲ್ಲಿ ಈ ಬಾರಿ ಮೋಡಿ ಮಾಡುವ ಉಮೇದು ಕಾಂಗ್ರೆಸ್‌ಗೆ ಇದೆ. ಎರಡು ಲೋಕಸಭಾ ಚುನಾವಣೆಗಳ ಸೋಲಿನಿಂದ ಮೇಲೆದ್ದು, ರಾಜ್ಯದಲ್ಲಿ ಚುಕ್ಕಾಣಿ ಹಿಡಿಯುವ ತುಡಿತವಿದೆ. ‘ಹಿಂದೂ ಮತ್ತು ಹಿಂದುತ್ವವಾದಿ’ ಹಾಗೂ ಮಹಿಳಾ ಕೇಂದ್ರಿತ ವಿಚಾರಗಳನ್ನು ಇಟ್ಟುಕೊಂಡು ಕಾಂಗ್ರೆಸ್ ಪಕ್ಷವು ಚುನಾವಣಾ ಕಣಕ್ಕೆ ಧುಮುಕಿದೆ.

ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ರಾಜ್ಯದಲ್ಲಿ ಪಕ್ಷದ ವರ್ಚಸ್ವಿ ನಾಯಕಿಯಾಗಿ ಹೊರಹೊಮ್ಮಿದ್ದಾರೆ. ಇದೇ ಮೊದಲ ಬಾರಿಗೆ ಪ್ರಿಯಾಂಕಾ ಅವರನ್ನು ಮುಂಚೂಣಿಯಲ್ಲಿ ಇಟ್ಟುಕೊಂಡು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಪುನಶ್ಚೇತನದ ಪ್ರಯತ್ನಕ್ಕೆ ಇಳಿದಿದೆ. ರಾಜ್ಯದ ಜಿಲ್ಲೆ ಜಿಲ್ಲೆಗಳಲ್ಲಿ ಓಡಾಡುತ್ತಿರುವ ಅವರು ಮಹಿಳಾ ಸಂಘಟನೆಯಲ್ಲಿ ತೊಡಗಿದ್ದಾರೆ. ಕಳೆದ ತಿಂಗಳು ಆರಂಭಿಸಿದ್ದ ‘ನಾನು ಹುಡುಗಿ, ಹೋರಾಡಬಲ್ಲೆ’ ಎಂಬ ಅಭಿಯಾನವು ಸಾಕಷ್ಟು ಛಾಪು ಮೂಡಿಸಿದೆ ಎಂದು ವಿಶ್ಲೇಷಕರು ಹೇಳುತ್ತಾರೆ.

ಹಾಥರಸ್ ಅತ್ಯಾಚಾರ ಪ್ರಕರಣದಲ್ಲಿ ಪ್ರಿಯಾಂಕಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಸಂತ್ರಸ್ತರನ್ನು ಭೇಟಿ ಮಾಡಲು ಹೋಗಿದ್ದಾಗ ಪೊಲೀಸರಿಂದ ಅಡ್ಡಿ ಎದುರಾಗಿತ್ತು. ಕಾಂಗ್ರೆಸ್ ನಿಯೋಗವು ಸಂತ್ರಸ್ತ ಕುಟುಂಬವನ್ನು ಭೇಟಿಯಾಗುವಲ್ಲಿ ಯಶಸ್ವಿಯಾಗಿತ್ತು. ಕಾಂಗ್ರೆಸ್ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಹೆಣ್ಣುಮಕ್ಕಳು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಲಖಿಂಪುರ–ಖೇರಿಯಲ್ಲಿ ರೈತರ ಮೇಲೆ ಎಸ್‌ಯುವಿ ಹರಿಸಿದ್ದ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷವು ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡಿದೆ. ಇವೆಲ್ಲವೂ ಪಕ್ಷಕ್ಕೆ ಮತಗಳನ್ನು ತಂದುಕೊಡುವ ಲೆಕ್ಕಾಚಾರವಿದೆ.

‘ರಾಜ್ಯದಲ್ಲಿ ನಮ್ಮ ಪಕ್ಷ ದುರ್ಬಲವಾಗಿತ್ತು. ಆದರೆ ಈಗ ನಮ್ಮಲ್ಲಿ 7,000 ಗ್ರಾಮ ಸಭೆ ಘಟಕಗಳು, 8,134 ನ್ಯಾಯ ಪಂಚಾಯಿತಿ ಘಟಕಗಳಿವೆ. ಹೋರಾಟ, ಸಂಘಟನೆ ಮತ್ತು ಸಂವಾದ ಆಧಾರದ ಮೇಲೆ ನಾವು ಈ ಬಾರಿ ಗೆಲ್ಲುತ್ತೇವೆ’ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ವಿಶ್ವಾಸದಿಂದ ಹೇಳುತ್ತಾರೆ.

ಆಧಾರ: ಪಿಟಿಐ, ರಾಯಿಟರ್ಸ್

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 15

ಪ್ರಯಾಗದಲ್ಲಿ ಶಿವಪುರಾಣ ಪ್ರಚಾರ

ಶಿವಮಹಾಪುರಾಣದ ಮೊದಲ ಅಧ್ಯಾಯವಾದ ವಿದ್ಯೇಶ್ವರಸಂಹಿತೆಯ ಮೊದಲ ಅಧ್ಯಾಯದಲ್ಲಿ ವೇದವ್ಯಾಸರು ದೇವಮಹರ್ಷಿ ಸನತ್ಕುಮಾರನಿಂದ ಕೇಳಿದ ಶಿವಪುರಾಣವನ್ನು ತಮ್ಮ ಪರಮಶಿಷ್ಯ ಸೂತಮುನಿಗೆ ಹೇಳಿದ ವಿವರವಿದೆ. ಒಮ್ಮೆ ಜೀವನ ವೈರಾಗ್ಯದಿಂದ ತಪಸ್ಸಿಗೆ ಕುಳಿತ ವೇದವ್ಯಾಸರಿಗೆ ಬ್ರಹ್ಮಕುಮಾರನಾದ ಸನತ್ಕುಮಾರ ಶಿವಪುರಾಣವನ್ನು ಹೇಳಿದ ವಿವರದೊಂದಿಗೆ ಶಿವಪುರಾಣ ಆರಂಭವಾಗುತ್ತದೆ. ಸ್ವತಃ ಶಿವನಿಂದ ಕೇಳಿದ ಶಿವಮಹಾಪುರಾಣವನ್ನ ಸನತ್ಕುಮಾರದೇವ ವೇದವ್ಯಾಸರಿಗೆ ತಿಳಿಸುತ್ತಾನೆ. ವೇದವ್ಯಾಸರು ತಮ್ಮ ಶಿಷ್ಯ ಸೂತಮುನಿಗೆ ತಿಳಿಸುತ್ತಾರೆ. ಸೂತಮುನಿಯೂ ಜಗತ್ತಿನೆಲ್ಲೆಡೆ ಶಿವಮಹಾಪುರಾಣವನ್ನು ಪ್ರಚಾರ ಮಾಡುತ್ತಾರೆ.

ಸನತ್ಕುಮಾರ ಹೇಳಿದಂತೆ ವ್ಯಾಸಮಹರ್ಷಿಗಳು ಶಿವಮಹಾಪುರಾಣದ ರಚನೆಯ ಆರಂಭದಲ್ಲಿ ಈ ಕಥೆಯ ಪ್ರತಿಪಾದ್ಯನಾದ ಪರಮೇಶ್ವರನನ್ನು ಧ್ಯಾನಿಸಿ, ಮಂಗಳಾಚರಣೆ ಮಾಡುತ್ತಾರೆ. ‘ಅಂಬಿಕಾಪತಿಯಾದ ಶ್ರೀಪರಮೇಶ್ವರನಿಗೆ ವಂದಿಸುತ್ತೇನೆ. ಜಗತ್ ಸೃಷ್ಟಿಕಾಲದಲ್ಲಿ, ಸಂಹಾರ ಕಾಲದಲ್ಲಿ ಸಮಸ್ತ ಜೀವಿಗಳಿಗೂ ಸನ್ಮಂಗಳವನ್ನುಂಟುಮಾಡುವ ದೇವನು ಶಿವ. ಸೃಷ್ಟಿಸಿದ ಜೀವಿಗಳನ್ನು ಕಾಪಾಡುವುದರಲ್ಲಿ ಎಲ್ಲ ದೇವತೆಗಳಿಗಿಂತಲೂ ಶಿವನೇ ಹೆಚ್ಚು ಮುಂದಾಗುತ್ತಾನೆ. ಪರಮಪೂಜ್ಯನು, ಚರಾಚರಾತ್ಮಕವಾದ ಸಮಸ್ತ ಪ್ರಪಂಚಕ್ಕೂ ಒಡೆಯನಾದ ಶಿವನು ಮುಪ್ಪು-ಮರಣ ಮೊದಲಾದ ವಿಕಾರವಿಲ್ಲದ ಚಿರರೂಪಿ. ಸ್ವಯಂಪ್ರಕಾಶ ಸ್ವರೂಪನಾಗಿ ಐದು ಮುಖವುಳ್ಳವನಾಗಿದ್ದಾನೆ. ಪಂಚಮಹಾಪಾತಕ ಅಥವಾ ಶಬ್ದಾದಿಪಂಚವಿಷಯಗಳನ್ನು ಹೋಗಲಾಡಿಸಿ, ಜೀವಿಗಳಿಗೆ ಸುಖವನ್ನೂ ಮುಕ್ತಿಯನ್ನೂ ಕೊಡುವ ಜಗನ್ನಾಥ. ಇಂತಹ ದೇವದೇವನಾದ ಪರಮೇಶ್ವರನನ್ನು ಅನನ್ಯಭಾವದಿಂದ ಧ್ಯಾನಮಾಡುವೆ’ ಎಂದು ವ್ಯಾಸಮಹರ್ಷಿ ಶಿವನನ್ನು ಪ್ರಾರ್ಥಿಸಿ ಶಿವಪುರಾಣವನ್ನು ರಚಿಸುತ್ತಾರೆ. ನಂತರ ಅದನ್ನು ತಮ್ಮ ಪರಮ ಶಿಷ್ಯ ಸೂತಮುನಿಗೆ ತಿಳಿಸುತ್ತಾರೆ.

ವ್ಯಾಸಗುರುಗಳು ಹೇಳಿದ ಶಿವಮಹಾಪುರಾಣವನ್ನ ಕೇಳಿದ ಸೂತಮುನಿ ತನ್ನ ಜನ್ಮ ಸಾರ್ಥಕವಾಯಿತೆಂದು ಗುರುಗಳ ಪಾದಗಳಿಗೆ ನಮಸ್ಕರಿಸುತ್ತಾನೆ. ಈ ಸಂದರ್ಭದಲ್ಲಿ ತಮ್ಮ ಪಾದದ ಬಳಿ ಆನಂದಾಶ್ರುಗಳಿಂದ ವಿನೀತನಾಗಿ ಕುಳಿತ, ಸೂತಮುನಿಯ ತಲೆಯನ್ನ ನೇವರಿಸಿ ಮೇಲೆತ್ತಿದ ವ್ಯಾಸರು, ‘ನನ್ನ ಒಂದು ಮಾತನ್ನು ನಡೆಸಿಕೊಡುವೆಯಾ’ ಅಂತ ಶಿಷ್ಯ ಸೂತಮುನಿಯನ್ನು ಕೇಳುತ್ತಾರೆ. ಅದಕ್ಕೆ ಸೂತಮುನಿ ‘ಶಿರಸಾವಹಿಸಿ, ನಿಮ್ಮ ಆಜ್ಞೆಯನ್ನು ಪಾಲಿಸುತ್ತೇನೆ’ ಎನ್ನುತ್ತಾನೆ. ಆಗ ವ್ಯಾಸರು, ‘ಎಲೈ, ಸೂತನೇ. ನಾನು ರಚಿಸಿದ ಶಿವಮಹಾಪುರಾಣ ಲೋಕಕಲ್ಯಾಣಕ್ಕೆ ಉಪಯೋಗವಾಗಬೇಕು. ಮಾನವರಿಗೆ ಮುಕ್ತಿ ನೀಡುವ ಶಿವಪುರಾಣವನ್ನ ಸಾಧು-ಸಂತರಿಗೆ, ಆ ಮೂಲಕ ಸಮಾಜದ ಎಲ್ಲಾ ಜನರಿಗೂ ನೀನು ತಿಳಿಸಬೇಕು’ ಎಂದು ಸೂಚಿಸುತ್ತಾರೆ. ಗುರು ವ್ಯಾಸರ ಮಾತನ್ನು ಆಜ್ಞೆಯಂತೆ ಪಾಲಿಸುವುದಾಗಿ ಹೇಳಿದ ಸೂತಮುನಿ, ಶಿವ ಪುರಾಣ ಜಗತ್ತಿನೆಲ್ಲೆಡೆ ತಿಳಿಸಲು ಹೊರಡುತ್ತಾನೆ. ಹೀಗೆ ಶಿವಪುರಾಣ ಸಾರಲು ದೇಶಪರ್ಯಟನೆ ಹೊರಟ ಸೂತಮುನಿ ಮೊದಲ ಬಾರಿ ವೇದವ್ಯಾಸರ ಶಿವಮಹಾಪುರಾಣವನ್ನು ಹೇಳಿದ್ದು ಪ್ರಯಾಗದಲ್ಲಿ. ಗಂಗಾ-ಯಮುನಾ ನದಿಗಳ ಸಂಗಮಕ್ಷೇತ್ರವಾದ ಪ್ರಯಾಗ ಪರಮಪವಿತ್ರವಾದ ಮತ್ತು ಧರ್ಮಕ್ಷೇತ್ರವಾಗಿದೆ. ಇಲ್ಲಿ ಧ್ಯಾನ ಮಾಡಿದವರು ನೇರ ಬ್ರಹ್ಮಲೋಕಕ್ಕೆ ಹೋಗುತ್ತಾರೆ. ಇಂತಹ ಮಹಾಕ್ಷೇತ್ರದಲ್ಲಿ ಜಿತೇಂದ್ರಿಯರೂ ಸತ್ಯನಿಷ್ಠರೂ ಮಹಾತೇಜಸ್ವಿಗಳೂ ತಪಸ್ವಿಗಳೂ ಆದ ಅನೇಕ ಮುನಿಗಳು ಸೇರಿ, ಮಹಾಸತ್ರ ಎಂಬ ದೊಡ್ಡ ಯಾಗವನ್ನು ಮಾಡುತ್ತಿದ್ದರು.

ಈ ವಿಷಯ ತಿಳಿದ ಸೂತಮಹಾಮುನಿ ಯಾಗ ನಡೆಯುತ್ತಿದ್ದ ಸ್ಥಳಕ್ಕೆ ಬರುತ್ತಾರೆ. ಸೂತಪುರಾಣಿಕರನ್ನು ನೋಡಿದ, ಋಷಿಗಳೆಲ್ಲ ಸಂಭ್ರಮ-ಸಂತೋಷದಿಂದ ಅವರನ್ನು ಬರಮಾಡಿಕೊಳ್ಳುತ್ತಾರೆ. ಸೂತಮುನಿಗಳನ್ನ ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿದ ನಂತರ ‘ಸರ್ವಜ್ಞನಾದ ಸೂತಮುನಿಯೇ, ನಮ್ಮ ಮಹಾಸತ್ರಯಾಗವನ್ನು ನೋಡಲು, ನೀವು ಇಲ್ಲಿಗೆ ಬಂದಿರುವುದು, ನಮ್ಮೆಲ್ಲರ ಸುಕೃತದ ಫಲ. ನೀವು ಪೂರ್ವಸುಕೃತ ಫಲದಿಂದ ವ್ಯಾಸಮಹರ್ಷಿ ಶಿಷ್ಯರಾಗಿರುವಿರಿ. ಅವರಿಂದ ಪುರಾಣವಿದ್ಯೆಗಳೆಲ್ಲವನ್ನೂ ತಿಳಿದಿರುವಿರಿ. ಅನರ್ಘ್ಯವಾದ ರತ್ನಗಳಿಗೆ ಆವಾಸಸ್ಥಾನವಾಗಿರುವಂತೆ ನೀವು ಆಶ್ಚರ್ಯಕರವಾದ ಪುಣ್ಯಕಥೆಗಳಿಗೆ ನಿಧಿಯಂತಿರುವಿರಿ. ಈ ಮೂರು ಲೋಕಗಳಲ್ಲಿ ಹಿಂದೆ ನಡೆದಿರುವ, ಮುಂದೆ ನಡೆಯುವ ಮತ್ತು ಈಗ ನಡೆಯುತ್ತಿರುವ ಸಂಗತಿಗಳಾವುದುಂಟೋ? ಅವುಗಳಲ್ಲಿ ನಿಮಗೆ ತಿಳಿದ ವಿಷಯವನ್ನ ನಮಗೆ ತಿಳಿಸಿ, ನಮ್ಮ ಜನ್ಮಸಾರ್ಥಕವಾಗುವಂತೆ ಮಾಡಿ’ ಅಂತ ಸಮಸ್ತ ಋಷಿಗಳ ಪರವಾಗಿ ಶೌನಕಮುನಿ ಕೋರುತ್ತಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಯುವತಿಯರ** ಗುಂಪೊಂದು ಯುವಕನೊಬ್ಬನನ್ನು ಕೋಲುಗಳಿಂದ ಮನಬಂದಂತೆ ಥಳಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮುಖವನ್ನು ಬಟ್ಟೆಯಿಂದ ಮುಚ್ಚಿಕೊಂಡಿರುವ ಯುವತಿಯರು ಕಾಲೇಜು ಆವರಣದಲ್ಲಿ ಯುವಕನನ್ನು ಥಳಿಸುತ್ತಿರುವುದು ವಿಡಿಯೊದಲ್ಲಿ ಸೆರೆ ಆಗಿದೆ. ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗಾಗಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಆರಂಭಿಸಿರುವ ‘ನಾನು ಹುಡುಗಿ, ಹೋರಾಡಬಲ್ಲೆ’ ಅಭಿಯಾನದಿಂದ ಪ್ರೇರೇಪಿತರಾಗಿ ಈ ಯುವತಿಯರು ಹೀಗೆ ವರ್ತಿಸಿದ್ದಾರೆ ಎಂದು ಈ ವಿಡಿಯೊವನ್ನು ಬಿಂಬಿಸಲಾಗಿದೆ.

✓ **ತಮ್ಮ ಜೊತೆ** ಅನುಚಿತವಾಗಿ ವರ್ತಿಸಿದ ಯುವಕನನ್ನು ಯುವತಿಯರು ಥಳಿಸಿರುವುದು ನಿಜ. ಆದರೆ ಈ ಘಟನೆಗೂ ಪ್ರಿಯಾಂಕಾ ಗಾಂಧಿ ಅವರ ಅಭಿಯಾನಕ್ಕೂ ಯಾವುದೇ ಸಂಬಂಧವಿಲ್ಲ ಎಂದು ‘ಇಂಡಿಯಾ ಟುಡೆ’ ವರದಿ ಮಾಡಿದೆ. ಈ ಘಟನೆಯನ್ನು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ 2018ರ ಡಿ.10ರಂದು ವರದಿ ಮಾಡಿದೆ. ಉತ್ತರ ಪ್ರದೇಶದ ಬಾಗ್‌ಪತ್‌ನ ಧರಮ್ ಸಿಂಗ್ ಸರಸ್ವತಿ ಬಾಲಿಕಾ ಇಂಟರ್ ಕಾಲೇಜಿನಲ್ಲಿ ಈ ಘಟನೆ ನಡೆದಿದೆ. ಯುವಕನೊಬ್ಬನ ಅನುಚಿತ ವರ್ತನೆ ಕುರಿತು ಹಲವಾರು ಬಾರಿ ಕಾಲೇಜು ಮಂಡಳಿಗೆ ದೂರು ನೀಡಿದ್ದರೂ ಆತನ ವಿರುದ್ಧ ಯಾವುದೇ ಕ್ರಮ ಜರುಗಿಸಿರಲಿಲ್ಲ. ಇದರಿಂದ ಬೇಸತ್ತ ವಿದ್ಯಾರ್ಥಿನಿಯರು ಮತ್ತು ಶಿಕ್ಷಕಿ ಈ ಕ್ರಮ ಕೈಗೊಂಡಿದ್ದರು ಎಂದು ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಸೋಮವಾರ ಜನವರಿ 10, 2022

ಶ್ರೀ ಪ್ಲವನಾಮ ಸಂವತ್ಸರ ದಕ್ಷಿಣಾಯಣ–ಹೇಮಂತ ಋತು ಧನುರ್ಮಾಸದ 25 ನೇ ದಿನ
ತಿಥಿ: (ಪೌಷ ಶುಕ್ಲ) ಅಷ್ಟಮಿ ಗಂ. 12-25 ನಕ್ಷತ್ರ: ರೇವತಿ ಗಂ. 08-49 ಯೋಗ: ಶಿವ ಗಂ. 10-36, ಕರಣ: ಬವ ಗಂ. 12-25, ಬಾಲವ ಗಂ. 25-19. ರಾಹುಕಾಲ : ಬೆಳಿಗ್ಗೆ 07:30 - 09:00 ಸೂರ್ಯೋದಯ : 07-00 ಸೂರ್ಯಾಸ್ತ : 06-16 ಮುಸ್ಲಿಂ ದಿನಾಂಕ : 06 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ: 3, 10

ಮೇಷ: ನಿಮ್ಮ ಬಾಲ್ಯದ ಕನಸು ನನಸಾಗುವ ದಿನ. ಉದ್ಯೋಗದಲ್ಲಿ ಮೇಲಧಿಕಾರಿಗಳಿಂದ ಸಹಕಾರ ಸಿಗುವುದು. ಸಾಹಿತಿಗಳಿಗೆ ಹೆಚ್ಚಿನ ಅವಕಾಶ. ಸಣ್ಣ ಕೈಗಾರಿಕೋದ್ಯಮಿಗಳಿಗೆ ರಫ್ತು ವ್ಯಾಪಾರಗಳಿಂದ ಹೇರಳ ಲಾಭ.

ವೃಷಭ: ಹಣ ಹೂಡಿಕೆ ವಿಚಾರದಲ್ಲಿ ಯೋಚಿಸಿ ನಿರ್ಧಾರ ಕೈಗೊಳ್ಳಿ. ಇಂದಿನ ಎಲ್ಲಾ ಸನ್ನಿವೇಶಗಳು ನಿಮ್ಮ ಪರ ಇರುವುದರಿಂದ ನಿರಾಳರಾಗುವಿರಿ. ಮನೆ ಕಟ್ಟುವ ಕೆಲಸ ನಿರ್ವಿಘ್ನವಾಗಿ ಮುಂದುವರಿಯಲಿದೆ.

ಮಿಥುನ: ನಿಮ್ಮ ಜೀವನ ಸಂಗಾತಿಯ ಹುಡುಕಾಟದ ಬಗ್ಗೆ ಗಮನಿಸಿ. ಹಣಕಾಸು ತಜ್ಞರ ಸಲಹೆ ಮೇರೆಗೆ ದೀರ್ಘಕಾಲೀನ ಯೋಜನೆಯನ್ನು ರೂಪಿಸುವುದು ಉತ್ತಮ. ಸೂಕ್ಷ್ಮ ವಿಚಾರಗಳಲ್ಲಿ ಬುದ್ಧಿವಂತಿಕೆಯ ನಿರ್ಣಯ ಕೈಗೊಳ್ಳುವಿರಿ.

ಕರ್ಕಾಟಕ: ನಿಮ್ಮ ಆಶಾಭಾವನೆ ಹಾಗೂ ವಿಶ್ವಾಸ ಇಂದು ಹೆಚ್ಚುವುದು. ವೃತ್ತಿರಂಗದಲ್ಲಿ ಅನುಕೂಲಕರ ವಾತಾವರಣ ಸೃಷ್ಟಿಸಿಕೊಳ್ಳುವಿರಿ. ಕೆಲವು ಬದಲಾವಣೆಗಳು ಸಹವರ್ತಿಗಳ ಮೇಲೆ ಪ್ರಭಾವ ಬೀರುವುದು.

ಸಿಂಹ: ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಈ ದಿನ ಹೆಚ್ಚಿನ ಸಂಪಾದನೆ ಇರುವುದು. ಕೋರ್ಟು ವ್ಯವಹಾರಗಳಿಗೆ ಓಡಾಟ ತಪ್ಪಲಿದೆ. ಪರಿಸ್ಥಿತಿಯನ್ನು ನಿಭಾಯಿಸುವ ಸಾಮರ್ಥ್ಯವನ್ನು ಪ್ರದರ್ಶಿಸುವಿರಿ.

ಕನ್ಯಾ: ಧಾರ್ಮಿಕ ವಿಚಾರಗಳತ್ತ ಮನಸ್ಸು ಹರಿಯುವುದು ಹಾಗೂ ಮನೆಯಲ್ಲಿ ದೇವತಾ ಕಾರ್ಯಕ್ರಮಗಳನ್ನು ಏರ್ಪಡಿಸುವಿರಿ. ಕರಕುಶಲ ವಸ್ತು ತಯಾರಕರು ತಮ್ಮ ಉತ್ತಮವಾದ ಕೆಲಸಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳುವರು.

ತುಲಾ: ಈ ದಿನ ನೀವು ಸ್ನೇಹಿತರೊಬ್ಬರ ನೆರವಿಗೆ ನಿಲ್ಲಬೇಕಾಗಬಹುದು. ಮಗಳಿಗೆ ಉದ್ಯೋಗ ದೊರೆತು ಸಂತಸ. ರಿಯಲ್ ಎಸ್ಟೇಟ್ ವ್ಯವಹಾರದವರು ಧನಾತ್ಮಕವಾದ ವ್ಯವಹಾರವೊಂದನ್ನು ತಮ್ಮದಾಗಿಸಿಕೊಳ್ಳುವರು.

ವೃಶ್ಚಿಕ: ನಿಮ್ಮ ಅಚ್ಚುಕಟ್ಟಾದ ಕೆಲಸಗಳಿಂದ ನಿಮ್ಮ ಮೇಲಿನ ಬೇರೆ ಜನರ ಅಭಿಪ್ರಾಯಗಳು ಬದಲಾಗುವುದು. ಈ ದಿನ ನಿಮಗೆ ಮಾರ್ಗದರ್ಶನಕ್ಕೆ ಕೊರತೆ ಇರುವುದಿಲ್ಲ. ಹೊಸ ದ್ವಿಚಕ್ರ ವಾಹನ ಕೊಳ್ಳುವ ಸಂಭವವಿದೆ.

ಧನು: ಇನ್ನೊಬ್ಬರ ಭಾವನೆಗಳಿಗೆ ಉತ್ತಮವಾಗಿ ಹೇಗೆ ಪ್ರತಿಕ್ರಿಯಿಸಬೇಕೆಂಬುದು ನಿಮಗೆ ಚೆನ್ನಾಗಿ ತಿಳಿದಿದೆ. ಕೆಲಸಗಳು ಎಷ್ಟು ಕಷ್ಟವಾದರೂ ಹಿಂತಿರುಗುವ ಯೋಚನೆ ಮಾಡಬೇಡಿ. ಇಂಧನ ಮಾರಾಟಗಾರರಿಗೆ ಅನುಕೂಲ.

ಮಕರ: ಅನಗತ್ಯವಾಗಿ ಸಮಯವನ್ನು ವ್ಯರ್ಥ ಮಾಡದಿರಿ. ಪತ್ರಿಕೋದ್ಯಮದಲ್ಲಿ ಮುನ್ನಡೆ. ಕಬ್ಬಿಣದ ಕೆಲಸ ಮಾಡುವವರು ಕೆಲಸದಲ್ಲಿ ಜಾಗ್ರತರಾಗಿರಿ. ಸಮಾಜದಲ್ಲಿನ ನಿಮ್ಮ ಮುಂದಾಳತ್ವಕ್ಕೆ ಜನ ನಿಮ್ಮ ಸಲಹೆಯನ್ನು ಕೇಳುವರು.

ಕುಂಭ: ಮಿತ್ರರ ಜೊತೆಗೂಡಿ ಮಾಡುವ ಸಾಹಸ ಕಾರ್ಯಗಳಿಂದ ಜಯ ಸಿಗುವುದು. ಇಷ್ಟ ಸಿದ್ಧಿಯಾಗುವುದು. ಜೀವನದ ಮುಂದಿನ ದಿನಗಳಿಗಾಗಿ ದೀರ್ಘಕಾಲೀನ ಯೋಜನೆಗಳನ್ನು ಮಾಡುವಿರಿ.

ಮೀನ: ಅನಿರೀಕ್ಷಿತವಾಗಿ ದೊರೆತ ಅವಕಾಶಗಳನ್ನು ಯಾವುದೇ ಮುಜುಗರವಿಲ್ಲದೆ ಬಳಸಿಕೊಳ್ಳಲು ಸಿದ್ಧರಾಗಿ. ಆಸ್ತಿಯನ್ನು ಕೊಳ್ಳುವಾಗ ದಾಖಲೆಯ ಎಲ್ಲಾ ವಿವರಗಳ ಬಗ್ಗೆ ಎರಡೆರಡು ಬಾರಿ ಮಾಹಿತಿಯನ್ನು ಪಡೆದುಕೊಳ್ಳಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮಾರ್ಗ ತೋರದ ದೇವ

ತರಣಿಶಶಿಪಥಗಳನು, ಧರೆವರುಣಗತಿಗಳನು |
ಮರುದಗ್ನಿ ವೇಗಗಳ ನಿಯಮಿಸಿಹ ದಕ್ಷನ್ ||
ನರನರಸಿಕೊಳಲಿ ದಾರಿಯ ತನಗೆ ತಾನೆಂದು |
ತೊರೆದನೇತಕೆ ನಮ್ಮ? – ಮಂಕುತಿಮ್ಮ || 537 ||

ಪದ-ಅರ್ಥ: ತರಣಿಶಶಿಪಥಗಳನು = ತರಣಿ(ಸೂರ್ಯ) + ಶಶಿ(ಚಂದ್ರ) + ಪಥಗಳನು(ದಾರಿಗಳನ್ನು), ಧರೆವರುಣಗತಿಗಳನು + ಧರೆ(ಭೂಮಿ) + ವರುಣ(ಮಳೆಯ ದೇವತೆ) + ಗತಿಗಳನು, ಮರುದಗ್ನಿ = ಮರುತ್(ವಾಯು) + ಅಗ್ನಿ, ನರನರಸಿಕೊಳಲಿ = ನರನು + ಅರಸಿಕೊಳಲಿ.

ವಾಚ್ಯಾರ್ಥ: ಸೂರ್ಯ, ಚಂದ್ರರ ಮಾರ್ಗಗಳನ್ನು, ಭೂಮಿ, ಮಳೆಗಳ ಗತಿಗಳನ್ನು, ವಾಯು, ಅಗ್ನಿಗಳ ವೇಗವನ್ನು ನಿಯಮ ಮಾಡಿದ ದಕ್ಷ ಭಗವಂತ, ತನ್ನ ದಾರಿಯನ್ನು ಮನುಷ್ಯ ತಾನೇ ಹುಡುಕಿಕೊಳ್ಳಲಿ ಎಂದು ಏತಕ್ಕೆ ನಮ್ಮನ್ನು ತೊರೆದನೋ?

ವಿವರಣೆ: ಉಪನಿಷತ್ತಿನ ಮಾತೊಂದು ಹೀಗಿದೆ

ಭೀಷಾಸ್ಮಾತ್ ವಾತ: ಪವತೇ, ಭೀಷೋದೇತಿ ಸೂರ್ಯ: |
ಭೀಷಾಸ್ಮಾದಗ್ನಿಶ್ಚೇಂದ್ರಶ್ಚ, ಮೃತ್ಯುರ್ಧಾವತಿ ಪಂಚಮ ಇತಿ ||

‘ಇದು ಈಶ್ವರ ನಿರ್ಮಿತ ಕಟ್ಟುಪಾಡು. ಗಾಳಿಯ ವೇಗ, ಸೂರ್ಯನ ಚಲನೆ ಎಲ್ಲವೂ ಪರಮಾತ್ಮನ ಕಟ್ಟುಪಾಡಿನಂತೆಯೇ. ಅಗ್ನಿಯೂ ಆತನ ನಿಯಮದಂತೆ ವರ್ತಿಸುತ್ತಾನೆ. ಅಷ್ಟೇಕೆ ಮೃತ್ಯುವೂ ಈಶ್ವರನ ಅನುಜ್ಞೆಯಂತೆ ನಡೆಯುತ್ತದೆ.’

ಜಗತ್ತಿನ ಎಲ್ಲ ಚರಾಚರ ವಸ್ತುಗಳೆಲ್ಲವೂ ಒಂದಾನೊಂದು ಸೂತ್ರಕ್ಕೆ, ಆಜ್ಞೆಗೆ ಬದ್ಧವಾಗಿ ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆ ಎಂಬುದು ಸೂಕ್ಷ್ಮ ದೃಷ್ಟಿಗೆ ಗೋಚರಿಸುತ್ತದೆ. ಸ್ಥೂಲದೃಷ್ಟಿಗೆ ಮೃಗ, ಪಕ್ಷಿ, ಗಿಡ, ಮರಗಳು ಯಾವ ಅಳತೆಗೂ ಸಿಗದಂತೆ, ತಮಗೆ ಬೇಕಾದಂತೆ ವ್ಯವಹರಿಸುತ್ತವೆ ಎಂದೆನಿಸಬಹುದು. ಆದರೆ ಸರಿಯಾಗಿ, ಸೂಕ್ಷ್ಮವಾಗಿ ಗಮನಿಸಿದರೆ ಆ ವಿಚಾರ ಸರಿಯಲ್ಲ ಎಂದು ಹೊಳೆಯುತ್ತದೆ.

ದಾರ್ಶನಿಕರು ಇದಕ್ಕೊಂದು ಉದಾಹರಣೆ ನೀಡುತ್ತಾರೆ. ಒಂದು ರೈಲಿನಲ್ಲಿ ಸಾವಿರಾರು ಜನ ಪ್ರಯಾಣ ಮಾಡುತ್ತಿದ್ದಾರೆ. ಆ ರೈಲಿಗೆ ಇಪ್ಪತ್ತಕ್ಕೂ ಹೆಚ್ಚು ಬೋಗಿಗಳು. ಒಂದೊಂದು ಬೋಗಿಯಲ್ಲಿ ಅರವತ್ತು-ಎಪ್ಪತ್ತು ಜನ. ಕೆಲವರು ಮಲಗಿ ನಿದ್ರೆ ಮಾಡುತ್ತಾರೆ. ಕೆಲವರು ಓದುತ್ತ ಕುಳಿತಿದ್ದಾರೆ. ಮತ್ತೆ ಕೆಲವರು ಇಸ್ಪೀಟು ಆಡುತ್ತಾರೆ. ಕೆಲವು ಸ್ನೇಹಿತರು ಸೇರಿ ಹಾಡು, ನೃತ್ಯ ಮಾಡುತ್ತಾರೆ. ಮತ್ತೆ ಕೆಲವರು ಕುಡಿದು, ತಿಂದು ಮೋಜು ಮಾಡುತ್ತಾರೆ. ಎಲ್ಲರನ್ನೂ ಗಮನಿಸಿದರೆ ಎಲ್ಲರೂ ತಮತಮಗೆ ಬೇಕಾದಂತೆ, ಯಾವ ನಿಯಮವೂ ಇಲ್ಲದಂತೆ ಇದ್ದಾರೆ ಎನ್ನಿಸುತ್ತದೆ. ಆದರೆ ಎಲ್ಲರೂ ರೈಲಿನ ಇಂಜನ್‌ನ ನಿಯಂತ್ರಣದಲ್ಲಿದ್ದಾರೆ. ಅದು ಹೋದ ವೇಗದಲ್ಲಿ, ಸ್ಥಳದಲ್ಲಿಯೇ ಇರುತ್ತಾರೆ. ಅಲ್ಲಿ ಪ್ರಯಾಣಿಕರ ಇಚ್ಛೆ ಇಲ್ಲ. ಮುಖ್ಯವಾಗಿ, ಅವರು ಜಾಗ್ರತವಾಗಿದ್ದು ತಮ್ಮ ನಿಲ್ದಾಣ ಬಂದೊಡನೆ ಇಳಿದು ಹೋಗಲೇಬೇಕು. ಹಾಗೆ ಪ್ರತಿಯೊಬ್ಬರೂ ಒಂದು ಸೂತ್ರಕ್ಕೆ ಸಿಲುಕಿದಂತೆ ನಡೆಯುತ್ತಾರೆ. ಕಗ್ಗದ ಕೊರಗು ಅದು. ವಿಶ್ವದ ಎಲ್ಲ ಸಿಕ್ಕ, ದೊಡ್ಡ ವಸ್ತುಗಳಿಗೆ ಸರಿಯಾದ ಗತಿಯನ್ನು, ಮಾರ್ಗವನ್ನು ತೋರಿ, ಅವು ಅದರಂತೆ ನಡೆಯುವ ವ್ಯವಸ್ಥೆ ಮಾಡಿದ ಭಗವಂತ ಮನುಷ್ಯರನ್ನೇಕೆ ಹಾಗೆಯೇ ಬಿಟ್ಟುಬಿಟ್ಟ. ತನ್ನ ದಾರಿಯನ್ನು ತಾನೇ ಕಂಡುಕೊಳ್ಳಲಿ ಎಂಬುದು ಅವನ ಉದ್ದೇಶವೇ? ಅಥವಾ ಉಳಿದ ಯಾವ ಪ್ರಾಣಿಗಳಿಗೂ ನೀಡದ ಬುದ್ಧಿಯನ್ನು ಮನುಷ್ಯನಿಗೆ ನೀಡಿದ್ದರಿಂದ, ಅವನು ಅದನ್ನು ಬಳಸಿ, ತನಗೆ ಕ್ಷೇಮವಾದದ್ದನ್ನು ಆರಿಸಿಕೊಳ್ಳಲಿ ಎಂದು ಬಿಟ್ಟಿದ್ದಾನೆಯೇ?

ಪದಬಂಧ 4834

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೈಮುಂದು ಮಾಡಿದರೆ ಶಿಷ್ಯನ ಉಗುರು! (4)
3.ಉರಿಯಲ್ಲಿಯೇ ಮೇಲ್ವಿಚಾರಣೆಯೇ? (4)
5.ರಕ್ತವನ್ನು ಹೀಗೂ ಹೇಳುವರು (3)
6.ಹೂವುಗಳಿಂದ ಮಾಡಿದ ಶರ (4)
8.ಗರದಲ್ಲಿರುವ ಬಿಲ! (3)
10.ಇಲ್ಲವೆಂದು ಹೇಳುವಿಕೆ ! (3)
12.ತಮ್ಮ ತೋರಿದ ಬೇಧಭಾವ! (4)
15.ಕನ್ನಡಿಗ ಹಿಡಿದಿರುವ ಲೆನ್ಸು (3)
16.ಹಳದಿ ಬಣ್ಣದ ಬೇರು (4)
17.ಮರದ ಬೊಂಬೆ ಕೆತ್ತನೆ ಕೆಲಸಗಾರ (4)

ಮೇಲಿಂದ ಕೆಳಕ್ಕೆ
1.ಇನ್ನೂ ಕರು ಹಾಕದ ಹಸು (3)
2.ತಾರುಣ್ಯವನ್ನು ಹೊಂದಿದವನು (3)
3.ಊರ ಹತ್ತಿರ ಹಾವು ಕಾಣುತ್ತಿದೆಯಲ್ಲಾ? (2)
4.ಏನೇನೂ ಇಲ್ಲದ ಶೂನ್ಯತೆ! (2)
7.ಮನಸ್ಸನ್ನು ಸಂತೋಷಗೊಳಿಸುವುದು (5)
9.ಬೆಲೆಬಾಳುವ ಮಣಿಗಳನ್ನು ಕುಂದಣಿಸಿದ್ದು (5)
11.ಮಣ ಭಾರ ಹೊತ್ತಿರುವ ನಲ್ಲ! (3)
12.ಒಣಗಿದ ವಸ್ತು (3)
13.ಹೊಟ್ಟೆಕಿಚ್ಚು ಇಲ್ಲಿ ವ್ಯಕ್ತವಾಗಿದೆ (3)
14.ಮಾವನ ಹೆಂಡತಿ ಏಕೋ ತಿರುಗಿದ್ದಾಳಲ್ಲಾ? (2)

1			2	■	3			4
	■	■	5			■	■	
6	7			■	8		9	■
■		■	■	■	■	■		■
■		■	■	■	■	■		■
■		■	■	■	■	■		■
■	10		11	■	12			13
14	■	■	15			■	■	
16				■	17			

4833ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಭಾಜಕ 3.ಶತಕ 5.ಮಾರ್ಗದರ್ಶಕ 6.ಶರ 8.ಮೂಕ 9.ಅಂಕೆ 10.ಕದ 14.ಜನಜನಿತ 15.ಕಸ್ತೂರಿ 16.ಕಾಣಿಕೆ
ಮೇಲಿಂದ ಕೆಳಕ್ಕೆ: 1.ಭಾವಾವೇಶ 2.ಕಮಾನು 3.ಶಕಟ 4.ಕರಣಿಕ 7.ರವಿಕೆ 8.ಮೂಷಿಕ 9.ಅಂಗಾರಕ 11.ದಬ್ಬಾಳಿಕೆ 12.ಗುಜರಿ 13.ರತಕಾ

ಸುಡೊಕು 5220

		4	9		2	1		6
1		6					8	
	8			6				5
7								
	5		7	1	4	2		8
4					6			7
2		5		7			6	
	6					8		
8		1	6		3			9

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5219 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

NAME CHANGE ANNOUNCEMENT
Log on to :
dhclassifieds.com

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಬಿ. ನಾರಾಯಣಗೌಡ, ಲಕ್ಷ್ಮೀಸಾಗರ, ಆನೇಕಲ್ ತಾಲ್ಲೂಕು
ಜನನ: 20.08.1926 – ನಿಧನ: 09.01.2022
ಆನೇಕಲ್ ತಾಲ್ಲೂಕಿನ ಲಕ್ಷ್ಮೀಸಾಗರದ ಬಿ. ನಾರಾಯಣಗೌಡರು ದಿನಾಂಕ 09.01.2022 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಲಕ್ಷ್ಮೀಸಾಗರದಲ್ಲಿ ಸೋಮವಾರ (ಜ. 10) 2:00 ಘಂಟೆಗೆ ನಡೆಯಲಿದೆ.
ದುಃಖತಪ್ತರು: ಎನ್.ರಾಮೇಗೌಡ, ಜೆಡಿಎಸ್ ಹಿರಿಯ ಮುಖಂಡರು, ಆನೇಕಲ್ ತಾಲ್ಲೂಕು, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬದವರು.
9448718546, 9880741832

3rd ANNIVERSARY REMEMBRANCE



R.KRISHNAPPA
13-3-1930 - 10-01-2019
He is no more with us. But has left behind his fame, inspiring genius, Virtues, and his Deeds.
He continues to adorn our hearts and minds.
Fondly remembered for ever
K.Ramachandrappa and Family, Dwarakanagara, Banashankari 3rd Stage, Bangalore 560085

24ನೇ ವರ್ಷದ ಪುಣ್ಯ ತಿಥಿ

ಶ್ರೀಮತಿ ಸಾಕಮ್ಮ ನಿಧನ: 30.4.2011
ಪಟೇಲ್ ಆರ್. ಕೃಷ್ಣಾರೆಡ್ಡಿ ನಿಧನ: 10.1.1998
ನೀವು ನಮ್ಮನ್ನು ಅಗಲಿ ಇಂದಿಗೆ 24 ವರ್ಷಗಳು ಸಂದರೂ ಸದಾ ನಿಮ್ಮ ಸವಿನೆನಪು ನಮ್ಮ ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ
ಇಂತಿ: ಶ್ರೀ ಕೆ. ಪುರುಷೋತ್ತಮ ರೆಡ್ಡಿ ಮತ್ತು ಕುಟುಂಬದವರು
ಎಸ್.ಕೆ.ಆರ್. ಕನ್‌ವೆನ್ಷನ್ ಹಾಲ್, ಮಾರತ್ತಹಳ್ಳಿ, ಬೆಂಗಳೂರು–37

ನಿಧನ

ಎನ್.ಎಂ.ಕೃಷ್ಣಪ್ಪನವರು
(ನಿವೃತ್ತ ಮ್ಯಾನೇಜರ್, ಎನ್.ಜಿ.ಇ.ಎಫ್) (81 ವರ್ಷ)
ಇಂದಿರಾನಗರ (ನಲ್ಲಪ್ಪನಹಳ್ಳಿ), ಬೆಂಗಳೂರು–08
ಜನನ: 10–07–1942 – ನಿಧನ: 9.1.2022
ಇವರು ದಿನಾಂಕ 9.1.2022 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಸ್ವಗ್ರಾಮ ನಲ್ಲಪ್ಪನಹಳ್ಳಿಯಲ್ಲಿ ಭಾನುವಾರ ಸಂಜೆ 4:00 ಗಂಟೆಗೆ ಮೃತರ ಅಂತ್ಯಕ್ರಿಯೆ ನೆರವೇರಿತು.
ಇಂತಿ ದುಃಖತಪ್ತರು ಪತ್ನಿ–ಶ್ರೀಮತಿ ನಾಗರತ್ನಮ್ಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮುಮ್ಮಗ ಮತ್ತು ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ತಕ್ಷಣ_ಬೇಕಾಗಿದ್ದಾರೆ 7TH, 10th, PUC, Diploma, any Degree, ITI, Pass/ Fail ಉಚಿತ ಊಟ+ವಸತಿ. ಸಂಬಳ 16,000-60,000. ಫೋ 9886639846, 7624918246.

General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155 8139988588

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 9742260055, 9538133533

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

OPPORTUNITY BANKING, office, Field work, Telecalling, Salary 16000/- -24000/- SSLC, PUC Degree Pass/Fail. 7619689177.

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

ವ್ಯಾಪಾರ

Business Offers

Business For Sale

ಹಾಲಿ ಪ್ರಾವಿಷನ್ ಸ್ಟೋರ್ ಮಾರಾಟಕ್ಕಿದೆ. ಬೆಂಗಳೂರಿನ ಶ್ರೀ ರಾಮಾಂಜನೇಯ ಮುಖ್ಯರಸ್ತೆ, ಹನುಮಂತನಗರ, ಬೆಲೆ ರೂ. 3,20,000. ಸಂಪರ್ಕಿಸಿ : 9008151027

ಭವಿಷ್ಯ

Astrology

★||ಶ್ರೀಹುಲಿಗೆಮ್ಮ ಚೌಡೇಶ್ವರಿದೇವಿ||★ ಆರಾಧನೆಯಿಂದ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ, ಸಾಲದಬಾದೆ,ಶತ್ರುನಾಶ ಇನ್ನಯಾವುದೇ ಘೋರ,ನಿಗೂಢ ಗುಪ್ತ,ಕಠಿಣ ಸಮಸ್ಯೆಗಳಿದ್ದರೂ 24ಗಂಟೆಗಳಲ್ಲಿ ಶಾಶ್ವತಪರಿಹಾರ. ವಶಿಕರಣ_ಸ್ಪೆಷಲಿಸ್ಟ್ ಶ್ರೀದೇವಿಭಟ್ 9606735267

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★ನಂ.1 ಸ್ತ್ರೀಪುರುಷ★ ವಶೀಕರಣ ಸ್ಪೆಷಲಿಸ್ಟ್.ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ.ಪಂಡಿತ್. ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ,ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

ವಶೀಕರಣ ಸ್ಪೆಷಲಿಸ್ಟ್ ಪ್ರೀತಿ, ಸ್ತ್ರೀ ವಶೀಕರಣ, ದಾಂಪತ್ಯ, ಕುಟುಂಬ ಕಲಹ, ಯಾವುದೇ ಗುಪ್ತ ಸಮಸ್ಯೆಗಳಿಗೆ ಖಚಿತಪರಿಹಾರ 9902157331, A.R.Ganachari

ಪ್ರವಾಸ

Travel

10.02.2022/ 10.03.2022- 11/15 ದಿನಗಳು ಕಾಶಿಯತ್ರ, ದೆಹಲಿ, ಆಗ್ರ, ಅಲಹಾಬದ್, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ.ಜನವರಿ, ಫೆಬ್ರವರಿ, ಮಾರ್ಚನಲ್ಲಿ ಅಂಡಮಾನ್ ಹವಳದ್ವೀಪ Royal Package- 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*
For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

26 ವರ್ಷದ ಬಿಸಿಎ ಪದವೀಧರ • ಮುಸ್ಲಿಂ ಮಹಿಳೆಯರ ಭಾವಚಿತ್ರ ಅಪ್‌ಲೋಡ್ ಪ್ರಕರಣ

'ಸುಲ್ಲಿ ಡೀಲ್ಸ್' ಆ್ಯಪ್ ಸೃಷ್ಟಿಕರ್ತನ ಬಂಧನ

ನವದೆಹಲಿ/ಇಂದೋರ್ (ಪಿಟಿಐ): ವಿವಾದಾಸ್ಪದ 'ಸುಲ್ಲಿ ಡೀಲ್ಸ್' ಮೊಬೈಲ್ ಆ್ಯಪ್ ರೂಪಿಸಿದ್ದ ಓಂಕಾರೇಶ್ವರ್ ಠಾಕೂರ್ (26) ಎಂಬವರನ್ನು ದೆಹಲಿ ಪೊಲೀಸರು ಮಧ್ಯಪ್ರದೇಶದ ಇಂದೋರ್‌ನಲ್ಲಿ ಭಾನುವಾರ ಬಂಧಿಸಿದ್ದಾರೆ.

ಸುಲ್ಲಿಡೀಲ್ಸ್ ಆ್ಯಪ್ ಪ್ರಕರಣದಲ್ಲಿ ಇದು ಮೊದಲ ಬಂಧನ. ಬಂಧಿತ ಇಂದೋರ್‌ನ ನ್ಯೂಯಾರ್ಕ್ ಸಿಟಿ ಟೌನ್‌ಶಿಪ್‌ನ ನಿವಾಸಿ. ಐಪಿಎಸ್ ಅಕಾಡೆಮಿಯಿಂದ ಬಿಸಿಎ ಕೋರ್ಸ್ ಮಾಡಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊಬೈಲ್ ಅಪ್ಲಿಕೇಷನ್‌ನಲ್ಲಿ ಮುಸ್ಲಿಂನ ನೂರಾರು ಮಹಿಳೆಯರ ಭಾವಚಿತ್ರವನ್ನು ಅಪ್‌ಲೋಡ್ ಮಾಡಿದ್ದು, ಇವರು ಹರಾಜಿಗೆ ಇದ್ದಾರೆ ಎಂಬ ಒಕ್ಕಣೆ ನೀಡಲಾಗಿತ್ತು. ಇದಕ್ಕೆ ತೀವ್ರ ಆಕ್ರೋಶ ವ್ಯಕ್ತವಾಗಿದ್ದು,ಚರ್ಚೆಗೆ ಗ್ರಾಸವಾಗಿತ್ತು.

'ಆ್ಯಪ್ ಬಗ್ಗೆ ಗೊತ್ತಿಲ್ಲ, ಮಗನನ್ನು ಸಿಲುಕಿಸಲಾಗಿದೆ'

ಇಂದೋರ್ (ಪಿಟಿಐ): 'ಆ್ಯಪ್ ಬಗ್ಗೆ ನಮಗೇನೂ ತಿಳಿದಿಲ್ಲ. ಈ ಪ್ರಕರಣದಲ್ಲಿ ನನ್ನ ಮಗನನ್ನು ಸಿಲುಕಿಸಲಾಗಿದೆ' ಎಂದು ಬಂಧಿತ ಆರೋಪಿಯ ತಂದೆ ಅಖಿಲೇಶ್ ಠಾಕೂರ್ ಪ್ರತಿಕ್ರಿಯಿಸಿದ್ದಾರೆ.

2018ರಲ್ಲಿ ಬಿಸಿಎ ಪದವಿ ಪೂರ್ಣಗೊಳಿಸಿದ ಬಳಿಕ ಮಗ ಮನೆಯಿಂದಲೇ ಕೆಲಸ ಮಾಡುತ್ತಿದ್ದು, ವೆಬ್ ವಿನ್ಯಾಸ ಮಾಡುತ್ತಿದ್ದ. ಮಫ್ತಿಯಲ್ಲಿ ಬಂದಿದ್ದ ದೆಹಲಿ ಪೊಲೀಸರು ನನ್ನ ಮಗನನ್ನು ಕರೆದೊಯ್ದರು ಎಂದು ತಿಳಿಸಿದ್ದಾರೆ.

ಮಗ ಬಳಸುತ್ತಿದ್ದ ಮೊಬೈಲ್ ಫೋನ್ ಮತ್ತು ಲ್ಯಾಪ್‌ಟಾಪ್ ಅನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಅವರು ತಿಳಿಸಿದರು.

ಪ್ರಾಥಮಿಕ ಹಂತದ ತನಿಖೆಯಲ್ಲಿ ಆರೋಪಿಯು, 'ತಾನು ಟ್ವಿಟರ್‌ನಲ್ಲಿ ಗ್ರೂಪ್‌ವೊಂದರ ಸದಸ್ಯನಾಗಿದ್ದು, ಮುಸ್ಲಿಂ ಮಹಿಳೆಯರ ಭಾವಚಿತ್ರ ಅಪ್‌ಲೋಡ್ ಮಾಡಿ, ಟ್ರೋಲ್ ಮಾಡುವ ಚಿಂತನೆಯನ್ನು ಅಲ್ಲಿಯೇ ಹಂಚಿಕೊಳ್ಳಲಾಗಿತ್ತು ಎಂಬುದನ್ನು ಒಪ್ಪಿಕೊಂಡಿದ್ದಾನೆ' ಎಂದು ಡಿಸಿಪಿ (ಐಎಫ್‌ಎಸ್‌ಒ) ಕೆಪಿಎಸ್ ಮಲ್ಹೋತ್ರಾ ಅವರು ತಿಳಿಸಿದ್ದಾರೆ.

'ಗಿಟ್ ಹಬ್' ವೇದಿಕೆಗೂ ಈತನೇ ಕೋಡ್ ಅಭಿವೃದ್ಧಿಪಡಿಸಿದ್ದ. ಇದರ ಮೂಲಕವೇ ಗ್ರೂಪ್‌ನ ಸದಸ್ಯರು ಗಿಟ್‌ಹಬ್ ಬಳಸುತ್ತಿದ್ದರು. ಅಲ್ಲದೆ, ಆ್ಯಪ್ ಅನ್ನೂ ಈತ ತನ್ನ ಟ್ವಿಟರ್ ಖಾತೆಯ ಮೂಲಕವೇ ಹಂಚಿಕೊಂಡಿದ್ದ. ಬಳಿಕ ಗ್ರೂಪ್‌ನ ಸದಸ್ಯರು ಮುಸ್ಲಿಂ ಮಹಿಳೆಯರ ಭಾವಚಿತ್ರಗಳನ್ನು ಹಂಚಿಕೊಂಡಿದ್ದರು' ಎಂದು ವಿವರಿಸಿದ್ದಾರೆ.

ಆರೋಪಿಯು ಉಲ್ಲೇಖಿತ ಗ್ರೂಪ್ ಅನ್ನು ಜನವರಿ 2020ರಲ್ಲಿ 'ತ್ರಾಡ್‌ಮಹಾಸಭಾ' ಹೆಸರಿನಲ್ಲಿ ಪ್ರವೇಶಿಸಿದ್ದ. ಸುಲ್ಲಿ ಡೀಲ್ಸ್ ಆ್ಯಪ್ ಕುರಿತ ಪ್ರಕರಣ ಬಹಿರಂಗವಾದಂತೆ ಸಾಮಾಜಿಕ ಜಾಲತಾಣದಲ್ಲಿ ತನ್ನ ಖಾತೆಯಲ್ಲಿದ್ದ ಎಲ್ಲ ವಿವರಗಳನ್ನು ಅಳಿಸಿಹಾಕಿದ್ದ ಎಂದು ಡಿಸಿಪಿ ತಿಳಿಸಿದ್ದಾರೆ.

ಗ್ರೂಪ್‌ನಲ್ಲಿ ವಿವಿಧ ಸಂದರ್ಭಗಳಲ್ಲಿ ಚರ್ಚೆ ನಡೆದಿದ್ದಾಗ ಮುಸ್ಲಿಂ ಮಹಿಳೆಯರನ್ನು ಟ್ರೋಲ್ ಮಾಡುವ ಕುರಿತು ಚರ್ಚೆ ನಡೆದಿತ್ತು ಎಂದು ತಿಳಿಸಿದ್ದಾನೆ. ಆ್ಯಪ್ ಕುರಿತಂತೆ ಇನ್ನಷ್ಟು ವಿವರಗಳು, ಚಿತ್ರ, ಕೋಡ್‌ಗಳಿಗಾಗಿ ಪರಿಕರಗಳ ತಾಂತ್ರಿಕ ವಿಶ್ಲೇಷಣೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೆಹಲಿ ಪೊಲೀಸ್‌ನ ಪಿಆರ್‌ಒ ಚಿನ್ಮಯ್ ಬಿಸ್ವಾಲ್ ಅವರು, ಸೈಬರ್ ಕ್ರೈಮ್ ಪೋರ್ಟಲ್‌ನಲ್ಲಿ ಸುಲ್ಲಿ ಡೀಲ್ಸ್ ಕುರಿತು ದೂರು ಬಂದಿದ್ದು, ಇದರನ್ವಯ ಪ್ರಕರಣ ದಾಖಲಿಸಲಾಗಿತ್ತು ಎಂದು ತಿಳಿಸಿದರು.

ಬುಲ್ಲಿ ಬಾಯಿ ಆ್ಯಪ್‌ಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಜನವರಿ 1ರಂದು ಪ್ರಕರಣ ದಾಖಲಿಸಿದ್ದರು. ದೆಹಲಿ ಮೂಲದ ಪತ್ರಕರ್ತೆ ಅಪರಿಚಿತರ ವಿರುದ್ಧ, ಈ ಪ್ರಕರಣ ಸಂಬಂಧ ದೂರು ನೀಡಿದ್ದರು.

ಈ ನಡುವೆ ಇಂದೋರ್‌ನ ಪೊಲೀಸರು, ಆ್ಯಪ್ ಸೃಷ್ಟಿಕರ್ತನ ಬಂಧನ ಕುರಿತಂತೆ ತಮಗೆ ದೆಹಲಿ ಪೊಲೀಸರು ಯಾವುದೇ ವಿವರ, ಮಾಹಿತಿ ನೀಡಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

ಮಾಧ್ಯಮ ವರದಿಗಳ ಮೂಲಕವೇ ಠಾಕೂರ್ ಬಂಧನವಾಗಿರುವುದು ನಮಗೆ ತಿಳಿಯಿತು ಎಂದು ಇಂದೋರ್ ಪೊಲೀಸ್ ಕಮಿಷನರ್ ಹರಿನಾರಾಯಣಚಾರಿ ಮಿಶ್ರಾ ಅವರು ತಿಳಿಸಿದ್ದಾರೆ.

ಪಶ್ಚಿಮಘಟ್ಟ ಸೂಕ್ಷ್ಮ ಪ್ರದೇಶ: ಅಧಿಸೂಚನೆ ಅಂತಿಮಗೊಳಿಸಲು ಆರು ತಿಂಗಳ ಗಡುವು

ಒಂದನೇ ಪುಟದಿಂದ

2011ರಲ್ಲಿ ಅರಣ್ಯ, ಪರಿಸರ ಸಚಿವಾಲಯವು ರಚಿಸಿದ್ದ ಪರಿಸರ ತಜ್ಞ ಮಾಧವ ಗಾಡ್ಗೀಳ್ ನೇತೃತ್ವದ ಸಮಿತಿಯು, ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿ 1,29,037 ಚದರ ಕಿ.ಮೀ. ವ್ಯಾಪ್ತಿ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯ ಎಂದು ಘೋಷಿಸಲು ಶಿಫಾರಸು ಮಾಡಿತ್ತು. ನಂತರ, 2012ರಲ್ಲಿ ರಚಿಸಲಾದ ಕಸ್ತೂರಿರಂಗನ್ ನೇತೃತ್ವದ ಸಮಿತಿಯು ವ್ಯಾಪ್ತಿಯನ್ನು 56,825 ಚದರ ಕಿ.ಮೀ.ಗೆ ಇಳಿಸಿತ್ತು. ಈಗ ವಿವಿಧ ರಾಜ್ಯಗಳು ಈ ವ್ಯಾಪ್ತಿಯನ್ನು 50,805 ಚದರ ಕಿ.ಮೀಗೆ ಇಳಿಸಲು ಆಗ್ರಹಪಡಿಸಿವೆ.

ಎನ್‌ಜಿಟಿ ಈ ಹಿಂದೆ ಆಗಸ್ಟ್ 24, 2018ರಲ್ಲಿ ನ್ಯಾಯಮಂಡಳಿ ಒಪ್ಪಿರುವ ಈ ವ್ಯಾಪ್ತಿಯನ್ನು ಕುಗ್ಗಿಸಬಾರದು ಎಂದು ನಿರ್ದೇಶನ ನೀಡಿತ್ತು. ಡಿಸೆಂಬರ್ 2020ರಲ್ಲಿ ಅರಣ್ಯ ಮತ್ತು ಪರಿಸರ ಸಚಿವಾಲಯವು, ಕೋವಿಡ್ ಕಾರಣ ನೀಡಿ ಅಧಿಸೂಚನೆ ಅಂತಿಮಗೊಳಿಸಲು ಹೆಚ್ಚಿನ ಸಮಯ ಕೋರಿತ್ತು.

ಕೇಂದ್ರವು 2010ರಲ್ಲಿ, 'ಪಶ್ಚಿಮಘಟ್ಟವು ಜಾಗತಿಕ ಜೀವವೈವಿಧ್ಯ ತಾಣ. ಇದನ್ನು ರಕ್ಷಿಸಬೇಕಿದೆ' ಎಂದು ಪ್ರತಿಪಾದಿಸಿ ಸಮಿತಿ ರಚಿಸಿತು. ಗಾಡ್ಗೀಳ್ ಸಮಿತಿ ವರದಿಗೆ ವಿರೋಧ ವ್ಯಕ್ತವಾಗಿದ್ದು, 2012ರಲ್ಲಿ ಕಸ್ತೂರಿರಂಗನ್ ನೇತೃತ್ವದಲ್ಲಿ ಸಮಿತಿ ರಚಿಸಿತು. ಇದರ ವರದಿಗೂ ವಿರೋಧ ವ್ಯಕ್ತವಾಗಿದೆ.

ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿ ಕುಗ್ಗಿಸಬೇಕು ಎಂಬುದು ವಿವಿಧ ರಾಜ್ಯಗಳ ಮನವಿ. ಕೆಲವು ಚಟುವಟಿಕೆಗಳ ಮೇಲೆ ನಿರ್ಬಂಧ ಹೇರಿದರೆ ಆರೋಗ್ಯ ಸೇವೆ ಮತ್ತು ಶಿಕ್ಷಣ ಸೇರಿ ವಿವಿಧ ಚಟುವಟಿಕೆಗಳ ಮೇಲೆ ಪ್ರತಿಕೂಲ ಪರಿಣಾಮವಾಗಲಿದೆ ಎಂದು ಈ ರಾಜ್ಯಗಳು ಪ್ರತಿಪಾದಿಸಿವೆ ಎಂದು ಸಚಿವಾಲಯ ತಿಳಿಸಿದೆ.

ಹಿಮದ ಜತೆ ಖುಷಿ
ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ಭಾನುವಾರ ಸುರಿದ ಹಿಮಪಾತದಲ್ಲಿ ಮಿಂದ ಪ್ರವಾಸಿಗರು ಮತ್ತು ಸ್ಥಳೀಯರು ಖುಷಿಪಟ್ಟರು – ಪಿಟಿಐ ಚಿತ್ರ

ಸಂಕ್ರಾಂತಿ: ಜಾಗತಿಕ ಸೂರ್ಯ ನಮಸ್ಕಾರ ಕಾರ್ಯಕ್ರಮ

ನವದೆಹಲಿ (ಪಿಟಿಐ): ಆಯುಷ್ ಸಚಿವಾಲಯವು ಮಕರ ಸಂಕ್ರಾಂತಿಯ ದಿನವಾದ ಜನವರಿ 14 ರಂದು ಜಾಗತಿಕ ಸೂರ್ಯ ನಮಸ್ಕಾರ ಕಾರ್ಯಕ್ರಮ ಆಯೋಜಿಸಿದೆ. 75 ಲಕ್ಷ ಜನರು ಭಾಗ ವಹಿಸಲಿದ್ದಾರೆ. ಅಂದು ಸೂರ್ಯನಿಗೆ ನಮಸ್ಕರಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಭಾರತದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯಲ್ಲಿ ಮಕರ ಸಂಕ್ರಾಂತಿಗೆ ತನ್ನದೇ ಆದ ಮಹತ್ವವಿದೆ. ಈ ಹಿನ್ನೆಲೆಯಲ್ಲಿ ಅಂದು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಮೇಕೆದಾಟು ಪಾದಯಾತ್ರೆ: ಭರ್ಜರಿ ಶುರು

ಒಂದನೇ ಪುಟದಿಂದ

ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, '₹ 9 ಸಾವಿರ ಕೋಟಿ ಮೊತ್ತದ ಈ ಬೃಹತ್ ಯೋಜನೆಗೆ ಇಡೀ ರಾಜ್ಯದ ಜನರ ಬೆಂಬಲವಿದೆ. ಕುಡಿಯುವ ನೀರಿಗಾಗಿ ಪದೇ ಪದೇ ಕಚ್ಚಾಡುತ್ತಿದ್ದೇವೆ. ಯೋಜನೆ ಅನುಷ್ಠಾನದ ಮೂಲಕ 67 ಟಿಎಂಸಿ ಅಡಿ ನೀರು ಸಂಗ್ರಹಿಸುವ ಗುರಿ ಈಡೇರುವವರೆಗೂ ಹೋರಾಟ ಮುಂದುವರಿಯಬೇಕು. ಸರ್ಕಾರ, ಜೆಡಿಎಸ್ ಅಷ್ಟೇ ಅಲ್ಲದೇ ಬೇರೆಯವರೂ ಕಾಲೆಳೆಯುವ ಪ್ರಯತ್ನ ಮಾಡುತ್ತಾರೆ. ಎಚ್ಚರ ವಹಿಸಬೇಕು' ಎಂದು ಸಲಹೆ ನೀಡಿದರು.

ಮೇಕೆದಾಟು ಯೋಜನೆ ವಿಳಂಬಕ್ಕೆ ಡಬ್ಬಲ್ ಎಂಜಿನ್ ಸರ್ಕಾರವೇ ಕಾರಣ ಎಂದು ಮತ್ತೆ ವಾಗ್ದಾಳಿ ನಡೆಸಿದ ಸಿದ್ದರಾಮಯ್ಯ, 'ಯೋಜನೆಗೆ ಚಾಲನೆ ನೀಡದೆ ನಾಡಿನ ಜನರಿಗೆ ಬಿಜೆಪಿ ಸರ್ಕಾರ ವಿಳಂಬ ದ್ರೋಹ ಮಾಡಿದೆ. ತಮಿಳುನಾಡಿನಲ್ಲಿ ಪಕ್ಷಕ್ಕೆ ನೆಲೆ ಕಲ್ಪಿಸಿ, ಶಕ್ತಿ ವಿಸ್ತರಿಸಬೇಕೆಂಬ ಕಾರಣಕ್ಕೆ ಪರಿಸರ ಇಲಾಖೆಯಿಂದ ಕೇಂದ್ರ ಸರ್ಕಾರ ಅನುಮೋದನೆ ನೀಡುತ್ತಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಆಗಿದೆ. ಈಗ ಈ ಎರಡು ದೋಷಗಳನ್ನು ಮುಚ್ಚಿಕೊಳ್ಳಲು ಯಾವುದೇ ಕಾರಣಕ್ಕೂ ಪಾದಯಾತ್ರೆ ನಡೆಯಬಾರದೆಂದು ರಾಜ್ಯ ಸರ್ಕಾರ ಶತಪ್ರಯತ್ನ ಮಾಡಿದೆ' ಎಂದರು.

ತಮ್ಮ ಅಧಿಕಾರಾವಧಿಯಲ್ಲಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ನಡೆದ ಕೆಲಸಗಳನ್ನು ಸ್ಮರಿಸಿದ ಅವರು, 'ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಜಾಹೀರಾತು ನೀಡುವ ಮೂಲಕ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಕೇಂದ್ರ ಸರ್ಕಾರದ ಮುಂದೆ ಬಾಕಿ ಇರುವ ಪರಿಸರ ನಿರಾಕ್ಷೇಪಣಾ ಪತ್ರ ಪಡೆದು ಯೋಜನೆ ಆರಂಭಿಸದೆ ವಿಳಂಬ ದ್ರೋಹ ಮಾಡಿದೆ. ಬಿಜೆಪಿ ತನ್ನ ಶಕ್ತಿಯನ್ನು ತಮಿಳುನಾಡಿನಲ್ಲಿ ವಿಸ್ತರಿಸಲು ಕೇಂದ್ರ ಸರ್ಕಾರ ನಿರಾಕ್ಷೇಪಣಾ ಪತ್ರ ಕೊಡುತ್ತಿಲ್ಲ. ಬಿಜೆಪಿ ಎಷ್ಟೇ ತಡೆಯುವ ಪ್ರಯತ್ನ ಮಾಡಿದರೂ ಪಾದಯಾತ್ರೆ ನಿಲ್ಲಲ್ಲ. ಯೋಜನೆ ನಮ್ಮ ಕೂಸು' ಎಂದು ಹೇಳಿದರು.

'ಬೆಂಗಳೂರಿನ ಶೇ 30ಕ್ಕಿಂತ ಹೆಚ್ಚು ಜನರಿಗೆ ಕುಡಿಯಲು ಕಾವೇರಿ ನೀರು ಸಿಗುತ್ತಿಲ್ಲ ಇದಕ್ಕಾಗಿ ಈ ಪಾದಯಾತ್ರೆ. ಯೋಜನೆ ಮಾಡಿದರೆ 50 ವರ್ಷ ಕುಡಿಯುವ ನೀರಿನ ಸಮಸ್ಯೆ ಇರಲ್ಲ. ರಾಜ್ಯದ ಜನರಿಗೆ ಅನುಕೂಲ ಆಗುತ್ತದೆ' ಎಂದು ಸಿದ್ದರಾಮಯ್ಯ ಹೇಳಿದರು.

'ಯೋಜನೆಯ ಬಗ್ಗೆ ಕಾರಜೋಳ ಅನಾಮಧೇಯ ಜಾಹೀರಾತು ನೀಡಿದ್ದಾರೆ. ಆ ಮೂಲಕ, ಕೀಳುಮಟ್ಟದ ರಾಜಕಾರಣ ಮಾಡುತ್ತಿದ್ದಾರೆ. ನಾವು ಕೂಡಾ ಸದ್ಯದಲ್ಲೇ ಜಾಹೀರಾತು ಮೂಲಕವೇ ಉತ್ತರ ನೀಡುತ್ತೇವೆ' ಎಂದು ಕಾಂಗ್ರೆಸ್ ಶಾಸಕ ಎಂ.ಬಿ. ಪಾಟೀಲ ಹೇಳಿದರು.

ಹೆಜ್ಜೆ ಹಾಕುತೇವೆ ಹೆಜ್ಜೆ...

ಚಿತ್ರನಟ 'ದುನಿಯಾ' ವಿಜಯ್ ಮತ್ತು ಸಂಗೀತ ನಿರ್ದೇಶಕ ಸಾಧು ಕೋಕಿಲ ಕಾರ್ಯಕ್ರಮಕ್ಕೆ ತಾರಾ ಮೆರುಗು ನೀಡಿದರು. ಜೊತೆಗೆ ನಟಿ, ಕಾಂಗ್ರೆಸ್ ನಾಯಕಿ ಉಮಾಶ್ರೀ ಕೂಡಾ ಇದ್ದರು. ಸಾಧು ಕೋಕಿಲಾ ನಿರ್ದೇಶನದ ಸಮೂಹ ಹಾಡು 'ಹೆಜ್ಜೆ ಹಾಕುತೇವೆ... ಹೆಜ್ಜೆ ಹೆಜ್ಜೆ... ಕಾವೇರಿಗಾಗಿ ಹೆಜ್ಜೆ' ಉದ್ಘಾಟನೆಗೆ ಹುರುಪು ನೀಡಿತು. ಡಾ. ರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಮತ್ತು ಚಲನಚಿತ್ರ ವಾಣಿಜ್ಯ ಮಂಡಳಿಯ ಪ್ರಧಾನ ಕಾರ್ಯದರ್ಶಿ ಚಿತ್ರ ನಿರ್ಮಾಪಕ ಎನ್.ಎಂ. ಸುರೇಶ್ ಕೂಡಾ ಇದ್ದರು.

ವೇದಿಕೆಯಲ್ಲಿದ್ದ ಸ್ವಾಮೀಜಿಗಳು ಗಿಡಕ್ಕೆ ನೀರೆರೆದರೆ, ಶಾಸಕಿಯರು ಮತ್ತು ಕೆಪಿಸಿಸಿ ಮಹಿಳಾ ಪದಾಧಿಕಾರಿಗಳು ಕಲಶ ಹೊತ್ತು ಸಾಂಕೇತಿಕವಾಗಿ ಹೆಜ್ಜೆ ಹಾಕಿ ಹಂಡೆಗಳಿಗೆ ನೀರು ತುಂಬಿಸಿದರು. ತಮಟೆ, ವೀರಗಾಸೆ, ಪಟ ಕುಣಿತ, ಡೊಳ್ಳು, ಯಕ್ಷಗಾನ, ವೀರಗಾಸೆ, ತೊಗಲುಗೊಂಬೆ ತಂಡಗಳು ಪಾದಯಾತ್ರೆಗೆ ಸಾಂಸ್ಕೃತಿಕ ಸ್ಪರ್ಶ ನೀಡಿದವು. ವೇದಿಕೆಯಲ್ಲೇ ನಿಂತು ಜನಪದ ಕಲಾ ತಂಡಗಳ ವಾದ್ಯದ ಸದ್ದಿಗೆ ಡಿ.ಕೆ. ಶಿವಕುಮಾರ್ ಚಪ್ಪಾಳೆ ತಟ್ಟಿ ಹುರಿದುಂಬಿಸಿದರು. ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಮತ್ತು ತಂಡದವರಿಂದ ಗಂಗೆ ಪೂಜೆ, ಉಮಾಶ್ರೀ ಅವರಿಂದ ಕಲಶಪೂಜೆ ನಡೆಯಿತು. ರೈತ ಗೀತೆ ಹಾಡುವಾಗ ಹಸಿರು ಶಾಲು ತಿರುಗಿಸಿ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಸಂಭ್ರಮಿಸಿದರು.

'ಸಂಗಮ'ದಲ್ಲಿ ಮಿಂದೆದ್ದ ಡಿಕೆಶಿ

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬೆಳಿಗ್ಗೆ ಸಂಗಮದಲ್ಲಿ ತೆಪ್ಪದಲ್ಲಿ ತೆರಳಿ, ಸ್ನಾನ ಮಾಡಿ ಪೂಜೆ ಸಲ್ಲಿಸಿದರು. ಸ್ನಾನಕ್ಕೆ ಇಳಿಯುವ ಸಂದರ್ಭದಲ್ಲಿ ಶಿವಕುಮಾರ್ ಜಾರಿ ಬಿದ್ದರು. ಸಹೋದರ, ಸಂಸದ ಡಿ.ಕೆ. ಸುರೇಶ್ ಇಡೀ ಕಾರ್ಯಕ್ರಮದ ರೂವಾರಿಯಾಗಿದ್ದರು.

ಅವರ ಜೊತೆ, ಬೃಹತ್ ವೇದಿಕೆಯಲ್ಲಿ ಓಡಾಡುತ್ತಲೇ ಎಲ್ಲವನ್ನೂ ನಿಯಂತ್ರಿಸುತ್ತಿದ್ದ ಶಿವಕುಮಾರ್, 'ಮುಂಚೂಣಿ'ಯಲ್ಲಿ ಕಾಣಿಸಿಕೊಂಡರು. ಆ ಮೂಲಕ, ತಮ್ಮ ನಾಯಕತ್ವದ ವರ್ಚಸ್ಸಿಗೆ ಕಳೆ ತಂದುಕೊಂಡರು. 'ಸಂಗಮದ ನೀರಿನ ಮೇಲೆ ಕುಳಿತಿದ್ದು ಇತಿಹಾಸ. ಹಿಂದೆ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡಿದ್ದರೆ, ಈಗ ಬಿಜೆಪಿ, ಜೆಡಿಎಸ್ ವಿರುದ್ಧ ಹೋರಾಟ ಮಾಡುತ್ತಿದೆ' ಎಂದರು.

'ಟೀಕೆ ಮಾಡುತ್ತೀರಾ, ಅಡಚಣೆ ಮಾಡುತ್ತೀರಾ, ನಿಮ್ಮ ಟೀಕೆ, ಅಡಚಣೆಗೆ ನಾವು ಹೆದರಲ್ಲ. ಸೊಪ್ಪು ಹಾಕಲ್ಲ. ಗೃಹ ಸಚಿವರೇ ಪಾದಯಾತ್ರೆಯ ವಿಡಿಯೊ ಕಳುಹಿಸಿ ಕೊಡುತ್ತೇನೆ. ನೀವು ಕೋವಿಡ್ ನಿರ್ಬಂಧ ವಿಧಿಸಿರುವುದೇ ಅನ್ಯಾಯ. ಈ ನಡಿಗೆ ನೀರಿಗಾಗಿ, ಪಕ್ಷಕ್ಕಾಗಿ ಅಲ್ಲ. ಬೆಂಗಳೂರಿನ ಜನರಿಗಾಗಿ' ಎಂದು ಸರ್ಕಾರದ ವಿರುದ್ಧ ಶಿವಕುಮಾರ್ ಗುಡುಗಿದರು.

'ಕೈ' ಪಾದಯಾತ್ರೆ ಮೇಲೆ ತೀವ್ರ ನಿಗಾ

ಒಂದನೇ ಪುಟದಿಂದ

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆರಂಭದಿಂದ ಈವರೆಗೆ ನಡೆದಿರುವ ಎಲ್ಲ ಪ್ರಯತ್ನಗಳ ಕುರಿತು ಸಾರ್ವಜನಿಕರ ಜತೆ ಮಾಹಿತಿ ಹಂಚಿಕೊಳ್ಳುವಂತೆ ಸಚಿವರಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ಜಲ ಸಂಪನ್ಮೂಲ ಇಲಾಖೆ ಸಿದ್ಧಪಡಿಸಿರುವ ಮಾಹಿತಿಯ ಟಿಪ್ಪಣಿಯನ್ನು ಸಭೆಯಲ್ಲಿದ್ದ ಸಚಿವರ ಜತೆಗೆ ಹಂಚಿಕೊಳ್ಳಲಾಗಿದೆ ಎಂಬ ಮಾಹಿತಿ ಲಭಿಸಿದೆ.

ನಿಗಾ ಇಡಲು ಸೂಚನೆ: ಪಾದಯಾತ್ರೆಯ ಮೇಲೆ ತೀವ್ರ ನಿಗಾ ಇಡಬೇಕು. ಪಾದಯಾತ್ರೆ ಕೋವಿಡ್ ಹರಡಲು ಕಾರಣವಾಗುವ ಸಾಧ್ಯತೆ ಇದೆ. ಅಂತಹ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣವೇ ವರದಿ ಮಾಡುವಂತೆ ಸ್ಥಳೀಯ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಪಾದಯಾತ್ರೆಯಲ್ಲಿ ಭಾಗಿಯಾದವರಲ್ಲಿ ಹೆಚ್ಚು ಮಂದಿಯಲ್ಲಿ ಸೋಂಕು ಹರಡುವ ಸಾಧ್ಯತೆ ಇದ್ದಲ್ಲಿ ಕಠಿಣ ನಿರ್ಬಂಧ ವಿಧಿಸುವ ಕುರಿತು ಯೋಚಿಸಬೇಕು ಎಂಬ ತೀರ್ಮಾನವನ್ನು ಸಭೆಯಲ್ಲಿ ಮಾಡಲಾಗಿದೆ.

ಬೆಂಗಳೂರಿನಲ್ಲಿ ವೇಗವಾಗಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವುದರಿಂದ ಕಾಂಗ್ರೆಸ್‌ನ ಪಾದಯಾತ್ರೆ ನಗರ ಪ್ರವೇಶಿಸಿದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಬಹುದು ಎಂದು ಕೆಲವು ಸಚಿವರು ಮತ್ತು ಶಾಸಕರು ಸಭೆಯಲ್ಲಿ ಆತಂಕ ಹೊರಹಾಕಿದ್ದಾರೆ. ಕೋವಿಡ್ ಪ್ರಮಾಣ ಗಣನೀಯವಾಗಿ ಏರಿಕೆಯಾದರೆ ಪಾದಯಾತ್ರೆ ನಗರ ಪ್ರವೇಶಿಸದಂತೆ ನಿರ್ಬಂಧ ವಿಧಿಸಬೇಕು ಎಂಬ ಬೇಡಿಕೆಯನ್ನೂ ಕೆಲವು ಮುಂದಿಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

'ನಿರಂತರವಾಗಿ ಪರಿಸ್ಥಿತಿ ಅವಲೋಕನಕ್ಕೆ ನಿರ್ಧರಿಸಲಾಗಿದೆ. ಪಾದಯಾತ್ರೆಯಿಂದ ಕೋವಿಡ್ ಹರಡುವ ಸಾಧ್ಯತೆ ಕಂಡುಬಂದಲ್ಲಿ ಕಠಿಣ ಕ್ರಮ ಅನಿವಾರ್ಯ ಆಗಬಹುದು ಎಂಬ ತೀರ್ಮಾನಕ್ಕೆ ಬರಲಾಗಿದೆ. ನಗರದಲ್ಲಿ ಕೋವಿಡ್ ಹರಡುವುದಕ್ಕೆ ಕಾರಣವಾಗುವ ಯಾವುದೇ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂಬ ಸಲಹೆಗೆ ಸಹಮತ ವ್ಯಕ್ತವಾಗಿದೆ. ಕಾದು ನೋಡಿ ತೀರ್ಮಾನಕ್ಕೆ ಬರಲಾಗುವುದು' ಎಂದು ಸಚಿವರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸಚಿವರಾದ ಡಾ.ಸಿಎನ್. ಅಶ್ವತ್ಥನಾರಾಯಣ, ಆರಗ ಜ್ಞಾನೇಂದ್ರ, ಡಾ.ಕೆ. ಸುಧಾಕರ್, ಬೈರತಿ ಬಸವರಾಜ, ಎಸ್.ಟಿ. ಸೋಮಶೇಖರ್ ಮತ್ತು ಹಲವು ಶಾಸಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿ ಕಟ್ಟೆಚ್ಚರಕ್ಕೆ ತೀರ್ಮಾನ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಪ್ರಮಾಣದ ಏರಿಕೆ ಕಂಡುಬರುತ್ತಿರುವ ಕುರಿತೂ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ಒಂದೆರಡು ದಿನಗಳ ಕಾಲ ಕಾದುನೋಡಿ, ಪರಿಸ್ಥಿತಿ ನಿಯಂತ್ರಣಕ್ಕೆ ಬಾರದಿದ್ದರೆ ಬೆಂಗಳೂರಿನಲ್ಲಿ ಮತ್ತಷ್ಟು ಬಿಗಿಯಾದ ನಿರ್ಬಂಧಗಳನ್ನು ಜಾರಿಗೊಳಿಸುವ ಕುರಿತು ಭಾನುವಾರದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಡಿಸೆಂಬರ್ 26 ಇನ್ನು 'ವೀರ ಬಾಲ ದಿವಸ'

ನವದೆಹಲಿ (ಪಿಟಿಐ): ಮೊಘಲ್ ಅರಸರಿಂದ ಗಲ್ಲಿಗೇರಿದ 10ನೇ ಸಿಖ್ ಗುರು ಗೋವಿಂದ ಸಿಂಗ್ ಅವರ ನಾಲ್ವರು ಪುತ್ರರ ಸ್ಮರಣಾರ್ಥ ಡಿಸೆಂಬರ್ 26 ಅನ್ನು ಇನ್ನು ಮುಂದೆ 'ವೀರ ಬಾಲ ದಿವಸ' ಎಂದು ಆಚರಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಘೋಷಿಸಿದ್ದಾರೆ.

ಸಿಖ್ ಗುರುವಿನ ಜನ್ಮ ದಿನಾಚರಣೆಯ ವೇಳೆ ಭಾನುವಾರ ಪ್ರಧಾನಿ ಅವರು ಈ ಪ್ರಕಟಣೆ ನೀಡಿದ್ದಾರೆ. 'ಗುರುವಿನ ಮಕ್ಕಳ ತ್ಯಾಗ ಮತ್ತು ಅವರ ಸಾವಿಗೆ ನ್ಯಾಯ ಒದಗಿಸಲು ಅವರಿಗೆ ಸಲ್ಲಿಸುತ್ತಿರುವ ಗೌರವವಾಗಿದೆ. ಸಾಹಿಬ್ಜಾದಾ ಜೋರಾವರ್ ಸಿಂಗ್ ಜಿ ಮತ್ತು ಸಾಹಿಬ್ಜಾದಾ ಫತೇಹ್ ಸಿಂಗ್ ಜಿ ಅವರನ್ನು ಜೀವಂತವಾಗಿ ಹೂತು ಹಾಕಿದ ದಿನವೂ ಇದಾಗಿದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಬಿಜೆಪಿ ಕಳೆದ ವರ್ಷ ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳಿಂದ ಪಕ್ಷದ ಮೇಲೆ ತೀವ್ರ ಅಸಮಾಧಾನಗೊಂಡಿದ್ದ ಸಿಖ್ ಸಮುದಾಯವನ್ನು ಓಲೈಸಲು ಬಿಜೆಪಿ ಹಲವು ಪ್ರಯತ್ನ ನಡೆಸುತ್ತಿದೆ, ಇದೂ ಅಂತಹ ಪ್ರಯತ್ನಗಳಲ್ಲಿ ಒಂದು ಎಂದು ವಿಶ್ಲೇಷಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಸಿಖ್ ಚಾಲಕನ ಮೇಲೆ ಹಲ್ಲೆ, ಅಮೆರಿಕ ಖಂಡನೆ

ನ್ಯೂಯಾರ್ಕ್ (ಪಿಟಿಐ): ಇಲ್ಲಿನ ಜಾನ್ ಎಫ್.ಕೆನಡಿ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಭಾರತೀಯ ಮೂಲದ ಸಿಖ್ ಚಾಲಕನೊಬ್ಬನ ಮೇಲೆ ನಡೆದ ಹಲ್ಲೆಗೆ ಅಮೆರಿಕ ವಿದೇಶಾಂಗ ಇಲಾಖೆಯು ಆಘಾತ ವ್ಯಕ್ತಪಡಿಸಿದೆ.

ವಿಮಾನನಿಲ್ದಾಣದ ಹೊರಗೆ ಅಪರಿಚಿತ ವ್ಯಕ್ತಿಯೊಬ್ಬ ಸಿಖ್ ಟ್ಯಾಕ್ಸಿ ಚಾಲಕನ ಮೇಲೆ ಹಲ್ಲೆ ನಡೆಸಿದ್ದು, ಆತನ ಮುಂಡಾಸನ್ನು (ಪೇಟ) ಕಿತ್ತೆಸೆದಿದ್ದಾನೆ ತೋರಿಸಿದೆ.

ಕಜಕಿಸ್ತಾನ: ಹಿಂಸಾತ್ಮಕ ಪ್ರತಿಭಟನೆ– 5,800 ಮಂದಿ ಬಂಧನ

ಮಾಸ್ಕೊ, ರಷ್ಯಾ (ಎಪಿ): ಕಳೆದ ವಾರ ಹಿಂಸಾರೂಪ ಪಡೆದ ಪ್ರತಿಭಟನೆಗಳಿಗೆ ಸಂಬಂಧಿಸಿದ ಸುಮಾರು 5,800 ಮಂದಿಯನ್ನು ಬಂಧಿಸಲಾಗಿದೆ ಎಂದು ಕಜಕಿಸ್ತಾನದ ಅಧ್ಯಕ್ಷರ ಕಚೇರಿ ಭಾನುವಾರ ಹೇಳಿದೆ.

ಕಜಕಿಸ್ತಾನದಲ್ಲಿ ಕಳೆದ ವಾರ ನಡೆದ ಪ್ರತಿಭಟನೆಗಳು ಕ್ರಮೇಣ ಹಿಂಸಾಚಾರಕ್ಕೆ ತಿರುಗಿದ್ದವು. ಇದರಿಂದ 164 ಮಂದಿ ಅಸುನೀಗಿದ್ದರು. ಅಲ್ಮಾಟಿ ನಗರದಲ್ಲಿ 163 ಮಂದಿ ಮೃತಪಟ್ಟಿದ್ದರು. ಪ್ರತಿಭಟನೆಗಳ ಶಮನಕ್ಕೆ ರಷ್ಯಾ ತನ್ನ ಸೇನೆಯನ್ನು ಕಳುಹಿಸಿತ್ತು.

ಚೀನಾ ವಿದೇಶಾಂಗ ಸಚಿವ–ಶ್ರೀಲಂಕಾ ಪ್ರಧಾನಿ ರಾಜಪಕ್ಸೆ ಭೇಟಿ

ಕೊಲಂಬೊ (ಪಿಟಿಐ): ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಮತ್ತು ಶ್ರೀಲಂಕಾ ಪ್ರಧಾನಿ ಮಹಿಂದಾ ರಾಜಪಕ್ಸೆ ಅವರು ಭಾನುವಾರ ಭೇಟಿಯಾಗಿ ಪ್ರವಾಸೋದ್ಯಮ, ಹೂಡಿಕೆಯನ್ನು ಉತ್ತೇಜಿಸುವ ಮತ್ತು ಕೋವಿಡ್ ಸೋಂಕಿನ ವಿರುದ್ಧ ಹೋರಾಡುವ ವಿಚಾರಗಳ ಕುರಿತು ಚರ್ಚೆ ನಡೆಸಿದರು.

ಎಂಎಫ್ ಹೂಡಿಕೆ ಯಶಸ್ಸಿಗೆ ಮೂರು ಸೂತ್ರಗಳು

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ಮ್ಯೂಚುವಲ್ ಫಂಡ್‌ಗಳ ಮೂಲಕ ಹೂಡಿಕೆ ಮಾಡುವ ಮುನ್ನ ಪ್ರಮುಖವಾಗಿ ಮೂರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಯಾವ ಮಾದರಿಯ ಮೂಲಕ ಹೂಡಿಕೆ ಮಾಡಿದರೆ ಲಾಭ ಹೆಚ್ಚು, ನಿರ್ದಿಷ್ಟ ಫಂಡ್‌ನಲ್ಲಿ ಹೂಡಿಕೆ ಮಾಡಿದರೆ ಅನ್ವಯವಾಗುವ ವೆಚ್ಚ ಅನುಪಾತ ಎಷ್ಟು ಮತ್ತು ಅವಧಿಗೆ ಮುನ್ನ ಮ್ಯೂಚುವಲ್ ಫಂಡ್‌ನಿಂದ ಹೊರನಡೆದರೆ ಕಟ್ಟಬೇಕಿರುವ ಎಕ್ಸಿಟ್ ಲೋಡ್ ಎಷ್ಟು ಎನ್ನುವ ಬಗ್ಗೆ ಸ್ಪಷ್ಟತೆಯಿದ್ದರೆ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ಹೆಚ್ಚು ಯಶಸ್ಸು ಗಳಿಸಬಹುದು.

1) ಡೈರೆಕ್ಟ್ ಮ್ಯೂಚುವಲ್ ಫಂಡ್‌ನಲ್ಲಿ ಲಾಭ ಹೆಚ್ಚು: ಮ್ಯೂಚುಯಲ್ ಫಂಡ್ ಮೂಲಕ ಹೂಡಿಕೆ ಮಾಡುವಾಗ ಪ್ರಮುಖವಾಗಿ ಎರಡು ಆಯ್ಕೆಗಳು ನಿಮ್ಮ ಮುಂದೆ ಇರುತ್ತವೆ. ಒಂದನೆಯದ್ದು ಡೈರೆಕ್ಟ್ ಮ್ಯೂಚುವಲ್ ಫಂಡ್; ಎರಡನೆಯದ್ದು ರೆಗ್ಯೂಲರ್ ಮ್ಯೂಚುವಲ್ ಫಂಡ್. ಮಧ್ಯವರ್ತಿಯ (ಏಜೆಂಟ್) ಸಹಾಯವಿಲ್ಲದೆ ಆಸ್ತಿ ನಿರ್ವಹಣಾ ಕಂಪನಿಗಳ (ಅಸೆಟ್ ಮ್ಯಾನೇಜ್ಮೆಂಟ್ ಕಂಪನಿ) ಮೂಲಕ ನೇರವಾಗಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ಅದು 'ಡೈರೆಕ್ಟ್' ಹೂಡಿಕೆ. ಮಧ್ಯವರ್ತಿಯ ಕಮಿಷನ್ ಇಲ್ಲದ ಕಾರಣ ಈ ರೀತಿಯ ಫಂಡ್‌ಗಳಲ್ಲಿ ವೆಚ್ಚ ಅನುಪಾತ (Expense Ratio) ಶುಲ್ಕ ಕಡಿಮೆ. ಜಿರೋದಾ, ಗ್ರೋ, ಪೇಟಿಎಂ ಮನಿ ಸೇರಿ ಹಲವು ಆ್ಯಪ್‌ಗಳು ಡೈರೆಕ್ಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಗೆ ಅವಕಾಶ ಕಲ್ಪಿಸಿವೆ. ಆಯಾ ಆಸ್ತಿ ನಿರ್ವಹಣಾ ಕಂಪನಿಗಳ ವೆಬ್‌ಸೈಟ್ ಮೂಲಕವೂ ಡೈರೆಕ್ಟ್ ಹೂಡಿಕೆ ಮಾಡಲು ಅವಕಾಶ ಇದೆ.

ಮಧ್ಯವರ್ತಿಯ ಸಹಾಯದಿಂದ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ಅದು 'ರೆಗ್ಯೂಲರ್' ಹೂಡಿಕೆ. ಈ ಫಂಡ್‌ಗಳಲ್ಲಿ ಹಣಕಾಸು ಸಲಹೆಗಾರರು/ಬ್ಯಾಂಕ್‌ನ ರಿಲೇಷನ್‌ಶಿಪ್ ಮ್ಯಾನೇಜರ್‌ಗಳು ಗ್ರಾಹಕರಿಗೆ ಮ್ಯೂಚುವಲ್ ಫಂಡ್ ಹೂಡಿಕೆ ಸಲಹೆ ನೀಡುತ್ತಾರೆ. ಅದಕ್ಕಾಗಿ ಅವರಿಗೆ ಕಮಿಷನ್ ನೀಡಬೇಕಾಗುತ್ತದೆ. ಈ ಕಾರಣದಿಂದಾಗಿ ರೆಗ್ಯೂಲರ್ ಪ್ಲಾನ್‌ಗಳಲ್ಲಿ ವೆಚ್ಚ ಅನುಪಾತ ಶುಲ್ಕ ಹೆಚ್ಚಿಗೆ ಇರುತ್ತದೆ. ಡೈರೆಕ್ಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ, ಸಿಗುವ ಲಾಭಾಂಶ ತುಸು ಹೆಚ್ಚು ಇರುತ್ತದೆ.

2) ವೆಚ್ಚ ಅನುಪಾತ ಕಡಿಮೆಯಿದ್ದು ಲಾಭಾಂಶ ಹೆಚ್ಚಿರುವ ಫಂಡ್ ಆಯ್ಕೆ ಮಾಡಿ: ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದಾಗ ಫಂಡ್ ಹೌಸ್‌ಗಳು ವಾರ್ಷಿಕ ಶುಲ್ಕ ಪಡೆಯುತ್ತವೆ. ಈ ಶುಲ್ಕವನ್ನು ಮ್ಯೂಚುವಲ್ ಫಂಡ್ ಪರಿಭಾಷೆಯಲ್ಲಿ ವೆಚ್ಚ ಅನುಪಾತ (Expense Ratio) ಎಂದು ಕರೆಯಲಾಗುತ್ತದೆ. ಎಲ್ಲ ರೀತಿಯ ನಿರ್ವಹಣಾ ಶುಲ್ಕಗಳನ್ನೂ ಇದು ಒಳಗೊಂಡಿರುತ್ತದೆ. ಉದಾಹರಣೆಗೆ, ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳ ವೆಚ್ಚ ಅನುಪಾತ ಶೇಕಡ 0.36ರಿಂದ ಶೇ 1.51ರವರೆಗೂ ಇರುತ್ತದೆ. ವೆಚ್ಚ ಅನುಪಾತ ಕಡಿಮೆ ಇದ್ದರೆ ನಿಮಗೆ ಸಿಗುವ ಒಟ್ಟಾರೆ ಲಾಭಾಂಶ ಹೆಚ್ಚಾಗುತ್ತದೆ. ಹಾಗಾಗಿ ಕಡಿಮೆ ವೆಚ್ಚ ಅನುಪಾತವಿರುವ ಮತ್ತು ಸ್ಥಿರವಾಗಿ ಹೆಚ್ಚು ಲಾಭಾಂಶ ನೀಡುವ ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡಿ.

3) ಮ್ಯೂಚುವಲ್ ಫಂಡ್ ಎಕ್ಸಿಟ್ ಲೋಡ್ ಬಗ್ಗೆ ತಿಳಿದುಕೊಳ್ಳಿ: ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮೊದಲು ತಿಳಿಯಬೇಕಾದ ಪ್ರಮುಖ ವಿಚಾರಗಳಲ್ಲಿ ಎಕ್ಸಿಟ್ ಲೋಡ್ ಎನ್ನುವ ಅಂಶವೂ ಒಂದು. ನಿರ್ದಿಷ್ಟ ಅವಧಿಗೆ ಮುನ್ನ ಮ್ಯೂಚುವಲ್ ಫಂಡ್ ಹೂಡಿಕೆಯನ್ನು ಹಿಂಪಡೆದುಕೊಂಡರೆ ಆಸ್ತಿ ನಿರ್ವಹಣಾ ಕಂಪನಿಗಳು ಹೂಡಿಕೆದಾರರಿಗೆ ವಿಧಿಸುವ ಶುಲ್ಕವೇ ಎಕ್ಸಿಟ್ ಲೋಡ್.

ಹೂಡಿಕೆದಾರರು ಅವಧಿಗೆ ಮುನ್ನ ಹೂಡಿಕೆ ಮೊತ್ತ ಹಿಂಪಡೆದುಕೊಳ್ಳುವುದನ್ನು ತಡೆಯಲು ಎಕ್ಸಿಟ್ ಲೋಡ್ ಶುಲ್ಕವನ್ನು ಕಂಪನಿಗಳು ವಿಧಿಸುತ್ತವೆ. ಒಂದು ಫಂಡ್‌ನಿಂದ ಮತ್ತೊಂದು ಫಂಡ್‌ಗೆ ಹೂಡಿಕೆ ವರ್ಗಾಯಿಸುವ ಸಂದರ್ಭದಲ್ಲೂ ಎಕ್ಸಿಟ್ ಲೋಡ್ ಅನ್ವಯಿಸುತ್ತದೆ. ಹಾಗಾಗಿ ಯಾವುದೇ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವ ನಿರ್ಧಾರ ತೆಗೆದುಕೊಳ್ಳುವ ಮುನ್ನ ಎಕ್ಸಿಟ್ ಲೋಡ್ ಎಷ್ಟು ಎಂದು ತಿಳಿದು ಮುಂದುವರಿಯುವುದು ಬಹಳ ಮುಖ್ಯ. ನಿರ್ದಿಷ್ಟ ಅವಧಿಗಿಂತ ಹೆಚ್ಚಿನ ಅವಧಿಗೆ ನೀವು ಹೂಡಿಕೆ ಮಾಡಿದರೆ ಎಕ್ಸಿಟ್ ಲೋಡ್ ಇರುವುದಿಲ್ಲ. ವಿವಿಧ ಮ್ಯೂಚುವಲ್ ಫಂಡ್‌ಗಳಲ್ಲಿ ಎಕ್ಸಿಟ್ ಲೋಡ್ ವಿವಿಧ ಪ್ರಮಾಣದಲ್ಲಿ ಇರುತ್ತದೆ.

ಆದರೆ ಎಲ್ಲ ಮ್ಯೂಚುವಲ್ ಫಂಡ್‌ಗಳಲ್ಲೂ ಎಕ್ಸಿಟ್ ಲೋಡ್ ಇರುವುದಿಲ್ಲ ಎನ್ನುವುದು ಮುಖ್ಯವಾಗಿ ಗಮನಿಸಬೇಕಿರುವ ಅಂಶ. ಲಿಕ್ವಿಡ್ ಫಂಡ್‌ಗಳಿಗೆ ಎಕ್ಸಿಟ್ ಲೋಡ್ ಇರುವುದಿಲ್ಲ. ಹೂಡಿಕೆದಾರ ಅಗತ್ಯ ಅನ್ನಿಸಿದಾಗ ಹೂಡಿಕೆ ಹಣ ಹಿಂಪಡೆಯಬಹುದು. ಕೆಲವು ಡೆಟ್ ಫಂಡ್‌ಗಳಲ್ಲಿ ಎಕ್ಸಿಟ್ ಲೋಡ್ ಇರುವುದಿಲ್ಲ, ಇನ್ನು ಕೆಲವು ಫಂಡ್‌ಗಳಲ್ಲಿ ಇರುತ್ತದೆ. ಈಕ್ವಿಟಿ ಮ್ಯೂಚುವಲ್ ಫಂಡ್ ಮತ್ತು ಹೈಬ್ರೀಡ್ ಫಂಡ್‌ಗಳಲ್ಲಿ ಅವಧಿಗೆ ಮುನ್ನ ಹೂಡಿಕೆ ಹಿಂದಕ್ಕೆ ಪಡೆದರೆ ಎಕ್ಸಿಟ್ ಲೋಡ್ ತೆರಬೇಕಾಗುತ್ತದೆ. ಮತ್ತೊಂದು ವಿಚಾರ ನೆನಪಿರಲಿ, ಮ್ಯೂಚುವಲ್ ಫಂಡ್ ಹೂಡಿಕೆ ಮಾಡಿದ ನಂತರ ನಿಮ್ಮ ಫಂಡ್ ನಷ್ಟದಲ್ಲಿದ್ದು, ಆ ವೇಳೆ ಫಂಡ್‌ನಿಂದ ಹೊರಬಂದರೂ ಎಕ್ಸಿಟ್ ಲೋಡ್ ಅನ್ವಯವಾಗುತ್ತದೆ.

(ಲೇಖಕ ಸುವಿಷನ್ ಹೋಲ್ಡಿಂಗ್ಸ್ ಪ್ರೈ. ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಹೊಸ ವರ್ಷದಲ್ಲಿ ಉತ್ತಮ ಆರಂಭ ಕಂಡ ಸೂಚ್ಯಂಕಗಳು

ಹೊಸ ವರ್ಷದಲ್ಲಿ ಸಕಾರಾತ್ಮಕವಾಗಿ ಕಂಡುಬಂದಿರುವ ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಾರ ಗಳಿಕೆ ಮುಂದುವರಿಸಿವೆ. ಜನವರಿ 7ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ಕಂಡಿವೆ. 59,744 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.55ರಷ್ಟು ಗಳಿಕೆ ಕಂಡಿದ್ದರೆ, 17,812 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.6ರಷ್ಟು ಹೆಚ್ಚಳ ದಾಖಲಿಸಿದೆ. ಕೋವಿಡ್ ಪ್ರಕರಣಗಳ ಹೆಚ್ಚಳದ ನಡುವೆಯೂ ಷೇರುಪೇಟೆಯಲ್ಲಿ ಖರೀದಿ ಉತ್ಸಾಹ ಜೋರಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,082.83 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದರೆ, ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 3,293.28 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ವಲಯವಾರು ಪ್ರಗತಿಯಲ್ಲಿ ಬ್ಯಾಂಕ್ ಸೂಚ್ಯಂಕ, ತೈಲ ಮತ್ತು ಅನಿಲ ಸೂಚ್ಯಂಕಗಳು ಕ್ರಮವಾಗಿ ಶೇ 6.3ರಷ್ಟು ಮತ್ತು ಶೇ 5.3ರಷ್ಟು ಹೆಚ್ಚಳ ಕಂಡಿವೆ. ಆರೋಗ್ಯ ಸೇವೆ ಮತ್ತು ಮಾಹಿತಿ ತಂತ್ರಜ್ಞಾನ ಕಂಪನಿಗಳು ಶೇ 1ರಿಂದ ಶೇ 2ರಷ್ಟು ಕಳೆದುಕೊಂಡಿವೆ, ಫಾರ್ಮಾ ವಲಯ ಶೇ 2.5ರಷ್ಟು ತಗ್ಗಿದೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಗ್ರಾಸಿಂ ಶೇ 11ರಷ್ಟು, ಒಎನ್‌ಜಿಸಿ ಶೇ 10.2ರಷ್ಟು, ಬಜಾಜ್ ಫೈನಾನ್ಸ್ ಶೇ 10ರಷ್ಟು, ಬಜಾಜ್ ಫಿನ್‌ಸರ್ವ್ ಶೇ 8.4ರಷ್ಟು, ಐಷರ್ ಮೋಟರ್ಸ್ ಶೇ 9ರಷ್ಟು, ಎಕ್ಸಿಸ್ ಬ್ಯಾಂಕ್ ಶೇ 7.7ರಷ್ಟು, ಕೋಲ್ ಇಂಡಿಯಾ ಶೇ 7.4ರಷ್ಟು, ಐಸಿಐಸಿಐ ಬ್ಯಾಂಕ್ ಶೇ 7.2ರಷ್ಟು ಗಳಿಕೆ ಕಂಡಿವೆ. ಟೆಕ್ ಮಹೀಂದ್ರ ಶೇ 4.8ರಷ್ಟು, ಇನ್ಫೊಸಿಸ್ ಶೇ 4ರಷ್ಟು, ಡಿವೀಸ್ ಲ್ಯಾಬ್ಸ್ ಶೇ 4ರಷ್ಟು ಮತ್ತು ಸಿಪ್ಲಾ ಶೇ 3ರಷ್ಟು ಕುಸಿದಿವೆ.

ಮುನ್ನೋಟ: ಈ ವಾರ ತ್ರೈಮಾಸಿಕ ಫಲಿತಾಂಶಗಳ ಪ್ರಕಟಣೆ ವೇಗ ಪಡೆದುಕೊಳ್ಳಲಿದ್ದು ಹೂಡಿಕೆದಾರರು ಅತ್ತ ಚಿತ್ತ ಹರಿಸಿದ್ದಾರೆ. ಇನ್ಫೊಸಿಸ್, ಟಿಸಿಎಸ್, ವಿಪ್ರೊ, ಮೈಂಡ್ ಟ್ರೀ, ಎಚ್‌ಸಿಎಲ್ ಟೆಕ್, ಎಚ್‌ಡಿಎಫ್‌ಸಿ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಹಣದುಬ್ಬರದ ಮಧ್ಯೆ ಕಂಪನಿಗಳ ಲಾಭಾಂಶ ಯಾವ ರೀತಿ ಇರಲಿದೆ ಎನ್ನುವುದು ಕುತೂಹಲದ ಅಂಶವಾಗಿದೆ. ಜಾಗತಿಕ ವಿದ್ಯಮಾನಗಳು, ಕೋವಿಡ್ ಪ್ರಕರಣಗಳು, ಬಜೆಟ್ ಸಿದ್ಧತೆ ಸೇರಿ ಹಲವು ಅಂಶಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ.

ಎಲೆಕ್ಟ್ರಾನಿಕ್ಸ್ ಉಪಕರಣಗಳ ಬೆಲೆ ಶೇ 10ರವರೆಗೆ ಏರಿಕೆ

ನವದೆಹಲಿ (ಪಿಟಿಐ): ಹೊಸ ವರ್ಷದಲ್ಲಿ ಹವಾ ನಿಯಂತ್ರಕಗಳು ಹಾಗೂ ರೆಫ್ರಿಜರೇಟರ್‌ಗಳ ಬೆಲೆ ಹೆಚ್ಚಳ ಆಗಿದೆ. ಇವುಗಳ ತಯಾರಿಕೆಗೆ ಅಗತ್ಯವಿರುವ ಕಚ್ಚಾ ವಸ್ತುಗಳ ಬೆಲೆಯಲ್ಲಿ ಏರಿಕೆ ಆಗಿರುವುದು, ಸರಕು ಸಾಗಣೆ ವೆಚ್ಚ ಜಾಸ್ತಿ ಆಗಿರುವುದು ಇದಕ್ಕೆ ಕಾರಣ.

ಈ ತಿಂಗಳ ಕೊನೆಯ ವೇಳೆಗೆ ಅಥವಾ ಮಾರ್ಚ್‌ಗೆ ಮೊದಲು ವಾಷಿಂಗ್ ಮೆಷಿನ್ ಬೆಲೆಯಲ್ಲಿ ಶೇಕಡ 5ರಿಂದ ಶೇ 10ರಷ್ಟು ಏರಿಕೆ ಆಗುವ ನಿರೀಕ್ಷೆ ಇದೆ. ಪ್ಯಾನಾಸೋನಿಕ್, ಎಲ್‌ಜಿ, ಹಾಯರ್ ಕಂಪನಿಗಳು ತಮ್ಮ ಉತ್ಪನ್ನಗಳ ಬೆಲೆಯನ್ನು ಈಗಾಗಲೇ ಹೆಚ್ಚಿಸಿವೆ. ಸೋನಿ, ಹಿಟಾಚಿ, ಗೋದ್ರೆಜ್ ಅಪ್ಲಯನ್ಸಸ್ ಕಂಪನಿಗಳು ಪ್ರಸಕ್ತ ತ್ರೈಮಾಸಿಕದಲ್ಲಿ ಬೆಲೆ ಹೆಚ್ಚಳದ ಕುರಿತು ತೀರ್ಮಾನ ಮಾಡಲಿವೆ.

ಗ್ರಾಹಕ ಬಳಕೆಯ ಎಲೆಕ್ಟ್ರಾನಿಕ್ಸ್ ಮತ್ತು ಅಪ್ಲಯನ್ಸಸ್ ತಯಾರಕರ ಸಂಘದ (ಸಿಇಎಎಂಎ) ಪ್ರಕಾರ, ಕಂಪನಿಗಳು ಜನವರಿಯಿಂದ ಮಾರ್ಚ್ ನಡುವಿನ ಅವಧಿಯಲ್ಲಿ ಉತ್ಪನ್ನಗಳ ಬೆಲೆಯಲ್ಲಿ ಶೇಕಡ 5ರಿಂದ ಶೇ 7ರವರೆಗೆ ಹೆಚ್ಚಳ ಮಾಡುವ ಸಾಧ್ಯತೆ ಇದೆ. 'ಕಚ್ಚಾ ವಸ್ತುಗಳ ಬೆಲೆ ಹಿಂದೆಂದೂ ಕಾಣದ ರೀತಿಯಲ್ಲಿ ಹೆಚ್ಚಾಗಿದೆ. ಸಾಗಣೆ ವೆಚ್ಚವೂ ಜಾಸ್ತಿಯಾಗಿದೆ. ಹೀಗಾಗಿ ನಾವು ನಮ್ಮ ರೆಫ್ರಿಜರೇಟರ್, ವಾಷಿಂಗ್ ಮೆಷಿನ್ ಮತ್ತು ಹವಾನಿಯಂತ್ರಕಗಳ ಬೆಲೆಯನ್ನು ಶೇ 3ರಿಂದ ಶೇ 5ರಷ್ಟು ಹೆಚ್ಚಿಸುತ್ತಿದ್ದೇವೆ' ಎಂದು ಹಾಯರ್ ಅಪ್ಲಯನ್ಸಸ್ ಇಂಡಿಯಾ ಕಂಪನಿ ಅಧ್ಯಕ್ಷ ಎನ್.ಎಸ್. ಸತೀಶ್ ತಿಳಿಸಿದರು.

ಪ್ಯಾನಾಸೋನಿಕ್ ಕಂಪನಿಯು ಹವಾನಿಯಂತ್ರಕಗಳ ಬೆಲೆಯನ್ನು ಗರಿಷ್ಠ ಶೇ 8ರವರೆಗೆ ಈಗಾಗಲೇ ಹೆಚ್ಚಿಸಿದೆ. ಕಂಪನಿಯು ಬೆಲೆಯನ್ನು ಇನ್ನಷ್ಟು ಹೆಚ್ಚಿಸುವ ಯೋಚನೆಯಲ್ಲಿದೆ. ಗೃಹ ಬಳಕೆಯ ಇತರ ಕೆಲವು ಉತ್ಪನ್ನಗಳ ಬೆಲೆಯಲ್ಲಿಯೂ ಏರಿಕೆ ಆಗಬಹುದು ಎಂದು ಕಂಪನಿ ಹೇಳಿದೆ.

'ಹಬ್ಬಗಳ ಸಂದರ್ಭದಲ್ಲಿ ಉದ್ಯಮ ವಲಯವು ಉತ್ಪನ್ನಗಳ ಬೆಲೆ ಏರಿಕೆಯನ್ನು ಮುಂದಕ್ಕೆ ಹಾಕಿತ್ತು. ಆದರೆ, ಈಗ ವೆಚ್ಚ ಹೆಚ್ಚಳದ ಹೊರೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡದೆ ಅನ್ಯಮಾರ್ಗ ಇಲ್ಲ' ಎಂದು ಸಿಇಎಎಂಎ ಅಧ್ಯಕ್ಷ ಎರಿಕ್ ಬ್ರಗಾಂಜಾ ಹೇಳಿದರು. ಕೆಲವು ಕಂಪನಿಗಳು ಈಗಾಗಲೇ ಬೆಲೆ ಏರಿಕೆ ಮಾಡಿವೆ. ಇನ್ನು ಕೆಲವು ಕಂಪನಿಗಳು ಬೆಲೆ ಹೆಚ್ಚಿಸುವ ಪ್ರಕ್ರಿಯೆ ಶುರು ಮಾಡಿವೆ ಎಂದರು.

ಬೆಲೆ ಏರಿಕೆ ಬಗ್ಗೆ ಇನ್ನಷ್ಟೇ ತೀರ್ಮಾನಿಸಬೇಕಿದೆ ಎಂದು ಸೋನಿ ಮತ್ತು ಗೋದ್ರೆಜ್ ಅಪ್ಲಯನ್ಸಸ್ ಕಂಪನಿಗಳು ಹೇಳಿವೆ.

ಯುಪಿಐ ಸೇವೆ ವ್ಯತ್ಯಯ

ಬೆಂಗಳೂರು: ರಾಷ್ಟ್ರೀಯ ಪಾವತಿ ನಿಗಮದ (ಎನ್‌ಪಿಸಿಐ) ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಭಾನುವಾರ ಕೆಲವು ಹೊತ್ತು ಕಾರ್ಯನಿರ್ವಹಿಸಲಿಲ್ಲ. ಇದರಿಂದಾಗಿ, ಯುಪಿಐ ಆಧಾರಿತ ಪಾವತಿ ಸೇವೆಗಳನ್ನು ಬಳಸುವವರಿಗೆ ಅಡಚಣೆ ಉಂಟಾಯಿತು.

'ಯುಪಿಐ ಬಳಕೆದಾರರಿಗೆ ಎದುರಾದ ಅಡಚಣೆ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಿದ್ದೇವೆ. ಪದೇ ಪದೇ ಎದುರಾಗುತ್ತಿದ್ದ ತಾಂತ್ರಿಕ ತೊಂದರೆ ಈ ಅಡಚಣೆಗೆ ಕಾರಣ' ಎಂದು ಎನ್‌ಪಿಸಿಐ ಭಾನುವಾರ ಸಂಜೆ ಟ್ವೀಟ್ ಮಾಡಿದೆ. ಸಂಜೆಯ ವೇಳೆಗೆ ಯುಪಿಐ ಸೇವೆಗಳು ಸಹಜ ಸ್ಥಿತಿಗೆ ಬಂದಿದ್ದವು.

ಯುಪಿಐ ಆಧಾರಿತ ಪಾವತಿ ಸೇವೆಗಳಲ್ಲಿ ತೊಂದರೆ ಆಗಿದ್ದರ ಬಗ್ಗೆ ಹಲವರು ಸಾಮಾಜಿಕ ಜಾಲತಾಣಗಳ ಮೂಲಕ ಮಾಹಿತಿ ನೀಡಿದ್ದಾರೆ. 'ಯುಪಿಐ ವ್ಯವಸ್ಥೆ ಬಹಳ ಒಳ್ಳೆಯದು. ಆದರೆ, ಅದರ ಮೇಲಿನ ಅತಿಯಾದ ಅವಲಂಬನೆ ಬೇಡ. ನಾನು ಎಲ್ಲ ಕಡೆಯೂ ನಗದುರಹಿತ ವಹಿವಾಟು ನಡೆಸುತ್ತೇನೆ. ಇವತ್ತು ದಿನಸಿ ಅಂಗಡಿಗೆ ಹೋಗಿದ್ದೆ. ನಗದು ಇರಲಿಲ್ಲ. ಅಲ್ಲಿ ಹಣ ಪಾವತಿ ಮಾಡಲು 30 ನಿಮಿಷ ಕಾಯಬೇಕಾಯಿತು. ನಂತರ ನನ್ನ ಪರಿಚಯದವರೊಬ್ಬರು ನನ್ನ ಪರವಾಗಿ ಹಣ ಪಾವತಿಸಿದರು' ಎಂದು ಹೃಷಿಕೇಶ್ ಎಂಬುವವರು ಟ್ವೀಟ್ ಮಾಡಿದ್ದಾರೆ.

ಅದಿರು ರಫ್ತು ನಿಷೇಧಕ್ಕೆ ಫಿಮಿ ಕಳವಳ

ನವದೆಹಲಿ (ಪಿಟಿಐ): ಕರ್ನಾಟಕದಿಂದ ಕಬ್ಬಿಣದ ಅದಿರನ್ನು ರಫ್ತು ಮಾಡುವುದರ ಮೇಲೆ ವಿಧಿಸಿರುವ ನಿಷೇಧದ ಬಗ್ಗೆ ಭಾರತೀಯ ಗಣಿಗಾರಿಕೆ ಉದ್ದಿಮೆಗಳ ಮಹಾಸಂಘದ (ಫಿಮಿ) ದಕ್ಷಿಣ ಭಾರತ ಘಟಕವು ಕಳವಳ ವ್ಯಕ್ತಪಡಿಸಿದೆ.

'ರಾಜ್ಯದಲ್ಲಿ ಕಬ್ಬಿಣದ ಅದಿರು ಯಥೇಚ್ಛವಾಗಿ ಲಭ್ಯವಿದ್ದರೂ ಕೆಲವು ಸಂದರ್ಭಗಳಲ್ಲಿ ಬೇರೆ ಕಡೆಗಳಿಂದ ಅದಿರನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಿಂದಾಗಿ ರಾಜ್ಯದ ಉದ್ದಿಮೆಗಳ ಮೇಲೆ ಒತ್ತಡ ಸೃಷ್ಟಿಯಾಗುತ್ತಿದೆ. ಅದಿರು ಮಾರಾಟ ಮಾಡಲು ಬೆಲೆ ತಗ್ಗಿಸಬೇಕಾಗಿ ಬರುತ್ತಿದೆ' ಎಂದು ಫಿಮಿ ರಾಜ್ಯ ಸರ್ಕಾರಕ್ಕೆ ಈಚೆಗೆ ಬರೆದ ಪತ್ರದಲ್ಲಿ ಹೇಳಿದೆ.

ಈ ನಿಷೇಧವು ಗಣಿಗಾರಿಕೆ ಉದ್ಯಮ ವಲಯವು ರಾಜ್ಯದಲ್ಲಿ ಬೆಳೆಯುವುದನ್ನು ತಡೆಯುತ್ತಿದೆ. ಈ ಉದ್ಯಮಕ್ಕೆ ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡುವ ಸಾಮರ್ಥ್ಯ ಇದೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

ಪಿಎಂ ಭದ್ರತಾ ವೈಫಲ್ಯ: ಇಂದು ಸುಪ್ರೀಂ ಕೋರ್ಟ್ ವಿಚಾರಣೆ

ನವದೆಹಲಿ (ಪಿಟಿಐ): ಪಂಜಾಬ್‌ನಲ್ಲಿ ಪ್ರಧಾನಿ ಭದ್ರತಾ ವ್ಯವಸ್ಥೆಯಲ್ಲಿ ಗಂಭೀರ ಲೋಪವಾಗಿದೆ ಎಂಬ ಆರೋಪ ಕುರಿತಂತೆ ಪ್ರಕರಣದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ. ಪ್ರಧಾನಿ ಮತ್ತು ಬೆಂಗಾವಲು ಪಡೆಯಿದ್ದ ವಾಹನಗಳು ಇದೇ 5ರಂದು ಫಿರೋಜ್‌ಪುರ್‌ನ ಮೇಲ್ಸೇತುವೆಯಲ್ಲಿ 15 ನಿಮಿಷ ಸ್ಥಗಿತವಾಗಿದ್ದವು. ಆಗ ರಸ್ತೆಯಲ್ಲಿ ಪ್ರತಿಭಟನೆ ನಡೆಯುತ್ತಿತ್ತು. ಇದು ಭದ್ರತಾ ವೈಫಲ್ಯದ ಚರ್ಚೆಗೆ ಆಸ್ಪದವಾಗಿತ್ತು.

ಗುಜರಾತ್ ಕರಾವಳಿ: ಪಾಕಿಸ್ತಾನ ದೋಣಿ ವಶ, 10 ಮಂದಿ ಬಂಧನ

ಅಹಮದಾಬಾದ್ (ಪಿಟಿಐ): ಗುಜರಾತ್ ಕರಾವಳಿಯಲ್ಲಿನ ಭಾರತದ ಸಮುದ್ರದಲ್ಲಿ ಸಂಚರಿಸುತ್ತಿದ್ದ ಪಾಕಿಸ್ತಾನ ದೋಣಿಯೊಂದನ್ನು ಭಾರತೀಯ ಕರಾವಳಿ ಕಾವಲುಪಡೆ (ಐಸಿಜಿ) ವಶಪಡಿಸಿಕೊಂಡಿದ್ದು, ಅದರಲ್ಲಿದ್ದ 10 ಮಂದಿಯನ್ನು ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆಗೆ ದೋಣಿಯನ್ನು ಪೋರ್‌ಬಂದರ್‌ಗೆ ತರಲಾಗಿದೆ ಎಂದು ರಕ್ಷಣಾ ವಕ್ತಾರರೊಬ್ಬರು ಭಾನುವಾರ ಅಧಿಕಾರಿ ಟ್ವೀಟ್ ಮಾಡಿದ್ದಾರೆ.

ರೇಷ್ಮೆ ಮಾರುಕಟ್ಟೆ ಧಾರಣೆ

ರಾಮನಗರ ರೇಷ್ಮೆ

ಮಿಶ್ರತಳಿ	382-592
ದ್ವಿತಳಿ	240-700

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹470
12 ಮೊಟ್ಟೆಗೆ	₹63

ಮೈಸೂರು

100 ಮೊಟ್ಟೆಗೆ	₹465

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

₹ 107 ಕೋಟಿ ವಂಚನೆ ಪ್ರಕರಣ
ಅಲಯನ್ಸ್ ವಿವಿ ಮಾಜಿ ಕುಲಪತಿ ಬಂಧನ

ನವದೆಹಲಿ (ಪಿಟಿಐ): ಶುಲ್ಕವಾಗಿ ಸಂಗ್ರಹಿಸಿದ್ದ ₹ 107 ಕೋಟಿ ವಂಚಿಸಿದ ಆರೋಪದಡಿ ಬೆಂಗಳೂರು ಮೂಲದ ಅಲಯನ್ಸ್ ವಿಶ್ವವಿದ್ಯಾಲಯದ ಮಾಜಿ ಕುಲಪತಿಯನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬಂಧಿಸಿದ್ದಾರೆ.

ಮಧುಕರ್ ಜಿ.ಅಂಗುರ್ ಬಂಧಿತ ಆರೋಪಿ. 'ಇವರನ್ನು ಶುಕ್ರವಾರ ಬಂಧಿಸಿದ್ದು, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ವಿಶೇಷ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿತ್ತು. ಕೋರ್ಟ್ ಏಳು ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಗುರ್ ಮತ್ತು ಇತರರು ವಿದ್ಯಾರ್ಥಿಗಳ ಪೋಷಕರಿಗೆ ಇ-ಮೇಲ್ ಸಂದೇಶ ಮತ್ತು ನೋಟಿಸ್ ನೀಡಿದ್ದು, ಶುಲ್ಕವನ್ನು ವಿಶ್ವವಿದ್ಯಾಲಯದ ಅಧಿಕೃತ ಖಾತೆ ಬದಲಿಗೆ, 'ಶ್ರೀವಾರಿ ಎಜುಕೇಷನಲ್ ಸರ್ವೀಸಸ್' ಹೆಸರಿನಲ್ಲಿ ತೆರೆದಿರುವ ಖಾತೆಗೆ ಜಮೆ ಮಾಡಬೇಕು ಎಂದು ತಿಳಿಸಿದ್ದರು. ಅದರಂತೆ 2016–17ನೇ ಸಾಲಿನಲ್ಲಿ ಹೀಗೆ ಸುಮಾರು 4,500 ವಿದ್ಯಾರ್ಥಿಗಳ ಪೋಷಕರು ಹಣ ಜಮೆ ಮಾಡಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇ.ಡಿ ಅಧಿಕಾರಿಗಳು ಕಳೆದ ಸೆಪ್ಟೆಂಬರ್‌ನಲ್ಲಿ ಅಂಗುರ್ ಮತ್ತು ಕುಟುಂಬ ಸದಸ್ಯರಾದ ಪ್ರಿಯಾಂಕಾ ಅಂಗುರ್, ರವಿಕುಮಾರ್ ಕೆ., ಶ್ರುತಿ, ಪಾವನಾ ದಿಬ್ಬೂರ್ ಹೆಸರಿನಲ್ಲಿದ್ದ ₹ 19 ಕೋಟಿ ಮೌಲ್ಯದ ಆಸ್ತಿ ಜಪ್ತಿ ಮಾಡಿದ್ದರು.

ಐಷಾರಾಮಿ ಹೋಟೆಲ್ ಖರೀದಿಸಿದ ರಿಲಯನ್ಸ್

ನವದೆಹಲಿ (ಪಿಟಿಐ): ನ್ಯೂಯಾರ್ಕ್‌ನ ಐಷಾರಾಮಿ ಹೋಟೆಲ್ ಮ್ಯಾಂಡರೀನ್ ಓರಿಯಂಟಲ್‌ಅನ್ನು ಒಟ್ಟು ₹ 729 ಕೋಟಿ ಪಾವತಿಸಿ ಖರೀದಿಸುತ್ತಿರುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ತಿಳಿಸಿದೆ. ಈ ಹೋಟೆಲ್ 2003ರಲ್ಲಿ ಆರಂಭವಾಗಿದೆ. ಈ ಹೋಟೆಲ್ ಖರೀದಿಸುತ್ತಿರುವ ವಿಷಯವನ್ನು ರಿಲಯನ್ಸ್ ಕಂಪನಿಯು ಷೇರುಪೇಟೆಗೆ ತಿಳಿಸಿದೆ. 2021ರ ಏಪ್ರಿಲ್‌ನಲ್ಲಿ ರಿಲಯನ್ಸ್ ಕಂಪನಿಯು ಐಷಾರಾಮಿ ಹೋಟೆಲ್, ಸ್ಪಾ, ಗಾಲ್ಫ್ ಕ್ಲಬ್ ಸೌಲಭ್ಯ ಇರುವ ಬ್ರಿಟನ್ನಿನ ಸ್ಟೋಕ್ ಪಾರ್ಕ್ ಲಿಮಿಟೆಡ್‌ಅನ್ನು ಖರೀದಿಸಿತ್ತು.

ಪ್ರೊ ಕಬಡ್ಡಿ ಲೀಗ್: ಬೆಂಗಳೂರು ಬುಲ್ಸ್ ತಂಡಕ್ಕೆ ನಿರಾಶೆ; ಪುಣೇರಿ ಪಲ್ಟನ್ ಜಯಭೇರಿ
ಶ್ರೀಕಾಂತ್ ಮಿಂಚು: ಯೋಧಾಗೆ ಜಯ

ಪ್ರಜಾವಾಣಿ ವಾರ್ತೆ

ಇಂದಿನ ಪಂದ್ಯ (ರಾತ್ರಿ)

ತಮಿಳ್ ತಲೈವಾಸ್ Vs ಹರಿಯಾಣ ಸ್ಟೀಲರ್ಸ್ 7.30

ಜೈಪುರ್ ಪಿಂಕ್ ಪ್ಯಾಂಥರ್ಸ್ – ದಬಂಗ್ ಡೆಲ್ಲಿ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬೆಂಗಳೂರು: ಶ್ರೀಕಾಂತ್ ಜಾಧವ್ ಮಾಡಿದ ಮೋಡಿಯಿಂದ ಯುಪಿ ಯೋಧಾ ತಂಡವು ಬೆಂಗಳೂರು ಬುಲ್ಸ್ ಎದುರು ಜಯಭೇರಿ ಮೊಳಗಿಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಯುಪಿ ಯೋಧಾ ತಂಡವು 42–27ರಿಂದ ಬುಲ್ಸ್ ಎದುರು ಜಯಿಸಿತು.

ಯೋಧಾ ತಂಡದ ಶ್ರೀಕಾಂತ್ 15 ಅಂಕಗಳನ್ನು ಗಳಿಸುವ ಮೂಲಕ ತಂಡದ ಜಯದ ರೂವಾರಿಯಾದರು. ಬುಲ್ಸ್ ತಂಡದ ಪವನ್ ಶೆರಾವತ್ ಅವರನ್ನು ನಿಯಂತ್ರಿಸುವಲ್ಲಿ ಎದುರಾಳಿ ರಕ್ಷಣಾಪಡೆ ಯಶಸ್ವಿಯಾಯಿತು. ಪವನ್ 17 ಬಾರಿ ರೇಡ್ ಮಾಡಿದರು. ಆದರೆ ತಂದಿದ್ದು ಐದು ಅಂಕಗಳನ್ನು ಮಾತ್ರ.

ಭರತ್ 11 ಅಂಕಗಳನ್ನು ಗಳಿಸಿದರೂ ತಂಡಕ್ಕೆ ಜಯ ಒಲಿಯಲಿಲ್ಲ. ಯುಪಿ ತಂಡದ ನಾಯಕ ಮತ್ತು ಡಿಫೆಂಡರ್ ನಿತೀಶ್ ಕುಮಾರ್ ಮೂರು ಅಂಕಗಳನ್ನು ಗಳಿಸಿದರು.

ಒಟ್ಟು ಎಂಟು ಪಂದ್ಯಗಳನ್ನು ಆಡಿರುವ ಬೆಂಗಳೂರು ತಂಡಕ್ಕೆ ಇದು ಎರಡನೇ ಸೋಲು. ಒಂದು ಪಂದ್ಯದಲ್ಲಿ ಟೈ ಮಾಡಿಕೊಂಡಿದೆ. ಉಳಿದದ್ದರಲ್ಲಿ ಜಯಿಸಿದೆ.

ಪುಣೇರಿ ಪಲ್ಟನ್ ಜಯಭೇರಿ: ಅಸ್ಲಂ ಇನಾಂದಾರ್ ಗಳಿಸಿದ 17 ಅಂಕಗಳ ನೆರವಿನಿಂದ ಪುಣೇರಿ ಪಲ್ಟನ್ ತಂಡವು 39–27ರಿಂದ ಬೆಂಗಾಲ್ ವಾರಿಯರ್ಸ್ ಎದುರು ಜಯಿಸಿತು.

ಬೆಂಗಾಲ್ ತಂಡದ ನಾಯಕ ಮಣಿಂದರ್ ಸಿಂಗ್ (13 ಅಂಕ) ಕೂಡ ಉತ್ತಮವಾಗಿ ಆಡಿದರು. ಅವರಿಗೆ ಆಕಾಶ್ ಪೀಕಳಮುಂದೆ ಎಂಟು ಅಂಕ ಗಳಿಸಿ ನಾಯಕನಿಗೆ ಉತ್ತಮ ಬೆಂಬಲ ನೀಡಿದರು. ಆದರೆ, ಪುಣೇರಿ ಆಟಗಾರರ ಚುರುಕುತನದ ಮುಂದೆ ಬೆಂಗಾಲ್ ಮಂಕಾಯಿತು.

ಬೆಂಗಳೂರು ಬುಲ್ಸ್ ತಂಡದ ಭರತ್ ಅವರನ್ನು ಹಿಡಿದ ಯು.ಪಿ.ಯೋಧಾ ಟ್ಯಾಕ್ಲರ್‌ಗಳು

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	7	5	-	2	31
ಪಟ್ನಾ ಪೈರೇಟ್ಸ್	7	5	1	1	29
ಬೆಂಗಳೂರು ಬುಲ್ಸ್	8	5	2	1	28
ಯು ಮುಂಬಾ	7	3	1	3	25
ತಮಿಳ್ ತಲೈವಾಸ್	7	2	1	4	22
ಯುಪಿ ಯೋಧಾ	8	2	4	2	20
ಹರಿಯಾಣ ಸ್ಟೀಲರ್ಸ್	7	3	3	1	20
ಜೈಪುರ್ ಪಿಂಕ್ ಪ್ಯಾಂಥರ್ಸ್	7	3	4	-	18
ಬೆಂಗಾಲ್ ವಾರಿಯರ್ಸ್	8	3	5	-	17
ಪುಣೇರಿ ಪಲ್ಟನ್	8	3	5	-	16
ಗುಜರಾತ್ ಜೈಂಟ್ಸ್	7	1	4	2	15
ತೆಲುಗು ಟೈಟನ್ಸ್	7	-	5	2	10

(ಭಾನುವಾರದ ಪಂದ್ಯಗಳ ಅಂತ್ಯಕ್ಕೆ)

ಬ್ಯಾಸ್ಕೆಟ್‌ಬಾಲ್: ಕರ್ನಾಟಕ ಬಾಲಕರ ತಂಡಕ್ಕೆ ಸೋಲು

ಪ್ರಜಾವಾಣಿ ವಾರ್ತೆ

ಇಂದೋರ್: ಕರ್ನಾಟಕದ ಬಾಲಕರ ತಂಡ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ನಲ್ಲಿ ಸೋತಿತು. ಭಾನುವಾರ ನಡೆದ ಪಂದ್ಯದಲ್ಲಿ ರಾಜ್ಯದ ತಂಡ ರಾಜಸ್ಥಾನಕ್ಕೆ 78–69ರಲ್ಲಿ ಮಣಿಯಿತು. ಅಚಿನ್ ಕೃಷ್ಣ 20, ಜೋಶುವಾ ಸಜಿತ್ ಮತ್ತು ಮನೋಜ್ ತಲಾ 18 ಪಾಯಿಂಟ್ ಗಳಿಸಿದರೂ ತಂಡಕ್ಕೆ ಜಯ ತಂದು ಕೊಡಲು ಆಗಲಿಲ್ಲ.

ಮತ್ತೊಂದು ಪಂದ್ಯದಲ್ಲಿ ಚಂಡೀಗಢ 88-85ರಲ್ಲಿ ಉತ್ತರ ಪ್ರದೇಶವನ್ನು ಮಣಿಸಿತು. ಬಾಲಕಿಯರ ವಿಭಾಗದಲ್ಲೂ ರಾಜಸ್ಥಾನ ಫೈನಲ್ ಪ್ರವೇಶಿಸಿತು. ಛತ್ತೀಸ್‌ಗಢವನ್ನು ಅದು 73–59ರಲ್ಲಿ ಸೋಲಿಸಿತು. ಪಂಜಾಬ್ 80–59ರಲ್ಲಿ ಕೇರಳವನ್ನು ಮಣಿಸಿತು.

ಶನಿವಾರ ರಾತ್ರಿ ನಡೆದ ಬಾಲಕಿಯರ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡ ರಾಜಸ್ಥಾನ ಎದುರು 42–41ರಲ್ಲಿ ಸೋತಿತ್ತು. ಸಂಜನಾ 19 ಮತ್ತು ಪಾವನ 11 ಪಾಯಿಂಟ್ ಗಳಿಸಿ ಮಿಂಚಿದ್ದರು.

ಗ್ರ್ಯಾಂಡ್‌ಮಾಸ್ಟರ್ ಪಟ್ಟಕ್ಕೇರಿದ ಭರತ್

ಚೆನ್ನೈ: ಸ್ಥಳೀಯ ಆಟಗಾರ, 14 ವರ್ಷದ ಭರತ್ ಸುಬ್ರಹ್ಮಣ್ಯಂ ಭಾರತದ 73ನೇ ಗ್ರ್ಯಾಂಡ್‌ಮಾಸ್ಟರ್ ಆಗಿದ್ದಾರೆ. ಇಟಲಿಯ ಕಟೋಲಿಕಾದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಜಿಎಂ ಪಟ್ಟಕ್ಕೆ ಬೇಕಾಗಿರುವ ಮೂರನೇ ಮತ್ತು ಕೊನೆಯ ನಾರ್ಮ್ ಗಳಿಸಿದ ಅವರು ಟೂರ್ನಿಯಲ್ಲಿ 6.5 ಪಾಯಿಂಟ್ ಗಳಿಸಿ ನಾಲ್ವರೊಂದಿಗೆ 7ನೇ ಸ್ಥಾನ ಹಂಚಿಕೊಂಡರು.

ಈಗ ಅವರ ಇಲೊ ರೇಟಿಂಗ್ 2500 ಆಗಿದೆ. ಟೂರ್ನಿಯ ಪ್ರಶಸ್ತಿ ಭಾರತದ ಎಂ.ಆರ್.ಲಲಿತ್ ಬಾಬು ಅವರಿಗೆ ಲಭಿಸಿತು.

ಐಎಸ್‌ಎಲ್: ಬೆಂಗಳೂರು ಎಫ್‌ಸಿಗೆ ಗೆಲುವಿನ ಕನಸು

ಫತೋರ್ಡ (ಪಿಟಿಐ): ನೀರಸ ಪ್ರದರ್ಶನ ನೀಡುತ್ತಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬಲಿಷ್ಠ ಮುಂಬೈ ಸಿಟಿ ಎಫ್‌ಸಿಯನ್ನು ಸೋಮವಾರ ಎದುರಿಸಲಿದೆ. ಜವಾಹರ್‌ಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ ಹಣಾಹಣಿಯಲ್ಲಿ ಜಯ ಗಳಿಸಿ ಪಾಯಿಂಟ್ ಪಟ್ಟಿಯ ಅಗ್ರಸ್ಥಾನವನ್ನು ಗಳಿಸಲು ಮುಂಬೈ ಪ್ರಯತ್ನಿಸಲಿದೆ. ಕಳೆದ ಪಂದ್ಯದಲ್ಲಿ ಮುಂಬೈ ತಂಡ ಎಸ್‌ಸಿ ಈಸ್ಟ್ ಬೆಂಗಾಲ್ ಎದುರು ಗೋಲುರಹಿತ ಡ್ರಾ ಮಾಡಿಕೊಂಡಿತ್ತು. ಈ ಮೂಲಕ ಸತತ ನಾಲ್ಕು ಪಂದ್ಯಗಳಲ್ಲಿ ಜಯ ಗಳಿಸಲಾಗದೆ ನಿರಾಸೆ ಕಂಡಿತ್ತು. ಇದರಲ್ಲಿ ಎರಡು ಸೋಲು ಕೂಡ ಸೇರಿವೆ.

ಮೊದಲ 6 ಪಂದ್ಯಗಳಲ್ಲಿ ಮುಂಬೈ ಒಟ್ಟು 17 ಗೋಲುಗಳನ್ನು ಗಳಿಸಿತ್ತು. ಆದರೆ ಕಳೆದ 4 ಪಂದ್ಯಗಳಲ್ಲಿ ಐದು ಗೋಲುಗಳನ್ನು ಮಾತ್ರ ಗಳಿಸಲು ಸಾಧ್ಯವಾಗಿದೆ. ಬಿಎಫ್‌ಸಿ ಎದುರಿನ ಪಂದ್ಯದಲ್ಲಿ ಮಿಡ್‌ಫೀಲ್ಡರ್ ಅಹಮ್ಮದ್ ಜಹೋ ಅವರು ಲಭ್ಯ ಇರುವುದಿಲ್ಲ. ಅವರು ಅಮಾನತು ಶಿಕ್ಷೆಗೆ ಒಳಗಾಗಿದ್ದಾರೆ. ರಾವ್ಲಿನ್ ಬೋರ್ಜೆಸ್ ಗಾಯಗೊಂಡು ತಂಡದಿಂದ ಹೊರಬಿದ್ದಿದ್ದಾರೆ. ಆದ್ದರಿಂದ ವಿನೀತ್ ರಾಯ್ ಮತ್ತು ಅಪುಯಾ ಅವರನ್ನು ತಂಡ ಆಶ್ರಯಿಸಿಕೊಂಡಿದೆ. ಆರಂಭದಲ್ಲಿ ಸೋಲಿನ ಬಲೆಯಲ್ಲಿದ್ದ ಬೆಂಗಳೂರು ಎಫ್‌ಸಿ ನಿಧಾನಕ್ಕೆ ಲಯ ಕಂಡುಕೊಂಡಿತ್ತು. ಟೂರ್ನಿಯ ಮೊದಲಾರ್ಧದಲ್ಲಿ ಕೇವಲ ಎರಡು ಪಂದ್ಯಗಳಲ್ಲಿ ಜಯಿಸಿತ್ತು. ಕಳೆದ ಪಂದ್ಯದಲ್ಲಿ ಈಸ್ಟ್ ಬೆಂಗಾಲ್ ಎದುರು ಎಲ್ಲ ಸಾಮರ್ಥ್ಯವನ್ನು ಹೊರಗೆಡವಿಯೂ 1–1ರ ಡ್ರಾಗೆ ಸಮಾಧಾನಪಟ್ಟುಕೊಂಡಿತ್ತು. ಹಿಂದಿನ 4 ಪಂದ್ಯಗಳಲ್ಲಿ ಸೋಲು ಕಂಡಿಲ್ಲ ಎಂಬುದು ಬೆಂಗಳೂರು ಎಫ್‌ಸಿಗೆ ಸಮಾಧಾನ ತಂದಿರುವ ವಿಷಯ.

ಕೇರಳ ಬ್ಲಾಸ್ಟರ್ಸ್ ಅಗ್ರಸ್ಥಾನಕ್ಕೆ

ಅಲ್ವಾರೊ ವಸ್ಕಿಜ್ ಗಳಿಸಿದ ಏಕೈಕ ಗೋಲಿನ ಬಲದಿಂದ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡ ಹೈದರಾಬಾದ್ ಎಫ್‌ಸಿ ವಿರುದ್ಧ ಗೆಲುವು ದಾಖಲಿಸಿತು. ಮೊದಲಾರ್ಧದಲ್ಲಿ (42ನೇ ನಿಮಿಷ) ಗೋಲು ದಾಖಲಾಯಿತು. ಇದರೊಂದಿಗೆ ಕೇರಳ ಬ್ಲಾಸ್ಟರ್ಸ್ ಅಗ್ರಸ್ಥಾನಕ್ಕೇರಿತು.

ವಿರಾಟ್ ಕೊಹ್ಲಿ ಇನ್ಸ್ಟಾಗ್ರಾಮ್ ಪೋಸ್ಟ್‌ಗೆ ₹ 5 ಕೋಟಿ

ಬೆಂಗಳೂರು: ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ತಮ್ಮ ಇನ್ಸ್ಟಾಗ್ರಾಮ್‌ನಲ್ಲಿ ಪೋಸ್ಟ್‌ಗೆ ಐದು ಕೋಟಿ ರೂಪಾಯಿ ಆದಾಯ ಗಳಿಸಿದ್ದಾರೆ.

2021ರಲ್ಲಿ ಇನ್ಸ್ಟಾಗ್ರಾಮ್‌ನಲ್ಲಿ ಅತಿ ಹೆಚ್ಚು ಆದಾಯ ಗಳಿಸಿದ ಮೊದಲ ಐವತ್ತು ತಾರೆಗಳ ಪಟ್ಟಿಯಲ್ಲಿ 19ನೇ ಸ್ಥಾನವನ್ನು ವಿರಾಟ್ ಪಡೆದಿದ್ದಾರೆ. ಮೊದಲ ಸ್ಥಾನದಲ್ಲಿರುವ ಪೋರ್ಚುಗಲ್ ಫುಟ್‌ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಪೋಸ್ಟ್‌ಗೆ ₹ 11.91 ಕೋಟಿ ಗಳಿಸಿದ್ದಾರೆ. ಇದೇ ಪಟ್ಟಿಯಲ್ಲಿ ಅರ್ಜೆಂಟೀನಾದ ಫುಟ್‌ಬಾಲ್ ತಾರೆ ಲಯೊನೆಲ್ ಮೆಸ್ಸಿ ಏಳನೇ ಸ್ಥಾನ ಪಡೆದಿದ್ದು, ₹ 8.68 ಕೋಟಿ ಗಳಿಸಿದ್ದಾರೆ.

ಕ್ರಿಸ್ಟಿಯಾನೊ ರೊನಾಲ್ಡೊ

ವಿರಾಟ್ ಕೊಹ್ಲಿ

ಭಾರತದ ಬಾಲಿವುಡ್ ತಾರೆ ಪ್ರಿಯಾಂಕಾ ಚೋಪ್ರಾ ಜೋನಸ್ ಅವರು 27ನೇ ಸ್ಥಾನ ಗಳಿಸಿದ್ದು, ನಾಲ್ಕು ಕೋಟಿ ಗಳಿಸಿದ್ದಾರೆ. ಸಾಮಾಜಿಕ ಜಾಲತಾಣಗಳ ಮೂಲಕ ತಾರೆಗಳು ತಮ್ಮ ಅಭಿಮಾನಿಗಳೊಂದಿಗೆ ಸಂವಹನ ಸಾಧಿಸುತ್ತಿದ್ದಾರೆ. ಇದರಿಂದಾಗಿ ಅವರ ಜನಪ್ರಿಯತೆಯು ಇಮ್ಮಡಿಸುತ್ತಿದೆ. ಜೊತೆಗೆ ಸಾಮಾಜಿಕ ತಾಣವೂ ಬೆಳೆಯುತ್ತಿದೆ. ಪ್ರತಿವರ್ಷ ಅತಿ ಹೆಚ್ಚು ಜನಪ್ರಿಯತೆ ಸಾಧಿಸುವ ತಾರೆಗಳನ್ನು ಈ ತಾಣಗಳು ಪಟ್ಟಿ ಮಾಡುತ್ತಿವೆ. ಈ ಬಾರಿ ಇನ್ಸ್ಟಾಗ್ರಾಮ್‌ನಲ್ಲಿ ಹಾಲಿವುಡ್ ತಾರೆಯರು ಸಿಂಹಪಾಲು ಪಡೆದಿದ್ದಾರೆ ಎಂದು ಕ್ರಿಕೆಟ್ ಟ್ರ್ಯಾಕರ್ ಡಾಟ್ ಕಾಮ್ ವೆಬ್‌ಸೈಟ್ ಪ್ರಕಟಿಸಿದೆ.

ಪ್ರಣೀತ್‌ಗೆ ಕೋವಿಡ್

ನವದೆಹಲಿ (ಪಿಟಿಐ): ಭಾರತದ ಬಿ.ಸಾಯ್ ಪ್ರಣೀತ್ ಅವರಿಗೆ ಕೋವಿಡ್–19 ಇರುವುದು ದೃಢಪಟ್ಟಿದ್ದು ಇಂಡಿಯನ್ ಓಪನ್ ಸೂಪರ್ 500 ಟೂರ್ನಿಯಿಂದ ಹೊರಗೆ ಉಳಿಯಲಿದ್ದಾರೆ. ಈ ವಿಷಯವನ್ನು ಭಾನುವಾರ ಅವರೇ ಸ್ಪಷ್ಟಪಡಿಸಿದ್ದಾರೆ. ಟೂರ್ನಿಯಲ್ಲಿ ಅವರು ಆಡುವುದಿಲ್ಲ ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಜಯ್ ಸಿಂಘಾನಿಯಾ ಕೂಡ ತಿಳಿಸಿದ್ದಾರೆ. ಧ್ರುವ್ ರಾವತ್ ಕೂಡ ಸೋಂಕಿಗೆ ಒಳಗಾಗಿದ್ದಾರೆ ಎಂದಿದ್ದಾರೆ.

ಪಿ.ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರಿಗೆ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ವಿಭಾಗದಲ್ಲಿ ಅಗ್ರ ಶ್ರೇಯಾಂಕ ನೀಡಲಾಗಿದ್ದು ಸಿಂಧು ಈಗಾಗಲೇ ಇಲ್ಲಿಗೆ ಬಂದಿಳಿದಿದ್ದಾರೆ. ಯುವ ಆಟಗಾರ ಲಕ್ಷ್ಯ ಸೇನ್ ಕೂಡ ಬಂದಿದ್ದಾರೆ. ಇದೇ 11ರಂದು ಟೂರ್ನಿ ಆರಂಭವಾಗಲಿದ್ದು ಪ್ರೇಕ್ಷಕರಿಗೆ ಅವಕಾಶವಿಲ್ಲ.

ಬಿ.ಸಾಯ್ ಪ್ರಣೀತ್ –ಎಎಫ್‌ಪಿ ಚಿತ್ರ

ಬೆನ್ ಸ್ಟೋಕ್ಸ್ ಬ್ಯಾಟಿಂಗ್ ಸೊಬಗು –ಎಎಫ್‌ಪಿ ಚಿತ್ರ

ಆ್ಯಷಸ್ ಟೆಸ್ಟ್: ಸೋಲಿನಿಂದ ಪಾರಾದ ಇಂಗ್ಲೆಂಡ್ ತಂಡ

ಸಿಡ್ನಿ (ಎಎಫ್‌ಪಿ/ಎಪಿ): ಆ್ಯಷಸ್ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ಸತತ ನಿರಾಶೆ ಅನುಭವಿಸಿದ್ದ ಇಂಗ್ಲೆಂಡ್ ತಂಡ ನಾಲ್ಕನೇ ಟೆಸ್ಟ್‌ನಲ್ಲಿ ಸೋಲಿನ ದವಡೆಯಿಂದ ತಪ್ಪಿಸಿಕೊಂಡಿತು.

388 ರನ್‌ಗಳ ಕಠಿಣ ಗುರಿ ಬೆನ್ನಟ್ಟಿದ ಪ್ರವಾಸಿ ಇಂಗ್ಲೆಂಡ್ ತಂಡವು 102 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 270 ರನ್ ಗಳಿಸಿ ಪಂದ್ಯವನ್ನು ಡ್ರಾ ಮಾಡಿಕೊಂಡಿತು.

ಆರಂಭಿಕ ಬ್ಯಾಟರ್ ಜ್ಯಾಕ್ ಕ್ರಾಲಿ (77; 100ಎ, 4X13) ಮತ್ತು ಬೆನ್ ಸ್ಟೋಕ್ಸ್ (60; 123ಎ, 4X10, 6X1) ಅರ್ಧಶತಕಗಳನ್ನು ದಾಖಲಿಸುವ ಮೂಲಕ ತಂಡದ ಸೋಲು ತಪ್ಪಿಸುವಲ್ಲಿ ಯಶಸ್ವಿಯಾದರು.

ಸ್ಕಾಟ್ ಬೊಲ್ಯಾಂಡ್ (30ಕ್ಕೆ3) ಮತ್ತು ಸ್ಪಿನ್ನರ್ ನೇಥನ್ ಲಯನ್ (28ಕ್ಕೆ2) ಅವರ ಶಿಸ್ತಿನ ದಾಳಿಯ ಮುಂದೆ ಸೋಲು ತಪ್ಪಿಸಿಕೊಳ್ಳಲು ಇಂಗ್ಲೆಂಡ್ ಬ್ಯಾಟಿಂಗ್ ಪಡೆಯು ಹರಸಾಹಸ ಪಡಬೇಕಾಯಿತು.

ಕೊನೆಯ ಹಂತದಲ್ಲಿ ಇಂಗ್ಲೆಂಡ್ ತೋರಿದ ತಾಳ್ಮೆ ಮತ್ತು ರಕ್ಷಣಾತ್ಮಕ ತಂತ್ರಕ್ಕೆ ಫಲ ಸಿಕ್ಕಿತು. ಮತ್ತೊಂದು ಹೀನಾಯ ಸೋಲಿನ ಅವಮಾನ ತಪ್ಪಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್, **ಆಸ್ಟ್ರೇಲಿಯಾ:** 8ಕ್ಕೆ 416 ಡಿಕ್ಲೇರ್ಡ್, **ಇಂಗ್ಲೆಂಡ್: 294, ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ** 6ಕ್ಕೆ265 ಡಿಕ್ಲೇರ್ಡ್, **ಇಂಗ್ಲೆಂಡ್:** 102 ಓವರ್‌ಗಳಲ್ಲಿ 9ಕ್ಕೆ270 (ಜ್ಯಾಕ್ ಕ್ರಾಲಿ 77, ಜೋ ರೂಟ್ 24, ಬೆನ್ ಸ್ಟೋಕ್ಸ್ 60, ಜಾನಿ ಬೆಸ್ಟೊ 41, ಜ್ಯಾಕ್ ಲೀಚ್ 26, ಪ್ಯಾಟ್ ಕಮಿನ್ಸ್ 80ಕ್ಕೆ2, ಸ್ಕಾಟ್ ಬೊಲ್ಯಾಂಡ್ 30ಕ್ಕೆ3, ನೇಥನ್ ಲಯನ್ 28ಕ್ಕೆ2) **ಫಲಿತಾಂಶ:** ಡ್ರಾ.

ಮೊದಲ ಬಾರಿ ಜೊತೆಯಾಗಿ ಆಡಿದ ಭಾರತದ ಜೋಡಿ; ಇವಾನ್–ಮಾರ್ಸೆಲೊ ಎದುರಿನ ಫೈನಲ್‌ನಲ್ಲಿ ಗೆಲುವು

ಬೋಪಣ್ಣ–ರಾಮ್‌ಗೆ ಅಡಿಲೇಡ್ ಟ್ರೋಫಿ

ಅಡಿಲೇಡ್ (ಪಿಟಿಐ): ಮೊದಲ ಬಾರಿ ಜೊತೆಯಾಗಿ ಕಣಕ್ಕೆ ಇಳಿದ ಭಾರತದ ರೋಹನ್ ಬೋಪಣ್ಣ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ಅಡಿಲೇಡ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡರು. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಇವಾನ್ ದೊಡಿಗ್ ಮತ್ತು ಮಾರ್ಸೆಲೊ ಮೆಲೊ ಅವರನ್ನು ಭಾರತದ ಜೋಡಿ 7-6 (6), 6-1ರಲ್ಲಿ ಮಣಿಸಿದರು.

ಒಂದು ತಾಸು 21 ನಿಮಿಷಗಳ ಹಣಾಹಣಿಯಲ್ಲಿ ಭಾರತದ ಆಟಗಾರರು ತಮಗೆದುರಾದ ಎಲ್ಲ ನಾಲ್ಕು ಬ್ರೇಕ್ ಪಾಯಿಂಟ್‌ಗಳನ್ನು ಉಳಿಸಿಕೊಂಡರು. ಎದುರಾಳಿಗಳನ್ನು ಎರಡು ಬಾರಿ ಬ್ರೇಕ್ ಮಾಡಿದರು. ನಿರ್ಣಾಯಕ ಹಂತಗಳಲ್ಲಿ ರೋಹನ್ ಬೋಪಣ್ಣ ಅವರ ಅಮೋಘ ಸರ್ವಿಸ್ ರಿಟರ್ನ್ ಮತ್ತು ರಾಮಕುಮಾರ್ ಅವರ ಆಲ್‌ರೌಂಡ್ ಆಟ ಕಣ್ಮನ ತಣಿಸಿತು.

ಕನ್ನಡಿಗ ರೋಹನ್ ಬೋಪಣ್ಣ ಅವರಿಗೆ ಇದು ಎಟಿಪಿ ಟೂರ್ನಿಯಲ್ಲಿ 20ನೇ ಡಬಲ್ಸ್ ಕಿರೀಟವಾಗಿದ್ದು ರಾಮಕುಮಾರ್ ಮೊದಲ ಪ್ರಶಸ್ತಿಯ ಖುಷಿಯ ಅಲೆಯಲ್ಲಿ ಮಿಂದರು. ಈ ಹಂತದ ಟೂರ್ನಿಯಲ್ಲಿ ಇದು ರಾಮಕುಮಾರ್ ಅವರ ಎರಡನೇ ಫೈನಲ್. 2018ರಲ್ಲಿ ನಡೆದ ಹಾಲ್ ಆಫ್ ಫೇಮ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದ ಅವರು ರನ್ನರ್ ಅಪ್ ಆಗಿದ್ದರು.

ರೋಹನ್–ರಾಮಕುಮಾರ್ ಜೋಡಿ ₹ 13 ಲಕ್ಷ 88,000 ಮೊತ್ತವನ್ನು ಹಂಚಿಕೊಳ್ಳಲಿದ್ದಾರೆ. ಇಬ್ಬರಿಗೂ 250 ರ್‍ಯಾಂಕಿಂಗ್ ಪಾಯಿಂಟ್‌ಗಳು ಕೂಡ ಸಿಗಲಿವೆ. ಇದೇ ತಿಂಗಳಲ್ಲಿ ಆರಂಭವಾಗಲಿರುವ ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಆಡಲು ಸಜ್ಜಾಗುತ್ತಿರುವ ರಾಮಕುಮಾರ್ ಅವರಿಗೆ ಈ ಜಯ ಭರವಸೆ ತುಂಬಿದೆ.

ಪ್ರಶಸ್ತಿಯೊಂದಿಗೆ ರೋಹನ್ ಬೋಪಣ್ಣ (ಎಡ) ಮತ್ತು ರಾಮ್‌ಕುಮಾರ್ ರಾಮನಾಥನ್ –ಸಾಯ್ ಮೀಡಿಯಾ ಚಿತ್ರ

> **ರಾಮ್‌ಕುಮಾರ್ ಅವರ ಸರ್ವ್‌ಗಳು ನಿಖರ. ಆದ್ದರಿಂದ ಪಾಯಿಂಟ್‌ಗಳನ್ನು ಕಲೆ ಹಾಕಲು ಕಷ್ಟವಾಗುವುದಿಲ್ಲ. ಇಲ್ಲವಾದರೆ ಪಾಯಿಂಟ್ ಗಳಿಕೆ ಪ್ರಯಾಸ.**
> **ರೋಹನ್ ಬೋಪಣ್ಣ** ಭಾರತದ ಆಟಗಾರ

ಪ್ರಯಾಸದ ಮೊದಲ ಸೆಟ್

ಟೈಬ್ರೇಕರ್‌ಗೆ ಸಾಗಿದ ಮೊದಲ ಸೆಟ್‌ನಲ್ಲಿ ರೋಹನ್-ರಾಮಕುಮಾರ್ ಪ್ರಯಾಸದಿಂದ ಗೆಲುವು ಸಾಧಿಸಿದರು. ಆರಂಭದಲ್ಲೇ ಬ್ರೇಕ್ ಪಾಯಿಂಟ್ ಉಳಿಸಿಕೊಂಡ ಈ ಜೋಡಿ ನಂತರ ಭರ್ಜರಿ ಆಟವಾಡಿತು. ಏಳನೇ ಗೇಮ್‌ನಲ್ಲಿ ಎದುರಾಳಿಗಳು ಮುನ್ನಡೆ ಸಾಧಿಸಿದ್ದಾಗ ರೋಹನ್ ಮಿಂಚಿನ ಸರ್ವ್ ಮತ್ತು ಫೋರ್‌ಹ್ಯಾಂಡ್ ಹೊಡೆತದ ಮೂಲಕ ಮಿಂಚಿದರು. ಮತ್ತೊಮ್ಮೆ ಬ್ರೇಕ್ ಪಾಯಿಂಟ್ ಉಳಿಸಿಕೊಂಡ ರೋಹನ್ ಅವರು ಸೆಟ್ 4-4ರಲ್ಲಿ ಸಮ ಆಗಲು ಕಾರಣರಾದರು. ಪ್ರಬಲ್ ಏಸ್ ಸಿಡಿಸಿ ಪಂದ್ಯವನ್ನು ಟೈ ಬ್ರೇಕರ್‌ಗೆ ಕೊಂಡೊಯ್ಯುವಲ್ಲಿ ಕೂಡ ರೋಹನ್ ಯಶಸ್ಸು ಕಂಡರು. ಎರಡನೇ ಸೆಟ್‌ನಲ್ಲಿ ಭಾರತದ ಆಟಗಾರರು ಕ್ರೊವೇಷ್ಯಾದ ಇವಾನ್ ಮತ್ತು ಬ್ರೆಜಿಲ್‌ನ ಮಾರ್ಸೆಲೊ ಎದುರು ಏಕಪಕ್ಷೀಯ ಜಯ ಸಾಧಿಸಿದರು.

ಮುಖ್ಯಾಂಶಗಳು

- ₹ 13,88,000 ಮೊತ್ತ ಹಂಚಿಕೊಳ್ಳಲಿರುವ ರೋಹನ್–ರಾಮ್‌ಕುಮಾರ್ ಜೋಡಿ
- ರೋಹನ್‌ಗೆ 20ನೇ ಡಬಲ್ಸ್ ಕಿರೀಟ; ರಾಮ್‌ಕುಮಾರ್‌ಗೆ ಮೊದಲ ಪ್ರಶಸ್ತಿ
- ಕ್ರೊವೇಷ್ಯಾ, ಬ್ರೆಜಿಲ್ ಆಟಗಾರರ ಎದುರು ಜಯ

ಆಸ್ಟ್ರೇಲಿಯಾದಲ್ಲಿ ಭಾನುವಾರ ಕೊನೆಗೊಂಡ ಮೆಲ್ಬರ್ನ್ ಟೆನಿಸ್ ಟೂರ್ನಿಯಲ್ಲಿ ಸ್ಪೇನ್‌ನ ರಫೆಲ್ ನಡಾಲ್ ಪ್ರಶಸ್ತಿ ಗೆದ್ದುಕೊಂಡರು. ಫೈನಲ್‌ನಲ್ಲಿ ಅವರು ಅಮೆರಿಕದ ಮ್ಯಾಕ್ಸಿಮ್ ಕ್ರೆಸಿ ವಿರುದ್ಧ 7–6(6), 6–3ರ ಜಯ ಸಾಧಿಸಿದರು. ಗಾಯಗೊಂಡಿದ್ದ ರಫೆಲ್ ಕಳೆದ ಆಗಸ್ಟ್ ನಂತರ ಆಡಿದ ಮೊದಲ ಟೂರ್ನಿ ಇದಾಗಿದೆ –ಎಪಿ/ಪಿಟಿಐ ಚಿತ್ರ

ವಿಶ್ವಾಸದಲ್ಲಿ ಯೂಕಿ ಬಾಂಭ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯು ತಮಗೆ ಅತ್ಯಂತ ಅಚ್ಚುಮೆಚ್ಚಿನದ್ದು. ಗಾಯದಿಂದ ಸುದೀರ್ಘ ವಿಶ್ರಾಂತಿಯ ನಂತರ ಮಹತ್ವದ ಟೂರ್ನಿಗೆ ಮರಳಿದ್ದು ಉತ್ತಮ ಸಾಧನೆ ಮಾಡುವ ವಿಶ್ವಾಸ ವಿದೆ ಎಂದು ಟೆನಿಸ್ ಆಟಗಾರ ಯೂಕಿ ಬಾಂಭ್ರಿ ಹೇಳಿದರು. ಅವರು ಭಾನು ವಾರ ಸುದ್ದಿಗಾರರೊಂದಿಗೆ ಮಾತ ನಾಡಿದರು.

‘ಇದು ನನ್ನ ಅಚ್ಚುಮೆಚ್ಚಿನ ತಾಣ. ಇಲ್ಲಿ ಬಹಳಷ್ಟು ಸಿಹಿಯಾದ ನೆನಪುಗಳಿವೆ. ಅವುಗಳಿಂದ ನನ್ನ ಆತ್ಮವಿಶ್ವಾಸ ಹೆಚ್ಚಲಿದೆ. ಇದರಿಂದಾಗಿ ಚೆನ್ನಾಗಿ ಆಡಲಿದ್ದೇನೆ‘ ಎಂದರು.

ಯೂಕಿ 2009ರಲ್ಲಿ ಮೆಲ್ಬರ್ನ್‌ನಲ್ಲಿ ಜೂನಿಯರ್ ಪ್ರಶಸ್ತಿ ಗೆದ್ದಿದ್ದರು. ಆ ವಿಭಾಗದಲ್ಲಿ ವಿಶ್ವದ ಅಗ್ರಶ್ರೇಯಾಂಕದ ಆಟಗಾರನಾಗಿ ಬಡ್ತಿ ಪಡೆದಿದ್ದರು. 2018ರಲ್ಲಿ ಯೂಕಿ 83ನೇ ರ್‍ಯಾಂಕ್ ಪಡೆದಿದ್ದರು. ಆದರೆ ಮೊಣಕಾಲು ಗಾಯದಿಂದಾಗಿ ಅವರು ಬಹಳಷ್ಟು ಕಾಲ ಅಂಕಣದಿಂದ ದೂರವುಳಿದರು.

ಅವರು ಈ ಬಾರಿ ಆಸ್ಟ್ರೇಲಿಯಾ ಓಪ್‌ನಲ್ಲಿ ನ್ಯೂಜಿಲೆಂಡ್‌ನ ಮೈಕೆಲ್ ವೀನಸ್ ಅವರೊಂದಿಗೆ ಡಬಲ್ಸ್‌ನಲ್ಲಿ ಕಣಕ್ಕಿಳಿಯುವರು.

ಯೂಕಿ ಬಾಂಭ್ರಿ

‘ಈ ಟೂರ್ನಿಯ ನಂತರ ಪುಣೆಯಲ್ಲಿ ನಡೆಯಲಿರುವ ಮಹಾರಾಷ್ಟ್ರ ಓಪನ್ ಮತ್ತು ಬೆಂಗಳೂರಿನಲ್ಲಿ ನಡೆಯಲಿರುವ ಓಪನ್ ಟೂರ್ನಿ ಹಾಗೂ ಡೇವಿಸ್ ಕಪ್ ಟೂರ್ನಿಯಲ್ಲಿ ಆಡಲು ಸಿದ್ಧತೆ ಮಾಡುತ್ತಿದ್ದೇನೆ. ಹುಲ್ಲಿನಂಕಣದಲ್ಲಿ ಆಡುವುದು ಉತ್ತಮ ಅನುಭವವಾಗಲಿದೆ’ ಎಂದರು.

ಇದೇ ಮಾರ್ಚ್‌ನಲ್ಲಿ ದೆಹಲಿಯ ಜಿಮ್‌ಖಾನಾ ಕ್ಲಬ್‌ನ ಹುಲ್ಲಿನಂಕಣದಲ್ಲಿ ಬೆಲ್ಜಿಯಂ ವಿರುದ್ಧ ಡೇವಿಸ್ ಕಪ್ ಟೂರ್ನಿ ನಡೆಯಲಿದೆ.

ಅಡಿಲೇಡ್ ಇಂಟರ್‌ನ್ಯಾಷನಲ್ ನಲ್ಲಿ ಪ್ರಶಸ್ತಿ ಜಯಿಸಿರುವ ರೋಹನ್ ಬೋಪಣ್ಣ ಮತ್ತು ರಾಮಕುಮಾರ್ ರಾಮನಾಥನ್ ಅವರ ಸಾಧನೆಯನ್ನು ಯೂಕಿ ಕೊಂಡಾಡಿದರು.

ಅಭ್ಯಾಸಕ್ಕೆ ಮರಳಿದ ಕೊಹ್ಲಿ

ಕೇಪ್‌ಟೌನ್ (ಪಿಟಿಐ): ಭಾರತ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಭಾನುವಾರ ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದರು. ಇದರೊಂದಿಗೆ ಅವರು ದಕ್ಷಿಣ ಅಫ್ರಿಕಾ ಎದುರಿನ ಮೂರನೇ ಪಂದ್ಯದಲ್ಲಿ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ಇದೇ 11 ರಿಂದ 15ರವರೆಗೆ ಕೊನೆಯ ಟೆಸ್ಟ್ ನಡೆಯಲಿದೆ. ಬೆನ್ನು ನೋವು ಇದ್ದ ಕಾರಣಕ್ಕೆ ವಿರಾಟ್, ಜೋಹಾನ್ಸ್‌ಬರ್ಗ್‌ನಲ್ಲಿ ನಡೆದಿದ್ದ ಸರಣಿಯ ಎರಡನೇ ಪಂದ್ಯದಲ್ಲಿ ಆಡಿರಲಿಲ್ಲ. ಅವರ ಬದಲಿಗೆ ಕೆ.ಎಲ್. ರಾಹುಲ್ ನಾಯಕತ್ವ ವಹಿಸಿದ್ದರು. ಆ ಪಂದ್ಯದಲ್ಲಿ ದಕ್ಷಿಣ ಅಫ್ರಿಕಾ ತಂಡವು ಜಯಿಸಿತ್ತು. ಮೂರು ಪಂದ್ಯಗಳ ಸರಣಿಯು 1–1ರಿಂದ ಸಮವಾಗಿತ್ತು.

ಕೊನೆ ಪಂದ್ಯದಲ್ಲಿ ಜಯಿಸುವ ತಂಡವು ಸರಣಿ ವಿಜೇತರ ಪಟ್ಟ ಗಳಿಸಲಿದೆ.

‘ನಾವೀಗ ರಮಣೀಯ ವಾತಾವರಣವಿರುವ ಕೇಪ್‌ಟೌನ್ ನಲ್ಲಿದ್ದೇವೆ. ಭಾರತ ತಂಡವು ಈಗ ಮೂರನೇ ಟೆಸ್ಟ್‌ಗೆ ಪೂರ್ವಸಿದ್ಧತೆ ನಡೆಸುತ್ತಿದೆ’ ಎಂದು ಬಿಸಿಸಿಐ ಟ್ವೀಟ್ ಮಾಡಿದೆ.

ವಿರಾಟ್ ಫಿಟ್ ಆಗಿ ಮರಳಿದರೆ ಹನುಮವಿಹಾರಿ ಸ್ಥಾನ ಬಿಟ್ಟುಕೊಡಬೇಕಾಗಬಹುದು. ಅಭ್ಯಾಸದ ಸಂದರ್ಭದಲ್ಲಿ ಫೀಲ್ಡಿಂಗ್, ಕ್ಯಾಚಿಂಗ್ ಮತ್ತು ಫುಟ್‌ಬಾಲ್ ಆಡಿದರು.

‘ವಿರಾಟ್ ಎಲ್ಲ ರೀತಿಯಿಂದಲೂ ಫಿಟ್ ಆಗಿದ್ದಾರೆಂಬ ವಿಶ್ವಾಸವಿದೆ. ಮುಂದಿನ ಪಂದ್ಯದಲ್ಲಿ ಅವರು ಕಣಕ್ಕಿಳಿಯುವ ಭರವಸೆ ಇದೆ. ಅವರೊಂದಿಗೆ ಮಾತನಾಡಿದ್ದೇನೆ’ ಎಂದು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಕೂಡ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು.

ಎರಡು ಪಂದ್ಯಗಳಿಂದ ಹೊರಗುಳಿದಿದ್ದ ಅನುಭವಿ ವೇಗಿ ಇಶಾಂತ್ ಶರ್ಮಾ ಅವರು ಕೂಡ ಫಿಟ್ ಆಗಿದ್ದಾರೆಂದು ಮೂಲಗಳು ತಿಳಿಸಿವೆ. ಅವರು ಕೂಡ ಕಣಕ್ಕಿಳಿದರೆ ಮೊಹಮ್ಮದ್ ಸಿರಾಜ್ ಅವರಿಗೆ ವಿಶ್ರಾಂತಿ ನೀಡಬೇಕಾಗಬಹುದು. ಎರಡನೇ ಟೆಸ್ಟ್‌ನಲ್ಲಿ ಸಿರಾಜ್ ಸ್ನಾಯುಸೆಳೆತದಿಂದ ಬಳಲಿದ್ದರು. ದಕ್ಷಿಣ ಆಫ್ರಿಕಾದಲ್ಲಿ ಇದುವರೆಗೆ ಭಾರತ ತಂಡವು ಟೆಸ್ಟ್ ಸರಣಿಯನ್ನು ಗೆದ್ದಿಲ್ಲ. ಆಸ್ಟ್ರೇಲಿಯಾ, ಇಂಗ್ಲೆಂಡ್‌ನಲ್ಲಿ ದಾಖಲೆ ಬರೆದಿರುವ ತಂಡವು ಇಲ್ಲಿಯೂ ವಿಜಯಪತಾಕೆ ಹಾರಿಸುವ ಛಲದಲ್ಲಿದೆ.

ವಿರಾಟ್ ಕೊಹ್ಲಿ ಸೇರಿದಂತೆ ಇನ್ನುಳಿದ ಆಟಗಾರರೂ ಅಭ್ಯಾಸದಲ್ಲಿ ಭಾಗವಹಿಸಿದ್ದರು. ರಿಷಭ್ ಪಂತ್ ಬ್ಯಾಟಿಂಗ್ ಕೌಶಲ ಸುಧಾರಣೆ ಮಾಡಿಕೊಳ್ಳುವತ್ತ ಹೆಚ್ಚು ಒತ್ತು ನೀಡಿದರು.

ವಿರಾಟ್ ಕೊಹ್ಲಿ ಫುಟ್‌ಬಾಲ್ –ಎಎಫ್‌ಪಿ ಚಿತ್ರ

ಭಾರತ–ವಿಂಡೀಸ್ ಸರಣಿ; ಸ್ಥಳಗಳ ಬದಲಾವಣೆಗೆ ಬಿಸಿಸಿಐ ಚಿಂತನೆ

ನವದೆಹಲಿ (ಪಿಟಿಐ): ಭಾರತದ ಆತಿಥ್ಯದಲ್ಲಿ ನಡೆಯಲಿರುವ ವೆಸ್ಟ್ ಇಂಡೀಸ್ ವಿರುದ್ಧದ ಕ್ರಿಕೆಟ್ ಸರಣಿಯ ಪಂದ್ಯಗಳು ಆಯೋಜನೆಗೊಳ್ಳಲಿರುವ ತಾಣಗಳನ್ನು ಬದಲಾವಣೆ ಮಾಡುವ ಸಾಧ್ಯತೆ ಇದೆ.

ದೇಶದ ಹಲವು ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಈ ಕುರಿತು ಚಿಂತನೆ ನಡೆಸುತ್ತಿದೆ. ವೆಸ್ಟ್ ಇಂಡೀಸ್ ತಂಡದ ವಿರುದ್ಧದ ಸರಣಿಯು ಫೆಬ್ರುವರಿ 6ರಿಂದ ಅಹಮದಾಬಾದ್‌ನಲ್ಲಿ ಆರಂಭವಾಗಲಿದೆ. ಮೂರು ಏಕದಿನ ಮತ್ತು ಮೂರು ಟಿ20 ಪಂದ್ಯಗಳು ನಡೆಯಲಿವೆ. ಜೈಪುರ (ಫೆ 9), ಕೋಲ್ಕತ್ತ (ಫೆ 12), ಕಟಕ್ (ಫೆ 15), ವಿಶಾಖಪಟ್ಟಣಂ (ಫೆ 18) ಮತ್ತು ತಿರುವನಂತಪುರದಲ್ಲಿ (ಫೆ 20) ಪಂದ್ಯಗಳು ನಡೆಯಲಿವೆ.

ಆದರೆ ಈಗ ದೇಶದ ಕೆಲವು ನಗರಗಳಲ್ಲಿ ರಾತ್ರಿ ಮತ್ತು ವಾರಾಂತ್ಯದ ಕರ್ಫ್ಯೂ, ಕೋವಿಡ್ ತಡೆಗೆ ಕಟ್ಟುನಿಟ್ಟಿನ ನಿಯಮಗಳು ಜಾರಿಯಲ್ಲಿವೆ. ಆದ್ದರಿಂದ ಪಂದ್ಯಗಳ ಆಯೋಜನೆಗೆ ಕೋವಿಡ್ ಪ್ರಕರಣಗಳು ಕಡಿಮೆ ಇರುವ ನಗರಗಳನ್ನು ಆಯ್ಕೆ ಮಾಡಲು ಬಿಸಿಸಿಐ ಕಾರ್ಯೋನ್ಮುಖವಾಗಿದೆ ಎಂದು ಮೂಲಗಳು ತಿಳಿಸಿವೆ. ಫೆ.1 ರಂದು ವಿಂಡೀಸ್ ತಂಡವು ಅಹಮದಾಬಾದಿಗೆ ಬರಲಿದೆ. ಮೂರು ದಿನಗಳವರೆಗೆ ಕಡ್ಡಾಯ ಕ್ವಾರಂಟೈನ್‌ನಲ್ಲಿರಲಿದೆ. ಇದೇ ತಿಂಗಳು ನಡೆಯಬೇಕಿದ್ದ ರಣಜಿ ಟ್ರೋಫಿ, ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಗಳನ್ನು ಬಿಸಿಸಿಐ ಮುಂದೂಡಿದೆ.

ದ್ವಿಶತಕದತ್ತ ಟಾಮ್ ಲಥಾಮ್

ಕ್ರೈಸ್ಟ್‌ಚರ್ಚ್ (ಎಪಿ): ದ್ವಿಶತಕದತ್ತ ಹೆಜ್ಜೆಯಿಟ್ಟಿರುವ ನಾಯಕ ಟಾಮ್ ಲಥಾಮ್ ಮತ್ತು ಶತಕದತ್ತ ಸಾಗಿರುವ ಡೆವೊನ್ ಕಾನ್ವೆ ಅವರ ಆಟದ ಬಲದಿಂದ ನ್ಯೂಜಿಲೆಂಡ್ ತಂಡವು ಭಾನುವಾರ ಆರಂಭವಾದ ಬಾಂಗ್ಲಾದೇಶ ವಿರುದ್ಧದ ಎರಡನೇ ಟೆಸ್ಟ್‌ನ ಮೊದಲ ದಿನವೇ ದೊಡ್ಡ ಮೊತ್ತ ಪೇರಿಸಿತು.

ಹೆಗ್ಲಿ ಓವಲ್ ಕ್ರೀಡಾಂಗಣದ ಪಿಚ್‌ನಲ್ಲಿ ಬಾಂಗ್ಲಾದೇಶದ ಬೌಲರ್‌ಗಳ ಆಟ ನಡೆಯಲಿಲ್ಲ. ಟಾಸ್ ಗೆದ್ದ ಫೀಲ್ಡಿಂಗ್ ಮಾಡುವ ಬಾಂಗ್ಲಾ ತಂಡದ ಯೋಜನೆ ತಲೆಕೆಳಗಾಯಿತು. ಮೊದಲ ಟೆಸ್ಟ್‌ನಲ್ಲಿ ಸೋಲನುಭವಿಸಿದ ಹತಾಶೆಯಲ್ಲಿರುವ ವಿಶ್ವ ಟೆಸ್ಟ್ ಚಾಂಪಿಯನ್ ನ್ಯೂಜಿಲೆಂಡ್ ತಂಡದ ಬ್ಯಾಟಿಂಗ್ ಪಡೆ ಬಾಂಗ್ಲಾ ಬೌಲರ್‌ಗಳ ಬೆವರಿಳಿಸಿತು. ಅದರ ಪರಿಣಾಮವಾಗಿ ತಂಡವು 90 ಓವರ್‌ಗಳಲ್ಲಿ 1 ವಿಕೆಟ್‌ಗೆ 349 ರನ್ ಗಳಿಸಿತು. ಕೇನ್ ವಿಲಿಯಮ್ಸನ್ ಅನುಪಸ್ಥಿತಿಯಲ್ಲಿ ತಂಡದ ನಾಯಕತ್ವ ವಹಿಸಿರುವ ಟಾಮ್ (ಬ್ಯಾಟಿಂಗ್ 186, 278ಎ, 4X28) ಮತ್ತು ವಿಲ್ ಯಂಗ್ (54; 114ಎ, 4X5) ಜೋಡಿಯು ಅಮೋಘ ಆರಂಭ ನೀಡಿತು.

ಮೊದಲ ವಿಕೆಟ್ ಜೊತೆಯಾಟದಲ್ಲಿ 148 ರನ್‌ಗಳನ್ನು ಸೇರಿಸಿ, ಗಟ್ಟಿ ಅಡಿಪಾಯ ಹಾಕಿದರು. 38 ಓವರ್‌ಗಳ ಈ ಪಾಲುದಾರಿಕೆ ಆಟದಲ್ಲಿ ಟಾಮ್ ಅವರದ್ದೇ ವಿಜೃಂಭಣೆ. ಯಂಗ್ ಔಟಾದ ನಂತರ ಕ್ರೀಸ್‌ಗೆ ಬಂದ ಡೆವೊನ್ ಕಾನ್ವೆ ಅವರ ಅಬ್ಬರ ಶುರುವಾಯಿತು. ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 201 ರನ್ ಗಳಿಸಿದ್ದಾರೆ.

ಈ ಎರಡೂ ಪಾಲುದಾರಿಕೆ ಆಟಗಳಲ್ಲಿ ಮೆರೆದರು. 29 ವರ್ಷದ ಎಡಗೈ ಬ್ಯಾಟರ್ ಟಾಮ್ 65 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಒಟ್ಟು 133 ಎಸೆತಗಳಲ್ಲಿ ಶತಕ ಹೊಡೆದರು. 199ನೇ ಎಸೆತದಲ್ಲಿ ಶತಕೋತ್ತರ ಅರ್ಧಶತಕದ ಗಡಿ ಮುಟ್ಟಿದರು.

ಸ್ಕೋರ್ ಕಾರ್ಡ್

ನ್ಯೂಜಿಲೆಂಡ್, ಮೊದಲ ಇನಿಂಗ್ಸ್ 1 ವಿಕೆಟ್‌ಗೆ 349 (90 ಓವರ್)
ಟಾಮ್ ಬ್ಯಾಟಿಂಗ್ 186 (278ಎ, 4X28), ಯಂಗ್ ಸಿ ನೈಮ್ ಬಿ ಇಸ್ಲಾಂ 54 (114ಎ, 4X5), ಕಾನ್ವೆ ಬ್ಯಾಟಿಂಗ್ 99 (148ಎ, 4X10, 6X1)
ಇತರೆ 10 (ಲೆಗ್‌ಬೈ 7,ವೈಡ್ 3)
ವಿಕೆಟ್ ಪತನ: 1-148 (ವಿಲ್ ಯಂಗ್; 37.6)
ಬೌಲಿಂಗ್: ತಸ್ಕಿನ್ ಅಹಮದ್ 22–5–68–0, ಶರೀಫುಲ್ ಇಸ್ಲಾಮ್ 18–6–50–1, ಇಬಾದತ್ ಹುಸೇನ್ 21–1–114–0, ಮೆಹದಿ ಹಸನ್ 25–1–95–0, ನಜ್ಮುಲ್ ಹುಸೇನ್ ಶಾಂತೊ 4–0–15–0.

‘ಲಸಿಕೆ’ ಪ್ರಕರಣದಲ್ಲಿ ಆಸ್ಟ್ರೇಲಿಯಾ ಸರ್ಕಾರ ಹೇಳಿಕೆ

‘ಜೊಕೊವಿಚ್ ಪ್ರವೇಶ ಖಚಿತ ಇರಲಿಲ್ಲ’

ಮೆಲ್ಬರ್ನ್/ಸಿಡ್ನಿ (ರಾಯಿಟರ್ಸ್): ಕೋವಿಡ್–19ಕ್ಕೆ ಸಂಬಂಧಿಸಿದ ಲಸಿಕೆ ಹಾಕಿಸುವುದರಿಂದ ವಿನಾಯಿತಿ ಲಭಿಸಿದರೂ ದೇಶದೊಳಗೆ ಪ್ರವೇಶಕ್ಕೆ ನಿರ್ಬಂಧ ಇಲ್ಲ ಎಂದು ಟೆನಿಸ್ ಆಟಗಾರ ನೊವಾಕ್ ಜೊಕೊವಿಚ್ ಅವರಿಗೆ ಭರವಸೆ ನೀಡಿರಲಿಲ್ಲ ಎಂದು ಆಸ್ಟ್ರೇಲಿಯಾ ಭಾನುವಾರ ತಿಳಿಸಿದೆ.

ನ್ಯಾಯಾಲಯಕ್ಕೆ ನೀಡಿರುವ ಮಾಹಿತಿಯಲ್ಲಿ ವಕೀಲರು ಈ ವಿಷಯ ತಿಳಿಸಿದ್ದಾರೆ.

ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು ಎಂಬ ನಿರ್ಬಂಧವಿದೆ. ಆದರೆ ವಿಶ್ವದ ಒಂದನೇ ನಂಬರ್ ಆಟಗಾರ, ಸರ್ಬಿಯಾದ ನೊವಾಕ್ ಜೊಕೊವಿಚ್ ಲಸಿಕೆ ಹಾಕಿಸಿಕೊಳ್ಳಲು ಸಿದ್ಧ ಇರಲಿಲ್ಲ.

ಟೂರ್ನಿಯಲ್ಲಿ ಆಡಲು ಅವರಿಗೆ ವೈದ್ಯಕೀಯ ತಂಡ ವಿನಾಯಿತಿ ನೀಡಿತ್ತು. ಆದರೆ ದೇಶಕ್ಕೆ ಕಾಲಿಡುತ್ತಿದ್ದಂತೆ ಅವರನ್ನು ವಶಕ್ಕೆ ಪಡೆದುಕೊಂಡಿದ್ದ ಅಧಿಕಾರಿಗಳು ವಿಸಾ ರದ್ದುಮಾಡಿ ನಗರದ ಪಾರ್ಕ್ ಹೋಟೆಲ್‌ನಲ್ಲಿ ಇರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಜೊಕೊವಿಚ್ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಸೋಮವಾರ ವಿಚಾರಣೆ ನಡೆಯಲಿರುವ ಹಿನ್ನೆಲೆಯಲ್ಲಿ ವಕೀಲರು ಮಾಹಿತಿ ಸಲ್ಲಿಸಿದ್ದಾರೆ. ಜೊಕೊವಿಚ್ ಅವರು ಲಸಿಕೆಗೆ ಸಂಬಂಧಿಸಿದ ಮಾಹಿತಿ ನೀಡಲು ಅಥವಾ ವೈದ್ಯಕೀಯ ವಿನಾಯಿತಿ ಪಡೆಯಲು ಕಾರಣವೇನೆಂದು ತಿಳಿಸಲು ಪ್ರಯತ್ನಿಸುವ ಸಾಧ್ಯತೆ ಇದೆ.

‘ಪ್ರಕರಣದಿಂದ ಟೆನಿಸ್‌ಗೆ ನಷ್ಟ’



ಆ್ಯಂಡಿ ಮರ್ರೆ

ನೊವಾಕ್ ಜೊಕೊವಿಚ್ ಅವರ ಲಸಿಕೆ ಮತ್ತು ವೀಸಾ ಪ್ರಕರಣದಿಂದ ಟೆನಿಸ್‌ಗೆ ಕೆಟ್ಟ ಹೆಸರು ಬಂದಿದೆ ಎಂದು ವಿಶ್ವದ ಮಾಜಿ ಒಂದನೇ ನಂಬರ್ ಆಟಗಾರ ಬ್ರಿಟನ್‌ನ ಆ್ಯಂಡಿ ಮರ್ರೆ ಅಭಿಪ್ರಾಯಪಟ್ಟಿದ್ದಾರೆ.

‘ಜೊಕೊವಿಚ್ ಪ್ರಕರಣದಿಂದ ಎಲ್ಲರಿಗೂ ಬೇಸರವಾಗಿದೆ. ಜೊಕೊ ವಿಚ್ ಈಗ ಚೆನ್ನಾಗಿದ್ದಾರೆ ಎಂಬುದು ನನ್ನ ವಿಶ್ವಾಸ. ಅವರನ್ನು ನಾನು ಚೆನ್ನಾಗಿ ಬಲ್ಲೆ. ವರ್ಷಗಳಿಂದ ಅವರೊಂದಿಗೆ ಉತ್ತಮ ಸಂಬಂಧ ಹೊಂದಿದ್ದೇನೆ. ಭಾಗಿಯಾಗಿರುವ ಯಾರಿಗೂ ಈ ಪ್ರಕರಣದ ಶೋಭೆ ತರುವಂಥಾದ್ದಲ್ಲ’ ಎಂದು ಅವರು ಹೇಳಿದ್ದಾರೆ.